ನೆನಪಿನಲ್ಲಿ ನಿಂತವರು

ಡಾ. ಜ್ಯೋತ್ಸ್ನಾ ಕಾಮತ್

ನೆನಪಿನಲ್ಲಿ ನಿಂತವರು

(ಹದಿನಾಲ್ಕು ಸ್ಮೃತಿಚಿತ್ರಗಳ ಸಂಕಲನ)

ಡಾ. ಜ್ಯೋತ್ಸ್ನಾ ಕಾಮತ್

ಮಹಿಳಾ ಸಾಹಿತ್ಯಿಕಾ

ನವನಗರ, ಹುಬ್ಬಳ್ಳಿ

೨೦೦೦

ನೆನಪಿನಲ್ಲಿ ನಿಂತವರು
ಲೇಖಕರು : ಜ್ಯೋತ್ಸ್ನಾ ಕಾಮತ್
೧೧೦, 'ಶಶಿಕಿರಣ್', ೧೮ನೇ ಕ್ರಾಸ್
ಬೆಂಗಳೂರು - ೫೬೦ ೦೫೫

Nenapenalli Ninthavaru
by : Jyothsna Kamath
110 'Shashi Kiran', 18th Cross
Bangalore - 560 055

ಪುಟಗಳು : viii + ೧೬೮

ಪ್ರತಿಗಳು : ೮೦೦

ಪ್ರಥಮ ಮುದ್ರಣ : ೨೦೦೦

ಬೆಲೆ : ರೂ. 75-00

ಪ್ರಕಾಶಕರು : ಮಹಿಳಾ ಸಾಹಿತ್ಯಿಕಾ
ನವನಗರ, ಹುಬ್ಬಳ್ಳಿ

ಸಲಹಾ ಸಮಿತಿ : ಡಾ. ಶೈಲಜಾ ಉಡಚಣ (ಸಾಹಿತ್ಯ ಸಲಹೆ)
ಡಾ. ಶಾಲಿನಿ ರಘುನಾಥ (ಸಾಹಿತ್ಯ ಸಲಹೆ)
ಡಾ. ಚಂದ್ರಕಲಾ ನಂದಾವರ (ಸಾಹಿತ್ಯ ಸಲಹೆ)
ಹನುಮಾಕ್ಷಿಗೋಗಿ (ಸಾಹಿತ್ಯ ನಿರ್ದೇಶನ)
ಜಿ. ನಾಗವೇಣಿ (ಅರ್ಥನಿರ್ವಹಣೆ)

ಅಕ್ಷರ ಜೋಡಣೆ: ರವಿ ಆಕಳವಾಡಿ, ಧಾರವಾಡ

ಮುದ್ರಕರು : ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.,
ಚಾಮರಾಜಪೇಟೆ, ಬೆಂಗಳೂರು - 18
ದೂರವಾಣಿ : 6525736

ಲೇಖಕಿಯ ನುಡಿ

ಮೂವತ್ತು ವರ್ಷಗಳ ಅಖಿಲಭಾರತ ಆಕಾಶವಾಣಿಯ ಸೇವೆ. ನನಗೆ ಅನೇಕ ನಗರಗಳಲ್ಲಿ ಕೆಲಸಮಾಡುವ ಅವಕಾಶ ಒದಗಿಸಿತು. ಜೊತೆಗೆ ಹಲವಾರು ಅಪರೂಪದ ಧೀಮಂತೆಯರು, ಕಲಾವಿದೆಯರು, ಸಮಾಜ ಸೇವಿಕೆಯರನ್ನು ಕಂಡು ಅವರ ಸಾಧನೆಯ ಕುರಿತು ಕೊಂಚ ಅರಿತುಕೊಳ್ಳುವ ಸುಸಂಧಿಯನ್ನೂ ಕೊಡಮಾಡಿತು. ಅವರಲ್ಲಿ ಅನೇಕರು ಈಗ ಇಲ್ಲ. ಆದರೆ ನೆನಪಿನಾಳದಲ್ಲಿ ನೆಲೆಸಿದ್ದಾರೆ. ಕೆಲವರ ನೆನಪುಗಳನ್ನು ಕಾಗದದ ಮೇಲೆ ಮೂಡಿಸುವ ಪ್ರಯತ್ನವನ್ನು ಇಲ್ಲಿ ಮಾಡಿದ್ದೇನೆ.

ನೆನಪಿನಲ್ಲಿ ನಿಂತ ಈ ಎಲ್ಲ ವ್ಯಕ್ತಿಗಳ ಸಾಧನೆ ಏಕ ಪ್ರಕಾರವಾಗಿಲ್ಲ. ಎಲ್ಲರ ಸ್ಥಾನಮಾನಗಳು ಒಂದೇ ಬಗೆಯುವಲ್ಲ. ಅಭಿನಯ, ಸಾಹಿತ್ಯ. ಬೇರೆ ಬೇರೆ ಕಲೆಗಳು, ಸ್ವಾತಂತ್ರ್ಯ ಸಂಗ್ರಾಮ. ಸಮಾಜ ಸೇವೆ, ಶಿಕ್ಷಣಕ್ಷೇತ್ರಗಳಲ್ಲಿ ಕೊಡುಗೆಯಿತ್ತವರು ಇಲ್ಲಿ ಕಾಣಿಸಿಕೊಂಡಿದ್ದಾರೆ. ಭಾರತೀಯ ಮಹಿಳಾಸಾಧನೆಯ ಹಲವಾರು ಮುಖಗಳನ್ನು ತೋರುವ ಪ್ರತಿನಿಧಿಗಳಾಗಿದ್ದಾರೆ ! ತಂತಮ್ಮ ಸಾಧನೆಯ ಕ್ಷೇತ್ರದಲ್ಲಿ ಮಿಗಿಲಾಗಿ. ಪರಿಸರಕ್ಕೆ ಸ್ಪಂದಿಸಿ. ಸಮಾಜದ ಋಣವನ್ನು ಒಂದಿಲ್ಲೊಂದು ಬಗೆಯಲ್ಲಿ ಸಂದಾಯ ಮಾಡುವ ಕಳಕಳಿಯವರಾಗಿದ್ದಾರೆ. ಒಬ್ಬಿಬ್ಬರನ್ನು ಬಿಟ್ಟರೆ, ಉಳಿದವರು ಹೆಜ್ಜೆ-ಹೆಜ್ಜೆಗೆ ಅಡ್ಡಿ-ಆತಂಕಗಳನ್ನು ಎದುರಿಸಿದವರು. ನೋವುಂಡು ನಲಿವು ಬೀರಲು ಹವಣಿಸಿದವರು. ಇಂಥವರಲ್ಲಿ ಸುಪ್ತವಾಗಿದ್ದ ಅಂತಃಸತ್ವದ ಬಲ ಬೆರಗುಗೊಳಿಸುವಂತಹದು. ಈ ಎಲ್ಲ ಚೇತನಗಳು ಪ್ರತಿಷ್ಠೆಗೆ. ಸಂಪತ್ತಿಗೆ. ಪ್ರಸಿದ್ಧಿ-ಪ್ರಚಾರಗಳಿಗೆ ಹಪಹಪಿಸಿದವರಲ್ಲ. ಎಷ್ಟೋಬಾರಿ ಅವುಗಳೇ ಅವರನ್ನರಸಿ ಬಂದದ್ದಿದೆ.

ಕೇವಲ ಕತೆ-ಕಾದಂಬರಿಗಳಿಗೆ ಬೇಡಿಕೆಯಿರುವ ಇಂದಿನ ದಿನಗಳಲ್ಲಿ, ಸಾಹಿತ್ಯದ ಇತರ ಪ್ರಕಾರಗಳನ್ನು ಹೊರತರುವದು ಸುಲಭವಲ್ಲ. ಇಂಥಲ್ಲಿ ಮಹಿಳಾ ನಿರ್ಮಿತ ಸಾಹಿತ್ಯವೈವಿಧ್ಯವನ್ನು ಬೆಳಕಿಗೆ ತರಲೆಂದೇ ಹುಟ್ಟಿಕೊಂಡ 'ಮಹಿಳಾ ಸಾಹಿತ್ಯಿಕಾ' ನನ್ನಂಥವಳಿಗೆ ಭರವಸೆಯ ಚಿಲುಮೆಯಾಗಿದೆ. ಶ್ರೀಮತಿ ಹನುಮಾಕ್ಷಿ ಗೋಗಿ ಅವರ ವೈಯಕ್ತಿಕ ಆಸಕ್ತಿ-ಪ್ರೋತ್ಸಾಹಗಳಿಂದಲೇ "ನೆನಪಿನಲಿ ನಿಂತವರು'. ಹದಿನಾಲ್ಕು ಸ್ಮೃತಿಚಿತ್ರಗಳ ಸಂಕಲನ ಬೆಳಕು ಕಾಣುವಂತಾಗಿದೆ. ಅವರಿಗೆ ನನ್ನ ಕೃತಜ್ಞತೆಗಳು.

ಲಘುಲೇಖ, ವಿನೋದ ಬರಹಗಳಿಗಷ್ಟೆ ಸೀಮಿತಗೊಂಡವಳ ಗಂಭೀರ ರೂಪದ ಬರವಣಿಗೆಯನ್ನು ಓದುಗರು ಸ್ವಾಗತಿಸಬಹುದೆಂಬ ಭರವಸೆಯಲ್ಲಿ –

ವಿಶ್ವ ಮಹಿಳಾ ದಿನ
೮-೩-೨೦೦೦

ಜ್ಯೋತ್ಸ್ನಾ ಕಾಮತ್
೧೧೦ ಶಶಿಕಿರಣ್
೧೮ನೇ ಕ್ರಾಸ್, ಬೆಂಗಳೂರು-೫೬೦೦೫೫

ಪ್ರಕಾಶಕರ ನುಡಿ

ಮಹಿಳಾ ಸಾಹಿತ್ಯದ ಅಧ್ಯಯನ, ಪ್ರಕಾಶನಗಳಿಗೆ ಮೀಸಲಾದ ಸಂಸ್ಥೆಯಾಗಿ ಮೊದಲ ಹೆಜ್ಜೆಗಳನ್ನಿಡುತ್ತಲಿದೆ, ''ಮಹಿಳಾ ಸಾಹಿತ್ಯಿಕಾ''. ಕನ್ನಡದ ಲೇಖಕಿಯರ ಎಲ್ಲ ಪ್ರಕಾರಗಳಿಗೆ ಧ್ವನಿಯಾಗುವ ಮಹತ್ವಾಕಾಂಕ್ಷೆಯನ್ನು ಹೊಂದಿದ ಈ ಸಂಸ್ಥೆ, ಮಹಿಳಾ ಲೇಖಕಿಯರ ಸಾಹಿತ್ಯವನ್ನು ಮಹಿಳಾ ಪ್ರಕಾಶಕಿಯರೇ ಪ್ರಕಟಿಸುವ ವಿನೂತನ ಯೋಜನೆಯನ್ನು ಹೊಂದಿದೆ. ಸ್ತ್ರೀವಾದಿ ಚಿಂತನೆ ಕ್ರಿಯಾರೂಪ ಸಾಧಿಸಲು ಇದು ಪ್ರಬಲ ಶಕ್ತಿಯಾಗಿ ಬೆಳೆಯುವ ಸಂಕಲ್ಪವನ್ನು ಹೊಂದಿದೆ.

''ಮಹಿಳಾ ಸಾಹಿತ್ಯಿಕಾ'' ಮುಂಬರುವ ವರ್ಷಗಳಲ್ಲಿ ಮಹಿಳೆಯರಿಂದ ರಚಿತಗೊಂಡ ಸೃಜನ-ವಿಮರ್ಶನ-ಸಂಶೋಧನ-ಅನುವಾದ-ಆಕರ ಇತ್ಯಾದಿ ಎಲ್ಲಂದದ ಮೌಲಿಕ ಸಾಹಿತ್ಯವನ್ನು ಪ್ರಕಟಿಸುತ್ತದೆ. ಪ್ರಾರಂಭದಲ್ಲಿ ವರ್ಷಕ್ಕೆ ಸಾವಿರ ಪುಟಗಳಷ್ಟು ಸಾಹಿತ್ಯವನ್ನು ಪ್ರಕಟಿಸುವ, ನಂತರದ ಅವಧಿಯಲ್ಲಿ ಪುಟಸಂಖ್ಯೆಯನ್ನು, ಪುಸ್ತಕ ಂಖ್ಯೆಯನ್ನು ಹೆಚ್ಚಿಸುತ್ತ ಹೋಗುವ ಇಚ್ಛೆ ಸಂಸ್ಥೆಗಿದೆ.

ಕನ್ನಡ ಸಾಹಿತ್ಯದಲ್ಲಿ 'ಕೊರವಂತಿ' ಯ ಮೂಲಕ ಹಾಸ್ಯ ಲೇಖನಗಳನ್ನು ಪ್ರಕಟಿಸಿದ ಕೀರ್ತಿ ಲೇಖಕಿ ಟಿ. ಸುನಂದಮ್ಮನವರಿಗೆ ಸಲ್ಲುತ್ತದೆ. ಅವರ ನಂತರಮಹಿಳಾ ಹಾಸ್ಯ ಬರವಣಿಗೆ ನಿಂತೇ ಹೋಗುತ್ತದೇನೊ ಎಂಬ ಆತಂಕ ಕಾಡಾಲಾರಂಭಿಸಿದ ಸಂದರ್ಭ ಪ್ರಾಪ್ತವಾದಾಗ ಹಾಸ್ಯ ಸಾಹಿತ್ಯ ಕ್ಷೇತ್ರದ ಕ್ಷಿತಿಜದ ಮೇಲೆ ಕಾಣಿಸಿಕೊಂಡವರು ಡಾ. ಜ್ಯೋತ್ಸ್ನಾ ಕಾಮತರು. ಈಗಾಗಲೇ 'ಸಂಸಾರದಲ್ಲಿ ಸ್ವಾರಸ್ಯ', 'ಹೀಗಿದ್ದೇವೆ ನಾವು' ಎಂಬ ಹಾಸ್ಯ ಪ್ರಬಂಧ ಸಂಕಲನಗಳನ್ನು ಪ್ರಕಟಿಸಿದ ಅವರಿಂದ ಮೂರನೆಯ ಕೃತಿ 'ನಗೆ ಕೇದಿಗೆ' ತೀರ ಇತ್ತೀಚೆಗೆ ಪ್ರಕಟಗೊಂಡಿದೆ.

ದಿನ ನಿತ್ಯದ ಬದುಕಿನಲ್ಲಿ ಸಾಕಷ್ಟು ನಗೆಯ ಪ್ರಸಂಗಗಳು ನಮ್ಮ ಕಣ್ಣೆದುರಿಗೇ ಜರುಗುತ್ತಿದ್ದರೂ ಅದನ್ನು ಗಮನಿಸುವ, ಅನುಭವಿಸುವ ವ್ಯವಧಾನ ಇರುವ ಜನ ತುಂಬ ಕಡಿಮೆ. ಅಂತಹ ಸಂದರ್ಭಗಳನ್ನು ಗಮನಿಸುವ, ಗುರುತಿಸುವ ಶಬ್ದರೂಪದಲ್ಲಿ ಕೃತಿಗಿಳಿಸುವ ಲೇಖಕಿಯರು ತುಂಬಕಡಿಮೆ. ಇಂತಹ ಅಪರೂಪದ ವ್ಯಕ್ತಿತ್ವ, ಸಾಧನೆಗಳು ಡಾ. ಜ್ಯೋತ್ಸ್ನಾ ಕಾಮತ್ ಅವರದು.

ತಮ್ಮನ್ನು ಮತ್ತು ತಮ್ಮ ಮನೆಯವರನ್ನು ಗೇಲಿ ಮಾಡಿಕೊಳ್ಳುತ್ತಲೇ ನಗೆಬುಗ್ಗೆಯನ್ನು ಚಿಮ್ಮಿಸುವವರು. ಇದರೊಂದಿಗೇ ತುಂಬ ಗಂಭೀರವಾದ ಚಿಂತನಶೀಲ ಇತಿಹಾಸಜ್ಞರು ಕೂಡ ವ್ಯಕ್ತಿಗಳನ್ನು ಸೂಕ್ಷ್ಮವಾಗಿ ನಿರುಕಿಸುವ, ಅವರ ವ್ಯಕ್ತಿತ್ವದ ಒಳಹೊರಗುಗಳನ್ನು ಸಮರ್ಥವಾಗಿ ಗುರುತಿಸಿ ಕಣ್ಣಿಗೆ ಕಟ್ಟುವಂತೆ ಅವರನ್ನು ನಮ್ಮ ಎದುರಿಗೇ ನಿಂತಂತೆ ಚಿತ್ರಿಸಿಕೊಡಬಲ್ಲ ಶಕ್ತಿ ಅವರ ಲೇಖನಿಗಿದೆ ಎಂಬುದನ್ನು ಶಬ್ದರೂಪದ ಇಲ್ಲಿಯ ವ್ಯಕ್ತಿ ಚಿತ್ರಗಳನ್ನು ನೋಡಿಯೇ ಅರಿಯಬೇಕು ಅದ್ಭುತ ಚಿತ್ರಕ ಶಕ್ತಿ ಅವರದು. ಇಂತಹ ಉತ್ತಮ ಕೃತಿಯೊಂದನ್ನು ಮಹಿಳಾ ಸಾಹಿತ್ಯಿಕಾ ಪ್ರಕಟಿಸಲು ಅನುಮತಿ ನೀಡಿದ ಅವರಿಗೆ ನಮ್ಮ ಅನಂತ ಕೃತಜ್ಞತೆಗಳು.


ಡಾ. ಜ್ಯೋತ್ಸ್ನಾ ಕಾಮತ್ ಅವರು ಸುಂದರವಾಗಿ ಬರೆದು ಕೊಟ್ಟ 'ನೆನಪಿನಲ್ಲಿ ನಿಂತವರು' ಕೃತಿಯನ್ನು 'ಮಹಿಳಾ ಸಾಹಿತ್ಯಿಕಾ' ಪ್ರಕಟಿಸುತ್ತಿರುವುದು ಅಭಿಮಾನದ ಸಂಗತಿ. ಇಂತಹ ಅವಕಾಶ ನೀಡಿದ ಅವರಿಗೆ 'ಮಹಿಳಾ ಸಾಹಿತ್ಯಿಕಾ'ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

"ಮಹಿಳಾ ಸಾಹಿತ್ಯಿಕಾ" ಪ್ರಕಾಶನ ಸಂಸ್ಥೆಗೆ ಬೆನ್ನ ಹಿಂದಿನ ಬೆಳಕಾಗಿ ನಿಂತವರು, ಸಂಸ್ಥೆಯ ಸಮಸ್ತ ರೂಪರೇಷೆಗಳನ್ನು ಹಾಕಿಕೊಟ್ಟವರು, ಸ್ಫೂರ್ತಿಯ ಸೆಲೆಯಾದವರು ವಿದ್ಯಾಗುರುಗಳಾದ ಡಾ. ಎಂ.ಎಂ. ಕಲಬುರ್ಗಿಯವರು. ಅವರಿಗೆ ಮಹಿಳಾ ಸಾಹಿತ್ಯಿಕಾ ತುಂಬು ಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತದೆ. ಸುಂದರವಾಗಿ ಮುದ್ರಿಸಿಕೊಟ್ಟ ಸತ್ಯಶ್ರೀ ಪ್ರಿಂಟರ್ಸ್‌ನ ಲಿಂಗರಾಜು ಮತ್ತು ಕರ್ನಲ್ ಶ್ರೀಧರರಿಗೂ ಕೃತಜ್ಞತೆಗಳನ್ನು ಸೂಚಿಸುತ್ತದೆ.

ಕರ್ನಾಟಕದ ಹೆಮ್ಮೆಯ ಮಹಿಳಾ ಅಧ್ಯಯನ, ಪ್ರಕಾಶನ ಸಂಸ್ಥೆಯಾಗಿ ಬೆಳೆಯುವ ಸಂಕಲ್ಪ ಹೊಂದಿರುವ 'ಮಹಿಳಾ ಸಾಹಿತ್ಯಿಕಾ'ಕ್ಕೆ ನಾಡಿನ ಕೊಂಡು ಓದುವ ಸಹೃದಯರ ಸಹಾಯ ಸಹಕಾರಗಳನ್ನು ಅಪೇಕ್ಷಿಸುತ್ತೇವೆ.

ಹನುಮಾಕ್ಷಿ ಗೋಗಿ
ಸಾಹಿತ್ಯಿಕ ನಿರ್ದೇಶಕಿ

ಪರಿವಿಡಿ



ಸಾಹಿತ್ಯಸಾಮ್ರಾಜ್ಞಿ : ಆಶಾಪೂರ್ಣಾದೇವಿ
(೧೯೦೯-೧೯೯೫)

ಈ ಮಹಿಳೆ ಶಾಲೆಯ ಮುಖ ಕಂಡವರಲ್ಲ. ತನ್ನ ಹದಿಮೂರನೆಯ ವಯಸ್ಸಿಗೆ ಬರೆಯಲಾರಂಭಿಸಿದರು. ಇಪ್ಪತ್ತೆಂಟಕ್ಕೆ ಬಂಗಾಲಿ ಸಾಹಿತ್ಯಲೋಕಕ್ಕೆ ಚಿರಪರಿಚಿತರಾದರು.

ಸ್ಕೂಲಿನ ಮುಖ ಮೊದಲಬಾರಿ ಕಂಡಾಗ ಮಧ್ಯವಯಸ್ಸು ದಾಟಿತ್ತು! ಆದರೆ ಅವರು ಹೋದದ್ದು ಸಮಾರಂಭವೊಂದರ ಮುಖ್ಯ ಅತಿಥಿಯಾಗಿ. ಅದಾಗಲೇ ನೂರಕ್ಕೂ ಮಿಕ್ಕಿದ ಕೃತಿಗಳಿಂದ ಮನೆಮಾತಾಗಿದ್ದರು. ಈ ಅಪ್ರತಿಮ ಮಹಿಳೆಯೇ ಆಶಾಪೂರ್ಣಾದೇವಿ.

ಸಾಹಿತಿಯ ಚಕ್ಷುಗಳಿಂದ ಮನೆಯಾಚೆಯ ಬ್ರಹ್ಮಾಂಡ ಕಂಡವರು. ಕಿರಿಯ ಗವಾಕ್ಷದಿಂದ ವಿಶ್ವವ್ಯಾಪಾರ ವೀಕ್ಷಿಸಿದವರು. ನಿರಂತರ ವೀಕ್ಷಣೆಗೆ, ಸಾಂದ್ರ ಅನುಭವಗಳನ್ನು, ತೀವ್ರ ಸಂವೇದನೆಯನ್ನು ಬೆರೆಸಿ ಮುಪ್ಪುರಿ ಮೆರುಗು ನೀಡಿದವರು.

ಆಶಾಪೂರ್ಣಾದೇವಿ ಹುಗ್ಲಿ ಜಿಲ್ಲೆಯ ಬೇಗಂಪುರದಲ್ಲಿ ೧೯೦೯ ರಲ್ಲಿ ಮಧ್ಯಮವರ್ಗದ ಕುಟುಂಬದಲ್ಲಿ ಜನ್ಮವೆತ್ತಿದರು. ತೀರ ಚಿಕ್ಕ ವಯಸ್ಸಿನಲ್ಲಿ ಏರ್ಪಟ್ಟ ವಿವಾಹದಲ್ಲಿ ವಿಶೇಷವೇನೂ ಇರಲಿಲ್ಲವಂತೆ. ಅವರ ಲೇಖನವೃತ್ತಿಗೆ ಯಾವುದೇ ವಿಧದಲ್ಲಿ ಪತಿಯ ಪ್ರೋತ್ಸಾಹವಾಗಲಿ ಪ್ರೇರಣೆಯಾಗಲಿ ದೊರೆತಿದ್ದಿಲ್ಲ. ಹಾಗೆಂದು ವಿರಸದಾಂಪತ್ಯವೂ ಅವರದಾಗಿರಲಿಲ್ಲ. ೧೯೭೬ರಲ್ಲಿ ಪತಿಯ ನಿಧನದವರೆಗೂ ಜೊತೆಯಲ್ಲಿದ್ದು, ಎಲ್ಲೇ ಹೊರಗೆ ಹೋದರೆ, ಇಬ್ಬರೂ ಒಟ್ಟಿಗೇ ಹೊರಡುತ್ತಿದ್ದರಂತೆ.

ದಕ್ಷಿಣಕಲಕತ್ತೆಯ ಗರಿಯಾದಲ್ಲಿ ಕಲಕತ್ತಾ ಮಹಾನಗರ ನಿಗಮದವರು ಕೊಡಮಾಡಿದ ಜಮೀನಿನ ಮೇಲೆ ಕಟ್ಟಿದ ಅಚ್ಚುಕಟ್ಟಾದ ಮನೆಯಲ್ಲಿ ಈ ಸಾಹಿತ್ಯಸಾಮ್ರಾಜ್ಞಿ, ಮಕ್ಕಳು, ಮೊಮ್ಮಕ್ಕಳೊಂದಿಗೆ ವಾಸಿಸುತ್ತಿದ್ದರು. ಮುಖ್ಯರಸ್ತೆಗೆ ಹೊಂದಿಕೊಂಡಿದ್ದ ರೂಮೇ ಅವರ ಬರೆಯುವ ಕೊಠಡಿ. ರಸ್ತೆಯ ವಾಹನ-ಗದ್ದಲಗಳೆಲ್ಲ ಸ್ಪಷ್ಟವಾಗಿ ಕೇಳಿಸುತ್ತಿದ್ದವು. "ಮನೆ ಚೆನ್ನಾಗಿದೆ, ಆದರೆ ಹೊರಗಿನ ಗೌಜು! ನಿಮಗೆ ಬರೆಯಲು ತೊಂದರೆಯಿಲ್ಲವೇ?" ಎಂದು ಕೇಳಿದಾಗ "ಇಲ್ಲಮ್ಮ! ಮನೆಯೆಂದರೆ ಹೀಗಿರಬೇಕು. ಎಂದಾದರೊಮ್ಮೆ ಮನೆಕಟ್ಟುವಂತಿದ್ದರೆ ಅದು ರಸ್ತೆಗೆ ಹೊಂದಿರಬೇಕು! ಜನವ್ಯಾಪಾರವನ್ನು ಸತತವಾಗಿ ಹತ್ತಿರದಿಂದಲೇ ಕಾಣುವಂತಿರಬೇಕು ಎಂಬುದೇ ನನ್ನ ಆಸೆಯಾಗಿತ್ತು" ಎಂದು ಗೆಲುವಿನಿಂದ ಬರಮಾಡಿಕೊಂಡ ಆಶಾದಿ (ಹಾಗೆಂದು ಕರೆಯುವದು ವಾಡಿಕೆ) ನುಡಿದರು.

ಸೌಮ್ಯ ಗಂಭೀರ ಮುಖಮುದ್ರೆ, ನರೆಗೂದಲು, ಮೃದು ಹಸಿತ, ನೇರ ನಡೆ ನುಡಿ. ಹೊರನೋಟಕ್ಕೆ ಸೌಮ್ಯವಾಗಿ ಕಂಡ ಈ ಮಹಾಸಾಹಿತಿ, ಹುಟ್ಟಾ ವಿದ್ರೋಹಿ! ಎಂಬುದನ್ನು ಅವರ ಕೆಲ ಕೃತಿಗಳ ಅನುವಾದಗಳನ್ನು ಓದಿ ತಿಳಿದುಕೊಂಡಿದ್ದೆ. ಅವರಿಗೆ ಜ್ಞಾನಪೀಠಪ್ರಶಸ್ತಿ ತಂದ ಕಾದಂಬರಿಯಾದ 'ಪ್ರಥಮ ಪ್ರತಿಶ್ರುತಿ'ಯ ನಾಯಕಿ ಸತ್ಯವತಿಯಲ್ಲಿ ಲೇಖಕಿಯ ಪ್ರತಿರೂಪವನ್ನು ಕಾಣಬಹುದು. ಸಾಂಸಾರಿಕ ಕಷ್ಟಪರಂಪರೆಗಳೆದುರು

ಎಂದಿಗೂ ಮಣಿಯಲಾರೆ ! ಸೋಲಲಾರೆ ! ಎಂಬ ಉಕ್ಕಿನ ನಿರ್ಧಾರವನ್ನು ಓರ್ವಗೃಹಿಣಿಯಲ್ಲಿ ಸಾರ್ಥಕವಾಗಿ ಮೂಡಿಸಿದ್ದಾರೆ.

ಅಚ್ಚುಕಟ್ಟಾದ ಡ್ರಾಯಿಂಗ್‌ರೂಮಿನ ಸೋಫಾದಲ್ಲಿ ಕುಳ್ಳಿರಿಸಿ ಆಶಾದಿ, ನನ್ನ ಪಕ್ಕದಲ್ಲಿ ಬಂದುಕುಳಿತರು. ನನ್ನ ಸಂಸಾರ, ಮನೆ, ಮಗನ ಬಗ್ಗೆ ವಿಚಾರಿಸಿಕೊಂಡು, ಅವರನ್ನೆಲ್ಲ ಬಿಟ್ಟು ಬಂದು, ಇಷ್ಟುದೂರದಲ್ಲಿದ್ದು ಸರ್ವಿಸ್ ಮಾಡಬೇಕಾಗಿ ಬಂದದ್ದಕ್ಕೆ ಮರುಗಿದರು. ಜೊತೆಗೇ "ನೋಡಿದೆಯ? ಪರಿಸ್ಥಿತಿ ಎಷ್ಟೊಂದು ಬದಲಾಗಿದೆ ! ಕೇವಲ ಐವತ್ತು ವರ್ಷಗಳ ಹಿಂದೆ ವಿವಾಹಿತ ಮಹಿಳೆಯೊಬ್ಬಳು ತನ್ನ ಕುಟುಂಬದಿಂದ ಇಷ್ಟೊಂದು ದೂರವಿದ್ದು ನೌಕರಿಮಾಡಲು ಸಾಧ್ಯವಿತ್ತೆ ? ಕಾಲ ಬದಲಾಗಿದೆ. ಸ್ತ್ರೀ, ನೌಕರಿಯಲ್ಲಿ ಸಮಾನತೆ ಸಾಧಿಸಿದ್ದಾಳೆ.... ಸ್ವಾತಂತ್ರ್ಯದ ಹೊಸ ಆಯಾಮ ಇದು ! ಸ್ತ್ರೀ-ಪುರುಷ ಸಮಾನತೆಯ ಹೆಸರಿನಲ್ಲಿ ಹೋರಾಡುವವರು, ತಂತಾನೆ ಒದಗಿ ಬಂದ ಇಂಥ ಅಂಶಗಳನ್ನು ನೆನಪಿನಲ್ಲಿ ಇಡಬೇಕು" ಎಂದರು. ನನಗೆ ಆವರೆಗೆ ಹೊಳೆಯದಿದ್ದ ನಾರೀ ಅಧಿಕಾರದ ಅಂಶವನ್ನು ಗಮನಕ್ಕೆ ತಂದುಕೊಟ್ಟರು, ಆಶಾದಿ !

ಅದೇ ಜಾಡನ್ನು ಹಿಡಿದು, "ಸ್ತ್ರೀ ಸ್ವತಂತ್ರಳಾಗಿದ್ದಾಳೆ. ಸಮಾನತೆ ಸಾಧಿಸಿದ್ದಾಳೆ ಎನ್ನುವದು ಕೆಲವೇ ಕ್ಷೇತ್ರಗಳಲ್ಲಿ ಹಾಗೂ ಸಮಾಜದ ಕೆಲವೇ ಹಂತಗಳಲ್ಲಿ ಮಾತ್ರ ಎನಿಸುವದಿಲ್ಲವೇ? ಹೆಣ್ಣಿನ ಪರಾಧೀನತೆ ಮಧ್ಯಮ ಹಾಗೂ ಕೆಳಮಧ್ಯಮ ವರ್ಗಗಳಲ್ಲಿ ಮುಂದುವರಿದಿಲ್ಲವೇ ?" ಎಂದು ಕೇಳಿದೆ.

"ಕೆಲಮಟ್ಟಿಗೆ ನಿಜ. ಅದಕ್ಕೆ ಆರ್ಥಿಕಪರಿಸ್ಥಿತಿ ಹಾಗೂ ಬದಲಾಗುತ್ತಿರುವ ಮೌಲ್ಯಗಳು ಕಾರಣವಾಗಿವೆ. ಪರಾಧೀನತೆಗೆ ಅಜ್ಞಾನ ಹಾಗೂ ಶಿಕ್ಷಣದ ಅಭಾವ ಬಹುಮಟ್ಟಿಗೆ ಕಾರಣ ಎಂಬುದರ ಅರಿವು ಈಗೀಗ ಗ್ರಾಮೀಣ ಮಹಿಳೆಯರಲ್ಲಿ ಬಲವಾಗುತ್ತಿದೆ. ಠಾಕುರಪುಕುರದ ಹಳ್ಳಿಯೊಂದಕ್ಕೆ ಇತ್ತೀಚೆಗೆ ಹೋಗಿದ್ದೆ. ಓದು-ಬರಹವಿಲ್ಲದ ಮಹಿಳೆಯೊಬ್ಬಳನ್ನು ಕಂಡಿದ್ದೆ. ತನಗೆ ಶಿಕ್ಷಣವಿಲ್ಲದೇ ಪಟ್ಟ ಪಾಡು ಹೇಳಲಾಸಲ್ಲ! ಈಗ ಮಗಳನ್ನು ಶಾಲೆಗೆ ಕಳಿಸುತ್ತಿದ್ದಾಳೆ. ಮನೆಯ ಗಂಡಸರಿಗೆ ಇದು ಎಳ್ಳಷ್ಟೂ ಒಪ್ಪಿಗೆಯಿಲ್ಲ. ಮನೆಗೆಲಸ, ಹೊಲಗೆಲಸಗಳಿಗೆ ತೊಂದರೆಯಾಗುತ್ತದೆ. ವಿನಾಕಾರಣ ಖರ್ಚು ಹೆಚ್ಚು! ಎಂದೆಲ್ಲ ಹೇಳಿದರು.

'ಮಗಳು ಮಾಡಬೇಕಾದ ಕೆಲಸವನ್ನು ನಾನೇ ಮಾಡುತ್ತೇನೆ. ವರ್ಷಕ್ಕೆ ಮೂರು ಸೀರೆಯ ಬದಲು ಎರಡೇ ಸೀರೆ ನಡೆದೀತು! ಒಂದು ಹೊತ್ತಿನ ಊಟ ಕಡಿಮೆ ಮಾಡಿಯೇನು! ಆದರೆ ಮಗಳು ಸ್ಕೂಲಿಗೆ ಹೋಗಲೇಬೇಕು, ಎಂದು ಪಟ್ಟು ಹಿಡಿದೆ. ಈಗ ಮಗಳು ದಿನವೂ ತಪ್ಪದೇ ಶಾಲೆಗೆ ಹೋಗುತ್ತಿದ್ದಾಳೆ ಎಂದು ಆ ಮಹಿಳೆ ಅಭಿಮಾನದಿಂದ ಹೇಳಿದಳು. ಅರ್ಥಾತ್ ವಿದ್ಯೆಯ ಮಹತ್ವ, ಅವಕಾಶಗಳ ಅಭಾವದ ಪ್ರಜ್ಞೆ ಇಂಥ ಗ್ರಾಮೀಣ ಹೆಂಗಳೆಯರಲ್ಲಿ ಬೆಳೆದು ಬರುತ್ತಿದೆ. ....ಈಗ ಹುಡುಗಿಯರಿಗೆ ಶಿಕ್ಷಣದ ಸೌಲಭ್ಯಗಳೂ ಹೆಚ್ಚುತ್ತಿವೆ. ನನ್ನ ಎಳೆತನದಲ್ಲಿ ನಗರಸ್ಥಿತ ಉಚ್ಚಕುಲೀನ ಹೆಂಗಳೆಯರಿಗೇ ಅಕ್ಷರಜ್ಞಾನ ಸುಲಭವಿರಲಿಲ್ಲ. ಈಗ ಶಿಕ್ಷಣ ಬೆಳೆದಿದೆ. ಜೊತೆಗೆ ಹೆಂಗಳೆಯರ ಜವಾಬ್ದಾರಿಯೂ ಬೆಳೆದಿದೆ" ಎಂದರು.

ನಾನು ಸುಮ್ಮನಿರದೇ, "ಮಹಿಳೆಯರ ಶಿಕ್ಷಣದ ಅವಕಾಶಗಳು ಹೆಚ್ಚಿದ್ದರಿಂದ ಅವರ ಜವಾಬ್ದಾರಿ ಹೆಚ್ಚಾಗಿದೆ ಎನ್ನುತ್ತೀರಾ?" ಎಂದು ಕೇಳಿದೆ.

"ಹೇಂ ! (ಬಂಗಾಲಿಯಲ್ಲಿ ಹೌದು ಎಂದರ್ಥ) ಹೆಣ್ಣು ಮಕ್ಕಳು ಕಲಿಯುತ್ತಾರೆ. ನೌಕರಿಮಾಡುತ್ತಾರೆ. ಜೊತೆಗೆ ಮನೆಗೆಲಸ, ಮಕ್ಕಳ ಶಿಕ್ಷಣದ ಮೇಲ್ವಿಚಾರಣೆಯನ್ನೂ ಮಾಡುತ್ತಾರೆ..... ಮೊನ್ನೆ ಕಲಕತ್ತಾ ಹೈಕೋರ್ಟಿನ ಜಜ್, ಪದ್ಮಾ ಖಸ್ತಗೀರ್ ಭೇಟಿಯಾದವರು ಹೇಳುತ್ತಿದ್ದರು. "ಇಡೀ ದಿನ ತಲೆ ಹಾಗೂ ಮನಸ್ಸಿನ ನೆಮ್ಮದಿ ಕೆಡಿಸುವ ಕೆಲಸ ! ತುಂಬ ದಣಿದು ಹಿಂದಿರುಗುತ್ತೇನೆ. ಮನೆ ನೋಡಿಕೊಳ್ಳಲು ಹಿರಿಯರು, ಆಳು-ಕಾಳು ಇದ್ದಾರೆ. ಆದರೆ ರಿಲ್ಯಾಕ್ಸ್ ಹೇಗೆ ಮಾಡುತ್ತೇನೆ ಗೊತ್ತೆ? ಅಡಿಗೆ ಮನೆ ಹೊಕ್ಕು ! ಮನೆಯವರಿಗೆಲ್ಲ ಇಷ್ಟವಾಗುವ ನನ್ನ ಕೈಯಡಿಗೆ ಮಾಡಿ ಬಡಿಸುತ್ತೇನೆ. ಆತ್ಮೀಯರೊಡನೆ ಮಾತನಾಡುತ್ತ ಅವರು ತಮ್ಮ ಪ್ರೀತಿಯ ಅಡಿಗೆ ಆಸ್ವಾದಿಸುತ್ತಿರುವಾಗ ನನ್ನ ಯಾವತ್ತೂ ದಣಿವನ್ನು ಮರೆತುಬಿಡುತ್ತೇನೆ." ಎಂದು. ಅದೀಗ ಮಹಿಳೆಯ ನಿಜವಾದ ಸಾಧನೆ- ಮನೆಯ ಹೊರಗೆ ಒಳಗೆ ಕೂಡ ನಾನು ಕಂಡ ಹೆಚ್ಚಿನ ಮಧ್ಯಮವರ್ಗೀಯ ಹೆಂಗಳೆಯರು ನೌಕರಿ ಹಾಗೂ ಮನೆಗಳನ್ನು ಚೆನ್ನಾಗಿಯೇ ಸಂಭಾಳಿಸುತ್ತಾರೆ !

ಹಿಂದೆ, ಮನೆ ಬಿಟ್ಟರೆ ಹೆಂಗಸರಿಗೆ ಹೊರಗಿನ ಪ್ರಪಂಚ ಗೊತ್ತಿರಲಿಲ್ಲ. ಬೇಕಾದಂತೆ ಹೊರಗೆ ಹೋಗಲು, ತಿರುಗಾಡಿ ಬರಲು

ಸ್ವಾತಂತ್ರ್ಯವೂ ಇರುತ್ತಿರಲಿಲ್ಲ. ಅದು ಹೋಗಲಿ, ಮನೆಯಲ್ಲೇ ಓದುವ ಅಥವಾ ಬರೆಯುವ, ಅದೇಕೆ ? ಶಾಂತವಾಗಿ ಕುಳಿತು ಯೋಚಿಸುವ ಸ್ವಾತಂತ್ರ್ಯವೂ ಇರಲಿಲ್ಲ! ಈ ಅಧಿಕಾರಹೀನತೆ ಮಾನಸಿಕ ಹಿಂಸೆಗೆ, ಬೌದ್ಧಿಕ ಪರಾಧೀನತೆಗೆ ಅವಕಾಶ ಮಾಡಿಕೊಡುತ್ತದೆ....... 'ಕೆಲವೇ ವರ್ಷಗಳ ಹಿಂದೆ, ಗಂಡಸರು ಮರುಮದುವೆ ಮಾಡಿಕೊಳ್ಳಲು ಯಾವ ಕಾರಣವೂ ಬೇಕಿರಲಿಲ್ಲ. ದುರಾದೃಷ್ಟೆ ಹೆಣ್ಣನ್ನು ತ್ಯಜಿಸಲು ಪ್ರಬಲಕಾರಣದ ಅವಶ್ಯಕತೆ ಇರಲಿಲ್ಲ. ಈಗ ನೋಡು, ಕಾಯದೆ (ಹಿಂದೂಕೋಡ್) ಅವಳನ್ನು ಎಷ್ಟು ವಿಧದಲ್ಲಿ ರಕ್ಷಿಸುತ್ತದೆ..... ಹೆಂಗಸರ ಸ್ಥಾನಮಾನವನ್ನು ಸಾಂದರ್ಭಿಕವಾಗಿ ಅರಿಯಲು ಯತ್ನಿಸಬೇಕು". ಸ್ತ್ರೀಯರ ಸ್ಥಿತಿಗತಿಯ ಬಗೆಗಿನ ನನ್ನ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ ಹೇಳಿದರು.

"ಆದರೆ ನೀವು ಉದ್ಧರಿಸಿದ ಸಾಮಾಜಿಕ ಸ್ವಾತಂತ್ರ್ಯ ಅಥವಾ ಹೊಣೆಗಾರ ಸ್ವಾತಂತ್ರ್ಯ ಎಲ್ಲೆಡೆಗೆ ಕಂಡು ಬರುತ್ತಿಲ್ಲವಲ್ಲ?"

"ಇಲ್ಲ! ಅದಕ್ಕೆ 'ಅರ್ಥನೈತಿಕ ಬಾಧಾ' (ಆರ್ಥಿಕ ವಿಷಮತೆ) ಕಾರಣ. ಬಡತನ ತೀವ್ರವಾಗಿದ್ದಾಗ, ಹೆಣ್ಣಿನ ಶೋಷಣೆ, ಅಸಹಾಯಕತೆಗಳು ಹೆಚ್ಚೆಚ್ಚು ಕಾಣಿಸಿಕೊಳ್ಳುತ್ತವೆ. ಆರ್ಥಿಕಸ್ಥಿತಿ ಸುಧಾರಿಸುತ್ತ ಹೋದಂತೆ ಅವರಿಗೆ ತಮ್ಮ ಹಕ್ಕು ಬಾಧ್ಯತೆಗಳ ಅರಿವು ಹೆಚ್ಚುತ್ತದೆ. ಮನೆಯಲ್ಲೇ ಅವಿಭಕ್ತ ಕುಟುಂಬದಲ್ಲಿ ಪರಾವಲಂಬನದ ಕಲ್ಪನೆ ಸ್ಪಷ್ಟ ಇರದಿದ್ದರೂ ಸದಾ ಅಸುರಕ್ಷತತೆಯ ಭಾವದಿಂದ ಅವರು ಕೊರಗುತ್ತಿರುವದು ಕಾಣಿಸುತ್ತಿತ್ತು. ಯಾವಾಗ ಅತ್ತೆಯ, ಕುಟುಂಬದವರ, ಪತಿಯ ಅನಾದರಕ್ಕೆ ಪಾತ್ರಳಾಗುತ್ತೇನೋ, ಸವತಿ ಬರಬಹುದೋ ಏನೋ ಎಂಬಂಥ ಭಾವನೆ ! ಈಗ ಕಾನೂನುರಕ್ಷಣೆ ಹಾಗೂ ಹಕ್ಕುಬಾಧ್ಯತೆಗಳ ಅರಿವು ಜೊತೆಗೇ ಬಂದಿವೆ.

"ಪರಿಸ್ಥಿತಿ ತುಂಬ ಆಶಾದಾಯಕವಾಗಿದೆಯೇ ನಿಮ್ಮ ದೃಷ್ಟಿಯಲ್ಲಿ?"

"ಆಶಾದಾಯಕವೇನೋ ಇದೆ. ಆದರೆ ತನಗೆ ಒಮ್ಮಿಂದೊಮ್ಮೆ ಲಭಿಸಿದ ಸ್ವಾತಂತ್ರ್ಯದ ಎಲ್ಲ ಆಯಾಮುಗಳನ್ನು ಹೆಣ್ಣು ಸರಿಯಾಗಿ ಅರಿತಿದ್ದಾಳೆ, ಅವನ್ನು ಬಳಸಿಕೊಳ್ಳುತ್ತಿದ್ದಾಳೆ ಎಂದು ಹೇಳಲು ಬಾರದು ! ಆಕೆ ಇನ್ನೂ ಬಂದಿಯಾಗಿಯೇ ಉಳಿದಿದ್ದಾಳೆ! ಒಡವೆ ವಸ್ತುಗಳ ಆಶೆಯ ಬಂದಿ, ಹಣದ ಲೋಭದ ಬಂದಿ, ತಾನೇ ಕಟ್ಟಿದ ಸಂಸಾರಬಂಧನವನ್ನು ಇನ್ನೂ ಬಿಗಿದುಕೊಳ್ಳುತ್ತ ಬರುತ್ತಿದ್ದಾಳೆ.... ಬಾಹ್ಯ ಸ್ವಾತಂತ್ರ್ಯ ತುಂಬ

ದೊಡ್ಡ ಪ್ರಮಾಣದಲ್ಲಿ, ಅದೂ ಒಮ್ಮಿಂದೊಮ್ಮೆ ಭಾರತೀಯ ನಾರಿಗೆ ಲಭಿಸಿದೆ! ತಾನಾಗಿಯೇ ಪ್ರಯತ್ನದಿಂದ ವಿಸ್ತರಿಸಿಕೊಳ್ಳುವ ಮಾನಸಿಕ ಸ್ವಾತಂತ್ರ್ಯವನ್ನು ಆಕೆ ಬಾಧ್ಯಸ್ಥಳಾಗಿದ್ದರೂ ಇನ್ನೂ ಬಳಸಿಕೊಳ್ಳುತ್ತಿಲ್ಲ! ಎಂದು ಕೆಲಬಾರಿ ಅನಿಸುತ್ತದೆ" ಎಂದರು.

ಆಶಾದಿ, ಕಟುವಾದ ಸತ್ಯ ನುಡಿದಿದ್ದರು. ಅವರ ಮಾತನ್ನು ಅರಗಿಸಿಕೊಳ್ಳಲು ಸಮಯ ಹಿಡಿಯಿತು. ನಾನು ಹಿಂದಿಯಲ್ಲಿ ಪ್ರಶ್ನೆಗಳನ್ನು ಕೇಳುತ್ತಿದ್ದೆ. ಅವರು ಬಂಗಾಲಿಯಲ್ಲಿ ಉತ್ತರಿಸುತ್ತಿದ್ದರು. ಟಿಪ್ಪಣಿ ಇಂಗ್ಲಿಷಿನಲ್ಲಿ ಮಾಡಿಕೊಳ್ಳುತ್ತಾ ಇದ್ದೆ. ಮಿಠಾಯಿ, ಕಾರ, ಚಹಗಳು ಬಂದವು. ಆಶಾದಿ, ನನಗೂ ಜೊತೆಗೆ ಬಂದ ಸಹೋದ್ಯೋಗಿಗೂ ಪ್ರೀತಿಯಿಂದ 'ಮೋಹುಚೌಕ್' ಎಂಬ ಉತ್ಕೃಷ್ಟ ಮಿಠಾಯಿ ತಿನ್ನಿಸಿದರು. ಚಹ ಕುಡಿದ ಬಳಿಕ ಅವರ ಸಾಹಿತ್ಯ ಸಾಧನೆಯ ಕುರಿತು ಕೇಳಿದೆ.

ಆಶಾಪೂರ್ಣಾದೇವಿ, ಬರೆಯಲು ಪ್ರಾರಂಭಿಸಿದ್ದು ಅತ್ಯಂತ ಪ್ರತಿಕೂಲ ಪರಿಸ್ಥಿಯಲ್ಲಿ. ಇಂಗ್ಲಿಷ್ ಶಿಕ್ಷಣ ಮೊದಲಿಗೆ ಮಹಿಳೆಯರಿಗೆ ದೊರೆಯಲಾರಂಭಿಸಿದ್ದು ಬಂಗಾಲ ಪ್ರಾಂತದಲ್ಲಿ ಎಂಬುದು ಸಾಮಾನ್ಯ ನಂಬಿಕೆಯಿದ್ದರೂ ಕೆಲವೇ ಪ್ರತಿಷ್ಠಿತ ಕುಟುಂಬಗಳಿಗೆ ಸೀಮಿತವಾಗಿತ್ತು. ಅದೂ ಕಲಕತ್ತೆಯಂತಹ ಮಹಾನಗರದಲ್ಲಿ ಬಹುಸಂಖ್ಯಾತ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿದ್ದರು. ಮುಸ್ಲಿಮರ ಆಡಳಿತಕ್ಕೆ ದೀರ್ಘಕಾಲದವರೆಗೆ ಒಳಪಟ್ಟ ನಾಡು ಅದು. ಪರ್ದಾಪದ್ಧತಿ ಜೋರಾಗಿಯೇ ಇತ್ತು. ಮೈಮುಖ ಮುಚ್ಚಿಕೊಳ್ಳದೇ ಹೆಂಗಸರು ಹೊರಬೀಳದಿದ್ದ ದಿನಗಳಲ್ಲಿ ಹೆಸರಿಗೆ ಅಲ್ಲಲ್ಲಿ ಹುಡುಗಿಯರ ಶಾಲೆಗಳಿದ್ದರೂ, ಓದುವವರು ವಿರಳವಾಗಿದ್ದರು. ಓದು, ಬರಹ ಹೆಂಗಳೆಯರಿಗೆ ನಿಷಿದ್ಧ. ಹೆಂಗಸರು ಅದನ್ನು ಮಾಡಿದರೆ ಕುಲ ನಾಶವಾಗುತ್ತದೆ. ಗಂಡನ ಆಯುಷ್ಯ ಕ್ಷೀಣಿಸುತ್ತದೆ ಎಂಬ ಮೂಢನಂಬಿಕೆ ಬೇರೆ! ಮನೆಯಲ್ಲೇ ಓದಿಕೊಳ್ಳಲೂ ಪ್ರತಿಬಂಧವಿತ್ತು. ಇಂಥ ವಾತಾವರಣದಲ್ಲಿ ಹುಟ್ಟಿ ಬೆಳೆದ ಆಶಾದಿಗೆ ಏನು ತಾನೇ ಪ್ರೋತ್ಸಾಹ ದೊರೆಯಲು ಸಾಧ್ಯ? ಆದರೆ ಅವರು ಎದೆಗೆಡಲಿಲ್ಲ. ಮನೆಯಲ್ಲಿ ಕೈಗೆ ಸಿಗುತ್ತಿದ್ದ ಬಂಗಾಲಿ ಪುಸ್ತಕ, ಪತ್ರಿಕೆಗಳನ್ನೆಲ್ಲ ಓದುತ್ತ ಹೋದರು. ತಾವು ಓದಿದ್ದಕ್ಕಿಂತ, ನೋಡಿ, ಅನುಭವಿಸಿ ತಿಳಿದುಕೊಂಡ ಜೀವನ ಪಾಠಗಳನ್ನು ಸರಳ ಭಾಷೆಯಲ್ಲಿ,

ಸೊಗಸಾದ ಕಾಲ್ಪನಿಕ ರೂಪಗಳಲ್ಲಿ ಕಥೆ-ಕಾದಂಬರಿಗಳಾಗಿ ಹೊಸೆಯಲಾರಂಭಿಸಿದರು. ಚಿಕ್ಕಕಥೆಗಳು ಬಲುಬೇಗ ಜನಪ್ರಿಯವಾದವು. ತುಂಬ ಜನ, ಅವರದು ಛದ್ಮ ಹೆಸರೆಂದೂ ಗಂಡಸು ಮಾತ್ರ ಇಂಥ ಸಶಕ್ತ ಬರವಣಿಗೆ ಹೊರತರಬಲ್ಲ! ಎಂದು ಇವರ ಆತ್ಮೀಯರಿಗೇ ಹೇಳುತ್ತಿದ್ದರಂತೆ !

ಕಥೆಗಳಿಗೆ ತೀವ್ರ ಬೇಡಿಕೆ ಬರಲಾರಂಭಿಸಿತು. ಗೌರವಧನವೂ ದೊರೆಯಲಾರಂಭಿಸಿತು. ಬರವಣಿಗೆಗೆ ಗೃಹಜೀವನ ಅಡ್ಡಿಯಾಗಲಿಲ್ಲ. ಗೃಹಿಣಿಯ ಪದವಿಯೂ ತೊಂದರೆಯಾಗಲಿಲ್ಲವೆಂದು ಅಭಿಮಾನದಿಂದ ಹೇಳಿದರು. ಸುಮಾರು ಐವತ್ತು ವರ್ಷಗಳಲ್ಲಿ ಎರಡುನೂರಕ್ಕೂ ಮಿಕ್ಕಿ ಕಥಾಸಂಕಲನಗಳು, ಕಾದಂಬರಿಗಳು, ಶಿಶುಸಾಹಿತ್ಯದ ಕೃತಿಗಳು ಬಂದಿವೆ. ಮಧ್ಯಮವರ್ಗದ ನೋವು-ನಲಿವುಗಳ ಚಿತ್ರಣ ಕಾದಂಬರಿಯ ಪ್ರಧಾನವಸ್ತುವಾಗಿದ್ದರೂ, ಆದಿವಾಸಿಗಳು, ಮೀನುಗಾರರು, ಕೃಷಿಕರು ಇವರ ಜೀವನ ಸಂಘರ್ಷವೂ ಕಥೆಗಳಲ್ಲಿ ಒಡಮೂಡಿವೆ. ಅವರಿಗೆ ಜ್ಞಾನಪೀಠ ಪುರಸ್ಕಾರತಂದ 'ಪ್ರಥಮ ಪ್ರತಿಶ್ರುತಿ'ಯಲ್ಲಿ ಲೇಖಕಿ ಸ್ವತಃ ಕಣ್ಣಿಂದ ನೋಡಿ ಅರಿತು, ಬೆಳೆದು ಬದುಕಿದ ಪರಿಸರದ ನೈಜ ಚಿತ್ರಣವಿದ್ದಂತೆ ಅಂದಿನ ದಿನಗಳಲ್ಲಿ ಸಾಮಾನ್ಯವಾಗಿದ್ದ ಅವಿಭಕ್ತ ಕುಟುಂಬವೊಂದರ ಮಹತ್ವದ ದಾಖಲೆಯಾಗಿದೆ. ಬಂಗಾಲಿ ಗ್ರಾಮಜೀವನದ ಮಡಿ-ಹುಡಿ, ಊಟ-ತಿಂಡಿ, ಹಬ್ಬ-ಹುಣ್ಣಿವೆ, ಆಚಾರ-ವಿಚಾರಗಳು, ಹೆಣ್ಣುಮಕ್ಕಳು, ಬೇರೆ ಬೇರೆ ವಯಸ್ಸಿನ ಮಹಿಳೆಯರು ಮುಖ್ಯವಾಗಿ ಬಾಲ ವಿಧವೆಯರು ಬರಡಾಗಿ ಬಾಳಿ ಭಸ್ಮವಾಗುತ್ತಿದ್ದ ನಾರೀಪ್ರಪಂಚದ ಆಂತರಿಕ ತಳಮಳಗಳ ಚಿತ್ರಣವನ್ನು "ಪ್ರಥಮ ಪ್ರತಿಶ್ರುತಿ" ಕೊಡುತ್ತದೆ. 'ಪ್ರತಿಶ್ರುತಿ' ಎಂದರೆ ಆಶ್ವಾಸನೆ ಅಥವಾ ಪ್ರಾಮಿಸ್ ಎಂದರ್ಥ. ಜೀವನದ ನಿಜವಾದ ಅರ್ಥವನ್ನು ತಿಳಿಯಪಡಿಸುತ್ತೇನೆಂದು ಕಥಾನಾಯಕಿ ಸತ್ಯವತಿಯ ಧೀಮಂತ ತಂದೆ ಕೊಟ್ಟ ಆಶ್ವಾಸನೆಯನ್ನು, ತಾನು ಎಳೆತನದಲ್ಲಿ ಪಡೆದದ್ದನ್ನು ಮರೆಯದೇ ಗೃಹಿಣೀತ್ವದ ಸತ್ವಪರೀಕ್ಷೆಯ ಸಂದರ್ಭವನ್ನು ಧೈರ್ಯದಿಂದ ಎದುರಿಸಿಯೂ ಚಿತ್ತಶಾಂತಿ ಪಡೆಯದೇ ಬಹಳ ವರ್ಷಗಳ ಬಳಿಕ ತಂದೆಯ ಬಳಿ ಅವರಿತ್ತ ಆಶ್ವಾಸನಾಪೂರ್ತಿ ಪಡೆಯಲು ಹೊರಟ ಹೆಣ್ಣಿನ ಕತೆ "ಪ್ರಥಮ ಪ್ರತಿಶ್ರುತಿ".

ಹುಟ್ಟಾ ಹೋರಾಟಗಾರ್ತಿ ಸತ್ಯವತಿ, ಚಿಕ್ಕಂದಿನಿಂದಲೇ ಮೀನುಹಿಡಿಯುವದು, ಈಜುವದು, ಓದುಬರಹ ಮಾಡುವದು ಮೊದಲಾದ ಹೆಣ್ಣುಮಕ್ಕಳಿಗೆ 'ನಿಷಿದ್ಧ'ವಿರುವ ಚಟುವಟಿಕೆಗಳಲ್ಲಿ ತೊಡಗಿರುವಾಕೆ. ತಾಯಿಯನ್ನು ಚಿಕ್ಕಂದಿನಲ್ಲಿ ಕಳೆದುಕೊಂಡರೂ ಚಟರ್ಜಿಕುಟುಂಬದಲ್ಲಿ ತುಂಬಿ ತುಳುಕುತ್ತಿದ್ದ ಮಹಿಳಾಪರಿವಾರದ ಕಣ್ಣರಿಕೆಯಲ್ಲಿ ತಂದೆಯ ಅಕ್ಕರೆಯಲ್ಲಿ ಬೆಳೆದಾಕೆ. ಸ್ವತಃ ತಂದೆ, ಪುರೋಗಾಮಿ ವಿಚಾರದವರಾದರೂ ತಮ್ಮ ದಿನಮಾನದ ವ್ಯವಸ್ಥೆಯ ವಿರುದ್ಧ ಹೋರಾಡುವ ಪ್ರವೃತ್ತಿಯವರಲ್ಲವಾದ್ದರಿಂದ ಎಂಟನೆಯ ವರ್ಷಕ್ಕೇ "ಗೌರಿ ವಿವಾಹ"ವನ್ನು ಮಗಳಿಗೆ ಏರ್ಪಡಿಸಲೇಬೇಕಾಗುತ್ತದೆ.

ಮದುವೆಯಾಗಿ ಹೋದ ಮನೆ ಕುಸಂಸ್ಕೃತಿ-ಅಜ್ಞಾನಗಳ ತವರು ! ಗಂಡ ಬೆಪ್ಪ, ಅತ್ತೆ ಕರ್ಕಶೆ, ಊರ ಚಂಡಿ! ಸತ್ಯಳನ್ನು ಅರ್ಥಮಾಡಿಕೊಳ್ಳಬಲ್ಲ ವ್ಯಕ್ತಿಯೋರ್ವರೂ ಮನೆ-ಗ್ರಾಮ, ಊರುಗಳಲ್ಲಿರಲಿಲ್ಲ. ಪ್ರತಿರೋಧಿ ಪರಿಸರದಲ್ಲಿ ನೂರಾರು ಅಡ್ಡಿ-ಆತಂಕಗಳನ್ನು ಎದುರಿಸುತ್ತಲೇ ತನ್ನ ವ್ಯಕ್ತಿತ್ವವನ್ನೂ ಬೆಳೆಸಿಕೊಳ್ಳುತ್ತ, ಮೂವರು ಮಕ್ಕಳನ್ನು ಶಾಲೆಗೆ ಸೇರಿಸಲೇಬೇಕೆಂಬ ಹಟದಿಂದ ಕಲಕತ್ತೆಯಲ್ಲಿ ಬಿಡಾರ ಹೂಡುವದರಲ್ಲಿ ಯಶಸ್ವಿಯಾಗುತ್ತಾಳೆ. ಮಗಳು ಸುವರ್ಣಳಿಗೆ ತನ್ನಂತೆ ಗೌರೀವಿವಾಹ ಮಾಡಬಾರದು. ಸಾಕಷ್ಟು ತಿಳಿವಳಿಕೆ ಬಂದ ಬಳಿಕವೇ ಮಾಡಬೇಕೆಂಬುದು ಅವಳ ಇಚ್ಛೆ. ಹಿರೇಮಗನ ಮದುವೆ ಊರಲ್ಲೇ ಆಗಬೇಕು ಎಂದು ಅತ್ತೆಯಹಟ. ಹೀಗಾಗಿ ತಯಾರಿಗಾಗಿ ಗಂಡ, ಮಕ್ಕಳನ್ನು ಮುಂದಾಗಿ ಕಳಿಸಿ, ಹಿಂದಿನಿಂದ ಬರುವಂತೆ ಸತ್ಯಳಿಗೆ ಆದೇಶ ಬರುತ್ತದೆ. ಕೆಲದಿನಗಳ ಬಳಿಕ ಕೂಡಲೇ ಹೊರಟುಬಾ ಎಂಬ ಸಂದೇಶ ಬಂದರೂ ಎತ್ತಿನಗಾಡಿ ಸಕಾಲಕ್ಕೆ ದೊರೆಯದೇ ವಿಳಂಬವಾಗುತ್ತದೆ. ನಡುವೆ ಕಾಡುಬೆಂಕಿಯ ದುರ್ಘಟನೆ. ಅಂತೂ ಕೊನೆಗೊಮ್ಮೆ ಊರು ತಲುಪಿದಾಗ ಮಂಗಲಧ್ವನಿ, ಉಲುಧ್ವನಿ ಶಂಖನಾದ, ಜನಜಂಗುಳಿಯನ್ನು ನೋಡಿ, ಸತ್ಯ ದಿಙ್ಮೂಢಳಾಗುತ್ತಾಳೆ. ಅವಳ ಮುದ್ದುಮಗಳ ತಡವಾಗಿ ಹುಟ್ಟಿದ ಸುವರ್ಣಳ ಮದುವೆಯನ್ನು ಅವಳಿಗೆ ಹೇಳದೆಯೇ ಎಂಟನೆಯ ವರ್ಷದಲ್ಲಿಯೇ ಮಾಡಿಬಿಟ್ಟಿರುತ್ತಾರೆ! ಎಣೆಯಿಲ್ಲದ ಧೈರ್ಯಕ್ಕಾಗಿ ಅಪಖ್ಯಾತಿ ಪಡೆದ ಸತ್ಯ ಈ ಕಂಗೆಡಿಸುವ ದೃಶ್ಯದಿಂದಲೂ

ಎದೆಗುಂದುವದಿಲ್ಲ. ಮದುವೆಯ ಇತರ ಕಾರ್ಯಗಳು, ನಂತರ ಜರುಗಲಿದ್ದ ಮಗನ ಲಗ್ನ ಇವು ಯಾವವುಗಳಲ್ಲೂ ಪಾಲುಗೊಳ್ಳದೇ, ಕೈ ಮುಗಿಯುತ್ತಿದ್ದ ಅತ್ತೆ, ಗಂಡನ ಅನುರೋಧ, ಏನಾಯಿತೆಂದು ತಿಳಿಯದೇ ಬಿಕ್ಕುತ್ತಿದ್ದ ಮಗಳ ಸ್ಥಿತಿಯನ್ನೂ ಲೆಕ್ಕಿಸದೇ ಕಲಕತ್ತೆಗೆ ಹಿಂದಿರುಗುತ್ತಾಳೆ. ನಂತರ ಕಾಶಿಯಲ್ಲಿ ವಾನಪ್ರಸ್ಥದಲ್ಲಿದ್ದ ತಂದೆಯ ಬಳಿ ಅವರು ಬಾಲ್ಯದಲ್ಲಿ ನೀಡಿದ್ದ ಆಶ್ವಾಸನೆಯನ್ನು ನೆನಪಿಸಿ ಬಾಳಿನಲ್ಲಿ ತನ್ನ ತೀವ್ರ ಸೋಲಿನ ಕಾರಣಗಳನ್ನು ಅರಿಯಲು ಹೊರಡುತ್ತಾಳೆ.

ಈ ಬೃಹತ್ ಕಾದಂಬರಿ, ಮುಸುಕೆತ್ತಿ ತೋರುವ ಮಹಿಳಾ ಜೀವನದ ಆಯಾಮುಗಳಿಗೆ ಲೆಕ್ಕವಿಲ್ಲ. ಸಂಪ್ರದಾಯ, ಸುಧಾರಣೆ, ಶೋಷಣೆ, ಪ್ರತಿಭಟನೆ, ಪ್ರಗತಿ-ಅಧೋಗತಿಗಳ ಪರಸ್ಪರ ವಿರೋಧಿ ಸೆಳಕುಗಳು, ಉದ್ದಕ್ಕೂ ಕಂಡು ಬರುವಂತೆ ಬಂಗಾಲಿ ಮಧ್ಯಮವರ್ಗದ ನಗರ ಹಾಗೂ ಗ್ರಾಮ ಜೀವನದಲ್ಲಿರುವ ಮಹದಂತರವನ್ನೂ ಈ ಕೃತಿ ಚಿತ್ರಿಸುತ್ತದೆ. ನಂತರ ಬಂದ "ಸುವರ್ಣಲತಾ, ಬಕುಲಕಥಾ" ಕಾದಂಬರಿಗಳು ಇದೇ ಜಾಡಿನಲ್ಲಿ ಮುಂದುವರಿದು ಭರದಿಂದ ಬದಲಾಗುತ್ತಿದ್ದ ಸಮಾಜಕ್ಕೆ ಕನ್ನಡಿ ಹಿಡಿದಂತಿವೆ.

ನಂತರದ ವರ್ಷಗಳಲ್ಲಿ ಆಶಾಪೂರ್ಣಾದೇವಿ, ಪ್ರೇಮವಿವಾಹ, ಪ್ರೌಢವಿವಾಹ, ಅಂತರ್‌ಜಾತೀಯ ವಿವಾಹ, ದುಡಿಯುವ ಹೆಣ್ಣಿನ ಸಮಸ್ಯೆಗಳಂಥ ಪ್ರಸ್ತುತ ವಿಚಾರಗಳನ್ನು ತಮ್ಮ ಬರವಣಿಗೆಯಲ್ಲಿ ಅಳವಡಿಸಿಕೊಳ್ಳುತ್ತ ಹೋದರು. ಸಾಮಾಜಿಕ ಬದಲಾವಣೆಗಳಿಗೆ ಸಕ್ರಿಯವಾಗಿ ಸ್ಪಂದಿಸುತ್ತಿದ್ದ ಈ ಕೃತಿಗಳು ಅತ್ಯಂತ ಜನಪ್ರಿಯವಾದವು.

ಈ ಹಿನ್ನೆಲೆ ಹಾಗೂ ಅವರು ಚಿತ್ರಿಸಿದ ಹೆಣ್ಣಿನ ನೋವು ನಲಿವುಗಳ ಅಸಂಖ್ಯ ಆಯಾಮಗಳು ನೆನಪಿಗೆ ಬಂದು ಬರವಣಿಗೆಯ ಕುರಿತು ಅವರ ಅಭಿಪ್ರಾಯ ತಿಳಿಯಲು ಹವಣಿಸಿದೆ.

ಈಗ ಭಾರತದಲ್ಲೆಲ್ಲ ಸ್ತ್ರೀಯರ ಸಾಮಾಜಿಕ ಸ್ಥಿತಿ, ಮುಖ್ಯತಃ ಮಧ್ಯಮವರ್ಗದಲ್ಲಿ ಸಾಕಷ್ಟು ಬದಲಾಗಿದೆ ಎಂಬುದು ಒಪ್ಪತಕ್ಕ ಮಾತೇ ! ಈ ವರ್ಷಗಳಲ್ಲೆಲ್ಲ ಹೆಣ್ಣಿನ ಪ್ರತಿ, ಪುರುಷರ ದೃಷ್ಟಿಕೋನ ಬದಲಾಗಿದೆ ಎಂದು ನಿಮಗೆ ಅನಿಸುತ್ತದೆಯೇ?

"ಖಂಡಿತ ಬದಲಾಗಿದೆ. ಸಾಕಷ್ಟು ಬದಲಾಗಿದೆ. ಪುರುಷನೇ ಕುಟುಂಬದ ಪೂರ್ಣತಃ ಅಧಿಪತಿಯಾಗಿದ್ದ ಕಾಲವೊಂದು ಇತ್ತಲ್ಲ! ಆತನ ಸುಖ-ಸೌಕರ್ಯ, ಅನುಕೂಲ, ವಿಚಾರಗಳ ಮೇಲೆಯೇ ಇಡೀ ಪರಿವಾರದ ಸ್ವಾಸ್ಥ್ಯ ಅವಲಂಬಿಸಿರುತ್ತಿತ್ತು. ಈಚೀಚೆಗೆ ಮಹಿಳೆ ಆರ್ಥಿಕ ಹೊಣೆ, ಸಾಂಸಾರಿಕ ಹೊಣೆಗಳಲ್ಲಿ ಪಾಲುಗಾತಿಯಾಗುತ್ತ ನಡೆದಂತೆ ಪುರುಷರ ದಾಯಿತ್ವ (ಹೊಣೆ) ಸಾಕಷ್ಟು ಕಡಿಮೆಯಾಗಿದೆ. ಹೆಣ್ಣುಮಕ್ಕಳದು ಹೆಚ್ಚಿದೆ! ಬದಲಾದ ಯುಗಧರ್ಮದ, ನಿಖರವಾಗಿ ಕಾಣುವ ಅಂಶ ಇದು."

"ಇಂಥ ಬದಲಾವಣೆ, ಪುರುಷನಿರ್ಮಿತ ಬಂಗಾಲಿಸಾಹಿತ್ಯದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಕಂಡುಬರುತ್ತಾ ಇದೆಯೇ?"

ಒಂದು ಕ್ಷಣ ಯೋಚಿಸಿ ಆಶಾದಿ ಹೇಳಿದರು, "ಇಲ್ಲವೆನಿಸುತ್ತದೆ! ಒಮ್ಮಿಂದೊಮ್ಮೆ ಕಾಣಿಸಿಕೊಂಡ ಈ ಸಾಮಾಜಿಕ ಬದಲಾವಣೆಯ ಕುರಿತು ಅವರದು ಇನ್ನೂ ಅಸ್ಥಿರವಾದ, ಅನಿಶ್ಚಿತವಾದ ನಿಲುವು ಎಂದು ವಿಷಾದದಿಂದಲೇ ಹೇಳಬೇಕಾಗಿದೆ!"

"ಈಚಿಗಿನ ಲೇಖಕಿಯರ ಪ್ರಗತಿ ಹೇಗಿದೆ? ನಿಮ್ಮ ವೈಯಕ್ತಿಕ ಪ್ರತಿಕ್ರಿಯೆ ಏನು?"

ಹಲಬಗೆಯ ಸಾಹಿತ್ಯಪ್ರಕಾರಗಳು ಮಹಿಳೆಯರ ಲೇಖನಿಯಿಂದ ಮೂಡಿಬರುತ್ತಿವೆ. ಸಾಹಿತ್ಯಕೃಷಿ ಚೆನ್ನಾಗಿದೆ. ಸಾಹಿತ್ಯ ನಿರೂಪಣೆಯ ಹೊಸ ಹೊಸ ತಂತ್ರಗಳೂ ಅವರಿಗೆ ಕೈಗೂಡಿವೆ. ಆದರೆ..... ಆದರೆ (ಕ್ಷಣಕಾಲ ತಡೆದು) 'ಪ್ರತಿಭೆಯ ಕೊರತೆ ಇದೆ' ಎಂದು ನನಗನಿಸುತ್ತದೆ. ಸದ್ಯದ ಮಹಿಳಾಸಾಹಿತ್ಯದಲ್ಲಿ ಹೆಚ್ಚಿನ ಮೌಲಿಕ ಕೃತಿಗಳನ್ನು ನಾನು ಕಂಡಿಲ್ಲ! ಸೃಜನ ಶೀಲತೆಗೆ ಈಚಿಗಿನ ವರ್ಷಗಳಲ್ಲಿ ದೊರೆತ ಅಪಾರ ಅವಕಾಶಗಳನ್ನು ಗಮನಿಸಿದಲ್ಲಿ, ಅದಕ್ಕೆ ತಕ್ಕ ತೀವ್ರ ಸಂವೇದನೆ, ಸೂಕ್ಷ್ಮಗ್ರಾಹಕತೆಗಳ ಪ್ರಮಾಣ ಕಡಿಮೆ!

"ಪ್ರತಿಭೆಯ ಕೊರತೆ ಅಷ್ಟೊಂದಿದೆಯೇ?"

"ನೋಡಮ್ಮ. ಸುಂದರವಾದ ಉದ್ಯಾನದಲ್ಲಿ ಗಿಡಗಳ ತುಂಬ ಹೂವುಗಳು ಅರಳಿ ನೆಲದ ಮೇಲೂ ಹರಡಿ ಬಿದ್ದಾಗ, ಸಾಗರ ಬಿದ್ದು ಅವನ್ನು ಹೆಕ್ಕುವ ಬಾಲಕಿಯ ಮನಃಸ್ಥಿತಿ, ಇಂದಿನ ಮಹಿಳೆಯರದಾಗಿದೆ.

ಎಷ್ಟೊಂದು ಹೂಗಳು! ಹೆಕ್ಕಿ ಉಡಿತುಂಬಿಕೊಂಡರೂ ಇನ್ನೂ ಇನ್ನೂ ಹೆಕ್ಕಿಕೊಳ್ಳುತ್ತಿದ್ದಾರೆ! ನೆಲದ ಮೇಲಿನವು ಮುಗಿದಾಗ, ಗಿಡದ ಮೇಲಿನವು! ಸಾಹಸಿಗಳಾದವರು ಇನ್ನೂ ಎತ್ತರದಲ್ಲಿರುವ ಟೊಂಗೆಗಳಲ್ಲಿ ಅರಳಿ ನಿಂತವನ್ನು ಕಿತ್ತುಕೊಂಡಾರು. ಅದಾದ ಮೇಲೆ ಹೊಸ ಹೂಗಳ ಶೋಧದಲ್ಲಿ ಬೇರೆಡೆ ಹೋದಾರು! ಸ್ವಾತಂತ್ರ್ಯೋತ್ತರ ಯುಗದ ಮಹಿಳೆಯರ ಸ್ಥಿತಿ ಹೀಗಿದೆ. ನನಗೆ ಕಂಡಂತೆ ತಾವಾಗಿ ಬಂದ ಅವಕಾಶಗಳು. ರಾಜಕೀಯ, ಆರ್ಥಿಕ, ಸಾಮಾಜಿಕ ಸಮಾನತೆಗಳು ಅವಳಿಗೆ ಒದಗಿ ಬಂದವು. ಅದನ್ನು ತನ್ನವಾಗಿಸುವಲ್ಲಿ ಭಾರತೀಯ ನಾರಿ ಮೈಮರೆತಿದ್ದಾಳೆ. ಸದ್ಯಕ್ಕೆ ಅವನ್ನು ಅರಗಿಸಿಕೊಳ್ಳುವಲ್ಲಿ ತೊಡಗಿದ್ದಾಳೆ. ತನ್ನ ಸ್ವಂತಿಕೆಯನ್ನು ವಿವಿಧ ಕ್ಷೇತ್ರಗಳಲ್ಲಿ (ಬರವಣಿಗೆಯೂ ಸೇರಿದಂತೆ) ತೋರ್ಪಡಿಸಲು ಬಹುಶಃ ಆಕೆಗಿನ್ನೂ ಬಿಡುವು ಸಿಕ್ಕಿಲ್ಲ! ಬರುವ ತಲೆಮಾರಿನಲ್ಲಿ ಆಕೆ ಖಂಡಿತ ಹೊಸದಕ್ಕಾಗಿ ಯತ್ನಿಸುತ್ತಾಳೆ.... ಸಾಧಿಸುತ್ತಾಳೆ. ಸಂಘರ್ಷದಲ್ಲಿ ಹೊಸತನ ಹುಟ್ಟುತ್ತದೆ. ಪ್ರತಿರೋಧವಿದ್ದಾಗಲೇ ಕ್ರಿಯಾತ್ಮಕತೆಗೆ ಜೋರುಬರುತ್ತದೆ.!

ಹೊಸಪೀಳಿಗೆಯ ಬಗ್ಗೆ ಆಶಾದೀದಿ ವ್ಯಕ್ತಪಡಿಸಿದ ಆಶಾವಾದವನ್ನು ನೋಡಿ ಸಂತೋಷವೆನಿಸಿತು. ಈಗಾಗಲೇ ಮೂರು ತಲೆಮಾರಿನ ನಾರಿಯರ ಅಭ್ಯುದಯವನ್ನು ಗಮನಿಸುತ್ತ ಬಂದವರು ಅವರು. "ಅವಕಾಶಗಳು ಹೇರಳವಾಗಿದ್ದರೂ, ಪ್ರತಿಭೆಯ ಕೊರತೆಗೆ ಕಾರಣಗಳು ನಿಮ್ಮ ದೃಷ್ಟಿಯಲ್ಲಿ ಯಾವವು?" ಎಂದು ಕೇಳಿದೆ.

"ನಿಮ್ಮ ಪ್ರಶ್ನೆಗೆ ಉತ್ತರ ಕೊಡುವದು ಕಷ್ಟವೇ!..... ನಾನು ನೋಡಿದ ಜಗತ್ತು ಮೊದಲಿಗೆ ಮುಚ್ಚಿದ ಕಿಟಕಿಯದು. ನಂತರ ತುಸುವೇ ತೆರೆದುಕೊಂಡ ಕಂಡಿ, ನಂತರದ ವರ್ಷಗಳಲ್ಲಿ ಪೂರ್ಣ ತೆರೆದ ಕಿಟಕಿಯೊಳಗಿಂದ ಹೊರಜಗತ್ತನ್ನು ಕಂಡೆ. ಈಗಲಾದರೋ ಪ್ರಪಂಚದ ಮಹಾದ್ವಾರಗಳೆಲ್ಲ ನಾರೀಜಗತ್ತಿಗೆ ತೆರೆದುಕೊಂಡಿವೆ! ಅವಕ್ಕೆ ಸ್ಪಂದಿಸುವಲ್ಲಿ ನಿರೀಕ್ಷಿತ ಉತ್ಸಾಹ ಅವರಲ್ಲಿಲ್ಲ. ನೀವೇಕೆ ನಿಮ್ಮ ನೂತನ ಅನುಭವಗಳಿಗೆ ಬರವಣಿಗೆಯ ರೂಪ ಕೊಡುತ್ತಿಲ್ಲ? ಎಂದು ಆಗಾಗ ಕಿರಿಯ ವಯಸ್ಸಿನ ಲೇಖಕಿಯರಿಗೆ ಕೇಳುತ್ತಲೇ ಇರುತ್ತೇನೆ. ಬಹುಶಃ ನನಗೆ ತಾರುಣ್ಯದಲ್ಲಿ ರೋಮಾಂಚಕಾರಿಯಾಗಿ ಕಂಡದ್ದು, ಅದ್ಭುತವೆಂದು ತೋರಿದ್ದು, ಅವರಿಗೆ ತೀರಾ ಸಹಜವಾಗಿ ಕಾಣುವ ಘಟನೆಗಳಾಗಿವೆ. ಕೆಲವು ಅವಿಸ್ಮರಣೀಯವೆಂದು

ತೋರಿದವೆಂದು ಅವರಿಗೆ ಹೇಳಿದರೆ, ಅವರಿಗವು ಮಹತ್ವದ್ದೆನಿಸುವದಿಲ್ಲ! ಇನ್ನೂ ಬರೆಯಲು ಒತ್ತಾಯಿಸಿದರೆ ನಾನೇನು ನಿಮ್ಮಂಥ ಅನುಭವಿ ಲೇಖಕಿಯೇ? ಏನು ಬರೆಯುವದೆಂದು ತೋಚುವದೇ ಇಲ್ಲ! ಎಂದು ಹಾರಿಕೆಯ ಉತ್ತರ ಕೊಡುತ್ತಾರೆ.... ಬಹುಶಃ ಇದೊಂದು ಸಂಧಿಕಾಲದ ಪ್ರತಿಕ್ರಿಯೆ" ಎಂದು ಉದ್ಗರಿಸಿದರು.

ಅದಾಗಲೇ ಎರಡು ಗಂಟೆಯ ಸಮಯವನ್ನು ಅವರೊಂದಿಗೆ ಕಳೆದಿದ್ದೆ. ಅವರ ಕೃತಿಗಳ ಹಿಂದಿ ಅನುವಾದ ಓದಿದ್ದಾಗಿ ಹೇಳಿದೆ. ಅವರಿಗೆ ಬಂಗಾಲಿ ಬಿಟ್ಟರೆ ಬೇರೆ ಭಾಷೆ ಬರುತ್ತಿರಲಿಲ್ಲ. ನನಗೆ ಬಂಗಾಲಿ ಚೆನ್ನಾಗಿ ಅರ್ಥವಾಗುತ್ತಿತ್ತಾದರೂ ನಿರರ್ಗಳ ಸಂಭಾಷಣೆ ನಡೆಸುವ ಪ್ರಭುತ್ವ ಬಂದಿರಲಿಲ್ಲ. ಆದರೆ ನಮ್ಮ ಮಾತುಕತೆಗೆ ಯಾವ ಅಡ್ಡಿಯೂ ಬರಲಿಲ್ಲವೆಂಬ ಅಂಶ ನೆನಪಾದದ್ದು ಸಂದರ್ಶನ ಮುಗಿದಾಗಲೇ! ಬಂಗಾಲಿ ಪದ್ಧತಿಯಂತೆ, ಕಾಲು ಮುಟ್ಟಿ, ಪಾದಧೂಳಿಯೆತ್ತಿ ನಮಸ್ಕರಿಸಿದಾಗ, ತುಂಬಿದ ಮನದಿಂದ ಆಶೀರ್ವದಿಸಿದರು. ತನ್ನ 'ತಪಸ್ಯಾ' ಕಾದಂಬರಿಯ ಹಿಂದಿ ಅನುವಾದವನ್ನು ಹಸ್ತಾಕ್ಷರ ಹಾಕಿ ಉಡುಗೊರೆಯಿತ್ತರು.

ಜ್ಞಾನಪೀಠ ಪ್ರಶಸ್ತಿ ಬಂದ ಸಂದರ್ಭದಲ್ಲಿ, ಕಲಕತ್ತಾ ಆಕಾಶವಾಣಿ ಏರ್ಪಡಿಸಿದ ಅವರ ಸಂದರ್ಶನ ಕಾರ್ಯಕ್ರಮದಲ್ಲಿ ಕೆಲವು ಲೇಖಕಿಯರು ಭಾಗವಹಿಸಿದ್ದರು. ದೇಶದ ಅತ್ಯುನ್ನತ ಸಾಹಿತ್ಯ ಪುರಸ್ಕಾರ ಪಡೆದದ್ದಕ್ಕೆ ನಿಮ್ಮ ಪ್ರತಿಕ್ರಿಯೆ ಏನು? ಎಂಬ ತೀರಾ ಸಾಮಾನ್ಯ ಪ್ರಶ್ನೆಯೂ ಕಾಣಿಸಿಕೊಂಡಿತ್ತು. "ಪುರಸ್ಕಾರ-ತಿರಸ್ಕಾರಗಳನ್ನು ಒಂದೇ ಬಗೆಯಲ್ಲಿ ಕಾಣುವ ಮನೋಭಾವ ಬೆಳೆಸಿಕೊಂಡಿದ್ದೇನೆ" ಎಂದಿದ್ದರು. ಹಾಗೆನ್ನಲು ಕಾರಣವೂ ಇತ್ತು. ಉಜ್ವಲ ಸಾಹಿತ್ಯ ನಿರ್ಮಿತಿಯ, ಭವ್ಯ ಪರಂಪರೆಯ ರವೀಂದ್ರನಾಥ ಠಾಕೂರರ ಬಂಗಾಲದಲ್ಲಿ, ಸಾಹಿತ್ಯ ಸೃಷ್ಟಿ ಹುಲುಸಾಗಿದ್ದರೂ ಸಾರ್ವತ್ರಿಕ ಮನ್ನಣೆ. ಮೆಚ್ಚಿಗೆಗಳು ಅಪರೂಪ! ಹೀಗಾಗಿ ಆಶಾಪೂರ್ಣಾದೇವಿ ಅವರ ಕೃತಿಗಳಲ್ಲಿ "ಬೌದ್ಧಿಕತೆಯ ಅಂಶ ಕಡಿಮೆ....! ಸಾಮಾಜಿಕ ವಾಸ್ತವಿಕತೆಯ ಅಂಶಗಳು ಸ್ಫುಟವಿಲ್ಲ! ರಾಜಕೀಯ ಪ್ರಜ್ಞೆಯ ಕೊರತೆ!" ಇತ್ಯಾದಿ ಟೀಕೆ-ಟಿಪ್ಪಣೆಗಳು ಸಾಕಷ್ಟು ಇದ್ದವು. ಆದರೆ ಅವರ ಕೃತಿಗಳಲ್ಲಿ ಸರಸ ಸಂಭಾಷಣೆ, ಕಥೆ ಹೇಳುವ ಓಘ, ದುಃಖಸುಖದ ಘಟನೆಗಳಲ್ಲೂ ಹಣಿಕಿ ಹಾಕುವ ವ್ಯಂಗ್ಯ ಮತ್ತು ಸಂದೇಶಗಳು ಹರಿತವಾದವುಗಳಾಗಿದ್ದರಿಂದ ಅವರ

ಯಾವತ್ತೂ ಕೃತಿಗಳು ಅಪಾರ ಜನಪ್ರಿಯವಾಗಿದ್ದರ ಜೊತೆಗೆ ಹೆಚ್ಚಿನವು ಹಿಂದಿ ಭಾಷೆಯಲ್ಲಿ ಅನುವಾದಗೊಂಡಿವೆ. ಅವುಗಳಲ್ಲಿಯ ಸಾರ್ವಕಾಲಿಕ ಮೌಲ್ಯಗಳು ವಿಶಿಷ್ಟವಾಗಿವೆ.

ಲೇಖನ-ವ್ಯವಸಾಯ, ನಂತರದ ವರ್ಷಗಳಲ್ಲಿ ಅಖಿಲ ಭಾರತ ಖ್ಯಾತಿಯೊಂದಿಗೆ ಸಾಕಷ್ಟು ಧನವನ್ನೂ ಒದಗಿಸಿತು. ಇಡೀ ದೇಶದಲ್ಲಿ ಅತಿಹೆಚ್ಚಿನ ಮರುಮುದ್ರಣದ ರಾಯಧನ ಅಂದರೆ ವರ್ಷಕ್ಕೆ ರೂಪಾಯಿ ೮೫,೦೦೦ ದಿಂದ ಒಂದು ಲಕ್ಷದ ವರೆಗೆ ಪಡೆಯುವ ಲೇಖಕಿ ಅವರಾಗಿದ್ದರು.

(೧೨-೧-೧೯೮೦ ರಂದು ಶ್ರೀಮತಿ ಆಶಾಪೂರ್ಣಾದೇವಿ ಅವರನ್ನು ಸಂದರ್ಶಿಸಿ, ಟಿಪ್ಪಣಿ ಮಾಡಿಟ್ಟ ಅಂಶಗಳ ಮೇಲೆ ಬರೆಯಲಾಗಿದೆ.)

◈ ◈ ◈



ಅಪೂರ್ವ ಅಭಿನೇತ್ರಿ : ತೃಪ್ತಿಮಿತ್ರ
(೧೯೨೫-೧೯೮೯)

ನನ್ನ ಕಲಕತ್ತಾವಾಸದ ದಿನಗಳಲ್ಲಿ, ಸಾಧ್ಯವಾದ ಬಿಡುವಿನ ವೇಳೆಯಲ್ಲಿ, ಬಂಗಾಲಿ ಜನಜೀವನ, ಸಾಹಿತ್ಯ-ಸಂಗೀತ ಪ್ರಕಾರಗಳನ್ನು ತಿಳಿದುಕೊಳ್ಳುವ ಯತ್ನದಲ್ಲಿ ಕಳೆಯುತ್ತಿದ್ದೆ. ತಕ್ಕಮಟ್ಟಿಗೆ ಬಂಗಾಲಿ ಓದಲು, ಹಿಂದಿ ಬೆರೆಸಿ ಬಂಗಾಲಿ ಮಾತನಾಡಲು ಕಲಿತೆ. ನೃತ್ಯ-ನಾಟಕ-ಜಾತ್ರಾ ಪ್ರಯೋಗಗಳನ್ನು ನೋಡಿದೆ. ಬಂಗಾಲಿ ರಂಗಭೂಮಿಯಲ್ಲಿ ನನ್ನ ಹೆಚ್ಚಿನ ಆಸಕ್ತಿಯನ್ನು ಬಲ್ಲ ಮತ್ತು ಹಿಂದೊಮ್ಮೆ ಪ್ರಸಿದ್ಧ 'ಬಹುರೂಪಿ' ನಾಟಕ ತಂಡದ ಸಕ್ರಿಯ ಸದಸ್ಯೆಯಾಗಿದ್ದ ಆರತಿ ಮೈತ್ರ, ಒಂದು ದಿನ

ಮಹಿಳೆಯೊಬ್ಬರನ್ನು ನನ್ನ ಆಫೀಸರೂಮಿಗೆ ಕರೆದುಕೊಂಡು ಬಂದರು. "ದೀದಿ, ಇವರನ್ನು ಗುರುತಿಸಬಲ್ಲಿರಾ? ನೀವು ಹಲವು ಬಾರಿ ಇವರ ಕುರಿತು ವಿಚಾರಿಸಿದ್ದಿರಿ!" ಎಂದಳು.

ಕಣ್ಣೆತ್ತಿ ನೋಡಿದೆ. ತೃಪ್ತಿ ಮಿತ್ರ ಎದುರಿಗೆ ನಿಂತಿದ್ದರು! ಮುಖದಲ್ಲಿ ಮಾಯವಾಗದ ಮಂದಹಾಸ. ಮಾತುಹೊಳೆಯದೇ ನಮಸ್ಕರಿಸಿ ಕೈ ತೋರಿದ ಕುರ್ಚಿಯಲ್ಲಿ ಹಂಸದಂತೆ ತೇಲಿಹೋಗಿ ಹಗುರಾಗಿ ಕುಳಿತರು.

ಒಂದೇ ವಾರದ ಹಿಂದೆ ಬಾದಲ್ ಸರ್ಕಾರ್ ಅವರ ಸುಪ್ರಸಿದ್ಧ ನಾಟಕ 'ಬಾಕಿ ಇತಿಹಾಸ'ದ 'ಬಹುರೂಪಿ'ಯ ಪ್ರಯೋಗವನ್ನು ನೋಡಿದ್ದೆ. ಹವ್ಯಾಸಿ ರಂಗಭೂಮಿಯಲ್ಲಿ ಕೆಲವರ್ಷಗಳ ಹಿಂದೆ ಚರಿತ್ರೆಯನ್ನೇ ನಿರ್ಮಿಸಿದ ನಾಟಕ. ಅದರಲ್ಲೂ ವಾಸಂತಿಯ ಪಾತ್ರ ವೈಶಿಷ್ಟ್ಯಪೂರ್ಣವಾಗಿತ್ತು. ಸಾದಾಗೃಹಿಣಿಯ ಸಾಂಸಾರಿಕ ತೊಂದರೆಗಳು, ಸುಶಿಕ್ಷಿತೆಯ ಪ್ರಜ್ಞಾವಂತಿಕೆ, ಪತಿಯ, ಸಮಾಜದ ಇಬ್ಬಂದಿತನದೊಂದಿಗೆ 'ಪಾಪ ಪ್ರಜ್ಞೆ'ಯನ್ನು ಅರ್ಥೈಸಲು ಹವಣಿಸುವ ಸೂಕ್ಷ್ಮ ಸಂವೇದನಾಶೀಲತೆಗಳನ್ನು ಅತ್ಯಪೂರ್ವವಾಗಿ ಆ ಪಾತ್ರವಹಿಸಿದಾಕೆ ಅಭಿನಯಿಸಿದ್ದಳು. ಮೇಕಪ್‌ನಲ್ಲಿ ಸುಂದರವಾಗಿ ತೋರುತ್ತಿದ್ದಳು.

ಆದರೆ ಈಗ, ಅದೇ ತೃಪ್ತಿಮಿತ್ರ. ಐವತ್ತೆರಡು ವಸಂತಗಳನ್ನು ದಾಟಿದ ಮಹಿಳೆ. ಇಲ್ಲಿದ್ದರು. ೨೫ ರ ತರುಣಿಯನ್ನು ನಾಚಿಸುವಂತಹ ಕಳೆ ಹೊಂದಿದ್ದರು. ತೆಳುವಾದ ಎತ್ತರ ಮೈಕಟ್ಟು. ಮಿರಿ ಮಿರಿ ಮಿಂಚುವ ತಲೆಗೂದಲು. ಮುಖದ ಮೇಲೆ ವಯಸ್ಸನ್ನು ತೋರುವ ಒಂದಾದರೂ ಸುಕ್ಕಾಗಲಿ. ಗೆರೆಯಾಗಲಿ ಇರಲಿಲ್ಲ. ಮೇಕಪ್ ಅಂತೂ ಇಲ್ಲವೇ ಇಲ್ಲ. ಕಂದುಬಣ್ಣ. ರೂಪಸಿಯಲ್ಲದಿದ್ದರೂ ಆಕರ್ಷಕ ವ್ಯಕ್ತಿತ್ವ. ಕನ್ನಡಕದ ಹಿಂದಿನಿಂದ ಮಿನುಗುವ, ಭಾವಪೂರ್ಣ ಕಣ್ಣುಗಳು. ಚೇತರಿಸಿಕೊಂಡು ಸಾವಿರಾರು ಅಲ್ಲ, ಲಕ್ಷ ಲಕ್ಷ ಜನರನ್ನು ತನ್ನ ಅಭಿನಯ ಸಾಮರ್ಥ್ಯದಿಂದ ಮುಗ್ಧಗೊಳಿಸಿದ ಕಲಾವಿದೆಯೋ? ಅಲ್ಲ! ಅವರ ಮಗಳು ಇರಬೇಕು! ಅಂದೆ.

ತೃಪ್ತಿದಿ ಗಹಗಹಿಸಿ ನಕ್ಕರು. ಅವರ ಮಗಳು ಶಾವೊಲಿ ಅದಾಗಲೇ ಉತ್ತಮ ನಟಿಯೆಂದು ಹೆಸರು ಮಾಡಿದ್ದರೂ. ನಾನು ಪರೋಕ್ಷವಾಗಿ ಅವರ ತಾರುಣ್ಯ ಹೊಗಳಿದ್ದನ್ನು ಕ್ಷಣದಲ್ಲಿ ಅರ್ಥಮಾಡಿಕೊಂಡಿದ್ದರು!

'ಬಾಕಿ ಇತಿಹಾಸ್ ಹೇಗೆನಿಸಿತು?'

ಭೀಷಣ್ ಶುಂದರ್! (ತುಂಬ ಚೆನ್ನಾಗಿತ್ತು!) ನಾನೆಂದೆ. "ಬಾದಲ್‌ರು ಚಿತ್ರಿಸಿದ್ದಕ್ಕಿಂತ ಹೆಚ್ಚಿನ ಆಯಾಮಗಳನ್ನು ಸ್ತ್ರೀ ಮನಸ್ಸಿನ ತುಮುಲಗಳಿಗೆ ಕೊಡಮಾಡಿರುವಿರಿ!"

ಮತ್ತೆ ಎಳೆತನದ ಕುಲುಕುಲು ನಗು.

"ಹೊಸ ಆಯಾಮಗಳು, ಬಹುಮುಖಗಳು ಎಂದಿರಾ? ನೀವು 'ಅಪರಾಜಿತಾ' ನೋಡಬೇಕು! ಇನ್ನೆರಡುವಾರ ಬಿಟ್ಟು "ಅಕ್ಯಾಡಮಿ ಆಫ್ ಫೈನ್ ಆರ್ಟ್ಸ್ ರಂಗಮಂದಿರದಲ್ಲಿದೆ. ಮುದ್ದಾಂ ಬನ್ನಿ" ಆಗ್ರಹಿಸಿದರು.

'ಅಪರಾಜಿತಾ'ದಲ್ಲಿ ತಾನೊಬ್ಬ ಅಭಿನೇತ್ರಿಯಾಗಬೇಕು ಎಂದು ಕನಸುಕಂಡ ಅಪೂ ಅಥವಾ ಅಪರಾಜಿತಾ ಎಂಬ ತರುಣಿ, ನಾಟಕ/ ಛಲಚ್ಚಿತ್ರದಲ್ಲಿ ಅವಕಾಶ ಕಲ್ಪಿಸಿಕೊಡುವೆನೆಂದು ಆಶ್ವಾಸನೆ ಕೊಟ್ಟ ಆಪ್ತಬಂಧುವಿನ ಫೋನಿಗಾಗಿ ಕಾಯುತ್ತಿರುತ್ತಾಳೆ. ಆ ಕಾಯುವಿಕೆಯ, ಸಂದರ್ಭದಲ್ಲಿ ಕೆಲವು ನಾಟಕಗಳ ಡಾಯಲೋಗ್‌ಗಳನ್ನು ಹೇಳಿಕೊಳ್ಳುತ್ತಾ, ಟಾಗೋರರ ಪದ್ಯಗಳನ್ನು ಪಠಿಸುತ್ತ, ತನ್ನ ಜೀವನದ ಹಲವಾರು ಆಗು-ಹೋಗುಗಳನ್ನು ನೆನಪಿಸಿಕೊಳ್ಳುತ್ತಾಳೆ. ತಂದೆ, ತಾಯಿ, ಅಣ್ಣ, ಅತ್ತಿಗೆ, ಸ್ನೇಹಿತರು, ನೆರೆ-ಹೊರೆಯವರೊಡನೆ ತನಗಾದ ಅನುಭವಗಳನ್ನೆಲ್ಲ ಹೇಳಿಕೊಳ್ಳುತ್ತಾಳೆ. ರೇಲ್ವೆ ಸ್ಟೇಶನ್ ದೃಶ್ಯ (ವಿವಿಧ ಮಾರಾಟಗಾರರು), ಇಲೆಕ್ಶನ್ ಸ್ಟಂಟ್‌ಗಳು, ವ್ಯಾಪಾರಿ, ಮುತ್ಸದ್ದಿ-ರಾಜಕಾರಣಿ, ಸರಕಾರಿ ನೌಕರಿ, ಅಜ್ಜಿ, ಡಾಕ್ಟರು, ನೆರೆಯ ಅಧಿಕಪ್ರಸಂಗಿ, ಹೀಗೆ ಸುಮಾರು ಇಪ್ಪತ್ತು, ಇಪ್ಪತ್ತೈದು ಪಾತ್ರಗಳು, ಪ್ರೇಕ್ಷಕರಿಗೆ ಪರಿಚಯಿಸಲ್ಪಡುತ್ತಾರೆ. ಪ್ರತಿಭೆಯಿದ್ದೂ ಹೆಣ್ಣಾಗಿ ಹುಟ್ಟಿದ ತಪ್ಪಿಗೆ ಮನೆಯ ಒಳಗೂ ಹೊರಗೂ ಯಾವುದೇ ಪ್ರೋತ್ಸಾಹ ದೊರೆಯದೇ ಅವಳ ಸಂಗೀತ ಪ್ರೇಮ, ಅಭಿನಯ ಕೌಶಲ್ಯಗಳು ಮಣ್ಣುಗೂಡಿ ಹೋಗುವದರಲ್ಲಿದ್ದಾಗ, ಈ ಸಂಜೀವ್‌ದಾ ಎಂಬ ಆಪ್ತನ ಭರವಸೆ, ಒಂದೇ ಉಳಿದಿದೆ. ಕೊನೆಗೂ ದಿನವಿಡೀ ಯಾರ ಟೆಲಿಫೋನ್‌ಗೆ ಕಾದಿದ್ದಳೋ ಆ ಕರೆ ಬರುತ್ತದೆ. ಒಂದು ಕಂಡಿಶನ್‌ಗೆ ಆಕೆ ಒಪ್ಪುವದಿದ್ದರೆ ಹಾತೊರೆಯುತ್ತಿದ್ದ ಪಾತ್ರ ದೊರೆಯುವದು ಖಂಡಿತ! ಅದು ಚಲಚಿತ್ರವೂ ಆಗುವದರಲ್ಲಿದೆ! ಹಿಗ್ಗಿ ಹೋದ ಅಪೂ, ಕರಾರು

ಯಾವುದು? ಎಂದು ಕೇಳುತ್ತಿದ್ದಂತೆ ಕಪ್ಪಿಟ್ಟ ಮುಖ, ಸಿಟ್ಟು, ಹತಾಶಾಭಾವಗಳೆಲ್ಲ ಒಂದೊಂದಾಗಿ ಆವರಿಸಿ ಕೊನೆಗೆ ಕುಟ್ಟಿದ ಫೋನಿನಿಂದಾಗಿ ಕರಾರಿನ ಕರಾಳ ರೂಪದ ಪರೋಕ್ಷ ಪರಿಚಯ, ಪ್ರೇಕ್ಷಕರಿಗೆ ಆಗುತ್ತದೆ.

ಕೇವಲ ವರದಿಯಂತೆ ಭಾಸವಾಗುವ ಅಷ್ಟೊಂದು ಪಾತ್ರಗಳ ಧ್ವನಿ-ಸಂಭಾಷಣೆಗಳನ್ನೆಲ್ಲ ಅನುಕರಿಸುವ ಓರ್ವಳೇ ನಟಿ ರಂಗದ ಮೇಲೆ! ಧ್ವನಿ ಸಂಯೋಜನೆ, ಸಂಗೀತಗಳು ಅತ್ಯಲ್ಪವಾಗಿದ್ದವು. ಕೇವಲ ಧ್ವನಿಯ ಏರಿಳಿತ ಹಾಗೂ ಅಭಿನಯಕೌಶಲ್ಯದಿಂದ ತೃಪ್ತಿಯವರು ಎರಡುವರೆ ಗಂಟೆಕಾಲ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿದ್ದರು.

ನಾಟಕ ನೋಡಿಯಾದ ಮೇಲೆ ಇಂಗ್ಲಿಷಿನಲ್ಲಿ ಅವರಿಗೆ ಪತ್ರ ಬರೆದೆ. ಅದನ್ನೋದಿ ತೃಪ್ತಿದಿ ತುಂಬ ಸಂತೋಷಪಟ್ಟು. "ನಿಮ್ಮ ಪತ್ರಕ್ಕೆ ಕೃತಜ್ಞತೆಗಳನ್ನು ಪತ್ರದಿಂದಲೇ ತಿಳಿಸುವ ಶಕ್ತಿ ನನ್ನಲ್ಲಿಲ್ಲ! ಆದರೆ ನನ್ನ ಇತರ ನಾಟಕ ಹಾಗೂ ನಿರ್ದೇಶನಗಳನ್ನು ನೀವು ನೋಡಿ. ಇಂಥ ಪತ್ರಗಳನ್ನು ಬರೆದು ನಿಮ್ಮ ಅನಿಸಿಕೆಗಳನ್ನು ತಿಳಿಸಿದರೆ ನನಗೆ ತುಂಬ ಸಂತೋಷವಾಗುತ್ತದೆ. ಹೊಸ ಆಯಾಮಗಳು ಹೊಳೆಯುತ್ತವೆ! ಎಂದು ಫೋನಿಸಿದರು. ಇದೇ ಸಂದರ್ಭವನ್ನು ಬಳಸಿ, ಅವರನ್ನು ವೈಯಕ್ತಿಕವಾಗಿ ಭೇಟಿ ಮಾಡಿ, ಅವರ ಜೀವನಸಾಧನೆಗಳ ಕುರಿತು ತಿಳಿದುಕೊಳ್ಳುವ ಉತ್ಕಟ ಬಯಕೆಯಿದೆ ಎಂದೆ! ಕೂಡಲೇ ತಾವು ಬಿಡುವಾಗಿರುವ ಸಮಯವನ್ನು ತಿಳಿಸಿ ತಮ್ಮ ಮನೆ ತಲುಪಲು ಮಾರ್ಗ ನಿರ್ದೇಶನ ಕೊಟ್ಟರು.

ನಸಿರುದ್ದೀನ್ ಸ್ಟ್ರೀಟ್‌ದಲ್ಲಿರುವ ಅವರ ಪುಟ್ಟ ಫ್ಲ್ಯಾಟಿಗೆ ಹೋದಾಗ, ನನಗಾಗಿ ಕಾಯುತ್ತಲೇ ಇದ್ದರು. ೧೪' x ೧೨' ಉದ್ದಗಲದ ಅವರ ಹೊರಕೋಣೆ, ಒಂದು ಬೆಡ್‌ರೂಂ ಹಾಗೂ ಚಿಕ್ಕ ಅಡಿಗೆಮನೆಯ ನಿವಾಸದಲ್ಲಿ ಕಳೆದ ಮೂವತ್ತು ವರ್ಷಗಳಿಂದ ವಾಸವಾಗಿದ್ದರು. ನಂದಲಾಲ್ ಬೋಸರ ಟಾಗೋರ ಚಿತ್ರದ ಪ್ರತಿಕೃತಿ ಹಾಗೂ ಬಂಗ್ಲಾದೇಶದ ಪ್ರಸಿದ್ಧ ಚಿತ್ರಕಾರ ಝೈನ್-ಉಲ್-ಅಬೀದೀನರ ಒಂದು ತೈಲಚಿತ್ರ, ಹಾಗೂ ಮಿತ್ರ ದಂಪತಿಗಳಿಗೆ ದೊರೆತ ಒಂದೆರಡು ಪ್ರಶಸ್ತಿ ಪತ್ರಗಳು ಬಿಟ್ಟರೆ ಇನ್ನಾವ ಅಲಂಕಾರಿಕ ವಸ್ತುವೂ ಹೊರಕೋಣೆಯಲ್ಲಿರಲಿಲ್ಲ.

'ನಿಮ್ಮ ಈ ಡ್ರಾಯಿಂಗ್ ರೂಮು, ಅದೆಷ್ಟು ನಾಟಕ ಸಂಯೋಜನೆಗಳಿಗೆ, ಯಶೋಗಾಥೆಗಳಿಗೆ ಮೂಕಸಾಕ್ಷಿಯಾಗಿದೆಯೋ?' ನಾನೆಂದೆ.

"ನಿಜ! ನಮ್ಮ ಎಲ್ಲ ಮೊದಲಿನ ನಾಟಕಗಳು ರೂಪತಾಳಿದ್ದು ಇಲ್ಲಿಯೇ. 'ಬಹುರೂಪಿ' ತನ್ನದಾದ ಆಫೀಸು ಪಡೆಯುವ ತನಕ ಇದೇ ಆಫೀಸು. ರಿಹರ್ಸಲ್ ರೂಮು, ರಿಸೆಪ್ಶನ್ ಹಾಲು, ಭಿನ್ನಾಭಿಪ್ರಾಯ, ಮೂಕರೋದನಗಳಿಗೂ ಸಾಕ್ಷಿಯಾಗಿದೆ! ನಗುತ್ತಲೇ ತೃಪ್ತಿದಿ ಉತ್ತರಿಸಿದರು. ಕೆಲಸದಾಕೆಗೆ ಹೇಳಿ, ಬಂಗಾಲಿ ಪದ್ಧತಿಯ ಸೇವಿಗೆ ಉಪ್ಪಿಟ್ಟು ಮಾಡಿಸಿದರು. ಮಿಠಾಯಿಗಳು ಇದ್ದವು. ಚಹಾಪಾನವಾದ ಮೇಲೆ ಅವರ ತೆಳುಮೈಕಟ್ಟಿನ ಬಗ್ಗೆ ವಿಚಾರಿಸಿದೆ. ಅಚ್ಚಕಪ್ಪಾದ ಕೂದಲ ಕುರಿತು ಕೇಳಿದೆ.

"ಹುಟ್ಟಾ ನಾನು ಇರುವದೇ ಹೀಗೆ! ಕೇವಲ ನಾಟಕವನ್ನೇ ಅವಲಂಬಿಸಿದ ನಾವು ಹೊಟ್ಟೆಗಿಲ್ಲದೇ ಮಲಗಿದ ರಾತ್ರಿಗಳು ಅದೆಷ್ಟೋ! ಆ ಬಳಿಕ ಅನುಕೂಲ ದಿನಗಳು ಬಂದಾಗ ಶಂಭು (ಪತಿ ಶಂಭುಮಿತ್ರ) ಪ್ರಯತ್ನಪೂರ್ವಕ ಆಹಾರ ಕುಗ್ಗಿಸಿ, ಸಕ್ಕರೆ-ಹಾಲು ಇಲ್ಲದೇ ಚಹ ಸೇವಿಸಿ ತನ್ನ ಮೈಕಟ್ಟು ಉಳಿಸಿಕೊಂಡರು. ನನಗೆ ಆ ಪ್ರಮೇಯ ಬರಲೇ ಇಲ್ಲ! ಅನ್ನ-ಮೀನು ನನ್ನ ಆಹಾರ. ಇತ್ತೀಚೆಗೆ ರಾತ್ರಿ ಅನ್ನಬಿಟ್ಟು ಗೋದಿರೊಟ್ಟಿ ತಿನ್ನುವಂತೆ, ಹಾಲು ಕುಡಿಯುವಂತೆ ಡಾಕ್ಟರರು ಹೇಳಿದ್ದಾರೆ. ನನಗೆ ಎರಡೂ ಇಷ್ಟವಿಲ್ಲ.

ನನ್ನ ಅಜ್ಜಿ, ತಾಯಿ ಇಬ್ಬರಿಗೂ ಎಪ್ಪತ್ತು ದಾಟಿದರೂ ತಲೆಕೂದಲು ಕಪ್ಪಾಗಿತ್ತು! ನನಗೂ ಸುದೈವದಿಂದ ಅದು ವರವಾಗಿದೆ. ಮೊದಲು ತುಂಬ ದಪ್ಪವೂ ಉದ್ದವೂ ಇತ್ತು. ಯುರೋಪು ಯಾತ್ರೆಯಲ್ಲಿ ಬಹಳಷ್ಟು ಕೂದಲು ಉದುರಿತು. ಆ ಮೇಲೆ ನಾಟಕದ ಹೊತ್ತಿಗೆ 'ವಿಗ್' ಧರಿಸಲು ಪ್ರಾರಂಭಿಸಿದೆ! ಎಂದರು. ಅವರ ಅಭಿನಯ ಜೀವನದ ವಿವರಗಳನ್ನು ಒಂದೊಂದಾಗಿ ಪಡೆಯಲಾರಂಭಿಸಿದೆ.

****

ಇಂದು ಬಂಗ್ಲಾದೇಶಕ್ಕೆ ಸೇರಿಹೋದ ಠಾಕೂರ್‌ಗಾಂವ್ (ಡಾಕ್ಕಾ ಜಿಲ್ಲೆ)ದ ಮಧ್ಯಮವರ್ಗದ ಬ್ರಾಹ್ಮಣ ಮನೆತನದಲ್ಲಿ ತೃಪ್ತಿಯವರ ಜನನ

೧೯೨೬ ರಲ್ಲಾಯಿತು. ಹಾಯಸ್ಕೂಲು ಮುಗಿಸಿ ಡಾಕ್ಟರ್ ಆಗುವ ಕನಸು ಹೊತ್ತು ಕಲಕತ್ತೆಗೆ ಬಂದ ತರುಣಿಯ ಬದುಕಿನ ಆದರ್ಶ ಬದಲಾಗಲಿಕ್ಕೆ ೧೯೪೩ ರ ಭೀಕರ ಬರಗಾಲ ಕಾರಣವಾಯಿತು. ಎರಡನೆಯ ಮಹಾಯುದ್ಧ ಕಾಲದಲ್ಲಿ ಬಂಗಾಲದ ಪೂರ್ವಭಾಗ ಜಪಾನೀ ಆಕ್ರಮಣಕ್ಕೆ ತುತ್ತಾಗ ಬಹುದೆಂಬ ಭೀತಿಯಿಂದಲೇ ಯಾವ ಪೂರ್ವಯೋಜನೆಯಿಲ್ಲದೇ ಅಲ್ಲಿಯ ಸರಕಾರ ಮುಖ್ಯ ಸಾರಿಗೆ ಸಂಪರ್ಕವಾಗಿದ್ದ ನೌಕಾಯಾನಕ್ಕೆ ತಡೆಹಾಕಿಬಿಟ್ಟಿತು. ಯಾತಾಯಾತ ನಿಂತೇ ಹೋಗಿ ಲಕ್ಷಗಟ್ಲೆ ಜನ ಹಸಿವಿನಿಂದ ಸತ್ತರು. ಅಷ್ಟೇ ಸಂಖ್ಯೆಯಲ್ಲಿ ಕಲಕತ್ತೆಗೆ ಗುಳೇ ಬಂದ ಜನ ಇಲ್ಲಿಯೂ ಆಹಾರ-ಆಶ್ರಯಗಳಿಲ್ಲದೇ ಸಾಯಲಾರಂಭಿಸಿದರು. ಕಾಲೇಜಿಗೆ ಸೇರಿದ್ದ ತೃಪ್ತಿ, ನಿರಾಶ್ರಿತರ ಸಂಕಟನಿವಾರಣಾಯತ್ನದಲ್ಲಿ ಸ್ವಯಂಸೇವಿಕೆಯಾಗಿ ಸೇರಿಕೊಂಡಳು. ಹಸಿವು, ನೋವು ನರಳಾಟ, ಸಾವುಗಳ ಕ್ರೂರ ರೂಪ. ಪ್ರತ್ಯಕ್ಷ ಕಂಡಳು. ಗಂಜಿಯ ಕೇಂದ್ರದಲ್ಲಿ ವಾಲಂಟಿಯರ ಆಗಿದ್ದಾಗ, ಎಷ್ಟೋದಿನ ಉಪವಾಸವಿದ್ದು ಏಳಲು ಶಕ್ತಿಯಿಲ್ಲದ ಹೆಣ್ಣುಮಗಳಿಗೆ, ಬಾಯಲ್ಲಿ ಗಂಜಿ ಹಾಕುತ್ತಿದ್ದಂತೆ ಪ್ರಾಣಬಿಟ್ಟಿದ್ದಳು. ಮುದುಕಿಯೊಬ್ಬಳು ಗಂಜಿನೋಡಿ ಖುಷಿಯಿಂದ ನಕ್ಕು, ಒಂದು ಗುಟುಕು ನುಂಗುತ್ತಿದ್ದಂತೆ ಕುಸಿದುಬಿದ್ದಿದ್ದಳು.

ಕಲಕತ್ತೆಯ ಬೀದಿ ಬೀದಿಗಳಲ್ಲಿ ಮಿಠಾಯಿ ಅಂಗಡಿಗಳು ಇದ್ದವು. ಧಾನ್ಯತುಂಬಿದ ಅಂಗಡಿಗಳಿದ್ದವು. ಬರುತ್ತಿದ್ದವರು ಸಹಸ್ರ ಸಹಸ್ರಜನ. ಅವರಾರೂ ಸಂಘಟಿತರಾಗಿ ತಿಂಡಿಯಂಗಡಿಗಳನ್ನಾಗಲಿ ಆಹಾರಧಾನ್ಯವನ್ನಾಗಲಿ ಲೂಟಿ ಮಾಡಲಿಲ್ಲ. ಕೆಲವರು ಭಿಕ್ಷೆ ಬೇಡುತ್ತಿದ್ದರು. ಹಲವರು ಇಂಥ ಅಂಗಡಿಗಳ ಬದಿಯಲ್ಲಿ ಬಿದ್ದು ಸಾಯುತ್ತಿದ್ದರು. ಪೂರ್ವ ಬಂಗಾಲದ ಹಳ್ಳಿಯೊಂದರ ಗಡಿಯಲ್ಲಿ ಅಸ್ಥಿಪಂಜರಗಳ ರಾಶಿಯನ್ನೇ ಕಂಡ ಈ ತರುಣಿಯಲ್ಲಿ ವಿದ್ರೋಹದ ಕಲ್ಪನೆ ಜಾಗೃತವಾಯಿತು. ಈ ಬರಗಾಲ, ಪೂರ್ತಿಯಾಗಿ ಮಾನವ ನಿರ್ಮಿತ ದುರಂತವಾಗಿತ್ತು. ಎರಡು ಸಾಮ್ರಾಜ್ಯಶಾಹಿ ದೇಶಗಳ ನಡುವೆ ಮಹತ್ವಾಕಾಂಕ್ಷೆಯ ಯುದ್ಧವಾದರೆ ನಿರಪರಾಧಿ ಕೃಷಿಕರು, ಗ್ರಾಮಸ್ಥರು, ಹೆಂಗಸರು, ಮಕ್ಕಳು, ಸಹಸ್ರ-ಸಹಸ್ರ ಸಂಖ್ಯೆಯಲ್ಲಿ ಸಾಯಬೇಕೇಕೆ? ನೆರೆ ಹಾವಳಿ, ಭೂಕಂಪ, ಚಂಡಮಾರುತಗಳಂಥ ನೈಸರ್ಗಿಕ ಪ್ರಕೋಪಗಳಿಗೆ ನಮ್ಮ ಜನ

ಅಭ್ಯಸ್ಥರಾಗಿದ್ದಾರೆ! ಆದರೆ ಇಂಥ ಅನಿರೀಕ್ಷಿತ ಕೃತ್ರಿಮ ಆರ್ಥಿಕ ದುರ್ಘಟನೆಗಳನ್ನು ಎದುರಿಸುವ ತ್ರಾಣ ಬಡಪಾಯಿಗಳಲ್ಲಿ ಎಲ್ಲಿಂದ ಬರಬೇಕು?

ಅಂದಿನಿಂದ ಮಾನವನಿಂದ ಮಾನವನ ಶೋಷಣೆಯ ಹಲವಾರು ಮುಖಗಳನ್ನು ತೃಪ್ತಿಯವರು ಕಾಣುತ್ತಲೇ ಬೆಳೆದರು. ಕಲಾತ್ಮಕವಾಗಿ ಪ್ರತಿಕ್ರಿಯಿಸುತ್ತಲೇ ಬಂದರು. ಅವರ ಆಪ್ತರೂ ಪ್ರಸಿದ್ದ ಬಂಗಾಲಿ ನಾಟಕಕಾರರೂ ಆಗಿದ್ದ ಬಿಜನ್ ಭಟ್ಟಾಚಾರ್ಯ (ಜ್ಞಾನಪೀಠ ವಿಜೇತೆ ಮಹಾಶ್ವೇತಾದೇವಿಯವರ ಪತಿ)ರು ಬರೆದ 'ಆಗುನ್' (ಬೆಂಕಿ) ಹೊಸ ತಂತ್ರದ ನಾಟಕ ಪ್ರಯೋಗವಾಗಿತ್ತು. ನಾಯಕಿಯ ಪಾತ್ರ ವಹಿಸಬೇಕಾಗಿದ್ದ ಹುಡುಗಿ ಕೊನೆಗಳಿಗೆಯಲ್ಲಿ ಕೈಕೊಟ್ಟಿದ್ದರಿಂದ, ಭಟ್ಟಾಚಾರ್ಯರು ನಿರುಪಾಯರಾಗಿ, ತೃಪ್ತಿಯ ಪಾಲಕರ ಮನಸ್ಸನ್ನು ಒಲಿಸಿ, ಪ್ರಥಮತಃ ನಾಯಕಿಯ ಪಾತ್ರ ನೀಡಿ ರಂಗಪ್ರವೇಶ ಮಾಡಿಸಿದರು. ಆ ನಾಟಕ ಅತ್ಯಂತ ಯಶಸ್ವಿಯಾಯಿತು. ಮುಂದೆ ಅವರು ಬರಗಾಲದ ವಸ್ತುವನ್ನು ಹೊಂದಿದ 'ನವಾನ್ನ' ಎಂಬ ನಾಟಕ ಬರೆದು, ಅದಾಗಲೇ ಪ್ರಸಿದ್ಧ ನಟರೆಂದು ಖ್ಯಾತರಾಗಿದ್ದ ತರುಣ ಶಂಭುಮಿತ್ರರ ನೆರವಿನಿಂದ ನಿರ್ದೇಶಿಸಿದರು. ಅದರಲ್ಲಿ ತೃಪ್ತಿಯ ಪಾತ್ರವನ್ನು ಮೆಚ್ಚಿಕೊಂಡು ಖ್ಯಾತ ಲೇಖಕ, ಚಲಚ್ಚಿತ್ರ ನಿರ್ದೇಶಕ ಕೆ. ಎ. ಅಬ್ಬಾಸ್ ಅವರು ಮುಂಬೈಗೆ ಆಮಂತ್ರಿಸಿ ತಮ್ಮ 'ಧರ್ತಿಕೇ ಲಾಲ್' ಚಿತ್ರದಲ್ಲಿ ಮಹತ್ವದ ಪಾತ್ರವನ್ನೇ ಕೊಟ್ಟಿದ್ದರು. ಆದರೆ ಚಲಚ್ಚಿತ್ರ ಪ್ರಪಂಚದ ಕೃತ್ರಿಮ ಜೀವನ ಒಗ್ಗದೇ ತೃಪ್ತಿ ಕಲಕತ್ತೆಗೆ ಮರಳಿದರು. ಶಂಭುಮಿತ್ರರ ಸ್ನೇಹ, ಪ್ರಣಯ ಮುಂದೆ ವಿವಾಹದಲ್ಲಿ ಸಂಪನ್ನವಾಯಿತು.

ಉತ್ಸಾಹಿ ಮಿತ್ರದಂಪತಿಗಳು ಆಗ ಭಾರತದ ಮಹತ್ವದ ನಗರಗಳಲ್ಲೆಲ್ಲ ತಲೆಯೆತ್ತಿದ ಇಂಡಿಯನ್ ಪೀಪಲ್ಸ್ ಥಿಯೇಟ್ರಿಕಲ್ ಅಸೋಸಿಯೇಶನ್ ಅಥವಾ 'ಇಪ್ಟಾ'ದ ಸಕ್ರಿಯ ಸದಸ್ಯರಾಗಿ ರಂಗ ಚಳುವಳಿಯಲ್ಲಿ ಭಾಗವಹಿಸಿದ್ದರು. ಹಲವಾರು ಪ್ರತಿಭಾವಂತರನ್ನು ಆಗ ಇಪ್ಟಾ ಆಕರ್ಷಿಸಿತ್ತು. 'ರಂಗಪ್ರಯೋಗಗಳಿಂದ ಜನಜಾಗೃತಿ' ಎಂಬ ಸಾಮಾಜಿಕ ಆದರ್ಶ ಅವರನ್ನೆಲ್ಲ ಬೆಸೆದಿತ್ತು. ವೈಯಕ್ತಿಕ ಸುಖದುಃಖಗಳು ಗೌಣವಾಗಿ ನಿಸ್ಪೃಹರಾಗಿ ದುಡಿದು, ಜನರಿಗಾಗಿ ದುಡಿದೇವು! ಎಂಬ ಆದರ್ಶವಿತ್ತು.

ಈ ರಂಗಚಳುವಳಿಯಿಂದಾಗಿ ವಂಗರಂಗಕ್ಕೆ ಹೊಸ ತಿರುವು ಒದಗಿತು. ಅಲ್ಲಿಯವರೆಗೆ ಎಲ್ಲವೂ ಪೌರಾಣಿಕ, ಐತಿಹಾಸಿಕ ನಾಟಕಗಳು, ಥಳಕಿನ ವೇಷಭೂಷಣಗಳು, ಬೆಳಕಿನ ಥಾಟು, ಬೆಡಗಿನ ಸೀನರಿಗಳು ಉತ್ತಮ ನಾಟಕದ ಜೀವನವೆಂದು ಜನ ನಂಬಿದ್ದರು. 'ಇಪ್ಟಾ'ದ ನಾಟಕ ಪ್ರಯೋಗಗಳಲ್ಲಿ ಬಡ ಒಕ್ಕಲಿಗರು, ಕಾರ್ಮಿಕರ ಹೆಂಗಸರು ಮುಖ್ಯ ಪಾತ್ರಗಳಲ್ಲಿ ಕಾಣಿಸಿಕೊಂಡರು. ಹರಕುಬಟ್ಟೆ ಧರಿಸಿ, ಮೈಗೆ ಮಣ್ಣು ಮೆತ್ತಿಕೊಂಡು, ಕಲ್ಲಿದ್ದಲ ಮಸಿಯನ್ನು ಮೇಕಪ್‌ಗೆ ಬಳಸಿ, ಗ್ರಾಮ್ಯಭಾಷೆ ರೂಢಿಸಿಕೊಳ್ಳುವದು ಹೊಸ ಆಹ್ವಾನವಾಗಿತ್ತು. ಮಹಾನಗರದಲ್ಲಿ ಇಂಗ್ಲಿಷ್ ಶಿಕ್ಷಣ ಪಡೆದ 'ಭದ್ರ ಮ್ಹೈಲಾ' (ಕುಲೀನ ಮಹಿಳೆ)ರಿಗಂತೂ ರೋಮಾಂಚಕಾರಿ ಅನುಭವ ಒದಗಿಸಿದರೆ ಅಕ್ರಮಸಾಗಾಟಗಾರರು, ಕಾಳಸಂತೆಖೋರರು, ಪರಿಸ್ಥಿತಿಗೆ ಕಣ್ಣು ಮುಚ್ಚಿಕೊಂಡು ಇರುವ ಬುದ್ಧಿಜೀವಿಗಳ ನಿರ್ದಾಕ್ಷಿಣ್ಯ ಟೀಕೆಯಿಂದಾಗಿ ಎಲ್ಲ ವರ್ಗದ ಜನರಲ್ಲಿ ನಾಟಕಮಾಧ್ಯಮ ಹಿಂದೆಂದಿಗಿಂತಲೂ ಜನಪ್ರಿಯವಾಗಿ ನಟ-ನಟಿಯರಿಗೆ ಪ್ರತಿ ಪ್ರದರ್ಶನ ಹೊಸ ಅನುಭವ ನೀಡುತ್ತಿತ್ತು. ಅವಿಭಕ್ತ ಬಂಗಾಲ, ಆಸ್ಸಾಮ, ಯು.ಪಿ.ಯ ಕೆಲ ನಗರಗಳಲ್ಲಿ ಬಯಲಿನಲ್ಲಿ ಆಡಿದ ನಾಟಕಗಳಿಗೆ ಏಳುಸಾವಿರದವರೆಗೂ ಜನ ನೆರೆದದ್ದು ಇತ್ತು. ನವಜಾಗೃತಿಯಲ್ಲಿ ಪಾಲ್ಗೊಂಡ ಅನುಭವ ಮಿತ್ರ ದಂಪತಿಗಳದ್ದಾಯ್ತು.

ಕ್ರಮೇಣ 'ಇಪ್ಟಾ'ದ ಮೇಲೆ ಕಮ್ಯುನಿಸ್ಟಪಾರ್ಟಿಯು ಒತ್ತಡ ಬೀಳಲಾರಂಭಿಸಿತು. ಒಂದು ರಾಜಕೀಯ ಪ್ರಣಾಲಿಗೆ ಕಲಾವಿದರು ಬಲಿ ಬಿದ್ದರೆ ಮೌಲಿಕತೆ ನಾಶವಾಗುತ್ತದೆ. ತತ್ವ ಮುಂದಾಗಿ ಕಲೆ ಹಿಂದೆ ಬೀಳುತ್ತದೆ ಎಂದು ಮನಗಂಡ ಮಿತ್ರ ದಂಪತಿ, ಇಪ್ಟಾದಿಂದ ಹೊರಬಿದ್ದರು.

ತಮ್ಮದೇ ಹವ್ಯಾಸಿ ನಾಟಕಸಂಸ್ಥೆ ಬಹುರೂಪಿಯನ್ನು ೧೯೪೮ರಲ್ಲಿ ಸ್ಥಾಪಿಸಿದರು.

ಈಗ ತೃಪ್ತಿಯವರ ಅಭಿನಯಕ್ಕೆ ಹೊಸ ಆಯಾಮಗಳು ಒದಗಿದವು. ಆತನಕ ರವೀಂದ್ರನಾಥ ಟಾಗೋರರ ಕೆಲವು ನಾಟಕಗಳನ್ನು ರಂಗಕ್ಕೆ ತರುವ ಸಾಹಸವನ್ನು ಯಾರೂ ಮಾಡಿರಲಿಲ್ಲ. ಅವರ ನಾಟಕಗಳೆಲ್ಲ ಕಾವ್ಯಮಯ. ಅವುಗಳೊಳಗಿನ ಧ್ವನಿ ಹಾಗೂ ಸಂವೇದನೆಗಳು ಓದಿಯೋ ಪಠಿಸಿಯೋ ಅನುಭವಿಸುವಂಥವು. ರಂಗಪ್ರಯೋಗಕ್ಕೆ ಹೊರತಾದವು! ಎಂದೇ ಸಾಮಾನ್ಯ

ಕಲ್ಪನೆಯಾಗಿತ್ತು. ಆದರೆ ಬಹುರೂಪಿ ತಂಡದವರ 'ರಕ್ತಕರವಿ, ಮುಕ್ತಧಾರಾ, ರಾಜಾ, ನಾಲ್ಕು ಅಧ್ಯಾಯಗಳು' ರಂಗಕ್ರಾಂತಿಯನ್ನೆ ಎಸಗಿದವು. ರವೀಂದ್ರ ಸಾಹಿತ್ಯದ ಮೇಲೆ ಶಂಭುಮಿತ್ರರಿಗಿದ್ದ ಹಿಡಿತ, ವಿಶ್ಲೇಷಣೆ ಹಾಗೂ ಉಗ್ರ ರಂಗನಿಷ್ಠೆಗಳು ಬಹುರೂಪಿಯ ಸದಸ್ಯರನ್ನು ಕಟೆಕಟೆದು ತಯಾರಿಸಿದ್ದವು.

ಜೊತೆಗೆ ಗ್ರೀಕ್ ನಾಟಕ ಈಡಿಪಸ್, ಇಬ್ಸೆನ್‌ನ ಪುತಲ್ ಖೇಲಾ (ಗೊಂಬೆ ಮನೆ) ವಿಜಯ್ ತೆಂಡುಲ್ಕರ್ ಅವರ "ಚೊಪ್! ಅದಾಲತ್ ಚೊಲಚೇ" (ಸದ್ದು ವಿಚಾರಣೆ ನಡೆಯುತ್ತಿದೆ!) ಬಾದಲ ಸರಕಾರರ "ಬಾಕಿ ಇತಿಹಾಸ", "ಪಗ್ಲಾ ಘೋಡಾ" (ಹುಚ್ಚು ಕುದುರೆ)ಗಳಲ್ಲೆಲ್ಲ" ತೃಪ್ತಿದಿ ಮುಖ್ಯಪಾತ್ರ ವಹಿಸುವಂತಾಯ್ತು. ಎಲ್ಲವೂ ಅತ್ಯಂತ ಯಶಸ್ವಿ ಪ್ರಯೋಗಗಳಾಗಿ, ಭಾರತದ ಅನೇಕ ನಗರಗಳಲ್ಲಿ, ವಿದೇಶಗಳಲ್ಲಿ ಹೆಸರು ಗಳಿಸಿದವು.

ಆದರೆ ಕೇವಲ ಕಲಾನಿಷ್ಠೆಯಿಂದ ಹೊಟ್ಟೆ ತುಂಬಲಾರದು! ಅತ್ಯಂತ ನಿರಾಡಂಬರ ಜೀವನ ನಡೆಸಿದರೂ ಸಾಂಸಾರಿಕ ನಿರ್ವಹಣೆ ಕಠಿಣವಾದಾಗ ತೃಪ್ತಿಯವರು ವೃತ್ತಿರಂಗದಲ್ಲಿ ಅಭಿನೇತ್ರಿಯಾಗಿ ಸೇರಿಕೊಂಡರು. ಅಲ್ಲಿಯೂ ತಮ್ಮ ಪ್ರತಿಭೆ ಮೆರೆದರು. ಅವರು ನಾಯಕಿಯಾಗಿ ನಟಿಸಿದ 'ಸೇತು' ನಾಟಕ ಒಂದು ಸಹಸ್ರ ಪ್ರಯೋಗಗಳನ್ನು ಕಂಡು ವಿಕ್ರಮ ಸ್ಥಾಪಿಸಿತ್ತು. ವಂಗದೇಶದ ಶ್ರೇಷ್ಠ ನಟಿ ಎಂಬ ಪ್ರಶಸ್ತಿ ತೃಪ್ತಿಯವರಿಗೆ ಸ್ಥಿರವಾಯಿತು.

೧೯೭೭ ರಲ್ಲಿ ಮ್ಯಾಗ್ಸೇಸೇ ಪ್ರಶಸ್ತಿ ಬಂದನಂತರ ಶಂಭುಮಿತ್ರರು ಇಚ್ಛಾಪೂರ್ವಕ ಬಹುರೂಪಿಯಿಂದ ನಿವೃತ್ತರಾದರು. ಮೂರು ದಶಕ ಕಾಲ ಶ್ರಮಿಸಿದರೂ ತಮ್ಮದೊಂದು ಪುಟ್ಟ ಪ್ರಾಯೋಗಿಕ ನಾಟಕಶಾಲೆ ಕಟ್ಟಲಾಗಲಿಲ್ಲವೆಂಬ ಕೊರಗು, ಮಿತ್ರ ದಂಪತಿಗಳನ್ನು ಕೊರೆಯುತ್ತಲೇ ಕೊನೆಗಂಡಿತು. ಆ ಬಳಿಕ ತೃಪ್ತಿದಿ ಅವರೇ ಬಹುರೂಪಿಯ ಮುಖ್ಯಸ್ಥೆ ಆದರೂ ಆರ್ಥಿಕವಾಗಿ ಸಂಸ್ಥೆ ಯಶಸ್ಸು ಕಾಣಲೇ ಇಲ್ಲ! ಪ್ರತಿ ರವಿವಾರ ಬಹುರೂಪಿಯ ಒಂದು ನಾಟಕ ಪ್ರಯೋಗ ನಡೆದೇ ಇರುತ್ತಿತ್ತು. ಉಳಿದ ಹವ್ಯಾಸಿಸಂಸ್ಥೆಗಳು ವಾರದಲ್ಲೊಂದು ದಿನವನ್ನು ನಿಗದಿಪಡಿಸಿಕೊಂಡು ನಾಟಕವಾಡುವದು, ನಾನು ಕಲಕತ್ತೆಯಲ್ಲಿದ್ದಾಗ ವಾಡಿಕೆಯಾಗಿತ್ತು.

****

ತೃಪ್ತಿಮಿತ್ರ ಎರಡು ವರ್ಷಕಾಲ ಪ್ರೊಡ್ಯೂಸರ್ ಎಮೆರಿಟಸ್ ಎಂದು ಆಕಾಶವಾಣಿಯಲ್ಲಿ ನೇಮಿಸಲ್ಪಟ್ಟರು. ಆಗ ದಿಲ್ಲಿ ಇನ್ನಿತರ ಕೇಂದ್ರಗಳಲ್ಲಿ ಟಾಗೋರರ ನಾಟಕಗಳನ್ನು ಹಿಂದಿಯಲ್ಲಿ ನಿರ್ದೇಶಿಸಿದರು. ಇತರರ ನಾಟಕಗಳನ್ನೂ ನಿರ್ದೇಶಿಸಿದ್ದರು. ಆದರೆ ಅವಾವಕ್ಕೂ ಟಾಗೋರರ ನಾಟಕಗಳ ಔನ್ನತ್ಯ ಇಲ್ಲವೆನ್ನುತ್ತಿದ್ದರು. ರಾಜಾ, ರಕ್ತಕರವಿಗಳ ಒಂದೊಂದು ಡಾಯಲೊಗ್, ಒಂದೊಂದು ಶಬ್ದ ಕೂಡ, ಮಹತ್ವಪೂರ್ಣವಾಗಿವೆ! ನಾಟಕವನ್ನು ಮನಸ್ಸುಗೊಟ್ಟು ಓದಿದಾಗ ಪ್ರತಿಸಲ ಹೊಸ ಅರ್ಥ ಹೊರಡುತ್ತದೆ. ಅಷ್ಟೇಕೆ? ರಂಗದ ಮೇಲೆ ಅಭಿನಯಿಸುವಾಗ, ಕಲ್ಪನಾ-ವಿಲಾಸ ಬೇರೆಯೇ! ಲೌಕಿಕ ಜಗತ್ತಿನಿಂದ ತುಂಬ ಎತ್ತರಕ್ಕೆ ಒಯ್ಯುವ ಯಾವುದೋ ಅನಿರ್ವಚನೀಯ ಭಾವ ಅವರ ಸಂವಾದಗಳಲ್ಲಿ ಇರುತ್ತದೆ...... "ಅವರ ನಾಟಕಗಳಲ್ಲಿ ನನ್ನ ಕಲೆಯ ಸಾರ್ಥಕತೆ ಕಂಡೆ. ಟಾಗೋರರ ನಾಡಿನಲ್ಲಿ ಹುಟ್ಟಿ ಅವರು ಬರೆದ ನಾಟಕಗಳಲ್ಲಿ ಅಭಿನಯಿಸುವಂತೆ ಆದದ್ದಕ್ಕೆ, ಅವರ ಕಾವ್ಯಭಾಷೆಗೆ ರಂಗರೂಪ ಕೊಟ್ಟು ಅರ್ಥೈಸುವಂತೆ ಆದದ್ದಕ್ಕೆ, ತುಂಬ ಹೆಮ್ಮೆ ಪಡುತ್ತೇನೆ!" ಮನಸ್ಸು ತುಂಬಿ ತೃಪ್ತಿದಿ ನುಡಿದರು. ನನಗಾಗಿ ಟಾಗೋರರ 'ರಕ್ತಕರವಿ'ಯೊಳಗಿನ ಕೆಲಸಾಲುಗಳನ್ನು ಭಾವಪೂರ್ಣವಾಗಿ ಓದಿ ಹೇಳಿದರು. ಅದೊಂದು ರೋಮಾಂಚಕಾರಿ ಅನುಭವ.

"ಟಾಗೋರರ ಕೃತಿಗಳ ಹಿಂದಿ ಅನುವಾದ ಹೇಗಿತ್ತು? ಬಂಗಾಲಿ ಭಾಷೆಯ ನಿರ್ದೇಶನ, ಹಿಂದೀ ಭಾಷೆಯ ನಿರ್ದೇಶನಗಳಲ್ಲಿ ಏನು ಅಂತರ ಕಂಡಿರಿ? ಎಂದು ಕೇಳಿದೆ.

"ಹಿಂದೀ ಕೃತಿಯಲ್ಲಿ ಮೂಲ ಸತ್ವ ಬಂದಿಲ್ಲ! ಎಂದು ಎಷ್ಟೋ ಡಾಯಲೋಗ್‌ಗಳಲ್ಲಿ ಕಂಡಿದ್ದೆ! ಬಹುಶಃ ಅನುವಾದಕರು ಸ್ವತಃ ಕವಿಯಾಗಿರಬೇಕು...... ಬಹುಶಃ ಎಲ್ಲ ಬೇರೆ ಬೇರೆ ಪ್ರಸಿದ್ಧ ಲೇಖಕರ ಅನುವಾದಿತ ಕೃತಿಗಳಲ್ಲೂ ಮೂಲಕೃತಿಯ ಅಂತಃಸತ್ವದ ಕೊರತೆ ಇದ್ದಿರಲು ಸಾಕು ! ಆದರೆ ಟಾಗೋರರು ಮೂಲತಃ ಕವಿಗಳು. ಕಾವ್ಯಾಂಶವೆಂಬುದು ಅನುವಾದ ರೂಪದಲ್ಲಿ ಇಳಿದು ಬರುವದು ಕಠಿಣ" ಎಂದರು.


ಶ್ರೇಷ್ಠ ನಟರೆಂದು ಖ್ಯಾತರಾದರೂ ಶಿಸ್ತಿನ ಸಿಪಾಯಿ, ಅತ್ಯಂತ ನಿಷ್ಠುರರು! ಎಂದು ಅಡ್ಡ ಹೆಸರನ್ನು ಹೊತ್ತ ಶಂಭುಮಿತ್ರರು ಅದಾಗಲೇ

ಬೇರೆಯಾಗಿ ವಾಸಿಸುತ್ತಿದ್ದರು. ಬೇರ್ಪಟ್ಟ ನಂತರವೂ ರಂಗಸಂಬಂಧಿತ ಚಟುವಟಿಕೆಗಳಲ್ಲಿ ಇಬ್ಬರೂ ಜೊತೆಯಾಗಿ ಕೆಲಸ ಮಾಡುತ್ತಿದ್ದರು. ಆಗಿನ ಅವರ ಆತ್ಮೀಯ ಸಂಭಾಷಣೆ, ನಗೆಚಾಟಿಕೆ ಮುಂತಾದವನ್ನು ಕಂಡವರಲ್ಲಿ ದಾಂಪತ್ಯದ ಈ ಪರಿಯೂ ಉಂಟೆ? ಎಂದು ವಿಸ್ಮಯಪಟ್ಟವರುಂಟು. ಮತಭೇದದಿಂದಾಗಿ ಕಲಾವಿದ ದಂಪತಿಗಳು ಬೇರ್ಪಡುವದು ಇಂದಿನ ದಿನಗಳಲ್ಲಿ ಸಾಮಾನ್ಯವಾಗಿದ್ದರೂ, ಆಗ ತೃಪ್ತಿಮಿತ್ರರ ಜೀವನದಲ್ಲಿ ಅದು ಆಘಾತಕಾರಿಯಾಗಿ ಪರಿಣಮಿಸಿತು.

ತಡವಾಗಿಯಾದರೂ ತೃಪ್ತಿದಿ ಅವರಿಗೆ ಗೌರವಪ್ರಶಸ್ತಿಗಳು ಸಂದಾಯವಾಗತೊಡಗಿದವು. ಕೇಂದ್ರ ನಾಟಕ ಸಂಗೀತ ಅಕಾಡೆಮಿಯ ಫೆಲೋಶಿಪ್, ಪದ್ಮಶ್ರೀ, ವಿಶ್ವಭಾರತಿಯಲ್ಲಿ ಸಂದರ್ಶಕ ಫೆಲೋ ಇತ್ಯಾದಿ. ಕ್ಯಾನ್ಸರ್‌ದಿಂದ ಹಾಸಿಗೆ ಹಿಡಿದಾಕೆಗೆ ಕೊನೆಗಳಿಗೆಯುಲ್ಲಿ ಕಾಳಿದಾಸ ಸನ್ಮಾನವನ್ನು ಮಧ್ಯಪ್ರದೇಶ ಸರಕಾರ, ಕಲಕತ್ತೆಯ ಅವರ ಮನೆಯಲ್ಲೇ ವಿಶೇಷ ಸಮಾರಂಭವೊಂದರಲ್ಲಿ ಕೊಡಮಾಡಿತು. ಕೇವಲ ಮೂರುವಾರಗಳ ಬಳಿಕ ಈ ಮಹಾನ್ ನಟಿ ೨೪ ನೇ ಮೇ ೧೯೮೯ ರಂದು ಚರಿತ್ರೆಗೆ ಸೇರಿ ಹೋದರು.

ಬಾದಲ್ ಸಾರಕಾರರ "ಜದಿ ಆರ್ ಏಕ್ ಬಾರ್"..... (ಇನ್ನೊಮ್ಮೆ ಘಟಿಸುವಂತಿದ್ದರೆ!) ಎಂಬ ವಿರೋಧಾಭಾಸಗಳ ನಗೆನಾಟಕವನ್ನು ತೃಪ್ತಿಮಿತ್ರ ಸಮರ್ಥವಾಗಿ ನಿರ್ದೇಶಿಸಿದ್ದರು. ಮೂರು ಹೊಂದಾಣಿಕೆ ಇಲ್ಲದ ಜೋಡಿಗಳು, ಸಮುದ್ರ ವಿಹಾರದ ತಾಣವೊಂದರಲ್ಲಿ ಆಕಸ್ಮಿಕವಾಗಿ ಭೇಟಿಯಾಗುತ್ತಾರೆ. ತಾತ್ಪೂರ್ತಿಕ ಪರಿಚಯವಾಗಿದ್ದ ವಿರುದ್ಧ ಜೋಡಿಗಳು ಪರಸ್ಪರ ಆಕರ್ಷಿತರಾಗುತ್ತಾರೆ. ಆದರೆ ಕ್ಷಣಿಕ ಸಂಬಂಧಗಳಲ್ಲೂ ತೀವ್ರಕೊರತೆಗಳು ಎದ್ದುಕಾಣುವದನ್ನು ಗಮನಿಸಿ ಪೂರ್ವಭಾವೀ ಸ್ಥಿತಿಗೆ ಮರಳುತ್ತಾರೆ. ಸಂಗೀತ. ಅಭಿನಯ, ವಾಕ್‌ಚಾತುರ್ಯಗಳಲ್ಲಿ ಮಾದರಿಯಾಗಿದ್ದ ನಿರ್ದೇಶನದಂತಹ ಈ ಘಟನೆ, ತೃಪ್ತಿಮಿತ್ರ ಬಾಳಿನಲ್ಲಿ ಎಂದೂ ಘಟಿಸಲಿಲ್ಲ! ಆರ್ಥಿಕ ಕೋಟಲೆ, ಕಾಯಿಲೆ, ಒಂಟಿತನಗಳು ಕೊನೆತನಕ ಕಾಡಿದವು. ಜೀವನ ಎಂದಿದ್ದರೂ ನಾಟಕಕ್ಕಿಂತ ತೀರ ಭಿನ್ನವಲ್ಲವೇ?

◈◈◈



ಬಹುಬಲ್ಲಿದೆ ಕಮಲಾದೇವಿ ಚಟ್ಟೋಪಾಧ್ಯಾಯ

(೧೯೦೩-೧೯೮೮)

"ನಿನ್ನ ಮಗಳು ನನ್ನ ಮಗಳನ್ನು ಕೊಂದೇಬಿಟ್ಟಳು!" ಉದ್ವೇಗಪೂರ್ಣನಾಗಿ ಮನೆಯೊಳಗೆ ನುಗ್ಗಿ ಕೈಯೊಳಗಿನ ವೃತ್ತಪತ್ರಿಕೆ ಬೀಸುತ್ತ ಬಂದ ಸೋದರಸಂಬಂಧಿಯನ್ನು ಕಂಡು ಗಿರಿಜಾಬಾಯಿ ಹೌಹಾರಿದಳು. "ನೋಡು ಈ ಅವಾಂತರ!" ಮುನ್ನಾದಿನ ನಗರದಲ್ಲಿ ನಡೆದ ಉಸ್ತಾದ ಅಬ್ದುಲ್ ಕರೀಂಖಾನರ ಕಚೇರಿಯಲ್ಲಿ ಪಕ್ಕ ಪಕ್ಕದಲ್ಲಿ ಕಮಲಾ ಹಾಗೂ ಆತನ ಮಗಳು ಕುಳಿತು ಸಂಗೀತ ಕೇಳುತ್ತಿದ್ದ ಚಿತ್ರವೊಂದು ಆ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. "ನಿನ್ನ ಮಗಳು ನಾಟಕ, ಸಂಗೀತ

ಎಂದು ಲಂಗುಲಗಾಮಿಲ್ಲದೇ ವರ್ತಿಸಿ, ಈಗ ಅವಳೊಂದಿಗೆ ಸಾರ್ವಜನಿಕ ಸಭೆಯಲ್ಲಿ ಸಂಗೀತ ಕೇಳಲು ಕುಳಿತ ಚರಿತ್ರಹೀನತೆಗಾಗಿ, ನನ್ನ ಮಗಳ ಗಂಡ-ಅತ್ತೆ ಮನೆಯವರು, ಅವಳನ್ನು ಬಿಟ್ಟುಬಿಡಲು ನಿರ್ಧರಿಸಿದ್ದಾರೆ!" ಆ ಸಂಬಂಧಿ, ಕುಸಿದು ಕುಳಿತ. ೧೮೬೯ ರಷ್ಟು ಹಿಂದಿನಿಂದಲೇ ಸ್ತ್ರೀ ಶಿಕ್ಷಣ, ಸಮಾಜ ಸುಧಾರಣೆಗಳಲ್ಲಿ ಒಂದಿಲ್ಲೊಂದು ವಿಧದಲ್ಲಿ ತೊಡಗಿಕೊಂಡಿದ್ದ ಗಿರಿಜಾಬಾಯಿಗೆ ನಿಂದೆ, ತಿರಸ್ಕಾರಗಳು ದಿನದ ಮಾತಾಗಿದ್ದರೂ, ಈ ವಜ್ರಾಘಾತಕ್ಕೆ ಆಕೆ ಸಿದ್ಧಳಿರಲಿಲ್ಲ. ಆ ಕೂಡಲೇ ಮಗಳು ಕಮಲಾಳನ್ನು ಅವಳ ವಿದ್ಯಾಭ್ಯಾಸಕ್ಕಾಗುತ್ತಿದ್ದ ಅಡಚಣೆಯನ್ನೂ ಗಮನಿಸದೇ ಇಂಗ್ಲಂಡಿನಲ್ಲಿ ಓದುತ್ತಿದ್ದ ಪತಿಯ ಬಳಿ ಕಳಿಸಿಬಿಟ್ಟಳು. ಇಪ್ಪತ್ತನೆಯ ಶತಮಾನದ ಇಪ್ಪತ್ತನೆಯ ದಶಕದ ಮೊದಲ ದಿನಗಳಾಗಿದ್ದವು ಅವು.

****

ಶ್ರೀ ಅನಂತಯ್ಯ ಹಾಗೂ ಗಿರಿಜಾಬಾಯಿ ಧಾರೇಶ್ವರ ದಂಪತಿಗಳ ನಾಲ್ಕು ಮಕ್ಕಳಲ್ಲಿ ಕೊನೆಯವಳಾಗಿ ೧೯೦೩ ರಲ್ಲಿ ಮಂಗಳೂರಿನಲ್ಲಿ ಹುಟ್ಟಿದ ಕಮಲಾ, ಅತ್ಯಂತ ಸುಸಂಸ್ಕೃತ ವಾತಾವರಣದಲ್ಲಿ ಬೆಳೆದರು. ತಂದೆಯವರು ಅಂದಿನ ಪ್ರತಿಷ್ಠಿತ ಹುದ್ದೆಯಾಗಿದ್ದ ಕಲೆಕ್ಟರ (ಡಿಸಿ) ಪದವಿಗೂ ಏರಿದ್ದರು. ತಾಯಿ, ಅಜ್ಜಿ ವಿದ್ಯಾವತಿಯರು. ಸಮಾಜ ಸೇವೆಯಲ್ಲಿ ತಾಯಿಯದು ಮೀರಿದ ಆಸಕ್ತಿಯಾದರೆ ಮಹಿಳಾ ಸಮಾಜ ಕಟ್ಟಿದ ಮೊದಲಿಗರೆಂದು ಗುರುತಿಸಲ್ಪಟ್ಟವರು. ಅಜ್ಜಿ ಸಂಸ್ಕೃತ ಧಾರ್ಮಿಕ ಗ್ರಂಥಗಳನ್ನು ಓದುವದೇ ಅಲ್ಲದೇ ಪಂಡಿತರನ್ನು ಆಗಾಗ ಮನೆಗೆ ಆಮಂತ್ರಿಸಿ, ವ್ಯಾಖ್ಯಾನ-ಚರ್ಚೆಗಳನ್ನು ಏರ್ಪಡಿಸಿ ಸ್ವತಃ ಪಾಲುಗೊಳ್ಳುತ್ತಿದ್ದರು. ಏಕಾಕಿಯಾಗಿ ದೂರದ ಊರುಗಳಲ್ಲಿ ಓಡಾಡುತ್ತಿದ್ದರು. ಜನರ ಟೀಕೆ-ಟಿಪ್ಪಣೆಗಳಿಗೆ ಸೊಪ್ಪು ಹಾಕುವವರಲ್ಲ. ಮನೆಯಲ್ಲಿದ್ದು ಓದುವ ಸಂಬಂಧಿಕರ ಮಕ್ಕಳ ದೊಡ್ಡ ಪಡೆಯೇ ಇತ್ತು. ಅವರೆಲ್ಲರ ಊಟ-ಉಡಿಗೆಯಷ್ಟೆ ಅಲ್ಲದೇ ಓದಿನ ಮೇಲ್ವಿಚಾರಣೆ ಕೂಡ ಗಿರಿಜಾಬಾಯಿಯದು. ಕಮಲಾ ಇನ್ನೂ ತೀರ ಚಿಕ್ಕ ಬಾಲಿಕೆಯಿದ್ದಾಗಲೇ ತಂದೆಯ ಆಕಸ್ಮಿಕ ನಿಧನದಿಂದ, ಕುಟುಂಬದ ವ್ಯವಸ್ಥೆ ಏರುಪೇರಾಯಿತು. ಆಸ್ತಿಯ ವಹಿವಾಟಿನಲ್ಲಿ ಮಹಿಳೆಯ ಅಭಿಪ್ರಾಯಕ್ಕೆ ಬೆಲೆಕೊಡದ ದಿನಗಳು.

ಒಮ್ಮೊಂದೊಮ್ಮೆ ಕುಸಿದ ಆರ್ಥಿಕ ವ್ಯವಸ್ಥೆಯಲ್ಲೂ ಕಂಗೆಡದೆ ಮಕ್ಕಳ ಓದನ್ನು ಮುಂದುವರಿಯುವಂತೆ ನೋಡಿಕೊಂಡರೂ, ಬಾಲ್ಯವಿವಾಹ ವ್ಯವಸ್ಥೆಯನ್ನು ವಿರೋಧಿಸಿದರೂ ಸ್ವತಃ ಮಗಳ ಕಿರಿಯ ಪ್ರಾಯದ ಮದುವೆಯನ್ನು ವಿರೋಧಿಸುವ ಮನೋಬಲ ಗಿರಿಜಾಬಾಯಿಯಲ್ಲಿ ಉಳಿದಿರಲಿಲ್ಲ. ಪರಿಣಾಮವೆಂದರೆ ಪತ್ನಿಯ ಸ್ಥಾನಮಾನ ಏನೆಂದು ಅರಿಯುವ ಮೊದಲೇ ಮುದ್ದಿನ ಮಗಳು ಕಮಲಾ ವಿಧವೆಯಾದದ್ದು!

ಇನ್ನು ಉಳಿದ ಮಾರ್ಗ ಒಂದೇ. ಮಗಳನ್ನು ಓದಿಸಿ ಸ್ವಾವಲಂಬಿಯಾಗಿಸುವದು. ಮಂಗಳೂರಿನ ಸಂಪ್ರದಾಯವಂತರ ನಿಂದೆಯಿಂದ ದೂರವಿರಲು ಮದ್ರಾಸಿನಲ್ಲಿ ಬಿಡಾರಮಾಡಿದರು. ಅದಾಗಲೇ ಸಂಗೀತ, ಅಭಿನಯ, ಡಿಬೇಟಿಂಗ್‌ಗಳಲ್ಲಿ ಹೆಸರುಮಾಡಿದ ಕಮಲಾಳ ಪ್ರತಿಭೆ ಅರಳಲು ಅಲ್ಲಿಯ ವಾತಾವರಣ ಸಹಾಯವಾಯಿತು. ಸಾವಿರಾರು ಜನರಲ್ಲಿ ಎದ್ದು ಕಾಣುವ ರೂಪ-ಮೈಬಣ್ಣ-ಮೈಮಾಟದ ಕಮಲಾ ಓದಿನಲ್ಲಿಯೂ ಮುಂದಾಗಿದ್ದರು.

ಭಾರತ ಕೋಗಿಲೆ. ಸರೋಜಿನಿ ನಾಯ್ಡು ಅವರ ಸೋದರ, ಸ್ವತಃ ಕವಿ ನಟ, ನಾಟಕಕಾರನೆಂದು ಅದಾಗಲೇ ಹೆಸರುವಾಸಿಯಾಗಿದ್ದ, ತರುಣ ಹರೀಂದ್ರನಾಥ ಚಟ್ಟೋಪಾಧ್ಯಾಯರು ಸಾಂಸ್ಕೃತಿಕ ಕಾರ್ಯಕ್ರಮವೊಂದರಲ್ಲಿ ಕಮಲಾದೇವಿಯನ್ನು ಕಂಡು ಆಕರ್ಷಿತರಾದರು. ಮದುವೆಯಾಗುವದಿದ್ದರೆ, ಅವಳನ್ನೇ! ಎಂದು ನಿರ್ಧರಿಸಿಬಿಟ್ಟರು. ಸರಿ ಸಂಧಾನ, ಅನುಸಂಧಾನಗಳು ಪ್ರಾರಂಭವಾದವು. ಕಮಲಾರಿಗೂ ಅವರ ಕವಿತಾಶಕ್ತಿ, ಅಭಿನಯಕೌಶಲ್ಯಗಳು ಮೆಚ್ಚಿಗೆ ಆದವು. ಭಾಷೆ, ಜಾತಿ, ಪ್ರದೇಶಗಳ ಭಿನ್ನತೆ ಬಾಧಿಸದಿದ್ದರೂ ಈ ಪ್ರತಿಭಾವಂತನ ವೈಚಾರಿಕ ಪ್ರೌಢಿಮೆ, ಸ್ಥಿರಬುದ್ಧಿಯ ಕುರಿತು ತಾಯಿ-ಮಗಳಿಗೆ ಸಂದೇಹ ಇದ್ದೇ ಇದ್ದವು. "ಒಬ್ಬರಿಗಾಗಿ ಇನ್ನೊಬ್ಬರು, ಹೇಳಿ ಮಾಡಿಸಿದ ಜೋಡಿ! ರೂಪ ಪ್ರತಿಭೆ-ಒಲವು-ಕೌಟುಂಬಿಕ ಹಿನ್ನೆಲೆಗಳಲ್ಲಿ! ಎಂದು ಪರಿಚಿತರ ಒತ್ತಡ, ವರನ ಪೂರ್ಣತಃ ತಯಾರಿ. ವಧುವಿನ ಅರೆತಯಾರಿಗಳ ನಡುವೆ ಸಿವಿಲ್ ರೀತಿಯ ಮದುವೆ ನಡೆದೇ ಹೋಯಿತು! ಮುಂದಿನ ಓದಿಗೆ ಹರೀಂದ್ರನಾಥರು ಆ ಕೂಡಲೇ ಆಕ್ಸಫರ್ಡಿಗೆ ತೆರಳಿದರು. ಕಮಲಾ ಭಾರತದಲ್ಲಿದ್ದು ತನ್ನ ಓದನ್ನು ಮುಂದುವರಿಸಿದರು.

ಅದಾಗಲೇ ವಿಮೆನ್ಸ್ ಕಾನ್‌ಫರೆನ್ಸ್ ಕಟ್ಟಿದ ಮಾರ್ಗರೆಟ್ ಕಸಿನ್ಸ್ ಅವರ ಪ್ರಭಾವ ತರುಣಿ ಕಮಲಾದೇವಿಯ ಮೇಲೆ ಸಾಕಷ್ಟಿತ್ತು. ಅವರಿಂದ ಪಾಶ್ಚಾತ್ಯ ಸಂಗೀತ ಕಲಿತರು. ಚಿತ್ರಕಲೆ ಅಭ್ಯಸಿಸಿದರು. ಮಹಿಳೆಯರ ಅಭ್ಯುದಯಕ್ಕಾಗಿ ಅವಿರತವಾಗಿ ಹೆಣಗುತ್ತಿದ್ದ ಮಾರ್ಗರೆಟ್ ತಮ್ಮೆಲ್ಲ ಚಟುವಟಿಕೆಗಳಲ್ಲಿ ಬಾಲ್ಯದಿಂದಲೇ ಕಮಲಾದೇವಿಯನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ತಾಯಿ ಗಿರಿಜಾಬಾಯಿಯವರೂ ಬೆಂಬಲಕ್ಕಿದ್ದು ಕಮಲಾದೇವಿ ಮುಂದೆ ಮಹಿಳೆಯರ ಅಭ್ಯುದಯವನ್ನೇ ಜೀವನದ ಗುರಿಯಾಗಿಟ್ಟುಕೊಂಡು ಸರ್ವವಿಧದಲ್ಲಿ ಶ್ರಮಿಸಿದರು. ಆದರೆ ಅದು ಅವರು ಹಲವಾರು ವಿಧದಲ್ಲಿ ಕೈಕೊಂಡ ಸಾರ್ವಜನಿಕ ಸೇವಾವಿಧಾನಗಳಲ್ಲಿ ಒಂದಾಗಿತ್ತು. ಚಿಕ್ಕಂದಿನ ತರಬೇತಿ ಅವರಿಗೆ ಕೊನೆಯವರೆಗೆ ಸಹಾಯ ನೀಡಿತು. ಸಂಗೀತ, ನೃತ್ಯ, ನಾಟಕಗಳ ಪ್ರೀತಿ ಬೆಳೆಯುತ್ತ ಹೋಯಿತು. ಆದರೆ ಪ್ರಾರಂಭದಲ್ಲಿ ಲಲಿತಕಲೆಗಳ ಆಸಕ್ತಿ, ಸಂಪ್ರದಾಯವಂತರ ಕೆಂಗಣ್ಣಿಗೂ ಕಾರಣವಾಯ್ತು!

ಅಧ್ಯಾಯದ ಆರಂಭದಲ್ಲಿ ಕಾಣಿಸಿದ ಘಟನೆಯ ಬಳಿಕ ಇಂಗ್ಲಂಡಿನಲ್ಲಿ ಕಮಲಾ-ಹರೀಂದ್ರರ ಅಭಿನಯಾಸಕ್ತಿಗೆ ಹೊಸ ಆಯಾಮಗಳು ದೊರೆತವು. ಆದರೆ ಕಮಲಾದೇವಿಯ ಶಿಕ್ಷಣ ಮುಂದರಿಯಲಿಲ್ಲ. ಹರೀಂದ್ರರ ಹಿರಿಯ ಸೋದರ ವೀರೇಂದ್ರ ಚಟ್ಟೋಪಾಧ್ಯಾಯ 'ಉಗ್ರ ರಾಷ್ಟ್ರೀಯತೆಯ ನಿಲುವಿಗಾಗಿ' ಕರೇಪಟ್ಟಿ (ಬ್ಲ್ಯಾಕ್ ಲಿಸ್ಟಿನಲ್ಲಿ)ಯ ಆರೋಪಿಯಾಗಿದ್ದರು. ಭಾರತಕ್ಕೆ ಬಂದರೆ ಗಲ್ಲು ಅಥವಾ ಕಾಲಾಪಾನಿ ನಿಶ್ಚಿತವಾಗಿದ್ದರಿಂದ ಅವರು ಯುರೋಪಿನ, ಮುಖ್ಯವಾಗಿ ಫ್ರಾನ್ಸಿನ ನಿವಾಸಿಯಾಗಿ ಮುಂದರಿದಿದ್ದರು. ಆ ಕುಟುಂಬದವರೆಲ್ಲ ರಾಷ್ಟ್ರೀಯ ಚಳುವಳಿಯಲ್ಲಿ ಇದ್ದವರಾಗಿದ್ದರಿಂದ ಕಮಲಾಗೆ ಯಾವ ಶಿಕ್ಷಣಸಂಸ್ಥೆಯಲ್ಲೂ ಪ್ರವೇಶ ಸಿಗಲಿಲ್ಲ. ಆದರೆ ಇಂಗ್ಲಂಡಿನ ಆಧುನಿಕ ರಂಗಭೂಮಿಯ ಹೊಸತಂತ್ರಗಳನ್ನು ಅಭ್ಯಸಿಸಿದರು. ಹರೀಂದ್ರರು ನಾಟಕಗಳ ಸ್ಕ್ರಿಪ್ಟ್ ಬರೆದು ಪ್ರಸ್ತುತ ಪಡಿಸುವಲ್ಲಿ ಹೆಸರುವಾಸಿಯಾದರು. ಇಬ್ಬರೂ ತಿರುಗಿ ಭಾರತಕ್ಕೆ ಬಂದರು.

ರಂಗಕ್ರಾಂತಿಯಿಂದ ಸಾಮಾಜಿಕ ಸುಧಾರಣೆಗಳತ್ತ ಜನರ ಲಕ್ಷ್ಯ ಸೆಳೆಯಲು ದಂಪತಿಗಳಿಬ್ಬರೂ ಹಲವಾರು ನಗರಗಳಲ್ಲಿ ಪ್ರದರ್ಶನವಿತ್ತರು.

ಜ್ವಲಂತ ಸಮಸ್ಯೆಗಳಾದ ಜಾತಿಭೇದ, ಅಸ್ಪೃಶ್ಯತೆ, ಬಾಲ್ಯವಿವಾಹದ ಅನಿಷ್ಟ, ಮುಂತಾದವು ನಾಟಕದ ಮುಖ್ಯವಸ್ತುವಾದರೆ ಇಂಗ್ಲಿಷ್ ಹಾಗೂ ಹಿಂದಿ ಭಾಷೆಯ ನಾಟಕಗಳ ಮುಖ್ಯಪಾತ್ರಗಳಲ್ಲಿ ಇಬ್ಬರೂ ಕಾಣಿಸಿಕೊಳ್ಳುವರು. ಸ್ಥಳೀಯ ಉತ್ಸಾಹಿಗಳಿಗೆ, ಆಸಕ್ತರಿಗೆ ಅಲ್ಪಕಾಲದ ತರಬೇತಿಯಿತ್ತು. ಆ ತಂಡವನ್ನು ನಾಟಕ ಪ್ರದರ್ಶನದಲ್ಲಿ ಒಳಗೊಳ್ಳುವರು. ಕಮಲಾರ ಸಹಜಾಭಿನಯ ಅಸಂಖ್ಯರನ್ನು ಹೊಸರಂಗಕ್ಕೆ ಆಕರ್ಷಿಸುತ್ತಿತ್ತು. ನೂತನ ಪ್ರಯೋಗಗಳಿಂದಾಗಿ ಟಾಗೋರರಿಂದ ತಲೆದೂಗಿಸಿಕೊಂಡರು. ಗಾಂಧೀಜಿಯಿಂದ ಮೆಚ್ಚಿಕೆ ಪಡೆದರು. ಟಾಗೋರರು ಸಾಹಿತ್ಯವು ವ್ಯಕ್ತಿವಿಕಸನಕ್ಕೆ ಸಹಾಯಮಾಡುತ್ತದೆಂದು ದೃಢವಾಗಿ ನಂಬಿದವರು. ಗಾಂಧೀಜಿ ಕೈಗಳ ಸಫಲ ಪ್ರಯೋಗದಿಂದ ಅರ್ಥಾತ್ ಕೈಗಾರಿಕೆಯಿಂದ ವ್ಯಕ್ತಿತ್ವ ಚುರುಕುಗೊಳ್ಳುತ್ತದೆಂದು ಸಾಧಿಸಿತೋರಿದವರು ಕಮಲಾದೇವಿ. ತಾನು ಎರಡನ್ನೂ ಮೈಗೂಡಿಸಿಕೊಳ್ಳಲು ಪರಿಶ್ರಮಿಸಿದ್ದನ್ನು ನೆನೆಸಿಕೊಳ್ಳುತ್ತಿದ್ದರು. ಸಂಗೀತ, ಅಭಿನಯಗಳಂತೂ ಸರಿ ನೂಲಲು ನೇಯಲೂ ಕಲಿತರು.

ರಾಜಕೀಯ ಕ್ಷೇತ್ರದಲ್ಲಿ

ಅಂದಿನ ಯಾವ ಪ್ರಜ್ಞಾವಂತ ಮಹಿಳೆಯೂ ರಾಜಕೀಯ ಚಳುವಳಿಯಿಂದ ನಿರ್ಲಿಪ್ತವಾಗಿ ಉಳಿಯಲು ಸಾಧ್ಯವಿರಲಿಲ್ಲ. ರೌಲಟ್ ಆಕ್ಟ್, ಜಲಿಯನ್‌ವಾಲಾಬಾಗ್ ದುರಂತಗಳು ತರುಣ ಜನಾಂಗವನ್ನು ರೊಚ್ಚಿಗೆಬ್ಬಿಸಿದ್ದವು. ನಿಜವಾದ ಭಾರತೀಯನಿಗೆ ಸತ್ಯಾಗ್ರಹದ ಒಂದಿಲ್ಲೊಂದು ಚಟುವಟಿಕೆಯಲ್ಲಿ ಪಾಲುಗೊಳ್ಳುವದೇ ಹಾದಿಯೆಂಬ ನಂಬಿಕೆ ದೃಢವಾಗಿತ್ತು. ಸರೋಜಿನಿ ನಾಯ್ಡು ಅವರಿಂದಾಗಿ, ಸ್ವದೇಶಿ, ಹರತಾಳ, ಸತ್ಯಾಗ್ರಹಗಳು ಕಮಲಾಗೆ ದೈನಂದಿನ ಘಟನೆಗಳಾದವು. "ಹಿಂದ್ ಸ್ವರಾಜ್"ದಂತಹ ಸೌಮ್ಯ ಪುಸ್ತಕವೂ "ರಾಜದ್ರೋಹ"ದ ಮಾದರಿಯಾಗಿದ್ದಾಗ, ಮನೆಮನೆಗೆ ಅದರ ಪ್ರತಿಗಳನ್ನೊಯ್ದು ಮಾರಿದರು. ಕಾಂಗ್ರೆಸ್ ಫಂಡಿಗೆ ಸಾಕಷ್ಟು ಧನ ಸಂಗ್ರಹಿಸಿದರು. ಗಾಂಧೀಜಿ ೧೯೨೦ ರಲ್ಲಿ ಮುಂಬೈಗೆ ಬಂದಾಗ, ನಡೆದ ಗಲಭೆ, ಹಿಂಸಾಚಾರ ಹಾಗೂ ಪೋಲೀಸ್ ದೌರ್ಜನ್ಯಗಳಿಗೆ ಕಮಲಾದೇವಿ ಪ್ರತ್ಯಕ್ಷದರ್ಶಿಯಾಗಿದ್ದರು. ದಬ್ಬಾಳಿಕೆಯನ್ನು

ಎದುರಿಸಲು ಸಂಯಮದ ಪ್ರತಿಭಟನೆ ಅಥವಾ ಸತ್ಯಾಗ್ರಹ ಪರಿಣಾಮಕಾರಿಯಾದ ಉಪಾಯವೆಂದು ಮನಗಂಡರು. ಮುಂದೆ ವೈಯಕ್ತಿಕ ಸಂದರ್ಭಗಳಲ್ಲೂ ಅದನ್ನು ಕೈಕೊಂಡು ಯಶಸ್ವಿಯಾದರು. ಜೊತೆಗೆ ರಾಷ್ಟ್ರೀಯ ಸೇವಾದಲದ ಸಕ್ರಿಯ ಸದಸ್ಯರಾದರು.

೧೯೨೪ ರಲ್ಲಿ ಬೆಳಗಾವಿಯಲ್ಲಿ ಗಾಂಧೀಜಿ ಅಧ್ಯಕ್ಷರಾದ ಕಾಂಗ್ರೆಸ್ ಮಹಾಧಿವೇಶನ, ಮಹಿಳಾ ಸಂಘಟನೆಯ ಅತ್ಯುತ್ತಮ ಮಾದರಿಯಾಗಿ ವಿರಾಜಿಸಿತು. ಉಮಾಬಾಯಿ ಕುಂದಾಪುರ, ಕಮಲಾದೇವಿ ಮುಂಚೂಣಿಯಲ್ಲಿದ್ದರು. ಪೊರಕೆ,`ಬುಟ್ಟಿಹಿಡಿದು, ಪೆಂಡಾಲ್ ಗುಡಿಸುವ ಸ್ವಯಂಸೇವಿಕೆಯರಿಗೆ ಕಮಲಾ ನಾಯಕಿಯಾದರು. ಕ್ರಮೇಣ ಅವರ ಸಂಘಟನಾ ಸಾಮರ್ಥ್ಯದಿಂದಾಗಿ ೧೯೨೭ ರ ಮದ್ರಾಸ ಅಧಿವೇಶನದಲ್ಲಿ ಸ್ಥಳೀಯ ಸೇವಾದಲ ಮುಖ್ಯಸ್ಥೆಯಾಗಿ ಮಿಂಚಿದರು. ಆಗ ಸ್ವಯಂಸೇವಿಕೆಯರಿಗೆ ಬಿಳೀ ಹಾಗೂ ಕೇಸರಿ ಬಣ್ಣದ ಕಲಾತ್ಮಕ ಆಯ್ಕೆಯ ಯುನಿಫಾರ್ಮ್ ಸೀರೆಗಳ ಡಿಸೈನ್ ಹಾಕಿದರು. ತುಂಬ ಕಾಲ ಈ ಪಡೆ 'ಆರೆಂಜ್ ಬ್ರಿಗೇಡ್' ಹೆಸರಿನಿಂದ ಪ್ರಸಿದ್ಧವಿತ್ತು.

ಮಹಿಳಾ ಸಮ್ಮೇಳನ

ಮದ್ರಾಸ್, ಮುಂಬೈಗಳ ವಾಸದ ಬಳಿಕ ಪುಣೆಯನ್ನು ಮಹಿಳಾ ಸಮ್ಮೇಳನದ ಕೇಂದ್ರವಾಗಿ ಮಾರ್ಗರೆಟ್ ಕಸಿನ್ಸ್ ಆರಿಸಿದರು. ಅದಾಗಲೇ ಪಂಡಿತ್ ರಮಾಬಾಯಿ, ರಮಾಬಾಯಿ ರಾನಡೆ, ಮಹರ್ಷಿ ಕರ್ವೆ ಮುಂತಾದ ಮಹನೀಯರ ಕಾರ್ಯಕ್ಷೇತ್ರವಾದ ಪುಣೆಯಲ್ಲಿ ಮಹಿಳಾ ಜಾಗೃತಿಯೂ ಸಾಕಷ್ಟು ಇದ್ದು, ೧೯೨೪ ರಲ್ಲಿ ಮಹಿಳಾ ಸಮ್ಮೇಳನ (ಆಲ್ ಇಂಡಿಯಾ ವಿಮೆನ್ಸ್ ಕಾನ್ಫರೆನ್ಸ)ದ ಅಧಿವೇಶನ ಕರೆಯಲಾಯಿತು. ಬಡೋದೆಯ ಮಹಾರಾಣಿ ಅಧ್ಯಕ್ಷರಾಗಿದ್ದರು. ರಾತ್ರಿ ಟ್ರೇನುಗಳಿಂದ ವಿವಿಧ ಪಟ್ಟಣಗಳಿಂದ ಬರುತ್ತಿದ್ದ ಪ್ರತಿನಿಧಿಗಳನ್ನು ಸ್ವಾಗತಿಸಿ, ಅವರಿಗೆ ಇರಲು ನಿಗದಿತವಾಗಿದ್ದ ನಿವಾಸಗಳಿಗೆ ಮುಟ್ಟಿಸುವ ಸ್ವಯಂಸೇವಿಕೆಯಾಗಿ ಕಾರ್ಯನಿರ್ವಹಿಸಲು ಕಮಲಾದೇವಿ ಸಂತೋಷದಿಂದ ಒಪ್ಪಿಕೊಂಡರು. ಸಭೆಯ ಕೊನೆಯಲ್ಲಿ ಅವರ ಮನಸ್ಸಿನ ವಿರುದ್ಧ ಸರ್ವಾನುಮತದಿಂದ ಆಯ್ಕೆಯಾದದ್ದು ಜನರಲ್ ಸೆಕ್ರೆಟರಿ ಆಗಿ! ಆ ಮೇಲೆ ಅವರ ಅವಿರತ

ದುಡಿಮೆಯು ಸುರುವಾಯಿತು. ದೇಶವಿಡೀ ಸಂಚರಿಸಿದರು. ಮಹಿಳಾ ಕಲ್ಯಾಣದ ಕುರಿತಾದ ಸಭೆ, ಶಾಲಾ ಸ್ಥಾಪನೆ, ಮಹಿಳಾ ಕಾರ್ಮಿಕರ ಯುನಿಯನ್ ಇತ್ಯಾದಿಗಳ ಸಂಘಟನೆಗಾಗಿ ದುಡಿದರು. ಟೈಪಿಂಗ್ ಕಲಿತು ವರದಿ ತಾವೇ ಬೆರಳಚ್ಚು ಮಾಡುವದು. ವೇಟಿಂಗ್ ರೂಮಿನ ಕಾಯುವಿಕೆ, ಪ್ರವಾಸದ ಅವಧಿಗಳು ಈ ಕೆಲಸಕ್ಕೆ ಮೀಸಲಾದವು.

ಮಹಿಳಾ ಕಾರ್ಮಿಕರಿಗೆ ಹೆರಿಗೆರಜೆಯ ಸೌಲಭ್ಯವಿರಲಿಲ್ಲ. ಆ ಅವಧಿಯಲ್ಲಿ ಅವರ ಸಂಬಳ ಕಡಿತವಾಗುತ್ತಿತ್ತು. ಮದ್ರಾಸಿನಲ್ಲಿ ಅವರ ಯುನಿಯನ್ ಮಾಡಿ ಸಂಪು ಏರ್ಪಡಿಸಿ, ಕನಿಷ್ಟ ರಜೆ ದೊರೆಯುವಂತೆ ಮಾಡಿದರು. ಗೋಡಂಬಿ ಬೀಜ ಕಾರ್ಮಿಕರು, ಬೆಂಕಿ ಪೊಟ್ಟಣ ತಯಾರಕರಾದಿ ಜನಕ್ಕೆ ಕನಿಷ್ಟವೇತನ ದೊರೆಯುವಂತೆ ನೋಡಿಕೊಂಡರು. ಕ್ರೀಷೆಗಳು ಮೊದಲಬಾರಿಗೆ ದಕ್ಷಿಣರಾಜ್ಯಗಳ ಮಿಲ್ಲುಗಳ ಬಳಿ ಕಾಣಿಸಿಕೊಂಡವು. ಮಂಗಳೂರಿನಲ್ಲಿ ಸಾರಿಗೆ ಕಾರ್ಮಿಕ ಯುನಿಯನ್ ಕಟ್ಟಿದರೆ, ಬಂಗಾಲ ಆಸ್ಸಾಮಗಳ ಚಹ ತೋಟಗಳಲ್ಲಿ ಮಹಿಳಾ ಕಾರ್ಮಿಕರ ಶೋಷಣೆ ತಪ್ಪಿಸಲು ಹೆಣಗಾಡಿದರು.

ಈ ಕೆಲಸದಿಂದಾಗಿ ದಿಲ್ಲಿಗೆ ಹೋಗುವ ಅವಕಾಶ ಮತ್ತೆ ಮತ್ತೆ ಬರುತ್ತಿತ್ತು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರ, ಇತರ ಧುರೀಣರ ಸಂಪರ್ಕ ಬಂದು, ಎಲ್ಲೆಡೆ ಅವರು ಪರಿಚಿತರಾದರು. ಮಹಿಳಾ ಜಾಗೃತಿ ಏಶ್ಯ, ಮಧ್ಯ ಪೂರ್ವ, ಯುರೋಪದಲ್ಲೆಲ್ಲ ಹರಡುತ್ತಿತ್ತು. ಹಲವೆಡೆ ಮಹಿಳಾಸಮ್ಮೇಳನದ ಪ್ರತಿನಿಧಿಯಾಗಿ ಹೋಗಿಬಂದರು. ಈ ಸಂದರ್ಭದಲ್ಲಿಯೇ ಅವರಿಗೆ ಈಜಿಪ್ತ್, ತುರಕಸ್ತಾನ, ಇರಾಣ್, ಇಥಿಯೋಪಿಯ, ಮೆಕ್ಸಿಕೋ ಆದಿ ಅಮೇರಿಕಾ ಖಂಡದ ದೇಶಗಳ ಜಾನಪದ ಕಲೆಗಳು, ನೇಯ್ಗೆ ಹಾಗೂ ಕುಶಲ ಕೈಗಾರಿಕೆಯ ಅಪೂರ್ವ ಮಾದರಿಗಳ ಪರಿಚಯವಾಗಿ, ಮುಂದೆ ಸ್ವದೇಶಕ್ಕಾಗಿ ಅವನ್ನು ಬಳಸುವ ವಿಚಾರ ಮೂಡಿದ್ದು.

ಅಸಹಕಾರ ಚಳುವಳಿ ಪ್ರಾರಂಭವಾಯಿತು. ತರುಣ ಜನಾಂಗವೆಲ್ಲ ಪೂರ್ಣ ಸ್ವರಾಜ್ಯಕ್ಕಾಗಿ ಕಾತರಿಸುತ್ತಿತ್ತು. ದಂಡಿಯಾತ್ರೆ 'ಉಪ್ಪಿನ ಸತ್ಯಾಗ್ರಹ'ಕ್ಕೆ ಅವಕಾಶ ಮಾಡಿಕೊಟ್ಟಿತು. ಮೊದಲಲ್ಲಿ ಮಹಿಳೆಯರನ್ನು

ಈ ಚಳುವಳಿಯಲ್ಲಿ ಸೇರಿಸಿಕೊಂಡಿರಲಿಲ್ಲ. ಕೆರಳಿದ ಕಮಲಾದೇವಿ ನೇರ ಹೋಗಿ ಗಾಂಧೀಜಿಯವರನ್ನು ಕಂಡರು. ಉಪ್ಪುತಯಾರಿಕೆಯ ಸತ್ಯಾಗ್ರಹ, ಹೆಂಗಳೆಯರಿಗೆ ಹೇಳಿಮಾಡಿಸಿದ ಸುಸಂಧಿಯೆಂದು ನಂಬಿಸಲು ಯತ್ನಿಸಿದರು. ಗಾಂಧೀಜಿ ಒಂದು ಹೇಳಿಕೆಯನ್ನು ಕೊಟ್ಟರೆ, ತಾವು ಮುಂಬೈಯಲ್ಲಿ ಸತ್ಯಾಗ್ರಹ ಸಂಘಟಿಸುವದಾಗಿ ಹೇಳಿದರು. ಗಾಂಧೀಜಿ ನಕ್ಕುಬಿಟ್ಟರಂತೆ! ನನ್ನ ಹೇಳಿಕೆ ಅವಶ್ಯಕತೆಯೇ ಇಲ್ಲ ಅವರಾಗಿ ಧುಮುಕುತ್ತಾರೆ ಎಂದರು. ಕಾರ್ಯಕಾರಿ ಸಮಿತಿಯವರು ಮಹಿಳಾ ಸೇರ್ಪಡೆಗೆ ಗಾಂಧೀಜಿ ಅನುಮತಿ ಬೇಕೆ ಬೇಕು ಎಂದದ್ದರಿಂದ ನಾಲ್ಕಾರು ಶಬ್ದಗಳ ಹೇಳಿಕೆಯನ್ನು ಬಾಪೂಜಿಯಿಂದ ಪಡೆದು ಕಮಲಾದೇವಿ ಮುಂಬೈಗೆ ಮರಳಿದರು.

ಅಲ್ಲಿ ಚೌಪಾಟಿಯಲ್ಲಿ ನೋಡುತ್ತಾರೆ, ಸಹಸ್ರಾರು ಗಂಡಸರು, ಹೆಂಗಸರು, ಮಕ್ಕಳೆನ್ನದೇ ಉಪ್ಪಿನ ತಯಾರಿಕೆ ನಡೆಸಿದ್ದರು! ಯಾರ ಅನುಮತಿಯೂ ಅವರಿಗೆ ಬೇಕಿರಲಿಲ್ಲ. ಪೊಲೀಸರು ನಿಸ್ಸಹಾಯಕರಾಗಿ ನೋಡುತ್ತಿದ್ದರು. ಸರಿ, ಕಮಲಾದೇವಿ ಈ ಅಕ್ರಮವಾಗಿ ತಯಾರಾದ ಉಪ್ಪನ್ನು ಮಾರುವ ಹೊಣೆ ಹೊತ್ತರು. "ಗಾಂಧಿ ಉಪ್ಪು ದರ ಆರು ತಿಂಗಳ ಕಾರಾವಾಸ!" ಎಂದೇ ಘೋಷಿಸಿ ಮಾರಲಾರಂಭಿಸಿದರು. ೫೦ ರೂಪಾಯಿಗೆ ಒಂದು ಪ್ಯಾಕೆಟ್ ಮಾರಿದರು. ಶೇರು ಬಝಾರ್, ಹೈಕೋರ್ಟ್ ಮೊದಲಾದ ಕಡೆಯೆಲ್ಲ ಮಾರಿದರು. ೭೫೦೦೦ ರೂಪಾಯಿ ಕಾಂಗ್ರೆಸ್ ಖಜಾನೆಗೆ ಭರ್ತಿಮಾಡಿದರು. ಕೊನೆಗೆ ಅರೆಸ್ಟ್ ಆಗಿ ಆರು ತಿಂಗಳ ಜೈಲುವಾಸ ಹಾಗೂ ೧೫೦ ರೂಪಾಯಿಯ ಜುಲ್ಮಾನೆಗೆ ಒಳಗಾದರು.

ಬಿಡುಗಡೆಯ ಬಳಿಕ ಸ್ವದೇಶೀ ವಸ್ತುಗಳ ಮಾರಾಟದ ಮಳಿಗೆ ಪ್ರಾರಂಭಿಸಿದರು. ಮತ್ತೆ ಪಿಕೆಟಿಂಗ್, ಅಸಹಕಾರ ಚಳುವಳಿಯಲ್ಲಿ ಪಾಲುಗೊಂಡದ್ದಕ್ಕಾಗಿ ಡಿಟೆನ್ಶನ್ ಕಾಯ್ದೆ ಪ್ರಕಾರ ವಿಚಾರಣೆಯಿಲ್ಲದೇ ಕಾರಾವಾಸದ ಶಿಕ್ಷೆಗೆ ಒಳಗಾದರು. ವೆಲ್ಲೋರ ಜೈಲಿನ ದುಸ್ಸಹ ಸೆಕೆಯ ನಡುವೆ, ಬರವಣಿಗೆಯಲ್ಲಿ ಬವಣೆ ಮರೆಯಲೆತ್ನಿಸಿದರು. ಬಿಡುಗಡೆಯ ಬಳಿಕ ಅವರ ಯಾವತ್ತೂ ಜೈಲಿನ ಅನುಭವಗಳನ್ನು, ಸ್ಮೃತಿಗಳನ್ನು ಪ್ರಕಟಿಸುವದಾಗಿ ಹೇಳಿ ಅವರ ನಿಕಟವರ್ತಿಗಳು ಅವನ್ನು ಕಳೆದು ಹಾಕಿದ್ದು ದುರ್ದೈವ.

ಕಾಂಗ್ರೇಸ್ ಸೋಶ್ಯಾಲಿಸ್ಟ ಪಾರ್ಟಿ ೧೯೩೪ ರ ಅಕ್ಟೋಬರದಲ್ಲಿ ಹುಟ್ಟಿಕೊಂಡಿತು. ಕಾಂಗ್ರೇಸ್ಸಿನ ಧ್ಯೇಯೋದ್ದೇಶಗಳು ಸರಿಬಾರದ ಕಾರ್ಮಿಕ, ಕೃಷಿಕರ ಸಂಘಟನೆಗಳಿಗೆ ಹೋರಾಟದ ಸಮಿತಿಗಳಿಗೆ ಹೆಚ್ಚಿನ ಪಾತ್ರವನ್ನು ಅಪೇಕ್ಷಿಸಿದ ಸದಸ್ಯರೆಲ್ಲ ಅದನ್ನು ಸೇರಿದರು. ಕಮಲಾದೇವಿ ಅದರಲ್ಲಿ ಪ್ರಮುಖರು. ದೇಶೀಯ ಸಂಸ್ಥಾನಗಳಲ್ಲಿ ಸ್ವಾತಂತ್ರ್ಯ ಚಳುವಳಿ ತೀರಾ ಸಪ್ಪಗೆ ಇದ್ದದ್ದೂ ಅವರಿಗೆ ಇಷ್ಟವಾಗಲಿಲ್ಲ. ದೇಶದ ಸ್ವಾತಂತ್ರ್ಯಹೋರಾಟ ಎಲ್ಲರಿಗೂ ಸೇರಿದ್ದು. ಸಂಸ್ಥಾನದ ಪ್ರಜೆಗಳೂ ಅದರಲ್ಲಿ ಸೇರಿಕೊಳ್ಳಬೇಕೆಂದು ವಾದಿಸಿದರು. ಭಿನ್ನಾಭಿಪ್ರಾಯಗಳಿಂದ ಬೇಸತ್ತು ಕೆಲ ಕಾಲ ದೇಶದಿಂದ ದೂರವಿರಲು ನಿರ್ಧರಿಸಿದರು.

ಈ ಹೊತ್ತಿಗೆ ಅವರ ಮದುವೆ ಮುರುಗಡೆ ಆಗಿತ್ತು. ೧೯೨೩ ರಲ್ಲಿ ಹುಟ್ಟಿದ ಒಬ್ಬನೇ ಮಗ ರಾಮನ ಶಿಕ್ಷಣದ ವ್ಯವಸ್ಥೆ ಆಗಬೇಕಿತ್ತು. ಗಾಂಧೀಜಿ ಒಪ್ಪಿಗೆ ಪಡೆದು ಮಗನು ಬಯಸಿದಂತೆ ರೇಡಿಯೋ ಇಂಜಿನಿಯರಿಂಗ್ ಕಲಿಸುವ ವ್ಯವಸ್ಥೆಮಾಡಲು ಯುರೋಪಿಗೆ ಅವನೊಂದಿಗೆ ಹೊರಟರು. (೧೯೩೯) ಆದರೆ ಅದಾಗಲೇ ದ್ವಿತೀಯ ಮಹಾಯುದ್ಧದ ಕಾರ್ಮೋಡಗಳು ಕವಿದಿದ್ದವು. ಯುರೋಪಿನ ಯಾವ ದೇಶವೂ ಕ್ರಾಂತಿಯ ಹಿನ್ನೆಲೆಯುಳ್ಳಾಕೆಯ ಸಂತತಿಗೆ ಸಹಾಯ ಮಾಡಲು ಒಪ್ಪಲಿಲ್ಲ. ಇವರು ಸೋಲನ್ನೊಪ್ಪದೇ ಅಲ್ಲಿಂದ ಅಮೇರಿಕೆಗೆ ತೆರಳಿದರು. ಆ ಮಹಾನ್ ದೇಶದಲ್ಲಿ ವ್ಯಕ್ತಿಸ್ವಾತಂತ್ರ್ಯ, ಔದ್ಯಮಿಕ ಪ್ರಗತಿ, ಮಹಿಳಾ ಸಂಘಟನೆಗಳನ್ನು ಪ್ರತ್ಯಕ್ಷ ಕಂಡರು. ಮಗನ ಶಿಕ್ಷಣದ ವ್ಯವಸ್ಥೆ ಆದೊಡನೆ ಅಮೇರಿಕೆಯಲ್ಲೆಲ್ಲ ಸಂಚರಿಸಿ ಭಾರತದ ಸ್ವಾತಂತ್ರ್ಯ ಹೋರಾಟದ ಪರಿಚಯವನ್ನು ಅಮೇರಿಕನ್ನರಿಗೆ ಮಾಡಿಕೊಟ್ಟರು. ಅಲ್ಲಿ ಭೇಟಿಮಾಡಿದ ವ್ಯಕ್ತಿಗಳಿಗೆ, ಮಾಡಿದ ಭಾಷಣಗಳಿಗೆ, ಸ್ಥಾಪಿಸಿದ ಸಂಪರ್ಕಗಳಿಗೆ ಲೆಕ್ಕವಿಲ್ಲ. ಸಂತತಿ ನಿಯಂತ್ರಣದ ಆದಿ ಪ್ರತಿಪಾದಕ ಮಾರ್ಗರೆಟ್ ಸ್ಯಾಂಗರ್, ಅಧ್ಯಕ್ಷ ರೂಸವೆಲ್ಟ್ ಹಾಗೂ ಹೆಸರಾಂತ ಸಮಾಜ ಸೇವಿಕೆ ಅವರ ಪತ್ನಿ ಎಲೀನರ್ ಅವರಲ್ಲಿ ಪ್ರಮುಖರು. ಆಗಿನ್ನೂ ಭಾರತೀಯರು, ಅಮೇರಿಕೆಗೆ ಅಪರಿಚಿತರಾಗಿದ್ದ ಕಾಲ. ಈ ಸುಂದರ ಮಹಿಳೆಯ ಆಕರ್ಷಕ ವೇಷಭೂಷಣ, ಮೋಹಕ ಮಾತುಗಾರಿಕೆಗೆ ಅಲ್ಲಿಯವರು ಮರುಳಾಗಿ ಹೋದದ್ದು ಅಂದಿನ ಪ್ರಮುಖ ವೃತ್ತಪತ್ರಿಕೆಗಳ ಸಮಾಚಾರದಿಂದ ಗೊತ್ತಾಗುತ್ತದೆ.

ಅಲ್ಲಿಂದ ಅವರು ಚೀನ, ಜಪಾನಗಳತ್ತ ಸಾಗಿದರು. ಚೀನದಲ್ಲಿ ಯಾದವೀ ಯುದ್ಧ ನಡೆದಿತ್ತು. ಬಾಂಬ್ ದಾಳಿಗಳ ನಡುವೆ, ಅಪರಿಚಿತ ನಾಡಿನಲ್ಲಿ ಟ್ರೇನು, ಹಡಗುಗಳ ಅನಿಶ್ಚಿತತೆಯಲ್ಲಿ ಕೇವಲ ಸೈನಿಕರಿಂದ ತುಂಬಿದ ಬೋಗಿಯಲ್ಲಿ ಓರ್ವಳೇ ಮಹಿಳೆಯಾಗಿ ಅವರು ಸಂಚರಿಸಿದ್ದು, ಯಾರಿಗೂ ರೋಮಾಂಚವೆನ್ನಿಸುವ ಅನುಭವ. ಭಾರತ ಹೋರಾಟ ಹಾಗೂ ಭಾರತೀಯ ನಾರಿಯರ ಕುರಿತಾದ, ದೇಶ-ವಿದೇಶೀಯರ ಅಭಿಪ್ರಾಯಗಳನ್ನೆಲ್ಲ ಪುಸ್ತಕರೂಪದಲ್ಲಿ ಕೊಡಮಾಡಿದ್ದಾರೆ.

೧೯೪೨ ರಲ್ಲಿ ಕಮಲಾದೇವಿ ಅಖಿಲಭಾರತ ಮಹಿಳಾ ಸಮ್ಮೇಳನದ ಅಧ್ಯಕ್ಷರಾದರು. ಆದರೆ ಕ್ವಿಟ್ ಇಂಡಿಯಾ ಚಳುವಳಿ ಶಿಖರಕ್ಕೇರಿದ ಕಾಲ. ಮತ್ತೆ ಆಂದೋಲನ ಕೈಬೀಸಿ ಕರೆಯಿತು. ಕೆಲಕಾಲ ಸಮ್ಮೇಳನ ಸ್ಥಗಿತಗೊಳಿಸುವ ನಿರ್ಧಾರ ಕೈಕೊಂಡು ರಾಷ್ಟ್ರೀಯ ಸೇವಾದಲದಲ್ಲಿ ಪೂರ್ಣತಃ ತೊಡಗಿಸಿಕೊಂಡು ಅರೆಸ್ಟ್ ಆದರು. ೧೯೪೪ ರಲ್ಲಿ ಬಿಡುಗಡೆ ಹೊಂದಿದರು. ಮತ್ತೆ ಅವರ ಚಟುವಟಿಕೆಗಳು ಪ್ರಾರಂಭವಾದವು.

೧೯೪೭ ರಲ್ಲಿ ಸ್ವಾತಂತ್ರ್ಯವೇನೋ ಲಭಿಸಿತು. ಆದರೆ ಅದಕ್ಕೆ ಹೊಂದಿ ಲಕ್ಷಾಂತರ ನಿರಾಶ್ರಿತರ ಪುನರ್ನಿವೇಶನದ ಸಮಸ್ಯೆ ಬೃಹದಾಕಾರ ತಾಳಿತು. ಕಮಲಾದೇವಿ ತಾವು ಸ್ಕಾಂಡಿನೇವಿಯದಲ್ಲಿ ಕಂಡ ಯಶಸ್ವಿ ಸಹಕಾರಿ ಸಂಸ್ಥೆಗಳ ಮಾದರಿಯಲ್ಲಿ ನಿರಾಶ್ರಿತ ಜನಕೋಟಿಗೆ ಮನೆಗೆ, ಕೃಷಿಗೆ, ಕೈಗಾರಿಕೆಗೆ, ಮಾರಾಟಕ್ಕೆ ಅನುಕೂಲ ಮಾಡಿಕೊಡಲು ದಿನ-ರಾತ್ರಿ ಶ್ರಮಿಸಿದರು.

ಕಾಂಗ್ರೆಸ್ಸಿನ ಮುಂಚೂಣಿಯಲ್ಲಿದ್ದವರಿಗೆಲ್ಲ ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಪ್ರತಿಷ್ಠಿತ ಹುದ್ದೆಗಳು ದೊರೆತವು. ಚಿಕ್ಕದೊಡ್ಡ 'ತ್ಯಾಗಿ'ಗಳ ಮಹಾನ್ ಪಡೆಯೇ ಕಾಣಿಸಿಕೊಂಡು ತಮ್ಮ ಹಕ್ಕು ಬಾಧ್ಯತೆಗಳನ್ನು ಸಾಧಿಸಿಕೊಂಡಿದ್ದು ಈಗ ಇತಿಹಾಸ! ಆದರೆ ಕಮಲಾದೇವಿ ತನಗೆ ಕೊಡಮಾಡಿದ ಮಹತ್ವದ ಹುದ್ದೆಗಳನ್ನೆಲ್ಲ ತಿರಸ್ಕರಿಸಿದರು. ಕ್ಯಾಬಿನೆಟ್ ಮಂತ್ರಿಪದವಿ ಧಿಕ್ಕರಿಸಿದರು. ಅವರಿಗೆ ಪ್ರಿಯವಾಗಬಹುದೆಂದು ಭಾವಿಸಿ ನೀಡಲಾದ ಈಜಿಪ್ತ, ಸೋವಿಯೆಟ್ ರಷ್ಯಾದೇಶಗಳ ರಾಯಭಾರಿ ಪದವನ್ನು ಒಪ್ಪಿಕೊಳ್ಳಲಿಲ್ಲ. ಎಲ್ಲ ಪಕ್ಷಗಳು ಸೇರಿ, ಉಪರಾಷ್ಟ್ರಪತಿಯ ಪದವಿಗೆ

ಅವರ ಹೆಸರು ಸೂಚಿಸಿದಾಗಲೂ ಸಮ್ಮತಿಸಲಿಲ್ಲ. 'ಸ್ವತಂತ್ರ ಭಾರತದಲ್ಲಿ ಜನಸಾಮಾನ್ಯರಿಗಾಗಿ ಕೆಲಸಮಾಡಲು ಬೇಕಾದ ಸ್ವಾತಂತ್ರ್ಯ, ಅವಕಾಶಗಳು ಲಭಿಸಿವೆ ! ಅವನ್ನು ಬಳಸಬಹುದು !' ಅನ್ನುತ್ತಿದ್ದರು. ಯಾವ ಪದವನ್ನು ಅಲಂಕರಿಸದೆಯೇ ಕೆಲಸ ಮಾಡಿಯೂ ತೋರಿಸಿದರು. ಅಖಿಲ ಭಾರತ ಕೈಗಾರಿಕಾ ಬೋರ್ಡು ೧೯೫೨ ರಲ್ಲಿ ರೂಪಗೊಂಡಾಗ ಮಾತ್ರ ಅದು ತನ್ನದೇ ಮಗು ಎಂದು ಮಮತೆಯಿಂದ ಪಾಲಿಸಿ, ಪೋಷಿಸಿ, ಮಣ್ಣು ಮುಕ್ಕಿಹೋಗಲಿದ್ದ ನೂರಾರು ಕುಶಲ ಕೈಗಾರಿಕೆಗಳಿಗೆ ಪುನಶ್ಚೇತನ ನೀಡಿದರು.

ಪೈಠಣ್, ಚಂದೇರಿ ಸೀರೆಗಳು, ಅಂದಚಂದದ ನೇಕಾರಿಕೆಗೆ ಪ್ರಸಿದ್ಧವಿದ್ದವು. ಅವೆಲ್ಲ ಮಣ್ಣುಗೂಡಿ ನೇಕಾರ ಕುಟುಂಬದವರು, ನೆರೆಯ ಊರು ಪಟ್ಟಣಗಳಿಗೆ ಹೋಗಿ ಸುಣ್ಣ ಬಣ್ಣ ಬಳಿದೋ, ಕೂಲಿ ಮಾಡಿಯೋ ಹೊಟ್ಟೆ ಹೊರೆಯುತ್ತಿದ್ದರೆಂದರೆ ಅವರ ನಿರ್ಗತಿಕತೆಯ ಕಲ್ಪನೆ ಬಂದೀತು! ಕಮಲಾದೇವಿ ಅಳಿದುಳಿದ ಹತ್ತಾರು ಕುಟುಂಬಗಳನ್ನು ಗುರುತಿಸಿದರು. ಸಹಾಯಧನ ಒದಗಿಸಿದರು. ಪುನಃ ಮಗ್ಗಗಳು ನಡೆಯುವಂತೆ ನೋಡಿಕೊಂಡರು. ಭಾರತದ ಹಳ್ಳಿ ಹಳ್ಳಿಗಳನ್ನು ತಿರುಗಿದರು. ಕಾಶ್ಮೀರಿ ಶಾಲು, ಪೇಪರಮಾಶೆ, ಹೈದರಾಬಾದದ ಕಲಂಕಾರಿ, ದಕ್ಷಿಣದ ಕಂಚು-ಹಿತ್ತಾಳೆಯ ಸಾಮಗ್ರಿ, ಬಿದರಿಕಲೆ, ಧಾರವಾಡದ ಕಸೂತಿ, ಯಾವುದೂ ಅವರ ದೃಷ್ಟಿಯನ್ನು ತಪ್ಪಿಸಿಕೊಳ್ಳಲಿಲ್ಲ. ಕುಶಲ ಕರ್ಮಿಗಳ ಸ್ಥಾನಮಾನ ಏರಿಸಲು ಹವಣಿಸಿದರು. ಅವರಿಗೆ ಪೆನ್‌ಶನ್ ಕೊಡಿಸಲು ಪ್ರಯತ್ನಿಸಿದರು. ರಾಷ್ಟ್ರೀಯ ಪುರಸ್ಕಾರ-ಪ್ರಶಸ್ತಿಗಳ ಯೋಜನೆ ಹುಟ್ಟಿ ಹಾಕಿದವರು ಅವರೇ !

ಇವುಗಳ ನಡುವೆ ತಮ್ಮ ಹೃದಯಕ್ಕೆ ಹತ್ತಿರವಾದ ರಂಗ ಪ್ರೇಮವನ್ನು ಕಮಲಾದೇವಿ ಮರೆತಿರಲಿಲ್ಲ. ರಂಗ ಸಜ್ಜಿಕೆ (Stage-Craft)ಗೆ ಬೇಕಾಗುವ ಸಕಲ ಸಾಮಗ್ರಿಗಳ ಮಳಿಗೆಗಳು, ಕುಶಲಕರವಸ್ತುಗಳ ಜೊತೆಗೇ ಇದ್ದು ಪ್ರದರ್ಶನಗೊಳ್ಳುವ ವ್ಯವಸ್ಥೆಯ ಜೊತೆಗೆ ಸಂಗೀತವಾದ್ಯಗಳ ಪುನರ್ನಿರ್ಮಾಣಕ್ಕೆ ಹವಣಿಸಿದರು. ಸಾವಿನಂಚಿನಲ್ಲಿದ್ದ ಅದೆಷ್ಟೊ ಜಾನಪದ ಕೈಗಾರಿಕೆಗಳೂ, ಮರೆತು ಹೋಗಲಿದ್ದ ಕಲಾಕಾರರೂ ಬೆಳಕು ಕಾಣುವಂತಾದದ್ದು ಕಮಲಾದೇವಿಯವರ ಸ್ವಪ್ರಯತ್ನದಿಂದ. ವೃದ್ಧಾಪ್ಯದಲ್ಲೂ ನಾಟಕ ಪ್ರದರ್ಶನಗಳಿಗೆ, ಲಿಫ್ಟ್ ಇಲ್ಲದಲ್ಲಿ ನಾಲ್ಕಾರು

ಮಹಡಿ ಹತ್ತಿ ಹೋಗಿ, ಪ್ರದರ್ಶನ ಮುಗಿಯುವವರೆಗೂ ಕುಳಿತುನೋಡಿ, ಆ ಬಳಿಕ ಕಲಾವಿದರನ್ನು ಕಂಡು, ಅಭಿನಂದಿಸಿ, ಸಲಹೆಗಳನ್ನು ನೀಡುವ ರಂಗಪ್ರೇಮ ಅವರದಾಗಿತ್ತು ಎಂದು ರಾಷ್ಟ್ರೀಯ ನಾಟಕ ಶಾಲೆಯ ಮೊದಲ ನಿರ್ದೇಶಕರೂ, ಶ್ರೇಷ್ಠ ನಾಟಕ ವಿಮರ್ಶಕರೂ ಆದ ಇಬ್ರಾಹಿಂ ಅಲ್ಕಾಝಿ ಅಭಿಮಾನದಿಂದ ಹೇಳಿದ್ದಾರೆ. ೧೯೮೮ ರಲ್ಲಿ ಕಮಲಾದೇವಿ ಕೊನೆಯುಸಿರು ಎಳೆದರು.

ಅಚ್ಚ ಕನ್ನಡತಿಯಾಗಿ ಹುಟ್ಟಿ ಬೆಳೆದರು. ರಾಷ್ಟ್ರ ಮಟ್ಟದ ಧುರೀಣರಲ್ಲಿ ಒಬ್ಬರಾಗಿ ಬೆಳಗಿದರು. ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಸಂಗೀತ-ನಾಟಕಗಳಲ್ಲಿ ಆಸಕ್ತರು. ಸ್ವಾತಂತ್ರ್ಯಯೋಧೆ, ಕಾಂಗ್ರೆಸ್ಸಿನ ಸಕ್ರಿಯ ಕಾರ್ಯಕರ್ತೆ, ಮಹಿಳಾ ಅಭ್ಯುದಯಕ್ಕಾಗಿ ಹಲವು ವಿಧದಲ್ಲಿ ದುಡಿದಾಕೆ. ಹಲವಾರು ಟ್ರೇಡ್‌ಯುನಿಯನ್‌ಗಳ ಸ್ಥಾಪಕಿ, ಸಹಕಾರಿ ಸಂಸ್ಥೆಗಳ ಸಂಘಟಕಿ, ಕುಶಲ ಕೈಗಾರಿಕೆಗಳಿಗೆ ಪುನರ್ಜನ್ಮವಿತ್ತಾಕೆ. ಉತ್ತಮ ವಾಕ್ಪಟು, ಲೇಖಕಿ, ಹನ್ನೆರಡು ಪುಸ್ತಕಗಳನ್ನು ಬರೆದಿದ್ದಾರೆ. ಅರಸಿ ಬಂದ ಹುದ್ದೆಗಳನ್ನು ಕಣ್ಣೆತ್ತಿ ನೋಡಲಿಲ್ಲ. ಆದರೆ ಪ್ರಶಸ್ತಿಗಳು ಬಿಡದೇ ಬೆನ್ನಟ್ಟಿಕೊಂಡು ಬಂದವು. ಪದ್ಮಭೂಷಣ, ದೇಶಿಕೋತ್ತಮ ಹಾಗೂ ಮ್ಯಾಗಸೇಸೇ ಪ್ರಶಸ್ತಿಗಳು. ಕೆಲವು ಯುನೆಸ್ಕೋ, ಈಜಿಪ್ಟ್, ದೇಶಗಳ ಗೌರವ ಪ್ರಶಸ್ತಿಗಳೂ ಸಂದಿವೆ. ಆದರೆ ಅವುಗಳ ಆಕರ್ಷಣೆ ಅವರಿಗೆ ಕಿಂಚಿತ್ತೂ ಇರಲಿಲ್ಲ. ತಮ್ಮ ವೈಯಕ್ತಿಕ ಕೊಂಚ ಆಸ್ತಿಯೊಂದಿಗೆ, ಮ್ಯಾಗ್‌ಸೇಸೇ ಪ್ರಶಸ್ತಿಯ ಗೌರವಧನದ ಮೊತ್ತವನ್ನೂ ಅವರು ಮಂಗಳೂರಿನ ಯು. ಎಸ್. ಎಸ್. ಟ್ರಸ್ಟ್‌ಗೆ ಕೊಡಮಾಡಿದರು. ಕೇವಲ ಹಣಕ್ಕೆ, ಪ್ರತಿಷ್ಠೆಗೆ, ಸ್ವಂತ ಪ್ರಚಾರಕ್ಕೆ, ಪ್ರಸಿದ್ಧಿಗೆ 'ಸಮಾಜ ಸೇವೆ'ಯನ್ನು ಕೈಕೊಳ್ಳುತ್ತಿರುವವರ, ಪ್ರಶಸ್ತಿಗಳಿಗೆ ಹಪಾಪಿಸುವವರ ಸಂಖ್ಯೆ ಏರುತ್ತಲೇ ಹೋಗಿರುವ ಇಂದಿನ ದಿನಗಳಲ್ಲಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಧ್ರುವತಾರೆ.

◈◈◈



ಕುಂದದ ಚೇತನ : ಉಮಾಬಾಯಿ ಕುಂದಾಪುರ

(೧೮೯೨-೧೯೯೨)

೧೯೬೫ ನೇ ಇಸ್ವೀಯ ಅಗಸ್ಟ ೧೩ ನೇ ತಾರೀಕು. ಧಾರವಾಡ ಆಕಾಶವಾಣಿಯ ವ್ಯಾನು ಗಕ್ ಎಂದು ಮನೆಯೆದುರು ಬಂದು ನಿಂತಿತು. "ನಿಮಗ ಅರ್ಜೆಂಟ್ ಆಗಿ ಇದನ್ನ ಕೊಟ್ಟ ಬಾ ಅಂತ ದೊಡ್ಡ ಸಾಹೇಬರು ಹೇಳ್ಯಾರ!" ಎಂದು ಡ್ರಾಯವರ್ ಚೀಟಿಯನ್ನು ಕೈಗಿತ್ತ. "ಅಗಸ್ಟ ೧೫ ರಿಂದ ವಾರಕ್ಕೊಮ್ಮೆ ಅರ್ಧಗಂಟೆಯ ಕೊಂಕಣಿ ಕಾರ್ಯಕ್ರಮ ಪ್ರಾರಂಭಿಸಬೇಕೆಂದು ಮಹಾನಿರ್ದೇಶನಾಲಯದಿಂದ ಫೋನಿನ ಆದೇಶ ಬಂದಿದೆ! ಕಾರ್ಯಕ್ರಮಗಳನ್ನು ರೂಪಿಸಿಕೊಂಡು ನಾಳೆ ಬೆಳಿಗ್ಗೆ ಎಂಟು

ಗಂಟೆಯ ಹೊತ್ತಿಗೆ ಆಫೀಸಿಗೆ ಬಾ!" ಮುಖ್ಯಸ್ಥರ ನಿರ್ದೇಶನವಿತ್ತು. ಮರುದಿನದ ಭಾನುವಾರದ ರಜೆಯನ್ನಾದರೂ, ಎರೆದುಕೊಂಡು ವಿರಮಿಸಿ, ಕಳೆಯಬಹುದೆಂದು ಅಗಸ್ಟ ೧೫ ರ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿ ಸಿದ್ಧಪಡಿಸಿದ ಟೇಪ್‌ನ್ನು ಪ್ರಸಾರಕ್ಕೆ ಒಪ್ಪಿಸಿ ಮನೆಗೆ ಬಂದು ಅರ್ಧಗಂಟೆಯೂ ಕಳೆದಿರಲಿಲ್ಲ. ಬೆಳಗಿನ ಒಳಗಾಗಿ ಹಿಂದು ಮುಂದು ಗೊತ್ತಿಲ್ಲದ, ಕೇವಲ ಮಾತೃಭಾಷೆಯಾಗಿದ್ದ ಕೊಂಕಣಿಯಲ್ಲಿ ಕಾರ್ಯಕ್ರಮ ರೂಪಿಸಬೇಕು! ತಲೆ ಗಿರ್ ಎಂದಿತು.

ಆಕಾಶವಾಣಿ ಸೇವೆಗೆ ಸೇರಿಕೊಂಡು ಕೆಲವೇ ತಿಂಗಳು ಕಳೆದಿದ್ದವು. ಮಾತೃಭಾಷೆಯಲ್ಲಿ ಕಾರ್ಯಕ್ರಮಗಳು ಪ್ರಸಾರವಾಗುವ ಸಾಧ್ಯತೆ ಖುಷಿಕೊಟ್ಟಿತಾದರೂ, ಅದರ ಯಾವತ್ತೂ ಜವಾಬ್ದಾರಿ ನನ್ನ ಕೊರಳಿಗೇ! ಎಂದು ನೆನಪಿಸಿಕೊಂಡಾಗ ವಿಚಲಿತಳಾಗಿದ್ದೆ. ಆಗಿನ್ನೂ ಕೊಂಕಣಿಯಲ್ಲಿ ಸಾಹಿತ್ಯ ರೂಪಗೊಂಡಿರಲಿಲ್ಲ. ಗೋವಾ, ಮುಂಬೈಗಳಿಂದ ಕೊಂಕಣಿಯಲ್ಲಿ ಪ್ರಸಾರ ನಡೆದಿತ್ತಾದರೂ, ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿರುವ ಕರ್ನಾಟಕದ ಕೊಂಕಣಿಗರ ಭಾಷೆಯಲ್ಲಿ ಪ್ರಸಾರ-ಪ್ರಚಾರದ ದೃಷ್ಟಿಯಿಂದ ಯಾರೂ ಯೋಚಿಸಿಯೇ ಇರಲಿಲ್ಲ! ರಾಜ್ಯದಿಂದ ಪ್ರಸಾರವಾಗಲಿದ್ದ ಮೊಟ್ಟಮೊದಲ ಕಾರ್ಯಕ್ರಮ. ಯೋಚಿಸಿ, ರೂಪಿಸಿ, ಪ್ರಸಾರ ಮಾಡಲು ೩೬ ಗಂಟೆಗಳ ಸಮಯವಷ್ಟೆ ಉಳಿದಿತ್ತು. ಸರಿಯಾಗಿ ಕುಳಿತು ಯೋಚಿಸಿದೆ. ಪ್ರಪ್ರಥಮ ಕಾರ್ಯಕ್ರಮಕ್ಕೆ ಪ್ರಸಿದ್ಧ ಮುಖಂಡರ ಆಶೀರ್ವಚನ, ಹೊಸಕಾರ್ಯಕ್ರಮದ ಆಶಯ-ಭರವಸೆಗಳು, ಸ್ವಲ್ಪ ಸಂಗೀತ, ಒಂದೆರಡು ಹಾಡು ಹಾಕಿದರೆ ಕಾರ್ಯಕ್ರಮ ಮಾಡಬಹುದು. ಕೊಂಕಣಿ ಭಾಷೆಯಲ್ಲಿ ಆಶೀರ್ವಚನ ನೀಡುವ ಅಖಿಲ ಭಾರತ ಮಟ್ಟದ ಧುರೀಣರು ಧಾರವಾಡ ಮೇರೆಯಲ್ಲಿ ಯಾರಿದ್ದಾರೆ? ತಟ್ಟನೆ ಶ್ರೀಮತಿ ಉಮಾಬಾಯಿ ಕುಂದಾಪುರರ ಹೆಸರು ನೆನಪಾಯಿತು. ನೆಮ್ಮದಿಯ ಉಸಿರು ಬಿಟ್ಟು ನಿದ್ರಿಸಿದೆ.

ಮರುದಿನ ಬೆಳಿಗ್ಗೆಯೇ ಹುಬ್ಬಳ್ಳಿಯಲ್ಲಿ ನೆಲೆಸಿದ್ದ ಉಮಾಬಾಯಿಯವರನ್ನು ಸಂಪರ್ಕಿಸಿ ಸಂದೇಶವೊಂದನ್ನು ರಿಕಾರ್ಡಮಾಡಲು ಅವರಲ್ಲಿ ಬರುವದಾಗಿಯೂ, ಅವರು ಅದನ್ನು ಬರೆದು ಸಿದ್ಧವಾಗಿರಬೇಕಾಗಿಯೂ ತಿಳಿಸಿದೆ. ಇತರರಿಗೆ ಸಹಾಯ ಮಾಡಲು ಸದಾ ಸಿದ್ಧಹಸ್ತರಿದ್ದ ಉಮಾಬಾಯಿ ಕೂಡಲೇ ಒಪ್ಪಿಕೊಂಡರು. ಜಯಚಾಮರಾಜ

ನಗರದಲ್ಲಿ ಆಗ ಅವರು ಇರುತ್ತಿದ್ದ 'ಆನಂದಸ್ಮೃತಿ'ಯನ್ನು ತಲುಪಿದಾಗ ನಗುಮುಖದ ಉಮಾಬಾಯಿಯವರೇ ಸ್ವಾಗತಿಸಿದರು.

ಎಪ್ಪತ್ತೆರಡು ವಸಂತಗಳನ್ನ ದಾಟಿದ ಚೆಲುವೆ ಎದುರಾಗಿದ್ದರು. ಕಪ್ಪಾದ ದಟ್ಟಕೂದಲು, ಗುಲಾಬಿ ಮಿಶ್ರಿತ ಗೌರವರ್ಣ. ಕಡೆದಂತಿದ್ದ ಕಣ್ಣು, ಮೂಗು, ಹಣೆ, ಗದ್ದ, ತುಟಿಗಳು, ವಾತ್ಸಲ್ಯಭಾವದ ಸೌಮ್ಯ ಮುಖಮುದ್ರೆ. ಚಿಕ್ಕವಯಸ್ಸಿನಲ್ಲಿ ಒಳ್ಳೇ ಸುಂದರಿಯಾಗಿದ್ದರೆಂದು ಅವರ ನಡುಮನೆಯಲ್ಲಿದ್ದ ತೈಲಚಿತ್ರ ಸಾರಿ ಹೇಳುತ್ತಿತ್ತು. ಕಸ್ತೂರಬಾ ಟ್ರಸ್ಟಿನ ಕರ್ನಾಟಕದ ಮುಖ್ಯಸ್ಥೆ ಆಗಿ, ವಿಧಾಯಕ ಕಾರ್ಯಗಳನ್ನು ಏರ್ಪಡಿಸಿ, ಅಸಂಖ್ಯ ಅಸಹಾಯಕ ಮಹಿಳೆಯರಿಗೆ ಬದುಕಿಗೊಂದು ದಾರಿ ಮಾಡಿಕೊಟ್ಟ ಉಮಾಬಾಯಿಯವರು ಉತ್ತರ ಕರ್ನಾಟಕದ ಗ್ರಾಮಾಂತರ ಪ್ರದೇಶಗಳಲ್ಲಿ ಮನೆಮಾತಾಗಿದ್ದರು. ಆದರೆ ನನಗೆ ಅವರ ಮೊದಲ ಭೇಟಿ ಘಟಿಸಿದ್ದು, ಆಕಾಶವಾಣಿಯ ಕಾರ್ಯಕ್ರಮದಿಂದಾಗಿ. ಕ್ರಮೇಣ ಅವರನ್ನು ಹತ್ತಿರದಿಂದ ಕಂಡು ಅವರ ಬದುಕಿನ, ಜೀವನವಿಡೀ ಸ್ವಾತಂತ್ರ್ಯ ಹೋರಾಟ ಹಾಗೂ ಸಾಮಾಜಿಕಸೇವೆಯಲ್ಲಿ ಕಳೆದ ಹಿರಿಯ ಚೇತನವೊಂದರ ಪರಿಚಯವನ್ನು ಹಂತಹಂತವಾಗಿ ಪಡೆಯುವಂತೆ ಆಯಿತು.

ಉಮಾಬಾಯಿಯವರು ಹುಟ್ಟಿದ್ದು ಮಂಗಳೂರಿನಲ್ಲಿ ೨೫-೩-೧೮೯೨ ರಂದು. ಗೋಳಿಕೇರಿ ಕೃಷ್ಣರಾವ ಹಾಗೂ ತುಂಗಾಬಾಯಿ ಅವರ ಏಕೈಕ ಪುತ್ರಿ ಭವಾನಿಯಾಗಿ. ಅವರಿಗೆ ಇನ್ನೂ ನಾಲ್ವರು ಸೋದರರಿದ್ದರು. ಪ್ರಾಥಮಿಕ ಶಿಕ್ಷಣ ಕನ್ನಡದಲ್ಲಿ ಜರುಗಿದರೂ ಬಾಲ್ಯದಲ್ಲಿಯೇ ತಾಯ್ತಂದೆಗಳು ಮುಂಬೈಗೆ ಹೋಗಿ ನೆಲೆಸಿದ್ದರಿಂದ ಮುಂದಿನ ಶಿಕ್ಷಣ ಮರಾಠಿಯಲ್ಲಿ ಸಾಗಿತು. ಕೊಂಕಣಿ ತಾಯ್ನುಡಿ. ಕನ್ನಡ, ಮರಾಠಿಗಳ ಜೊತೆಗೆ ಗುಜರಾಥಿ, ಹಿಂದಿ, ಇಂಗ್ಲಿಷ್ ಭಾಷೆಗಳನ್ನೂ ರೂಢಿಸಿಕೊಂಡರು. ಅಂದಿನ ಪದ್ಧತಿಯಂತೆ ೧೯೦೫ ರಲ್ಲೆ ಕುಂದಾಪುರ ಸಂಜೀವರಾಯರೊಂದಿಗೆ ವಿವಾಹ ಜರುಗಿತು. ಅವರ ಜೀವನಕ್ಕೆ ಹೊಸ ತಿರುವು ಕೊಟ್ಟಿತು.

ಮಾವ ಕುಂದಾಪುರ ಆನಂದರಾಯರು, ದಕ್ಷಿಣ ಕನ್ನಡ ಜಿಲ್ಲೆಯಿಂದ ಮುಂಬೈಗೆ ಹೋದ ಮೊದಲ ವಲಸಿಗರಲ್ಲಿ ಪ್ರಮುಖರಾಗಿದ್ದರು. ಸರ್ ನಾರಾಯಣ ಚಂದಾವರಕರರಂತೆ ಸುಧಾರಣಾಪ್ರಿಯರು. ತೇಲಂಗ, ರಾನಡೆ,

ಕರ್ವೆಯವರಂಥ ಸಾಮಾಜಿಕ ಕಾರ್ಯಕರ್ತರ ನಿಕಟವರ್ತಿಗಳಾಗಿದ್ದರು. ಮಗು ಸಂಜೀವನು ಎರಡು ವರ್ಷದವನಿದ್ದಾಗ ತಾಯಿಯನ್ನು ಕಳೆದುಕೊಂಡಿದ್ದ. ಸೊಸೆಯಾಗಿ ಬಂದ ಉಮಾಬಾಯಿಯ ಕಿವಿಗೆ ಬೀಳುತ್ತಿದ್ದುದು ಆಗಷ್ಟೇ ಪ್ರಾರಂಭವಾಗಿದ್ದ ರಾಷ್ಟ್ರೀಯ ಚಳುವಳಿ. ಸಾಮಾಜಿಕ ಸುಧಾರಣಾ ಆಂದೋಲನದ ನೂತನ ವಿಚಾರಗಳು. ಮಾವ ಸ್ತ್ರೀಶಿಕ್ಷಣ ಪ್ರಸಾರಕ್ಕಾಗಿ ಸಕ್ರಿಯವಾಗಿ ತೊಡಗಿಕೊಂಡಿದ್ದರು. ಅವರ ಹಾಗೂ ಪತಿಯ ಪ್ರೋತ್ಸಾಹದಿಂದ ಉಮಾಬಾಯಿ, ಗೃಹಸ್ಥಿಯ ಸಂಪೂರ್ಣ ಹೊಣೆ ಇದ್ದಾಗ್ಯೂ ಶಿಕ್ಷಣ ಮುಂದುವರಿಸಿ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆ ಪಾಸುಮಾಡಿದರು. ಮುಂಬೈ ಗಾಂವ್ ದೇವಿ ಮಹಿಳಾಸಮಾಜದ ಗೌರವ ಕಾರ್ಯದರ್ಶಿ ಆಗಿ ಮಹಿಳೆಯರಿಗೆ ಶಿಕ್ಷಣ ನೀಡುವಲ್ಲಿ ಮಾವನಿಗೆ ನೆರವಾದರು.

೧೯೨೦ ನೇ ವರ್ಷ ಉಮಾಬಾಯಿಯವರ ಜೀವನಕ್ಕೆ ಹೊಸ ಆಯಾಮ ಕಲ್ಪಿಸಿತು. ಅತ್ಯಂತ ಜನಪ್ರಿಯ ನಾಯಕರಾಗಿದ್ದ ಲೋಕಮಾನ್ಯ ತಿಲಕ್ ಅವರ ಸ್ಮಶಾನಯಾತ್ರೆಯ ಅಭೂತಪೂರ್ವ ಪ್ರಸಂಗವನ್ನು ಕಣ್ಣಾರೆ ಕಂಡರು. ಕಾಂಗ್ರೆಸ್ಸಿಗರ ಸಂಘಟನೆ, ಸುಮಾರು ಐದುಲಕ್ಷ ಜನ ಸೇರಿದಾಗಲೂ ಶಾಂತಿಪೂರ್ವಕವಾಗಿ ಅಂತಿಮಯಾತ್ರೆ ಸಾಗುವಂತೆ ನೋಡಿಕೊಂಡದ್ದು ಅವರ ಮನಸ್ಸಿನ ಮೇಲೆ ಹೆಚ್ಚಿನ ಪರಿಣಾಮ ಬೀರಿತು. ಸ್ವಾತಂತ್ರ್ಯ ಚಳುವಳಿಯಲ್ಲಿ ನೇರ ಪಾಲುಗೊಳ್ಳುವಂತೆ ಪ್ರೇರೇಪಿಸಿತು. ಅದಾಗಲೇ ಪತಿಯೊಂದಿಗೆ ಸ್ವದೇಶಿಯ, ಖಾದಿಯ ಪ್ರಚಾರ ಪ್ರಾರಂಭಿಸಿದ್ದರಲ್ಲದೇ ಆ ಕುರಿತಾದ ನಾಟಕ ಬರೆದು ಆಡಿಸಿಯೂ ಇದ್ದರು. ಆಮರಣ ಖಾದಿತೊಡುವ ಸಂಕಲ್ಪ ಕೈಕೊಂಡರು. ೧೯೨೧ ರ ಕಾಂಗ್ರೆಸ್ ಅಧಿವೇಶನದ ಹೊತ್ತಿಗೆ ಒಂದು ಲಕ್ಷ ಕಾಂಗ್ರೆಸ್ ಸದಸ್ಯರನ್ನು ನೋಂದಾಯಿಸುವ ನಿರ್ಧಾರವನ್ನು ಕೈಕೊಳ್ಳಲಾಗಿತ್ತು. ಮುಂಬೈಯಲ್ಲಿ ಉಮಾಬಾಯಿ ಮನೆ ಮನೆಗೂ ಹೋಗಿ ರಾಷ್ಟ್ರೀಯ ಚಳುವಳಿಯಲ್ಲಿ ಸಾಮಾನ್ಯರೂ ಪಾಲುಗೊಳ್ಳುವಂತೆ ಹುರಿದುಂಬಿಸಿದರು. ನೋಂದಾವಣೆಯ ಕಾರ್ಯಕ್ರಮವನ್ನು ಭರದಿಂದ ಕೈಕೊಂಡರು.

ಆನಂದರಾಯರು ಮುಂಬೈ ಹೈಕೋರ್ಟಿನಲ್ಲಿ ಕನ್ನಡಭಾಷೆಯ ಓರಿಯಂಟರ್ ಟ್ರಾನ್ಸಲೇಟರ್ ಎಂದು ಕೆಲಸಮಾಡಿ ನಿವೃತ್ತರಾಗಿದ್ದರು.

ಈಗ ಹುಬ್ಬಳ್ಳಿಗೆ ಬಂದು ಕರ್ನಾಟಕ ಪ್ರೆಸ್ ಪ್ರಾರಂಭಿಸಿದರು. ರಾಜಕೀಯ, ಸಾಮಾಜಿಕ ಚಟುವಟಿಕೆಗಳಿಗೆ ಹೆಚ್ಚಿನ ಗಮನವಿತ್ತರು.

ಆದರೆ ವಿಕಟವಿಧಿ ಕಾದಿತ್ತು. ಸಂಜೀವರಾಯರು ಕ್ಷಯರೋಗಕ್ಕೆ ತುತ್ತಾಗಿ ಮುಂಬೈಯಲ್ಲಿ ಅಸುನೀಗಿದರು. ೭೩ ವರ್ಷದ ವೃದ್ಧರಾದ ಆನಂದರಾಯರು ತಮ್ಮ ದುಃಖ ನುಂಗಿ, ಸೊಸೆಯ ಸಾಂತ್ವನಕ್ಕಾಗಿ ಸರ್ವಪ್ರಯತ್ನ ನಡೆಸಿದರು. ಅವಳನ್ನು ಸಾಮಾಜಿಕ ಕಾರ್ಯಕರ್ತೆಯನ್ನಾಗಿಸಿದರು. ತಮ್ಮೊಂದಿಗೆ ಹುಬ್ಬಳ್ಳಿಗೆ ಕರೆತಂದರು. ಅಲ್ಲಿಂದ ಕೊನೆಯುಸಿರಿನವರೆಗೆ ಹುಬ್ಬಳ್ಳಿ ಈ ವೀರವನಿತೆಯ ನೆಲೆವೀಡಾಯಿತು.

ಹಿಂದುಸ್ತಾನಿ ಸೇವಾದಲದ ಸಂಸ್ಥಾಪಕರು, ಪ್ರಸಿದ್ಧ ವೈದ್ಯ ಹಾಗೂ ಸಮಾಜಸೇವಕರೆಂದು ಖ್ಯಾತಿ ಪಡೆದ ಡಾ. ನಾ. ಸು. ಹರ್ಡೀಕರರು, ಅಮೇರಿಕೆಯಿಂದ ೧೯೨೧ ರಲ್ಲಿ ಮರಳಿ ಬಂದಿದ್ದರು. ಅಮೇರಿಕೆಗೆ ಹೊರಟಾಗಿನ ಭಾರತಕ್ಕಿಂತ, ಮರಳಿದಾಗಿನದು ಅತ್ಯಂತ ಭಿನ್ನವಾಗಿತ್ತು. ದೇಶದುದ್ದಕ್ಕೂ ಬ್ರಿಟಿಶರ ಆಳುವಿಕೆಯನ್ನು ವಿರೋಧಿಸುವ ಆಂದೋಲನ ಪ್ರಾರಂಭವಾಗಿತ್ತು. ಆದರೆ ಈ ಶಿಸ್ತಿನ ಸಿಪಾಯಿಗೆ ಸಂಘಟನೆಯ ಹಾಗೂ ಶಿಸ್ತಿನ ಅಭಾವ ಬಲುದೊಡ್ಡದಾಗಿ ಗೋಚರಿಸಿತ್ತು. ರಾಷ್ಟ್ರೀಯ ಜಾಗೃತಿಗೆ ಇವು ಅತೀ ಬಾಧಕಗಳಾಗಿದ್ದನ್ನು ಮನಗಂಡ ಅವರು ಸಂಘಟಿತ ಸೇವೆಗೆ ಪ್ರಾಮುಖ್ಯತೆ ಕೊಟ್ಟರು. ಮಹಿಳೆಯರು, ಯುವಕರು, ಇತರರು ಎಂದು ಪ್ರಾದೇಶಿಕ ಆವಶ್ಯಕತೆಗಳಿಗನುಸಾರವಾಗಿ "ಸೇವಾದಲ"ದ ಸಂಘಟನೆ ಪ್ರಾರಂಭಿಸಿದರು. ಹುಬ್ಬಳ್ಳಿಯಲ್ಲಿ ಭಗಿನಿಮಂಡಳ ರೂಪಗೊಂಡಿತು. (೧೯೨೩) ತಿಲಕ್ ಕನ್ಯಾಶಾಲೆಯನ್ನು ತೆರೆಯಲಾಯಿತು. ಇವೆರಡರ ಉಸ್ತುವಾರಿಯನ್ನು ಉಮಾಬಾಯಿ ವಹಿಸಿಕೊಂಡರು.

ಎಲ್ಲ ರಾಷ್ಟ್ರೀಯ ಚಟುವಟಿಕೆಗಳಿಗೆ ಕರ್ನಾಟಕ ಪ್ರೆಸ್‌ದ ಆವರಣವೇ ಕೇಂದ್ರವಾಗಿತ್ತು. ಹಿರಿಯ ಸ್ವಾತಂತ್ರ್ಯಯೋಧ (ದಿ) ಸರದಾರ್ ಕೆ. ಎ. ವೆಂಕಟರಾಮಯ್ಯನವರ ಮಾತಿನಲ್ಲಿ ಹೇಳುವದಾದರೆ, "ಕರ್ನಾಟಕ ಪ್ರೆಸ್, ಕಾಂಗ್ರೆಸ್ ಛತ್ರವಾಗಿತ್ತು. ಬಂದವರಿಗೆ ಊಟ ಅಲ್ಲಿ, ಭಗಿನೀ ಮಂಡಲ ಅಲ್ಲಿ, ರಾಷ್ಟ್ರೀಯ ಕನ್ಯಾಶಾಲೆ ಅಲ್ಲಿ, ಸೇವಾದಳದ ಸೈನಿಕರ ಶಿಕ್ಷಣ ಅಲ್ಲಿ, ಸ್ಟಡಿ ಸರ್ಕಲ್ ಅಲ್ಲಿ, ಚರಖಾ ಜಯಂತಿ ಅಲ್ಲಿ, ಸೂತ್ರಯಜ್ಞ

ಅಲ್ಲಿ. ಕಾಂಗ್ರೆಸ್ ಕಮಿಟಿ ಸಭೆಗಳು ಅಲ್ಲಿ, ಸಾರ್ವಜನಿಕ ಸಭೆಗಳು ಅಲ್ಲಿ. ೧೯೩೧ ರಲ್ಲಿ ಪಂಡಿತ ಜವಾಹರಲಾಲರಿಂದ ಉದ್ಘಾಟಿಸಲ್ಪಟ್ಟ ಅಖಿಲ ಭಾರತ ಔದ್ಯೋಗಿಕ ಪ್ರದರ್ಶನವೂ ಅಲ್ಲೇ, ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ಸು ಹುಟ್ಟಿದ್ದು. ಬೆಳೆದದ್ದು, ಕಳೆಯೇರಿದ್ದು ಕರ್ನಾಟಕ ಪ್ರೆಸ್ಸಿನಲ್ಲೇ! ......ಕರ್ನಾಟಕ ಪ್ರೆಸ್ಸಿನ ಒಡತಿ ಶ್ರೀಮತಿ ಉಮಾಬಾಯಿ ಕುಂದಾಪುರ ಇವರ ಮತ್ತು ವೃದ್ಧರಾದ ಮಾವಂದಿರ ಪ್ರತಿದಿನದ ದರ್ಶನ, ನವರಾಷ್ಟ್ರದ ಸೇವಕರಿಗೆ ಸ್ಫೂರ್ತಿಯಾಗಿತ್ತು."

೧೯೨೪ ರಲ್ಲಿ ಬೆಳಗಾಂವಿಯಲ್ಲಿ ಸೇರಲಿದ್ದ ಕಾಂಗ್ರೆಸ್ ಅಧಿವೇಶನ, ಕರ್ನಾಟಕದ ಕಾರ್ಯಕರ್ತರಿಗೆಲ್ಲ ದೊಡ್ಡ ಆಹ್ವಾನವಾಗಿತ್ತು. ಸ್ವತಃ ಮಹಾತ್ಮಾ ಗಾಂಧಿ ಅಧ್ಯಕ್ಷರಾಗಲಿದ್ದರು! ಡಾ. ಹರ್ಡೀಕರರು ಟೊಂಕ ಕಟ್ಟಿದರು. ಸೇವಾದಲದ ದೊಡ್ಡ ಪಡೆಯೇ ತಯಾರಾಯಿತು. ಮಹಿಳಾ ಘಟಕಕ್ಕೆ ಉಮಾಬಾಯಿಯವರನ್ನು ಮುಖ್ಯಸ್ಥೆಯಾಗಿಸಿದರು. ಸ್ವಯಂ ಸೇವಿಕೆಯರನ್ನು ಕಲೆಹಾಕುವದು, ತರಬೇತಿ ನೀಡುವದು, ಮಹತ್ವದ ಕೆಲಸವಾಗಿತ್ತು. ನಾಡಿನಲ್ಲೆಲ್ಲ ಸಂಚರಿಸಿ ಉಮಾಬಾಯಿ ೧೫೦ ಸ್ವಯಂ ಸೇವಿಕೆಯರನ್ನು ಗೊತ್ತುಪಡಿಸಿದರು. ಈ ಸಂದರ್ಭದಲ್ಲಿ ಅವರನ್ನು ಮೊದಲಬಾರಿ ಕಂಡ ಇನ್ನೊಂದು ಹಿರಿಯಚೇತನ, ಕಮಲಾದೇವಿ ಚಟ್ಟೋಪಾಧ್ಯಾಯರು, ಉಮಾಬಾಯಿಯವರನ್ನು ಕುರಿತ ಆತ್ಮೀಯ ನೆನಪುಗಳನ್ನು ಹೀಗೆ ಹೇಳಿಕೊಂಡಿದ್ದಾರೆ. "೧೯೨೩ ರ ಶರದ್ ಋತುವಿನ ಪ್ರಾರಂಭ. ನಾನಾಗ ಕಾಯಿಲೆಯಿಂದ ಚೇತರಿಸಿಕೊಳ್ಳುತ್ತಾ ಇದ್ದೆ. ಮನಸ್ಸಿಗೆ ಮಂಕು, ದೇಹದಲ್ಲಿ ನಿರುತ್ಸಾಹ! ಹುಬ್ಬಳ್ಳಿಯಿಂದ ನನ್ನನ್ನು ಭೇಟಿಮಾಡಲು ಮಹಿಳೆಯೊಬ್ಬರು ಬಂದಿದ್ದಾರೆಂದು ತಿಳಿಯಿತು. ಮಧ್ಯಮಗಾತ್ರದ ಲಕ್ಷಣವಾದ ಮುಖದ, ಹೊಳಪುಗಣ್ಣಿನ, ನಗುಮುಖದ ಈ ಮಹಿಳೆ ಉಮಾಬಾಯಿ ಕುಂದಾಪುರ ಎಂದು ಪರಿಚಯಿಸಲ್ಪಟ್ಟರು. ಬೆಳಗಾಂವಿಯ ಕಾಂಗ್ರೆಸ್ ಮಹಾಧಿವೇಶನದಲ್ಲಿ ದುಡಿಯಲು ಸ್ವಯಂಸೇವಿಕೆಯರನ್ನು ಹೊಂದಿಸಲು ಬಂದಿದ್ದರು. ಈ ಮೊದಲ ಭೇಟಿ, ನನ್ನ ಮುಂದಿನ ಜೀವನದಲ್ಲಿ ಬಲು ಹೆಚ್ಚಿನ ಪ್ರಭಾವ ಬೀರುವ ಘಟನೆಯಾಗಿ ಪರಿಣಮಿಸಿತು. ನಾನು ಆ ಕೂಡಲೇ ಸ್ವಯಂಸೇವಿಕೆಯಾಗುವದಾಗಿ ಘೋಷಿಸಿದೆ. ಉಮಾಬಾಯಿಯವರ ಮುಖದಲ್ಲಿ ಕಿರುನಗೆ ಮೂಡಿತು." ಇದು ಅತ್ಯಂತ

ಶ್ರಮದಾಯಕ ಕೆಲಸ! ಎಲ್ಲ ಬಗೆಯ ಅನಾನುಕೂಲ, ಅಡ್ಡಿ-ಆತಂಕಗಳನ್ನು ಎದುರಿಸಬೇಕಾಗುತ್ತದೆ. ಶೌಚ, ಸ್ನಾನ, ಊಟ ಪ್ರತಿಯೊಂದೂ ಸಮಸ್ಯೆ! ಬಯಲಿನಲ್ಲಿ ಶಿಬಿರಗಳಲ್ಲಿ ವಾಸಮಾಡಬೇಕಾಗುತ್ತದೆ. ನಿನಗೆ ಇದರ ಅಭ್ಯಾಸವಿಲ್ಲ! ಯೋಚಿಸಿ ನೋಡು!, ಕೆಲ ಕಾಲದಿಂದ ಇಂಥ ಶ್ರಮದ ಜೀವನವನ್ನು ರೂಢಿಸಿಕೊಂಡ ಮಹಿಳೆ ಉದ್ಗರಿಸಿದ್ದರು.

ಕಮಲಾದೇವಿ ವಿಚಲಿತರಾಗಲಿಲ್ಲ. ವಾಲಂಟಿಯರ್ ಎಂದು ಸೇವಾದಲಕ್ಕೆ ಭರ್ತಿ ಆದರು. ಅಂದಿನಿಂದ ತಾನು ಉಮಾಬಾಯಿಯ ಶಿಬಿರದ ಅನುಯಾಯಿ **(Camp-follower)** ಆದೆ! ಎಂದು ಅಭಿಮಾನದಿಂದ ನೆನೆಸಿಕೊಂಡಿದ್ದಾರೆ. "ಅವರದು ಅವಿರತವಾಗಿ ದುಡಿಯುವ ವಿರಳ ಜೀವ. ಅದಮ್ಯ ಉತ್ಸಾಹದ ಪ್ರತೀಕ. ಹೊಸ ಹೊಸ ಸಂಗತಿಗಳನ್ನು ತಿಳಿದುಕೊಳ್ಳುವ ಆಸಕ್ತಿಯೊಂದಿಗೆ ಅವಕ್ಕೆ ಕ್ಷೇತ್ರಕಾರ್ಯದಲ್ಲಿ ಪ್ರಾಯೋಗಿಕ ರೂಪಕೊಡಲು ನಿರಂತರ ಹೆಣಗುತ್ತಾರೆ." ಎಂದ ಕಮಲಾದೇವಿ, ಅರವತ್ತರ ವಯಸ್ಸಿನಲ್ಲಿ ಬದರೀನಾಥಯಾತ್ರೆಯನ್ನು ಕಾಲ್ನಡಿಗೆಯಲ್ಲಿ ಕೈಕೊಂಡ ಉಮಾಬಾಯಿಯವರ ಸಾಹಸವನ್ನು ಶ್ಲಾಘಿಸಿದ್ದಾರೆ.

ಬೆಳಗಾಂವಿಯ ಮಹಾಧಿವೇಶನ ಮಹಿಳಾ ಸ್ವಯಂಸೇವೆಯ ಸಂಘಟನೆಯಲ್ಲಿ ಮೈಲಿಗಲ್ಲಾಯಿತು. ಕೇವಲ ಗೃಹಿಣಿಯಾಗಿದ್ದವರು, ಮುಂಡನವಿದ್ದ ವಿಧವೆಯರು. ತಂಡ ತಂಡಗಳಲ್ಲಿ ಹೊರಬಂದು, ಸ್ವಚ್ಛತೆ, ಅಡಿಗೆ, ಬಡಿಸುವದು, ಸಾಮಾನು ಒದಗಿಸುವದು, ನೀರು ಎತ್ತುವದು, ಕಸಗೂಡಿಸುವದು, ಎಂದು ಭೇದಭಾವವಿಲ್ಲದೇ ಗಂಡಸರ ಹೆಗಲಿಗೆ ಹೆಗಲುಕೊಟ್ಟು ದುಡಿದ ದೃಶ್ಯ ಅಭೂತಪೂರ್ವ ಘಟನೆಯಾಗಿತ್ತು. ಮುಂಚೂಣಿಯಲ್ಲಿದ್ದ ಉಮಾಬಾಯಿ, ಸದ್ದುಗದ್ದಲವಿಲ್ಲದೇ ಯಾವತ್ತೂ ಚಟುವಟಿಕೆಗಳ ಮೇಲ್ವಿಚಾರಣೆಯನ್ನು ವಹಿಸಿದ್ದರು.

೧೯೩೦ ನೇ ವರ್ಷ, ಸ್ವಾತಂತ್ರ್ಯ ಹೋರಾಟಕ್ಕೆ ಕಾವೇರಿತ್ತು. ಉಮಾಬಾಯಿ ಪ್ರಾಂತೀಯ ಡಿಕ್ಟೇಟರ್ ಎಂದು ನೇಮಿಸಲ್ಪಟ್ಟರು. ಚಳುವಳಿಯ ಮುಂಚೂಣಿಯಲ್ಲಿದ್ದುದರಿಂದ ಬಂಧನದ ವಾರಂಟ್ ಯಾವಕ್ಷಣಕ್ಕೂ ಹೊರಡಬಹುದಾಗಿತ್ತು. ಜೀವನದಲ್ಲಿ ಏಕಮಾತ್ರ ದೊಡ್ಡ ಆಧಾರವಾಗಿದ್ದು ಪ್ರೋತ್ಸಾಹಿಸಿದ್ದ, ಮಾವ ಆನಂದರಾಯರು ರುಗ್ಣಶಯ್ಯೆಯಲ್ಲಿದ್ದರು. ಆಪ್ತೇಷ್ಟರು ಚಳುವಳಿಯಿಂದ ಹಿಂದೆಗೆಯುವಂತೆ

ಕೇಳಿಕೊಂಡರೂ ಉಮಾಬಾಯಿ ವಿಚಲಿತರಾಗಲಿಲ್ಲ. ನಿರೀಕ್ಷಿಸಿದಂತೆ ಬಂಧನವಾಯಿತು. ನಾಲ್ಕುತಿಂಗಳು ಜೈಲು, ಜೊತೆಗೆ ನಾಲ್ಕುನೂರು ರೂಪಾಯಿ ದಂಡಗಳು ಶಿಕ್ಷೆಯ ರೂಪದಲ್ಲಿ ಒದಗಿದ್ದವು. ಬಿಡುಗಡೆಗೆ ಕೇವಲ ಎಂಟು ದಿನ ಮೊದಲು ಆನಂದರಾಯರು ನಿಧನ ಹೊಂದಿದರು. ಕೊನೆಗಳಿಗೆಯಲ್ಲಿ ಸೊಸೆಯನ್ನು ನೆನಪಿಸಿಕೊಳ್ಳುತ್ತ, ಕರೆಯುತ್ತ ಇದ್ದರಂತೆ ಆ ತನಕ ಅರೆಪ್ರಜ್ಞಾವಸ್ಥೆಯಲ್ಲಿದ್ದವರು. ಈ ವಿಚಾರ ತಡವಾಗಿ ಉಮಾಬಾಯಿಗೆ ತಿಳಿದಾಗ ತುಂಬ ದುಃಖಿಸಿದರು. ಆಗ ಯರವಾಡಾ ಜೈಲಿನಲ್ಲೇ ಇದ್ದ ಸರೋಜಿನಿ ನಾಯ್ಡು, ಅವರನ್ನು ತುಂಬ ಸಂತೈಸಿದ್ದೇ ಅಲ್ಲದೇ, "ಇನ್ನು ಮುಂದೆ ಬಂಧನ, ಜೈಲುವಾಸ ಬೇಡ. ನಿನ್ನಂಥವರು ಹೊರಗಿದ್ದುಕೊಂಡೇ ಮಾಡಬಹುದಾದ ಕೆಲಸಗಳು ಬೇಕಾದಷ್ಟಿವೆ!" ಎಂದು ಕಿವಿಮಾತು ಹೇಳಿದರು. ಜೈಲುವಾಸ ಮುಗಿಸಿ ಉಮಾಬಾಯಿ ಹುಬ್ಬಳ್ಳಿಗೆ ಮರಳಿದರು.

ಅವರನ್ನು ಕಾದಿದ್ದ ದೃಶ್ಯ ಎಂಥವರನ್ನೂ ಕಂಗೆಡಿಸುವಂಥದಾಗಿತ್ತು. ಕರ್ನಾಟಕ ಪ್ರೆಸ್ ಆವಾರದಲ್ಲಿದ್ದ ನೂಲು, ನೇಯ್ಗೆಯ, ಇತರ ಸ್ವದೇಶಿ ಸಾಮಾನು ತಯಾರಿಸುತ್ತಿದ್ದ ಕಲಾಶಾಲೆಗಳು, ತಿಲಕ್ ಕನ್ಯಾಶಾಲೆ, ಎಲ್ಲವೂ ಕಾನೂನು ಬಾಹಿರವೆಂದು ಘೋಷಿಸಿ, ಜಪ್ತ ಮಾಡಲಾಗಿತ್ತು. ಕುಂದಾಪುರ ಕುಟುಂಬದ ಇದ್ದು, ಬಿದ್ದ ಆಸ್ತಿಗೂ ಮುಟ್ಟುಗೋಲು. ಸಂಸಾರದಲ್ಲಿದ್ದೂ ಸನ್ಯಾಸಿನಿಯಂತಿದ್ದ ಉಮಾಬಾಯಿಗೆ ಆಗ ಕೇಳುತ್ತಿದ್ದುದು ಸ್ವಾತಂತ್ರ್ಯದೇವಿಯ ಕರೆಯೊಂದೇ! ಈಗ ಪರೋಕ್ಷವಾಗಿ ಗ್ರಾಮೀಣ ಹೆಂಗಸರು ಬಲುದೊಡ್ಡ ಸಂಖ್ಯೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಬಂಧಿತರಾಗಿದ್ದರು. ಶಿರ್ಸಿ, ಸಿದ್ದಾಪುರ, ಅಂಕೋಲಾ, ಹಿರೇಕೆರೂರದಂತಹ ಇನ್ನೂ ಚಿಕ್ಕ ಊರುಗಳಿಂದ ಬಂಧಿತರಾಗಿ ಬಂದವರನ್ನು ವಿಚಾರಣೆ ಇದ್ದೊ, ಇಲ್ಲದೆಯೋ ಹೊತ್ತು ಗೊತ್ತಿಲ್ಲದೇ ಬಿಡುಗಡೆ ಮಾಡಿಬಿಡುತ್ತಿದ್ದರು. ಉಮಾದೇವಿಯವರಿಗೆ ಚಿರಪರಿಚಿತ ಟಾಂಗಾವಾಲಾರು ಇಂಥ ಅಸಹಾಯಕ ಮಹಿಳೆಯರನ್ನು, ಹುಬ್ಬಳ್ಳಿಗೆ ಬಂದವರನ್ನು, ಕರೆತಂದು ಉಮಾಬಾಯಿಯವರ ಬಳಿ ಬಿಡುತ್ತಿದ್ದರು. ಅಲ್ಲಿಂದ ಸುರಕ್ಷಿತವಾಗಿ ಅವರವರ ಊರುಗಳಿಗೆ ತಲುಪಿಸುವ ಹೊಣೆಯೂ ಸೇರಿಕೊಂಡಿತು. ಇನ್ನು ಭೂಗತ ನಾಯಕರಿಗೆಲ್ಲ ಕುಂದಾಪುರರ ಮನೆ,

ಕಾಯಂ ಆಶ್ರಯ. ಅಪರಾತ್ರಿ ಬಂದು ಬಿಡುತ್ತಿದ್ದರು. ಅವರ ಊಟೋಪಚಾರ, ಮನೆಯ ಮುಕ್ಕಾಮು, ಮುಂದಿನ ಅಡಗುತಾಣಕ್ಕೆ ಹೋಗಲು ಧನಸಹಾಯ, ಒದಗಿಸುವ ಜವಾಬ್ದಾರಿ ಉಮಾಬಾಯಿಯವರದೇ ಆಗಿತ್ತು.

ಮುಂದೆ ಚಳುವಳಿಯ ಜೋರು ಕಡಿಮೆ ಆದರೂ ವಿಧಾಯಕ ಕಾರ್ಯಕ್ರಮಗಳು ನಡೆದೇ ಇದ್ದವು. ಕರ್ನಾಟಕದ ಸಣ್ಣ ಚಿಕ್ಕ ನಗರಗಳಲ್ಲಿ ಭಗಿನಿಮಂಡಲಗಳು. ನೂಲು-ನೇಯ್ಗೆಯ ಕೆಲಸ. ಟೇಲರಿಂಗ್, ಸ್ತ್ರೀಶಿಕ್ಷಣ, ಹಿಂದಿವರ್ಗಗಳು, ರಾಷ್ಟ್ರೀಯ ಜಾಗ್ರತಿಯ ಕಾರ್ಯಕ್ರಮ ಮುಂತಾದವುಗಳನ್ನು ಉಮಾಬಾಯಿಯವರ ಮಾರ್ಗದರ್ಶನದಲ್ಲಿ ಕೈಕೊಂಡು ಮುಂದುವರಿಸಿಯೇ ಇದ್ದವು.

ಬಿಹಾರದ ಭೂಕಂಪ (೧೯೩೪)ದ ಸಮಯದಲ್ಲಿ ಕರ್ನಾಟಕದಿಂದ ಹೊರಟ ಮಹಿಳಾ ಸೇವಾದಲದ ಘಟಕದ ಮುಖ್ಯಸ್ಥೆಯಾಗಿ ಅಲ್ಲಿ ಕೆಲಸ ಮಾಡಿ ಉಮಾಬಾಯಿ ರಾಷ್ಟ್ರಮಟ್ಟದ ಧುರೀಣರಿಗೆಲ್ಲ ಪರಿಚಿತರಾದರು. ಈ ದುರ್ಘಟನೆಯ ನಿಮಿತ್ತ ಮೂಲೆ ಮೂಲೆಯಿಂದ ಜನಸೇರಿದ್ದರು. ಬಂಧನದಲ್ಲಿದ್ದ ಬಿಹಾರದ ಮುಖಂಡ ಬಾಬು ರಾಜೇಂದ್ರ ಪ್ರಸಾದರನ್ನು ಇದಕ್ಕಾಗಿಯೇ ಬ್ರಿಟಿಶ ಸರಕಾರ ಬಿಡುಗಡೆಮಾಡಿತ್ತು. ಅವರ ಪ್ರಧಾನ ಧುರೀಣತ್ವದಲ್ಲಿ ಮಹಿಳಾ ತಂಡಗಳನ್ನು ಹೊಂದಿಸಿ ಉಮಾಬಾಯಿ, ಮೊಂಗೀರ, ಮೋತಿಹಾರಿ, ಪಾಟ್ನಾ, ಸೀತಾಮಾರಿ ಮೊದಲಾದ ಭೂಕಂಪ ವಿಧ್ವಸ್ಥ ಪ್ರದೇಶಗಳ ಶಿಬಿರದಲ್ಲಿ ಅಹೋರಾತ್ರಿ ದುಡಿದರು. ಹಣ ಇನ್ನಿತರ ಸಹಾಯ ಸಾಕಷ್ಟು ಒದಗಿದರೂ ಸ್ವಯಂಸೇವಿಕೆಯರ ತೀವ್ರ ಕೊರತೆ ಇತ್ತು. ಮೊದಲೇ ಬಿಹಾರ ತೀರ ಹಿಂದುಳಿದ ರಾಜ್ಯ. ಎಲ್ಲವನ್ನು ಕಳೆದುಕೊಂಡು ನಿರ್ಗತಿಕರಾದ ಸ್ತ್ರೀಯರೂ 'ಪರ್ದಾ' ಬಿಟ್ಟು ಹೊರಬರುತ್ತಿರಲಿಲ್ಲ! ಅಪರಿಚಿತ ನಾಡು, ಹಾಳು ಬಿದ್ದ ಊರು-ಹಳ್ಳಿಗಳು, ಸಂತ್ರಸ್ತರಿಂದ ತುಂಬಿದ ಶಿಬಿರಗಳಲ್ಲಿ ಕರ್ನಾಟಕದ ತಂಡ, ಅಹೋರಾತ್ರಿ ದುಡಿಯುತ್ತಿತ್ತು.

ನಸುಕಿನಲ್ಲಿ ಉಮಾಬಾಯಿಯವರು. ಇತರ ವಾಲಂಟಿಯರ್-ಗಳೊಂದಿಗೆ ಬೇರೆ ಬೇರೆ ಊರು-ಗ್ರಾಮಗಳಿಗೆ ತೆರಳುವರು, ಮನೆ ಮನೆಗೆ ಹೋಗಿ ಸಂತ್ರಸ್ತರ ಮಾಹಿತಿಯನ್ನು ಕಲೆ ಹಾಕುವರು. ನಷ್ಟಕ್ಕನುಸಾರವಾಗಿ

ಪರಿಹಾರದ ಮೊತ್ತ ನಿರ್ಧರಿಸುವದು ಮಹಾಪ್ರಯಾಸದ ಕೆಲಸವಾಗಿತ್ತು. ಈಗಾಗಲೇ ಡಾ. ಹರ್ಡೀಕರರ ನೇತೃತ್ವದಲ್ಲಿ ಹಲವೆಡೆ ಸೇವೆ ಸಲ್ಲಿಸಿದ ಉಮಾಬಾಯಿಗೆ ಮಹಿಳಾ ಮುಖಂಡತ್ವ ತಂತಾನೇ ಹುಡುಕಿಕೊಂಡು ಹೋಗಿತ್ತು. ತಮ್ಮ ಅನುಭವ, ಸಹನೆ, ಮೃದುಸ್ವಭಾವಗಳಿಂದ ಭಾರತದಾದ್ಯಂತ ಸ್ವಯಂ ಸೇವಕರಲ್ಲಿ ಬಲುಬೇಗ ಜನಪ್ರಿಯರಾದರು. ಶಿಬಿರಗಳಲ್ಲಿ ಮಕ್ಕಳ ಮಹಿಳೆಯರ ಚಿಕಿತ್ಸೆ, ಶುಶ್ರೂಷೆಗಳ ಉಸ್ತುವಾರಿಯೂ ಅವರಿಗೆ ಸೇರಿತ್ತು. ಆ ಬಳಿಕವೂ ಸ್ವಯಂ ಸೇವಕರ ಶಿಬಿರಗಳಿದ್ದ ಪಾಕಶಾಲೆಗೆ ಹೋಗಿ ಇದ್ದು ಬಿದ್ದ ಪಾಕಸಾಮಗ್ರಿಗಳಿಂದಲೇ ರುಚಿಕಟ್ಟಾದ ಊಟವನ್ನು ಸಿದ್ಧಪಡಿಸಿ ದಣಿದುಬಂದವರಿಗೆ ಕೊಡಮಾಡುವ ವ್ಯವಸ್ಥೆ ನೋಡಿಕೊಳ್ಳುತ್ತಿದ್ದರಂತೆ! ಆಚಾರ್ಯ ಕೃಪಲಾನಿ ಅವರ ಪತ್ನಿ ಶ್ರೀಮತಿ ಸುಚೇತಾ ಕೃಪಲಾನಿ ಅವರ ಕಾರ್ಯತತ್ಪರತೆಯಿಂದ ಪ್ರಭಾವಿತರಾಗಿದ್ದರು.

ಗಾಂಧೀಜಿಯವರ ಸಲಹೆಯಂತೆ, ೧೯೪೨ ರ ಚಳುವಳಿಯಲ್ಲಿ ಉಮಾಬಾಯಿ ಪ್ರತ್ಯಕ್ಷ ಭಾಗವಹಿಸಲಿಲ್ಲ. ಆದರೆ ಪರೋಕ್ಷವಾಗಿ ನೆರವಾಗುವದನ್ನು ಬಿಡಲಿಲ್ಲ. ರಾತ್ರಿ ಅಪರಾತ್ರಿಗಳಲ್ಲಿ ಭೂಗತ ಕಾರ್ಯಕರ್ತರು ಅವರಲ್ಲಿ ಬರುತ್ತಿದ್ದರು. ವೇಷ ಮರೆಸಿಕೊಂಡು ಸರಿರಾತ್ರಿ ಬಂದವರಿಗೆ ಬಿಸಿಯೂಟದ ಆತಿಥ್ಯ ಒದಗುತ್ತಿತ್ತು. ಒಮ್ಮೆ ಹೀಗೆ ಬಂದ ಹಿರಿಯ ಸ್ವಾತಂತ್ರ್ಯಯೋಧ, ಲೇಖಕ, ಪ್ರಕಾಶಕ ಬುರ್ಲಿ ಬಿಂದುಮಾಧವರು ತಮ್ಮ ಹೃದಯಸ್ಪರ್ಶಿ ಅನುಭವವನ್ನು ಹೇಳಿಕೊಂಡಿದ್ದಾರೆ. ತನ್ನೊಂದಿಗೆ ಐವತ್ತು-ಅರವತ್ತು ಜನ ತಲೆಮರೆಸಿಕೊಂಡವರು ಇದ್ದಾರೆ. ಅವರೂ ಹಸಿವೆಯಿಂದ ಬಳಲಿದ್ದಾರೆ. ದಯವಿಟ್ಟು ಎಂಟುನೂರು ರೂಪಾಯಿಯಾದರೂ ಕನಿಷ್ಟ ಕೊಟ್ಟುಬಿಡಿ! ಎಂದು ಕೇಳಿಕೊಂಡರಂತೆ. ಆ ಕೊಡಲೆ ಉಮಾಬಾಯಿಯವರು ಐದುನೂರು ರೂಪಾಯಿ ಕೊಟ್ಟದ್ದೇ ಅಲ್ಲದೇ ಜೋಕೆಯಿಂದ ಕೆಲಸಮಾಡಿರಿ! ಎಂದು ಗಂಟಲು ತುಂಬಿಬಂದು ಆಶೀರ್ವದಿಸಿದರು. ಕಂಡಲ್ಲಿ ಕ್ರಾಂತಿಕಾರರನ್ನು ಗುಂಡಿಕ್ಕಿ ಕೊಲ್ಲಲು ಆಗ ಸರಕಾರಿ ಆದೇಶ ಹೊರಟಿತ್ತು. ಹೀಗಾಗಿ ಇಂಥ ಕಾರ್ಯಕರ್ತರ ಕುರಿತು ತೀವ್ರ ಕಳಕಳಿ, ಈ ತಾಯಿಕರುಳಿಗಿತ್ತು.

೧೯೪೬ ರಲ್ಲಿ ಕಸ್ತೂರಿಬಾ ಟ್ರಸ್ಟ್ ರೂಪುಗೊಂಡಾಗ ಖುದ್ದಾಗಿ ಬಾಪೂಜಿಯವರೇ ಆಯಾಪ್ರಾಂತದ ಹಿರಿಯ ಮಹಿಳಾ ಕಾರ್ಯಕರ್ತೆಯರನ್ನು

ಏಜೆಂಟ ಅಥವಾ ಸ್ಥಳೀಯ ಆಡಳಿತಗಾರ್ತಿಯರನ್ನಾಗಿ ನೇಮಿಸಿದರು. ಉಮಾಬಾಯಿಯವರು ತೀರ ಸಹಜವಾಗಿಯೇ ಕರ್ನಾಟಕಕ್ಕೆ ಏಜಂಟ್ ಎಂದು ಆಯ್ಕೆಯಾದರು. ಅಂದಿನಿಂದ ಅವರ ಸಮಾಜಸೇವೆಗೆ ಹೊಸ ಆಯಾಮಗಳು ಒದಗಿದ್ದೇ ಅಲ್ಲದೇ ಉತ್ತರ ಕರ್ನಾಟಕದ ಗ್ರಾಮಾಂತರ ಪ್ರದೇಶದ ಅಸಹಾಯಕ ಹೆಂಗಸರಿಗೆಲ್ಲ ಬದುಕಿಗೊಂದು ಆಸರೆ ಕಲ್ಪಿಸಿಕೊಡುವ ಅವಕಾಶ ಅವರಿಗೆ ದೊರಕಿತು. ನೂರಾರು ಗ್ರಾಮಸೇವಿಕೆಯರನ್ನು ಶುಶ್ರೂಷೆ, ಶಿಶು-ಸಂಗೋಪನ, ಪ್ರೌಢಶಿಕ್ಷಣಗಳಲ್ಲಿ ತರಬೇತುಗೊಳಿಸಿದರು. ಹಳ್ಳಿ ಹಳ್ಳಿಗಳಲ್ಲಿ ಗ್ರಾಮಸೇವಾಕೇಂದ್ರಗಳನ್ನು ತೆಗೆದರು. ಹುಬ್ಬಳ್ಳಿ ಬಳಿಯ ಅಮರಗೋಳವು ಇಂಥ ತರಬೇತಿಯ ಮುಖ್ಯಕೇಂದ್ರವಾಗಿತ್ತು.

ಈ ತರಬೇತಿಯ ಖರ್ಚೆಲ್ಲ ಪರಭಾರೆ ನಡೆಯಬೇಕಿತ್ತು. ಸರಕಾರದಿಂದ ಒಂದು ಪೈ ನೆರವೂ ಸಿಗದ ದಿನಗಳು. ಸರಿ ಫಂಡಿಗಾಗಿ ಜೋಳಿಗೆ ಹಿಡಿದು ಹೋಗುವದೂ ತಪ್ಪಲಿಲ್ಲ. ಸೋಲು, ನಿರಾಶೆಗಳೆಂಬ ಶಬ್ದಗಳನ್ನು ತಮ್ಮ ಸಾರ್ವಜನಿಕ ಜೀವನದ ಕೋಶದಿಂದ ಉಮಾಬಾಯಿಯವರು ಅಳಿಸಿಹಾಕಿದ್ದರು. ಕಸ್ತೂರಬಾ ಟ್ರಸ್ಟಿನ ಮೊದಲ ದಿನಗಳಲ್ಲಿ ನಿರ್ಗತಿಕರಾಗಿದ್ದ, ವಿಧವೆಯರಾಗಿ ಪರಾಶ್ರಿತರಾಗಿದ್ದ, ವಿವಾಹದಿಂದ ವಂಚಿತರಾಗಿದ್ದ ಮಹಿಳೆಯರನ್ನು ಗುರುತಿಸಿ, ಧೈರ್ಯತುಂಬಿ, ಅವರಿಗೆ ಸ್ವಾವಲಂಬನದತ್ತ ಹೊರಳುವಂತೆ ಮಾಡುವದೇ ಪ್ರಯಾಸವಾಗಿತ್ತು. ಆದರೆ ಬಲುಬೇಗ ಗ್ರಾಮಸ್ಥರ ವಿಶ್ವಾಸವನ್ನು ಅವರು ಗಳಿಸುತ್ತಿದ್ದರು.

ಈ ನಡುವೆ ವಯಸ್ಕರ ಶಿಕ್ಷಣಮಂಡಳಿಯ ಸದಸ್ಯೆಯಾಗಿ ಗುಜರಾತ, ಮಹಾರಾಷ್ಟ್ರಗಳಲ್ಲಿಯೂ ಕೆಲಸ ಮಾಡಿದರು.

ದೇಶಕ್ಕೆ ಸ್ವಾತಂತ್ರ್ಯವೇನೋ ಲಭಿಸಿತು. ಆದರೆ ಗಾಂಧೀಜಿಯವರು ರೂಪಿಸಿದ ಗ್ರಾಮ ಮಟ್ಟದ ವಿಧಾಯಕ ಕಾರ್ಯಕ್ರಮಗಳೆಲ್ಲ ಸೊರಗುತ್ತ ನಡೆದವು. ಮೂರು ದಶಕಗಳ ಕಾಲ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಮಹಿಳೆಗೆ ವಿಧಾನಸಭೆಗೆ ಸ್ಪರ್ಧಿಸಲು ಹಿತೈಷಿಗಳ ಸಲಹೆ ಬಂದಿತು. ಆದರೆ ಕೇವಲ ವಿಧಾಯಕ ಕಾರ್ಯಕ್ರಮಗಳಿಗೆ ತನ್ನನ್ನು

ಅರ್ಪಿಸಿಕೊಂಡಾಕೆಗೆ ಈ ಜೊಳ್ಳು ಪ್ರತಿಷ್ಠೆಯ ಹುದ್ದೆ ಹೇಗೆ ತಾನೆ ಆಕರ್ಷಿಸೀತು? ಮುಖಂಡರೆನಿಸಿಕೊಂಡವರಲ್ಲಿಯ ಪೈಪೋಟಿ, ಉಮಾಬಾಯಿಯವರಿಗೆ ಸಹಿಸಲಾಗಲಿಲ್ಲ. ರಾಜಕೀಯದಿಂದ ದೂರವಾಗಿಬಿಟ್ಟರು. ಮಹಿಳೆಯರ, ಮಕ್ಕಳ ಕಲ್ಯಾಣಕ್ಕಾಗಿ ತುಂಬಕಾಲ ದುಡಿದ ಅವರ ಅನುಭವದ ಉಪಯೋಗವನ್ನು ಜನತೆಗಾಗಿ ಮಾಡಿಕೊಡುವ ಬುದ್ಧಿಯೂ ಪಟ್ಟಭದ್ರಾಸಕ್ತ ಕಾಂಗ್ರೆಸ್ಸಿಗರಿಗೆ ಉಳಿಯಲಿಲ್ಲ. ಆ ಸಂಘಟನೆಯಲ್ಲಿ ಸ್ವಯಂಹಿತವನ್ನು ಕಂಡುಕೊಳ್ಳುವ ವರ್ಗವೊಂದು ಅವರನ್ನು ದೂರವಿಟ್ಟಿತು.

ಡಾ. ರಾಜೇಂದ್ರ ಪ್ರಸಾದರು, ಜವಾಹರಲಾಲ ನೆಹರೂ ಅವರು, ಕೃಪಲಾನಿ ದಂಪತಿಗಳು ಮುಂತಾದ ರಾಷ್ಟ್ರಮಟ್ಟದ ಅನೇಕ ನಾಯಕರನ್ನೂ ಉಮಾಬಾಯಿಯವರು ನಿಕಟವಾಗಿ ಬಲ್ಲವರಾಗಿದ್ದರು. ಆದರೆ ರಾಜಕೀಯ ಲಾಭಕ್ಕೆ ಎಳಸಲಿಲ್ಲ. ಅವರಿಗೆ ಕೊಡಮಾಡಿದ ಸ್ವಾತಂತ್ರ್ಯಯೋಧರ ತಾಮ್ರಪತ್ರ ಪ್ರಶಸ್ತಿ ಸ್ವೀಕರಿಸಲು ದಿಲ್ಲಿಗೆ ಹೋಗಲಿಲ್ಲ. ಹಕ್ಕಿನಿಂದ ಪಡೆಯಬಹುದಾಗಿದ್ದ ಕೇಂದ್ರ ಹಾಗೂ ರಾಜ್ಯದ ಗೌರವವೇತನವನ್ನು ನಿರಾಕರಿಸಿದರು. ಫಲಾಪೇಕ್ಷೆಯಿಲ್ಲದೇ ಸ್ವಾತಂತ್ರ್ಯ ಚಳುವಳಿ ಸೇರಿ ಎಲ್ಲವನ್ನೂ ಕಳೆದುಕೊಂಡವರನ್ನು ತುಂಬ ಹತ್ತಿರದಿಂದ ಕಂಡಿದ್ದರು. ಸ್ವತಃ ಆ ವರ್ಗಕ್ಕೆ ಸೇರಿದವರಾಗಿದ್ದರು. ಜೊತೆಗೆ ಸ್ವಾತಂತ್ರ್ಯ ಹೋರಾಟದ ಕಿಂಚಿತ್ತೂ ಬಿಸಿ ತಗಲದೇ ಯಾವತ್ತೂ ಸರಕಾರಿ ಸೌಲಭ್ಯ ಹಾಗೂ "ತ್ಯಾಗಿ"ಗಳ ನಿವೃತ್ತಿ ವೇತನ ಗಿಟ್ಟಿಸಿದವರನ್ನು ಗುರುತಿಸಬಲ್ಲವರಾಗಿದ್ದರು. ಕೊನೆಯ ವರ್ಷಗಳಲ್ಲಿ ಈ ನೋವು ಅವರನ್ನು ಕಾಡುತ್ತಿತ್ತು.

೧೯೭೪ ರಲ್ಲಿ ಅವರನ್ನು ಭೇಟಿಮಾಡಿದಾಗ, ಕಾರ್ನಾಡ ಸದಾಶಿವರಾಯರ ಕೆಲವು ನೆನಪುಗಳನ್ನು ಹೇಳಿದ್ದರು. ಆಗರ್ಭ ಶ್ರೀಮಂತ ಮನೆತನದ ಓರ್ವಳೇ ಕನ್ಯೆಯನ್ನು ಮದುವೆಯಾದ ಸದಾಶಿವರಾಯರು ಸ್ವತಃ ಧನಿಕ ಕುಟುಂಬದ ಹೆಸರುವಾಸಿ ವಕೀಲರಾಗಿದ್ದರು. ಆ ಕಾಲದ ದಕ್ಷಿಣಕನ್ನಡಜಿಲ್ಲೆಯ ಅತ್ಯಂತ ಸಿರಿವಂತ ಮನೆತನಗಳಲ್ಲಿ ಅವರದು ಒಂದಾಗಿತ್ತು. ಅಂಥವರು ಸ್ವಾತಂತ್ರ್ಯ ಚಳುವಳಿಯಲ್ಲಿ ಎಲ್ಲವನ್ನೂ ಕಳೆದುಕೊಂಡರು. ಕೊನೆಗೆ ಯೋಗ್ಯ ಚಿಕಿತ್ಸೆಗೂ ಕಾಸಿಲ್ಲದೇ ಪ್ರಾಣಕ್ಕೆ ಎರವಾಗುವ ಸಂದರ್ಭ ಬಂದಿತು! ಎಂದು ತುಂಬ ಬೇಸರಪಟ್ಟು ಹೇಳಿದ್ದರು.

"ಭಾರತದಾದ್ಯಂತ ಒಂದೇ ಸವನೆ ಅಂದರೆ ೧೯೨೨ ರಿಂದ ೧೯೪೨ ರ ವರೆಗೆ ಸ್ವಾತಂತ್ರ್ಯಯೋಧರೆನಿಸಿಕೊಂಡು ಚಳುವಳಿಯಲ್ಲಿ ಪಾಲ್ಗೊಂಡು ಜೈಲುಕಂಡವರ ಸಂಖ್ಯೆ ಒಟ್ಟು ಅರುವತ್ತು ಸಾವಿರಕ್ಕೆ ಮಿಕ್ಕಿರಲಿಲ್ಲ! ಈಗ ನೋಡಿದೆಯಾ ? ಪ್ರತಿರಾಜ್ಯದಲ್ಲಿ ವರ್ಷ ವರ್ಷ ಅವರ ಸಂಖ್ಯೆ ಹೆಚ್ಚುತ್ತಲೇ ಇದೆ! ನಿಜವಾದ ಸ್ವಾತಂತ್ರ್ಯಯೋಧರನ್ನು ಗುರುತಿಸಿ, ಜನ ಗೌರವಿಸುವಂತಾದರೆ, ನಮ್ಮಂಥ ಕೆಲವರಿಗಾದರೂ ಅದನ್ನು ಕಂಡು ಕೊಂಚ ನೆಮ್ಮದಿ ದೊರೆಯುವಂತೆ ಆಗುತ್ತಿತ್ತು" ಎಂದು ನೊಂದುಕೊಂಡು ಹೇಳಿದ್ದರು.

ನೆಮ್ಮದಿಯೆಂಬುದು ಈ ಹಿರಿಯ ಚೇತನಕ್ಕೆ ಲಭಿಸಲೇ ಇಲ್ಲ. ದೇಶಕ್ಕಾಗಿ, ನಾಡಜನತೆಯ ಏಳ್ಗೆಗಾಗಿ ತನ್ನ ಯಾವತ್ತೂ ವೈಯಕ್ತಿಕ ದುಃಖವನ್ನು ಮರೆತು, ತನ್ನನ್ನು ಮುಡುಪಿಟ್ಟುಕೊಂಡ ಜೀವಕ್ಕೆ ಕೊನೆಗೂ ನೆಮ್ಮದಿ ಎಂಬುದು ಕನಸಾಯಿತು. ಸ್ವಂತಮಗನಂತೆ ಬೆಳೆಸಿದ, ಯಾವತ್ತೂ ಚಟುವಟಿಕೆಗಳಲ್ಲಿ ಸಕ್ರಿಯ ನೆರವು ನೀಡುತ್ತಿದ್ದ ಸೋದರಳಿಯ ರಮಾಕಾಂತ ಗೋಳಿಕೇರಿ ಅವರು ೧೯೬೪ ರಲ್ಲಿ ನಿಧನ ಹೊಂದಿದರು. ಹಿಂದೆ ಜಪ್ತಾಗಿಹೋಗಿದ್ದ, ನಂಬಿಗೆಯ ಮೇಲೆ ವಿಶ್ವಸ್ಥರಿಗೆ ವಹಿಸಿದ್ದ ಕರ್ನಾಟಕ ಪ್ರೆಸ್ ಮತ್ತಿತರ ನಿವೇಶನಗಳು ಇತರರ ಪಾಲಾದವು. ಮಾವನ ನೆನಪಿಗೆಂದು ಕಟ್ಟಿಸಿದ 'ಆನಂದಸ್ಮೃತಿ'ಯ ಪುಟ್ಟ ಮನೆಯಲ್ಲಿ, ಜೀವನದುದ್ದಕ್ಕೂ ನೆಚ್ಚಿಕೊಂಡ, ನಿರಾಡಂಬರ ಜೀವನವನ್ನೇ ನಡೆಸುತ್ತ ಕೊನೆಯ ದಿನಗಳನ್ನು ಕಳೆದರು.

ಉಮಾಬಾಯಿಯವರಿಗೆ ಅರವತ್ತು ತುಂಬಿದಾಗ ಅವರು ಡಾ. ಹರ್ಡೀಕರರೊಂದಿಗೆ ಸೇರಿ ಕಟ್ಟಿದ ಮೊದಲ ಸಂಸ್ಥೆಯಾದ ಹುಬ್ಬಳ್ಳಿಯ ಭಗಿನಿಮಂಡಳವು ಇಂಗ್ಲಿಷ್, ಕನ್ನಡ, ಮರಾಠೀ ಭಾಷೆಗಳಲ್ಲಿ ಅವರ ಜೀವನ-ಸಾಧನೆಗಳನ್ನು ಪರಿಚಯಿಸುವ ಗ್ರಂಥ ಪ್ರಕಟಿಸಿತು. ದೇಶದಾದ್ಯಂತದ ಧುರೀಣರನೇಕರು ಸ್ಮರಿಸಿಕೊಂಡ ಉಮಾಬಾಯಿಯವರ ಆತ್ಮೀಯ, ಸ್ನೇಹಪೂರ್ಣ ಹಾಗೂ ಗೌರವಪರ ಹಲವಾರು ನೆನಪುಗಳು ಅದರಲ್ಲಿವೆ. ರಾಷ್ಟ್ರೀಯ, ರಾಜಕೀಯ ಚಳುವಳಿಯಲ್ಲಿ ಗಾಂಧೀಜಿ ತನಗೆ ಗುರುವಾದರೆ ಸಮಾಜ ಸೇವಾದೀಕ್ಷೆಯಲ್ಲಿ ಡಾ. ನಾ. ಸು. ಹರ್ಡೀಕರರು ತನ್ನ ಗುರುವೆಂದು ಉಮಾಬಾಯಿ ಹೇಳುತ್ತಿದ್ದರು. ಗಾಂಧೀಜಿಯವರನ್ನು ರಾಜಕೀಯ

ಚಳುವಳಿಯಲ್ಲಿ ಹಿಂಬಾಲಿಸಿದ ಮೊದಲಿಗರು ಅವರಾಗಿದ್ದಂತೆ ಶಿಕ್ಷಣವೇ ಇಲ್ಲದ, ನಿರಕ್ಷರಿ, ಅನನುಭವಿ ಮಹಿಳೆಯರನ್ನೇ ಸಂಘಟಿಸಿ ಸಂಸ್ಥೆ ಕಟ್ಟಲು ಡಾ. ಹರ್ಡೀಕರರ ಪ್ರೋತ್ಸಾಹ ಕಾರಣವಾಗಿತ್ತು. ಹರ್ಡೀಕರರ ಸೋದರ ಸೊಸೆ ಗಂಗೂತಾಯಿ ಶೇವಡೆಯಂಥ, ಯಾವ ಹಿನ್ನೆಲೆ ಇಲ್ಲದಿದ್ದರೂ ಪೂರ್ಣ ಸಮರ್ಪಣಾ ಭಾವವಿದ್ದವರ ಬೆಂಬಲವೇ ಉಮಾಬಾಯಿಯವರಿಗೆ ಪ್ರೇರಣೆಯಾಗಿತ್ತು. ಪದವಿ, ಪ್ರತಿಷ್ಠೆ, ಪ್ರಸಿದ್ಧಿಗಳಿಗೆ ಪರಾಙ್ಮುಖಿಯಾಗಿ ಚಂದನದಂತೆ ಸಮಾಜಸೇವೆಯಲ್ಲಿ ಸವೆದ ಈ ಚೇತನಕ್ಕೆ ಡಾ. ಹರ್ಡೀಕರರು ಮನದುಂಬಿ ಬರೆದ ಮಾತುಗಳೇ ಹಿರಿಯ ಭಾವಾಂಜಲಿ ನೀಡಿವೆ.

"ನನಗೆ ತಿಳಿದ ಮಟ್ಟಿಗೆ, ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಕ್ಷೇತ್ರಗಳಲ್ಲಿ ಉಮಾಬಾಯಿಯವರಷ್ಟು ದೀರ್ಘಾವಧಿಯವರೆಗೆ ಅವಿರತವಾಗಿ ಮತ್ತೆ ಯಾವ ಮಹಿಳೆಯೂ ದುಡಿದಿರಲಿಕ್ಕಿಲ್ಲ! ೨೨ ವರ್ಷಗಳಷ್ಟು ದೀರ್ಘಕಾಲ ದುಡಿದವರು, ಇಡೀ ದೇಶದಲ್ಲಿ ಕೂಡ ಕೈಬೆರಳ ಮೇಲೆ ಎಣಿಸುವಷ್ಟು ಇರಬಹುದು..... ಭಾರತದಲ್ಲಿ ಸಂಘಟನಾಕಾರ್ಯಕ್ರಮ ಕೈಕೊಂಡಾಗ, ಸಹಸ್ರಾವಧಿ ಕಾರ್ಯಕರ್ತರ, ಸ್ವಯಂ ಸೇವಕ-ಸೇವಿಕೆಯರ ನಿಕಟಸಂಪರ್ಕ ನನಗೆ ಬಂದಿದೆ. ಅವರ ಕಾರ್ಯಪದ್ಧತಿ, ಕಾರ್ಯಪ್ರವೃತ್ತಿಗಳನ್ನು ಸ್ವಭಾವ, ವೈಶಿಷ್ಟ್ಯಗಳನ್ನು ಅಭ್ಯಸಿಸಿದ್ದೇನೆ. ಇಂದು ನಾಡಿನ ಧುರೀಣ ಪದಗಳನ್ನು ಅಲಂಕರಿಸಿದ ಅನೇಕ ಕಾರ್ಯಕರ್ತೆಯರು, ಕೇವಲ ರಾಜಕೀಯ ಧುರೀಣರೊಡನೆ ಓಡಾಡುತ್ತಿದ್ದರು. ಆದರೆ ಮಹಿಳೆಯರೊಡನೆ ಬೆರೆತುಕೊಂಡು ಅವರ ವಿಶಿಷ್ಟ ಸಮಸ್ಯೆಗಳನ್ನು ಬಿಡಿಸುವಲ್ಲಿ ಉಮಾಬಾಯಿ ದುಡಿದರು. ಅಜ್ಞ ಮಹಿಳೆಯರೊಡನೆ ಕಲೆತು, ಬೆರೆತು, ಅವರಲ್ಲಿ ಮೇಲು-ಕೀಳು ಭಾವನೆ ಉಂಟಾಗುವದಕ್ಕೆ ಅನುವು ಈಯದೇ ಅಂಥ ಮಹಿಳೆಯರೊಂದಿಗೆ ಸರಿಸಮಭಾವದಿಂದ ತಾನು ಕೆಲಸಮಾಡುವದು ಸಾಮಾನ್ಯ ಕೆಲಸವಲ್ಲ!

ಮಹಿಳೆಯರ ಸಂಘಟನೆಗೆ ಆಸ್ಪದವಿಲ್ಲದಂಥ ಸಮಯದಲ್ಲಿ ಅದರ ಹೊಣೆಹೊತ್ತು, ವಿಧಾಯಕ ಕಾರ್ಯಕ್ರಮಗಳಲ್ಲಿ ಆಸಕ್ತಿ ಹುಟ್ಟುವಂತೆ ಮಾಡಿ, ಕನ್ನಡನಾಡಿನ ಮೂಲೆ-ಮೂಲೆಗಳಲ್ಲಿ ಸಂಚರಿಸಿ ಜಾಗೃತಿಯನ್ನುಂಟುಮಾಡಿದ್ದಾರೆ.... ಅವರು ಮಾಡಿದ ಕಾರ್ಯ ಚರಿತ್ರಾರ್ಹವಾಗಿದೆ. ಭವಿಷ್ಯಕಾಲದೆದುರು ಇಡಬಹುದಾದ ಕನ್ನಡಿಯಾಗಿದೆ.

ನಿಷ್ಕಾಮ ಬುದ್ಧಿಯಿಂದ ದುಡಿದರು. ....ದುಡಿಯುತ್ತಿದ್ದಾರೆ. ಮಾನವಕೋಟಿಯ ಸೇವಾದೀಕ್ಷೆ ಹೊಂದಿದ ಕಾರ್ಯಕರ್ತರಲ್ಲಿಯ ಮಹತ್ತಮ ಗುಣ ಅದು!"

ಡಾ. ಹರ್ಡೀಕರರ ಈ ಉದ್ಗಾರಗಳ ಬಳಿಕವೂ ಉಮಾಬಾಯಿ ಮೂರು ದಶಕಗಳಕಾಲ ಬದುಕಿದ್ದರು. ತಾನು ಪಾಲಿಸಿ ಯಶಸ್ವಿಯಾಗಿಸಿದ ವಿಧಾಯಕ ಕಾರ್ಯಕ್ರಮಗಳೆಲ್ಲ ಮಣ್ಣುಗೂಡಿದ್ದನ್ನೂ ಕಾಣುವ ದುರ್ಭಾಗ್ಯ ಅವರದಾಯ್ತು. ಆದರೆ ಮಾನವತೆಯಲ್ಲಿಯ, ಮಾನವೀಯತೆಯಲ್ಲಿಯ ದೃಢವಿಶ್ವಾಸವನ್ನು ಅವರೆಂದೂ ಕಳೆದುಕೊಳ್ಳಲಿಲ್ಲ. ಕಾರ್ಯಕರ್ತೆಯಾಗಿಯೇ ಕರ್ತಾರನ ಕಮ್ಮಟವನ್ನು ಬೆಳಗಿಸಿದರು.

◈ ◈ ◈

'ನ ಹನ್ಯತೇ' ಮೈತ್ರೇಯಿದೇವಿ

(೧೯೧೪-೧೯೯೦)

ನನ್ನ ಕಲಕತ್ತಾ ಆಕಾಶವಾಣಿ ದಿನಗಳ ನೆನಪು. ಆಕಾಶವಾಣಿಯ ವತಿಯಿಂದ ಅಲ್ಲಿಯ ರವೀಂದ್ರ ಸದನದಲ್ಲಿ ಮಕ್ಕಳ ದಿನಾಚರಣೆಯ ಕಾರ್ಯಕ್ರಮ ಏರ್ಪಟ್ಟಿತ್ತು. 'ಖೇಲಾ ಘರ್' (ಆಟದ ಮನೆ) ಅನಾಥಾಲಯದ ಮಕ್ಕಳು ಗ್ರಾಮೀಣ ಚಟುವಟಿಕೆಗಳನ್ನು ಬಿಂಬಿಸುವ ಸಂಗೀತ-ನೃತ್ಯದ ಕಾರ್ಯಕ್ರಮವೂ ಸೇರ್ಪಡೆಯಾಗಿತ್ತು. ತಂಡದ ನಾಯಕಿ, ಅವರ ವೇಷ-ಭೂಷಣಗಳನ್ನು ಅಳವಡಿಸಿ, ಗ್ರೀನರೂಂ ಪಕ್ಕದ ಕೊಠಡಿಯಲ್ಲಿ ಅವರ ರಂಗತಾಲೀಮನ್ನು ನಡೆಸಿ, ತೃಪ್ತಿಯಿಂದ ಸ್ವತಃ ನಿಂತು

ರಂಗಪ್ರವೇಶಮಾಡಿಸಿಯೇ ಮರಳಿಬಂದಿದ್ದರು. ಸುಮಾರು ಅರವತ್ತೈದರ ಹರೆಯ, ಗೌರವರ್ಣ, ಸುಂದರರೂಪ. ರಕ್ತದೊತ್ತಡ ಜಾಸ್ತಿಯಾಗಿದ್ದರಿಂದ ವಿಂಗ್ ಬದಿಯಲ್ಲಿ ಕುಳಿತ ಗಂಭೀರ ನಿಲುವಿನ ಈ ಮಹಿಳೆ, ಹೆಸರಾಂತ ಬಂಗಾಲಿ ಲೇಖಕಿ, ಮೈತ್ರೇಯಿದೇವಿಯೆಂದು ನನಗೆ ಪರಿಚಯಿಸಿದಾಗ, ಸಂತೋಷ ಆಶ್ಚರ್ಯಗಳಾದವು. ಎರಡು ವರ್ಷ ಹಿಂದೆ ಅವರ ಕಾದಂಬರಿ, 'ನ ಹನ್ಯತೇ' ಕೇಂದ್ರ ಸಾಹಿತ್ಯ ಅಕಾಡಮಿಯಿಂದ ಪುರಸ್ಕೃತವಾಗಿದ್ದು, ಬಹಳಷ್ಟು ವಾದ ವಿವಾದಗಳಿಗೆ ಗ್ರಾಸವಾಗಿದ್ದು ಗೊತ್ತಿತ್ತು. ಬಂಗಾಲಿ, ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಮೈತ್ರೇಯಿದೇವಿ ಬರೆಯುತ್ತ, ಭಾರತದ ಹೊರಗೂ ಸಾಕಷ್ಟು ಪರಿಚಿತರಾಗಿದ್ದರು.

ಮೈತ್ರೇಯಿದೇವಿ ತುಂಬ ಆದರದಿಂದ ಮಾತನಾಡಿಸಿದರು. ನಾನು ಕರ್ನಾಟಕದವಳು, ಬೆಂಗಳೂರಿನವಳು ಎಂದಾಗ, ಬೆಂಗಳೂರಿನ ಕೆಲ ಪರಿಚಿತರ ಕುರಿತು ವಿಚಾರಿಸಿದರು. ತಮ್ಮ ಮನೆಗೆ ಆಮಂತ್ರಿಸಿದರು.

೧೯೧೪ ರಲ್ಲಿ ಜನಿಸಿದ ಮೈತ್ರೇಯಿದೇವಿ, ಪ್ರಕಾಂಡ ಪಂಡಿತ, ಸಂಸ್ಕೃತ ಸಾಹಿತ್ಯ ಹಾಗೂ ತತ್ವಶಾಸ್ತ್ರಗಳಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯದ ಶ್ರೇಷ್ಠ ಶಿಕ್ಷಕರೆಂದು ಅಂತರ್ರಾಷ್ಟ್ರೀಯ ಖ್ಯಾತಿವೆತ್ತ ಪ್ರೊ. ಸುರೇಂದ್ರನಾಥ ದಾಸಗುಪ್ತರ ಮಗಳು. ಡೇ ಹಾಗೂ ದಾಸಗುಪ್ತರು ಸೇರಿ ಬರೆದ ತತ್ವಶಾಸ್ತ್ರದ ಪಠ್ಯಪುಸ್ತಕಗಳು ಭಾರತದಾದ್ಯಂತ ಜನಪ್ರಿಯವಾಗಿವೆ. ಸಾಹಿತ್ಯ ಸಾಕ್ಷಾತ್ಕಾರ, ಮೈತ್ರೇಯಿಗೆ ಬಾಲ್ಯದಲ್ಲೇ ಆಯಿತು. ಮೊದಲ ಕವಿತಾಸಂಕಲನ ಪ್ರಕಟವಾದಾಗ ಆಕೆ ಹದಿನಾರರ ಕಿಶೋರಿ. ಇದಕ್ಕೆ ಮುನ್ನುಡಿಯನ್ನು ಗುರುದೇವ ಠಾಕೂರರೇ ಬರೆದಿದ್ದಾರೆ. ರವೀಂದ್ರನಾಥ ಠಾಕೂರರ ಆತ್ಮೀಯ ಬಳಗಕ್ಕೆ ಬಲುಬೇಗ ಸೇರ್ಪಡೆಯಾದರು. ರವೀಂದ್ರರ ವ್ಯಕ್ತಿತ್ವ ಹಾಗೂ ಸಾಹಿತ್ಯದ ಕುರಿತು ಅವರ ಎಂಟು ಗ್ರಂಥಗಳಿವೆ. ರವೀಂದ್ರ ಶತಾಬ್ದಿ ಸಂದರ್ಭದಲ್ಲಿ ವಿಶ್ವದ ಹಲವಾರು ದೇಶಗಳಲ್ಲಿ ವಿಶೇಷ ಆಹ್ವಾನಿತ ಉಪನ್ಯಾಸಗಳನ್ನು ನೀಡಿದ ಹೆಗ್ಗಳಿಕೆ ಅವರದು. ಜೊತೆಗೆ ಖ್ಯಾತ ಸಮಾಜ ಸೇವಿಕೆ. ಢಾಕ್ಕಾ ಮತ್ತು ಕಲಕತ್ತೆಗಳಲ್ಲಿ ನಿರಾಶ್ರಿತ ಮಕ್ಕಳಿಗಾಗಿ ಬೋರ್ಡಿಂಗ್ ಸ್ಕೂಲ ತೆಗೆದಿದ್ದರು. ಕಲಕತ್ತೆಯ ಇವರ 'ಖೇಲಾ ಘರ್'ದಲ್ಲಿ ಓದಿ ಬೆಳೆದು, ಕೆಲಸಕ್ಕಿದ್ದ ಬಂಗಾಲಿ ತರುಣಿಯನ್ನು ಫ್ರೆಂಚ ಯುವಕನೊಬ್ಬ ಮದುವೆಯಾದದ್ದು ಇತ್ತೀಚಿನ ವಿಶೇಷ ಸಮಾಚಾರವಾಗಿತ್ತು.

ಹೆಸರಾಂತ ಹಿರಿಯ ಲೇಖಕಿಯೊಬ್ಬರು, ಮನೆಗೆ ಆಮಂತ್ರಿಸಿದ ಹಿಗ್ಗು ನನ್ನದಾಗಿತ್ತು. ಅವರು ಸೂಚಿಸಿದ, ತಾವು ಬಿಡುವಾಗಿರುವದಾಗಿ ಹೇಳಿದ ಒಂದು ಸಂಜೆ, ರಾಸ್‌ಬಿಹಾರಿ ಅವೆನ್ಯೂ ಪಕ್ಕದ ಬೀದಿಯಲ್ಲಿರುವ ಅವರ ಮನೆಯನ್ನು ಹುಡುಕಿಕೊಂಡು ಹೋದೆ. ನೋಡಿದರೆ, ತಮ್ಮ ಆತ್ಮೀಯ ಸ್ನೇಹಿತೆಯರಾದ ಗೌರಿ ಅಯೂಬ್ ಹಾಗೂ ಶಾಮಶ್ರೀ ಲಾಲ್ ಅವರೊಂದಿಗೆ ಸಾಹಿತ್ಯಗೋಷ್ಠಿಯಲ್ಲಿ ಮೈತ್ರೇಯಿದೇವಿ ಮೈಮರೆತಿದ್ದರು. ನನಗೆ ಆ ಸಮಯ ಬರಹೇಳಿದ್ದನ್ನು ಮರೆತೇ ಬಿಟ್ಟಿದ್ದರು! ತನ್ನ ಮರಗುಳಿ ಗೆಳತಿಯ ಈ ವರ್ತನೆ ಸ್ವಾಭಾವಿಕವೆಂದು ಶಾಮಶ್ರೀ ಗಲಿಬಿಲಿಗೊಂಡ ನನಗೆ ಸಾಂತ್ವನ ಹೇಳಿದರು. ಗೌರಿ ಅಯೂಬ್, ಪ್ರಸಿದ್ಧ ಸಮಾಜಸೇವಿಕೆ. ಶಾಮಶ್ರೀ 'ಮಾಡರ್ನ ರಿವ್ಯೂ' ಎಂಬ ಸುಪ್ರಸಿದ್ಧ ಆಂಗ್ಲಮಾಸಿಕದ ಸಂಸ್ಥಾಪಕ, ಸಂಪಾದಕ ರಮಾನಂದ ಚಟರ್ಜಿಯವರ ಮೊಮ್ಮಗಳು. ಇವರ ತಾಯಿ ಸೀತಾದೇವಿ ಬಂಗಾಲಿ ಕತೆಗಾರ್ತಿ ಮತ್ತು ಪತಿ ಪಿ. ಲಾಲ್ ಅವರು 'ರೈಟರ್ಸ ವರ್ಕಶಾಪ್' ಸಂಸ್ಥೆಯ ಸ್ಥಾಪಕರು. ಪ್ರಸಿದ್ಧ ಲೇಖಕರು ಹಾಗೂ ಪ್ರಾಧ್ಯಾಪಕರು ಎಂದು ಅರಿತಿದ್ದೆ. ಆಕಸ್ಮಿಕವಾಗಿ ಇವರಿಬ್ಬರನ್ನೂ ನೋಡುವಂತಾದದ್ದು ಹೆಚ್ಚಿನ ಖುಷಿಕೊಟ್ಟಿತು.

ಮೈತ್ರೇಯಿದೇವಿ ಆಗ ಟಾಗೋರರು ಬರೆದ ಸುಮಾರು ೨೦೦ ಪತ್ರಗಳನ್ನು ಆಧರಿಸಿ ಹೊಸಗ್ರಂಥ ಬರೆಯುವ ಹವಣಿಕೆಯಲ್ಲಿದ್ದರು. ಅದರಲ್ಲಿ ಒಂದು ನೂರ ಐವತ್ತಾರು ತನಗೆ ಬರೆದವುಗಳು. ಉಳಿದವು ತಮ್ಮ ತಂದೆಯವರಿಗೆ ಬರೆದವುಗಳು ಎಂದು ಹೇಳಿ ಕೆಲವನ್ನು ನನ್ನ ಕೈಗಿತ್ತರು. ಟಾಗೋರರ ಅಕ್ಷರಗಳು ಬಲು ಸುಂದರ ಹಾಗೂ ಸ್ಪಷ್ಟವಾಗಿದ್ದವು ಕಾಗದಗಳೆಲ್ಲ ಹಳೆಯವಾಗಿ ಚೂರಾಗುತ್ತಿದ್ದುದರಿಂದ ಝೆರಾಕ್ಸ ಮಾಡಿಸಿ ಪ್ಲಾಸ್ಟಿಕ್ ಕವರುಗಳಲ್ಲಿ ಬಿಡಿ ಬಿಡಿಯಾಗಿ ಇಟ್ಟಿದ್ದರು. ಕವಿ ರವೀಂದ್ರರು ತಮ್ಮ ಬಾಳಿನ ಕೊನೆಯ ದಿನಗಳಲ್ಲಿ ದಾರ್ಜಿಲಿಂಗ್‌ದ ಬೆಟ್ಟದಲ್ಲಿದ್ದ ಮೈತ್ರೇಯಿಯವರ ಮನೆಯಲ್ಲಿ ವಿಶ್ರಾಂತಿ ಪಡೆಯಲು ಬಂದಿದ್ದರು. ಆ ನಾಲ್ಕು ತಿಂಗಳ ಮಹಾಕವಿ ಸಾನ್ನಿಧ್ಯದ ಸವಿಗತೆಯನ್ನು 'ಮಂಪು ತೇ ರವೀಂದ್ರನಾಥ್' (ಮಂಪುವಿನಲ್ಲಿ ರವೀಂದ್ರನಾಥರು) ಎಂಬ ಗ್ರಂಥದಲ್ಲಿ ಮೂಡಿಸಿದ್ದಾರೆ. ಈ ಪುಸ್ತಕ ತುಂಬ ಜನಪ್ರಿಯವಾಯಿತು. ನಾನು ಕಲಕತ್ತೆಯಲ್ಲಿದ್ದಾಗ ಅದರ ಹನ್ನೊಂದನೆಯ ಮುದ್ರಣ

ಹೊರಬಿದ್ದಿತ್ತು. ಆಗ ಪಶ್ಚಿಮ ಬಂಗಾಲದ ಶ್ರೇಷ್ಠ ಸಾಹಿತ್ಯ ಪ್ರಶಸ್ತಿಯಾಗಿದ್ದ 'ರವೀಂದ್ರ ಪುರಸ್ಕಾರ'ವೂ ಅದಕ್ಕೆ ಸಂದಿತ್ತು.

ಪರಸ್ಪರ ಪರಿಚಯದ ಬಳಿಕ, ಮೂವರೂ ನನಗೆ ಸಂಕೋಚವಾಗದಂತೆ ಅನ್ಯ ಚರ್ಚೆಗೆ ಇಳಿದರು. ಮೈತ್ರೇಯಿದೇವಿ ಅವರ ಸೊಸೆ ಚಹಾ-ಚೂಡಾಗಳ ಆತಿಥ್ಯ ಒದಗಿಸಿದರು. ತಾನಾಗಲೇ ಬರೆಯುತ್ತಿದ್ದ ಪುಸ್ತಕದ ಭಾಗ ವಾಚಿಸಲು, ಸ್ನೇಹಿತೆಯರನ್ನು ಬರಮಾಡಿಕೊಂಡಿದ್ದರು. ಅದಕ್ಕೆ ಭಂಗಬಾರದಂತೆ ನಾನು ಬೇಗನೇ ಅವರಿಂದ ಬೀಳ್ಕೊಂಡು ಬಂದೆ. ತಮ್ಮನ್ನು ಕ್ಷಮಿಸುವಂತೆ ಕೋರಿಕೊಂಡ ಲೇಖಕಿ ಇನ್ನೊಮ್ಮೆ ಬರಲು ಕೇಳಿಕೊಂಡರು.

ಎರಡನೆಬಾರಿ ಅವರನ್ನು ಕಾಣಹೋದಾಗ 'ನ ಹನ್ಯತೇ' ಇದರ ಇಂಗ್ಲಿಷ್ ಅನುವಾದ (ಅವರೇ ಮಾಡಿದ್ದು) ಓದಿಕೊಂಡೇ ಹೋಗಿದ್ದೆ. ತನ್ನ ತಾರುಣ್ಯದಲ್ಲಿ ನಡೆದ ನೈಜಘಟನೆಗೆ ಕಾದಂಬರಿಯ ಕಾಲ್ಪನಿಕ ರೂಪುಕೊಟ್ಟ ಈ ಕೃತಿ ಸೊಗಸಾಗಿ ಓದಿಸಿಕೊಂಡು ಹೋಗುತ್ತದೆ. ರುಮಾನಿಯ ದೇಶದ ಓರ್ವತರುಣ. ಭಾರತೀಯ ದರ್ಶನಗಳ ಅಧ್ಯಯನಕ್ಕೆಂದು ಭಾರತಕ್ಕೆ ಬಂದಿದ್ದ. ಪ್ರೊಫೆಸರ್ ದಾಸ ಗುಪ್ತರ ಆಪ್ತಶಿಷ್ಯನಾದ ಅವನ ವಾಸಕ್ಕೆ ತಮ್ಮ ದೊಡ್ಡ ಬಂಗ್ಲೆಯಲ್ಲೇ ಪ್ರಾಧ್ಯಾಪಕರು ಅನುವು ಮಾಡಿಕೊಟ್ಟಿದ್ದರು. ಕವಿಹೃದಯದ, ಭಾರತೀಯ ಸಂಸ್ಕೃತಿಗೆ ಮಾರುಹೋದ ಈ ತರುಣ ಹಾಗೂ ಮೈತ್ರೇಯಿ ಪರಸ್ಪರ ಆಕರ್ಷಣೆಗೆ ಒಳಗಾಗುತ್ತಾರೆ. ಪ್ರೇಮಾಂಕುರವಾಗುತ್ತದೆ. ಈ ವಿಚಾರ ತಿಳಿದ ದಾಸ ಗುಪ್ತರು ಕೆಂಡಾಮುಂಡಲವಾಗಿ ತರುಣನನ್ನು ನಿಂತಕಾಲಮೇಲೆ ಓಡಿಸಿದ್ದೇ ಅಲ್ಲದೇ ಮೈತ್ರೇಯಿಯ ವಿವಾಹವನ್ನು, ಕೀಟಶಾಸ್ತ್ರಜ್ಞರಾಗಿದ್ದ ಡಾ. ಸೇನರೊಂದಿಗೆ ನೆರವೇರಿಸಿದ್ದು ನಿಜವಾದ ಘಟನೆ.

ಕಾದಂಬರಿಯ ನಾಯಕಿ 'ಅಮೃತಾ' ಹಾಗೂ ಯುರೋಪಿನ ತರುಣ ಯುಕ್ಲಿಡ್ ಆಗಾಗ ಭೇಟಿಯಾಗುತ್ತ, ಇಂಗ್ಲಿಷ್ ಹಾಗೂ ಸಂಸ್ಕೃತ ಕಾವ್ಯ ಪ್ರಸಂಗಗಳನ್ನು ಚರ್ಚಿಸುವ ಚಿತ್ರಗಳನ್ನು 'ನ ಹನ್ಯತೆ' ಕಾದಂಬರಿಯಲ್ಲಿ ಮೈತ್ರೇಯಿದೇವಿ ಸೊಗಸಾಗಿ ಜೋಡಿಸಿದ್ದಾರೆ. ಅರಳುತ್ತಿದ್ದ ಪ್ರಣಯಕ್ಕೆ ಸಂಭವಿಸಿದ ದೊಡ್ಡ ಆಘಾತದಿಂದ. ಹೇಗೋ ಚೇತರಿಸಿಕೊಂಡು ಅಮೃತಾ ತನ್ನ ಸಂಸಾರದತ್ತ, ಓದಿನತ್ತ, ಕಾವ್ಯರಚನೆಯತ್ತ ಮನಸ್ಸು ಹಾಕುತ್ತಾಳೆ.

ಕವಿ ರವೀಂದ್ರ ಮಾರ್ಗದರ್ಶನ ಹಾಗೂ ಸಾನ್ನಿಧ್ಯ ಅವಳ ನೊಂದಜೀವನಕ್ಕೆ ಹೊಸತಿರುವು ಕೊಡುತ್ತದೆ.

ರುಮಾನಿಯನ್ ತರುಣ ತನ್ನ ನಾಡಿಗೆ ಮರಳಿದರೂ ಭಾರತ ಪ್ರೇಮಿಯಾಗಿ. ಜನಪ್ರಿಯ ಲೇಖಕನಾಗಿ ಮಾರ್ಪಡುತ್ತಾನೆ. ೪೨ ವರ್ಷಗಳ ಬಳಿಕ ಈಕೆಯನ್ನು, ಆತ ಬರೆದ ಕಾಂಬರಿಯಲ್ಲಿ ಗುರುತಿಸಿದ ಆತನ ಸ್ನೇಹಿತನೊಬ್ಬ ಭಾರತಕ್ಕೆ ಬಂದಾಗ ಹುಡುಕಿಕೊಂಡು ಬರುತ್ತಾನೆ. ಹಳೆಯ ನೆನಪುಗಳೆಲ್ಲ ಚೇತರಿಸಿಕೊಳ್ಳುತ್ತವೆ. ತನ್ನ ಹರೆಯದ ಕಾಲ್ಪನಿಕವಾದ ಸುಂದರ ರೂಪದಲ್ಲೇ ಉಳಿದುಬಂದ ಪ್ರಣಯಕಥೆ. ರುಮಾನಿಯನ್ ಲೇಖಕನ ಪ್ರಸಿದ್ಧ ಕಾದಂಬರಿಯಲ್ಲಿ ವಿಕೃತರೂಪತಾಳಿದ್ದು, ಸ್ನೇಹಿತನಿಂದ ಅರಿತು ಪರಿತಪಿಸುತ್ತಾಳೆ. ನಿಜವಾಗಿ ನಡೆದದ್ದನ್ನು ಮತ್ತು ತಾನು ಕಂಡುಕೊಂಡದ್ದನ್ನು ಬರಹದ ರೂಪದಲ್ಲಿ ಜಗತ್ತಿಗೆ ತಿಳಿಯಪಡಿಸುವದೇ ಸರಿಯಾದ ಮಾರ್ಗವೆಂದು ತಾನೂ ಗ್ರಂಥರಚನೆಗೆ ತೊಡಗುತ್ತಾಳೆ. ತಮಗೆ ಇಬ್ಬರಿಗೂ ಸಮಾಜ ಅನ್ಯಾಯವೆಸಗಿತ್ತು. ಸಹಿಸಲಾಗದಷ್ಟು ಘೋರವಾದ ಅನ್ಯಾಯದ ಹಲವಾರು ರೂಪಗಳಿಂದ ಗಾಸಿಯಾದದ್ದೂ ನಿಜ. ಆದರೆ ಪತಿಯ ಹೆಚ್ಚಿನ ಸಹಾನುಭೂತಿ ಸಹಕಾರಗಳಿಂದ ಆ ನೋವನ್ನು, ಮರೆಯುವಂತಾಗಿತ್ತು. ಈಗ ಆ ಪ್ರೇಮಿ ಸತ್ಯವನ್ನು ತಿರುಚಿದ್ದು ತಿಳಿದು ಬಂದಾಗ ನೋವು ಮರುಕಳಿಸಿತ್ತು. ಅಮೃತಾ, ಕುಟುಂಬದವರ ಸಹಾಯದಿಂದ ತನ್ನ ಕನಸನ್ನು ನುಚ್ಚು ನೂರಾಗಿಸಿದ, ತಾರುಣ್ಯದ ಪ್ರೇಮಿಯನ್ನು ಕಾಣಲು ವಿದೇಶಕ್ಕೆ ಹೊರಡುತ್ತಾಳೆ. ಆತನ ಮನೆ ಹುಡುಕುವದರಲ್ಲಿ ಯಶಸ್ವಿಯಾಗುತ್ತಾಳೆ. ಕೂದಲು, ಕಣ್ಣು ಎರಡನ್ನೂ ಕಳೆದುಕೊಂಡ ಆ ವೃದ್ಧ, ಧ್ವನಿಯಿಂದಲೇ ತಟ್ಟನೇ ಅವಳನ್ನು ಗುರುತಿಸುತ್ತಾನೆ. ವಿಧಿಗಿಂತ ಹೆಚ್ಚಾಗಿ ಸಮಾಜವು ಕ್ರೂರ ರೀತಿಯಲ್ಲಿ ಬೇರ್ಪಡಿಸಿದ ಎರಡು ಜೀವಿಗಳು, ಪ್ರತ್ಯೇಕ ಜೀವನ ನಡೆಸಿ ದೀರ್ಘಾವಧಿಯ ಬಳಿಕ, ಬಾಳಿನ ವಿವಿಧ ಘಟ್ಟಗಳನ್ನು ದಾಟಿ ಬಂದಿದ್ದವು. ಈಗ ಸಾವಿಗೆ ಹತ್ತಿರವಾಗಿದ್ದ ಘಟ್ಟದಲ್ಲಿದ್ದವು. ಇನ್ನು ಬರಲಿರುವ ಹಂತ ಒಂದೇ! ಅಲ್ಲಿ, ಈ ಎರಡು ಜೀವ, ಒಂದು ಆತ್ಮವಾಗಿ ಕೆಲಕಾಲ ನಲಿದಿದ್ದವರನ್ನು ಯಾರೂ ಬೇರ್ಪಡಿಸಲಾರರಲ್ಲ! ಎಂದು ಆಕೆಯ ಅಂತರ್‌ದನಿ ನುಡಿಯುತ್ತಿದ್ದಂತೆ 'ನ ಹನ್ಯತೇ' ಕಾದಂಬರಿ ಮುಕ್ತಾಯವಾಗುತ್ತದೆ.

"ಈ ಪುಸ್ತಕ ಬರೆದು ಬಹಳಷ್ಟು ವೈರಿಗಳನ್ನು ಸಂಪಾದಿಸಿದೆ, ಗೊತ್ತೇ?" ಮೈತ್ರೇಯಿದೇವಿ ಆದರದಿಂದ ಬರಮಾಡಿಕೊಂಡು ಹೇಳಿದರು. ನಮ್ಮ ಮನೆತನಕ್ಕೇ ಅಪವಾದ ತಂದೆ! ಎಂದು ಸಂಬಂಧಿಕರು ದೂರಿದರು. ಆತನಕ ಆತ್ಮೀಯರೆನಿಸಿಕೊಂಡವರು, ಹೇಳದೇ ಇರುವ ವಿಷಯಗಳು ಹತ್ತಾರು ಇರಲು ಸಾಕು ! ಎಂದುಕೊಳ್ಳುತ್ತ ದೂರವಾದರು. ಕಾದಂಬರಿಯಲ್ಲಿ ಚಿತ್ರಿಸದಿರುವ ರಹಸ್ಯಪ್ರೇಮದ ಸನ್ನಿವೇಶಗಳು ಸಾಕಷ್ಟಿದ್ದಿರಬೇಕು! ಎಂದು ಹಲವರು ದೂಷಿಸಿದರು. ಸಂಪ್ರದಾಯವಂತರ ಮನೆಯಲ್ಲಿ, ಮಹಿಳೆಯರು ಮುಕ್ತವಾಗಿ ಓಡಾಡದ, ಮಾತನಾಡದ, ಅರ್ಧಶತಮಾನದಷ್ಟು ಹಿಂದಿನ ದಿನಗಳಲ್ಲಿ ವಿದೇಶೀಯ ತರುಣನೊಬ್ಬನೊಡನೆ ಬೆಳೆದಿರಬಹುದಾದ ಸ್ನೇಹ-ಪ್ರಸಂಗ ಎಷ್ಟು ದೂರ ಹೋಗಲು ಸಾಧ್ಯ? ಎಂದು ಯಾರೂ ಯೋಚಿಸುವದಿಲ್ಲವಲ್ಲ! ಕೇವಲ ಹಸ್ತಲಾಘವ, ಹಾಗೂ ಒಂದೇ ಒಂದು ಕೊನೆಯ ಚುಂಬನಕ್ಕೆ ಈ ಸಂಬಂಧ ಸೀಮಿತವಿರಲಾರದು! ಎಂದು ಊಹಾಪೋಹಗಳಿಂದಲೇ ತಲ್ಲಣಿಸಿ ಹೋಗುವಂತೆ ಮಾಡಿದ್ದಾರೆ.... ಓದಿದವರೆಲ್ಲ!" ನಿಟ್ಟುಸುರಿಟ್ಟರು.

ಪುಸ್ತಕದ ಕುರಿತಾದ ವಾದ, ಅಪವಾದಗಳು ನನ್ನ ಕಿವಿಗೂ ಬಿದ್ದಿದ್ದವು. ಅವರು ಪುಸ್ತಕ ಬರೆಯದಿದ್ದರೆ ಇದೆಲ್ಲ ಜನಕ್ಕೆ ತಿಳಿಯದೇ ಹಾಗೆ ಉಳಿಯುತ್ತಿತ್ತಲ್ಲ! ಲೇಖಕಿಗೆ ಲೇಖನ ಸ್ವಾತಂತ್ರ್ಯವೂ ಇಲ್ಲವೇ ? ಅದೂ ಹೆಸರುವಾಸಿಯಾಗಿದ್ದ ಹಳೆಯ ತಲೆಮಾರಿನ ಲೇಖಕಿಗೆ ? ಎಂದೆನಿಸಿ ವಿಸ್ಮಯವಾಯಿತು.

"ಸ್ವತಃ ನನ್ನ ಮಗಳು ನನ್ನ ಎಲ್ಲ ಇತರ ಬರವಣಿಗೆ ದುರ್ಲಕ್ಷಿಸಿಬಿಟ್ಟಿದ್ದಾಳೆ ! ಈ ಕಾದಂಬರಿ ಅಪಮಾನಜನಕ ! ಎನ್ನುತ್ತಾಳೆ. ಸದ್ಯ ಪತಿ, ಮಗ, ಸೊಸೆ ಮಾತ್ರ ಬೆಂಬಲಕ್ಕಿದ್ದು, ನಾನು ನೊಂದುಕೊಳ್ಳದಂತೆ ನೋಡಿಕೊಳ್ಳುತ್ತಿದ್ದಾರೆ. ಸಂಬಂಧಿಕರಿಗಿಂತ, ಸಾಹಿತ್ಯಜಗತ್ತಿನ ಟೀಕೆಯನ್ನು ಎದುರಿಸಲಿಕ್ಕಾದರೂ ಹೆಚ್ಚಿನ ಮನ್ನಣೆ ಈ ಪುಸ್ತಕಕ್ಕೆ ದೊರೆಯಬೇಕು ಅನಿಸುತ್ತದೆ !

ಈ ವಯಸ್ಸಿನಲ್ಲಿ ಏಕೆ ಹೆದರಬೇಕು? ಯಾರಿಗೆ ಹೆದರಬೇಕು? ಸಾಹಿತಿಗೆ ಸರಿಕಂಡದ್ದನ್ನು ಹೇಳುವ ಸ್ವಾತಂತ್ರ್ಯವಿಲ್ಲವೇ? ನನ್ನ ತಂದೆಯವರು, ನನ್ನ ಸಮಾಜದವರು ಮಾಡಿದ ಅನ್ಯಾಯ ಈಗಲಾದರೂ

ಜನಕ್ಕೆ ಹೇಳುವಂತೆ ಆಗಬಾರದೇ? ಸತ್ಯಕಥೆಯನ್ನು ಮುಚ್ಚಿಡಲಾರೆ! ಮುಂದಿನ ತಲೆಮಾರಿನವರು ಖಂಡಿತ ಸ್ವತಂತ್ರ ವ್ಯಕ್ತಿತ್ವವನ್ನು ಹೆಚ್ಚು ಹೆಚ್ಚಾಗಿ ರೂಢಿಸಿಕೊಂಡಿರುತ್ತಾರೆ. ನನ್ನನ್ನು ಸರಿಯಾಗಿ ಅರ್ಥಮಾಡಿಕೊಳ್ಳುತ್ತಾರೆ ಎಂಬ ವಿಶ್ವಾಸದಿಂದ ಬರೆದೆ. ಸತ್ಯವನ್ನು ತಿರುಚಿದ್ದೇ ಅಲ್ಲದೇ ಪ್ರಖ್ಯಾತ ವಿದ್ವಾಂಸನೊಬ್ಬನನ್ನು ಹೀಗಳೆದಿದ್ದಾರೆ! ಎಂದು ಆರೋಪ ಬೇರೆ. ಕಾದಂಬರಿಯೆಂದರೆ ಆತ್ಮಕಥನವಲ್ಲವಲ್ಲ?" ಮೈತ್ರೇಯಿದೇವಿ ಮುಂದುವರಿಸಿದರು.

ತನ್ನ ಜೀವನವೆಂದರೆ ತೆರೆದಿಟ್ಟ ಪುಸ್ತಕ ಎಂದು ಗಾಂಧೀಜಿ ಹೇಳುತ್ತಿದ್ದರು. ಅಂಥ ಯೋಗ್ಯತೆ ಸಾಮಾನ್ಯ ಮನುಷ್ಯರಿಗಿಲ್ಲ ಎಂಬುದನ್ನು ಒಪ್ಪಿಕೊಳ್ಳೋಣ. ಆದರೆ ನಮ್ಮಲ್ಲಿ ಮಹಿಳೆಯೋರ್ವಳು ತನ್ನ ಖಾಸಗೀ ಜೀವನದ ಘಟನೆಯೊಂದನ್ನು ಇದ್ದಕ್ಕಿದ್ದಂತೆ ಹೇಳಿದರೂ ಅದನ್ನು ಒಪ್ಪಿಕೊಳ್ಳುವ ಮಾನಸಿಕ ಪಕ್ವತೆ, ಜನಕ್ಕೆ ಬಂದಿಲ್ಲವೆನಿಸುತ್ತದೆ! ಎಂದು ವಿಷಾದ ಸೂಚಿಸಿದರು. ಅದು ಒಪ್ಪತಕ್ಕ ಮಾತೇ ಆಗಿತ್ತು.

"ಈ ಪುಸ್ತಕವನ್ನು ಆತ್ಮಚರಿತ್ರೆಯ ರೂಪದಲ್ಲಿ ಬರೆಯಬೇಕೆಂದಿದ್ದೆ. ಆದರೆ ಆ ದಿನ ನೀನು ಕಂಡ ಸ್ನೇಹಿತೆಯರು, ಗೌರಿ ಹಾಗೂ ಶಾಮಶ್ರೀ, ಆತ್ಮಚರಿತ್ರೆ ಅಷ್ಟೊಂದು ರಂಜಕವಾಗಲಿಕ್ಕಿಲ್ಲ. ಕಾದಂಬರಿ ರೂಪದಲ್ಲಿ ಬರಿ, ಚರ್ಚೆಗೆ ಗ್ರಾಸವಾದರೂ ಕಲ್ಪಿತ ರೂಪದ ಕಾದಂಬರಿಯಲ್ಲಿ ಆಕರ್ಷಣೆ ಬೇರೆಯೇ! ಎಂದು ಸಲಹೆ ಕೊಟ್ಟರು. ಹೀಗೆ 'ನ ಹನ್ಯತೇ' ಕಾದಂಬರಿ ರೂಪ ತಾಳಿತು.... ನಿನಗೆ ಹೇಗೆನಿಸಿತು? ಎಂದು ವಿಚಾರಿಸಿದರು.

ನಾನು ಮೆಚ್ಚಿಕೊಂಡ ಕಾದಂಬರಿಯ ಕೆಲ ಘಟನೆಗಳನ್ನು ಹೇಳಿದೆ. ಕಿಶೋರಿ ಅಮೃತಾ, ವಿದೇಶಿಯನಿಗೆ ಭಾರತ ಸಂಸ್ಕೃತಿಯನ್ನು ಪರಿಚಯಿಸುವ ಸನ್ನಿವೇಶಗಳು, ಉದಯಶಂಕರರ ನೃತ್ಯಗಾಥೆ, ಶೇಕ್ಸ್‌ಪಿಯರ್‌ನ 'ಮರ್ಚಂಟ್ ಆಫ್ ವೆನಿಸ್'ದಲ್ಲಿ ಶೈಲೋಕ್‌ನ ಮಗಳು ಮನೆ ಬಿಟ್ಟು ಪ್ರಿಯಕರನೊಂದಿಗೆ ಓಡಿಹೋಗುವ ಪ್ರಸಂಗವನ್ನು ಸಹಜವಾಗಿ ತನ್ನ ಪ್ರಣಯ ಕಥೆಗೆ ಹೊಂದಿಸಿದ್ದು ಇತ್ಯಾದಿ. ಸಂತೋಷಪಟ್ಟರು. ಅಂತೂ ತುಂಬ ಅಸಾಮಾನ್ಯ ಧೈರ್ಯ ತೋರಿಸಿದ್ದೀರಿ! ಈ ಕಾದಂಬರಿ ಬರೆದು ಎಂದಾಗ, ಹೀಗೆ ಹೇಳಿದಾಕೆ ನೀನು ಎರಡನೆಯವಳು! ಅಂದರು. ಮೊದಲನೆಯವರು

ಯಾರು? ಎಂದು ಕೇಳುವ ಮನಸ್ಸಾದರೂ ಅಧಿಕಪ್ರಸಂಗತನದ ಪ್ರಶ್ನೆ ಎನಿಸೀತು ಎಂದು ನಾನು ಕೇಳಲಿಲ್ಲ.

ಶಿಕಾಗೋ ವಿಶ್ವವಿದ್ಯಾಲಯದಲ್ಲಿ ತಾನು ಮಾಡಿದ ಟಾಗೋರರ ಕುರಿತಾದ ಉಪನ್ಯಾಸದ ಪ್ರತಿಯನ್ನು ಮೈತ್ರೇಯಿದೇವಿ ಹಸ್ತಾಕ್ಷರ ಹಾಕಿ ಕೊಟ್ಟರು.

ಕೆಲವೇ ದಿನಗಳಲ್ಲಿ ನನಗೆ ಬೆಂಗಳೂರಿಗೆ ವರ್ಗವಾಯಿತು. ಈ ಕುರಿತು ಮೈತ್ರೇಯಿದೇವಿಗೆ ಹೇಳಿದಾಗ ಹೊರಡುವ ಮುನ್ನಾದಿನ ಊಟಕ್ಕೆ ಬರಲೇಬೇಕೆಂದು ಆಗ್ರಹಮಾಡಿದರು. ಮೊದಲ ಅನುಭವದಿಂದ ಕೊಂಚ ಹಿಂಜರಿದೆ. ಅವರು ಬಿಡಲೇ ಇಲ್ಲ. 'ನಮ್ಮ ಪೂರ್ವಬಂಗಾಲಿ ಪದ್ಧತಿಯ ಅಡಿಗೆ ಹೆಚ್ಚು ಕಡಿಮೆ ನಿಮ್ಮ ಗೋವಾದವರಂತೆಯೇ ಇರುತ್ತದೆ. ರುಚಿ ನೋಡಲ್ಲ! ಎಂದು ಒತ್ತಾಯಮಾಡಿದರು. ಮತ್ತೆ ಅವರನ್ನು ಕಾಣುವದು ಆಗುತ್ತದೋ ಇಲ್ಲವೋ! ಎಂದುಕೊಂಡು ಒಪ್ಪಿದೆ.

ಅವರಲ್ಲಿ ಆ ದಿನ ಹೋದಾಗ ಪುನಃ ಅವರು ಇರಲಿಲ್ಲ! 'ಚೌದಿ' (ಸೊಸೆ)ಯನ್ನು ಕರೆದುಕೊಂಡು ನರ್ಸಿಂಗ್ ಹೋಂಗೆ ಹೋಗಿದ್ದಾರೆಂದು ಕೆಲಸದಾಕೆ ಹೇಳಿದಳು. ನಮ್ಮ ಮಾತು ಕೇಳಿ ಅಡಿಗೆಯವನು ಹೊರಗೆ ಬಂದ. "ನೀವು ಬರುವದು ದೀದಿಗೆ ಗೊತ್ತು! ನಿಮ್ಮನ್ನು ಬರಮಾಡಿಕೊಂಡು ಕುಳ್ಳಿರ ಹೇಳಿಯೇ ಹೋಗಿದ್ದಾರೆ. ಒಳಗೆ ಬನ್ನಿ" ಎಂದು ಹೇಳಿದ. ಡ್ರಾಯಿಂಗ್ ರೂಮಿನಲ್ಲಿ ಟಿ. ವಿ. ನೋಡುತ್ತ ಕುಳಿತ ಎಳೆಯರ ಬಳಗವನ್ನು ಸೇರಿಕೊಂಡೆ. ಅರ್ಧಗಂಟೆಯ ಬಳಿಕ ಅವಸರವಸರವಾಗಿ ಮೈತ್ರೇಯಿದೇವಿ ಬಂದರು. 'ಸೊಸೆಗೆ ಹೆರಿಗೆ ನೋವು ಪ್ರಾರಂಭವಾಗಿದೆ! ಇನ್ನೊಂದೆರಡು ಗಂಟೆ ಕಳೆಯಬಹುದು ಎಂದು ಡಾಕ್ಟರರು ಹೇಳಿದ್ದರಿಂದ ಬಂದೆ' ಎಂದು ಕಾಯಿಸಿದ್ದಕ್ಕಾಗಿ ಕ್ಷಮೆ ಕೇಳಿದರು.

ಮುನ್ನಾದಿನ 'ರವೀಂದ್ರ ಪ್ರಣಾಲಿ ಪ್ರಚಾರ'ವನ್ನು ವ್ಯಾಪಕವಾಗಿ ಕೈಗೊಂಡದ್ದಕ್ಕೆ ಸನ್ಮಾನ ಸಮಾರಂಭವಿತ್ತು. ಇನ್ನೊಂದು ಸಭೆಗೆ ಹೋಗಿ ಭಾಷಣ ಮಾಡುವ ಪ್ರಸಂಗ ಬಂದಿತು. ತಡವಾಗಿ ಮನೆ ಸೇರಿದಾಗ ಪತಿ, ಜ್ವರದಿಂದ ಮಲಗಿದ್ದರು. (ಡಾ. ಸೇನರು ಆರೆಂಟು ತಿಂಗಳಿಂದ ಪಾರ್ಕಿನ್‌ಸನ್ ಕಾಯಿಲೆಯಿಂದ ನರಳುತ್ತಿದ್ದರು.) ಈಗ ಮಲೇರಿಯ ಬೇರೆ ಕಾಡಲಾರಂಭಿಸಿತ್ತು. ರಾತ್ರಿಯಿಡೀ ಒದ್ದಾಡಿದರು. ರಾತ್ರಿ ಹನ್ನೆರಡರ ಬಳಿಕ

ಅವರಿಗೆ ನಿದ್ದೆ ಹತ್ತಿತು. ಆ ಬಳಿಕ ಹೋಗಿ ಮಲಗಿದರು. ಬೆಳಿಗ್ಗೆ ಏಳುತ್ತಿದ್ದಂತೆ ಸೊಸೆಗೆ ಪ್ರಸವವೇದವೆ ಕಾಣಿಸಿಕೊಂಡಿತ್ತು. ಹೀಗಾಗಿ ನರ್ಸಿಂಗ್ ಹೋಂಗೆ ಸೇರಿಸಬೇಕಾಯಿತಂತೆ. ಹತ್ತು ವರ್ಷಗಳ ಬಳಿಕ ಸೊಸೆ ಪುನಃ ಬಸಿರಿಯಾಗಿದ್ದಳು. 'ಮೊದಲ ಗಂಡುಮಗ ಒಬ್ಬನೇ! ಈ ಮಗು ಹೆಣ್ಣು ಆಗಬೇಕೆಂದು ನಮ್ಮೆಲ್ಲರ ಆಸೆ !' ಎಂದರು. ಮೈತ್ರೇಯಿದೇವಿಯವರದ್ದೇ ಗೌರವರ್ಣ, ತಿದ್ದಿದಂತಿದ್ದ ಕಣ್ಣು-ಮೂಗು, ವಿಶಾಲ ನೇತ್ರಗಳನ್ನು ಮೊಮ್ಮಗ ಪಡೆದಿದ್ದ.

"ನಿಮ್ಮ ದೇಹ, ಮನಸ್ಸು, ತುಂಬ ದಣಿದಿದೆ. ಸೊಸೆಯ ಕುರಿತು ದುಗುಡ ಪ್ರಾರಂಭವಾಗಿದೆ. ನನ್ನ ಊಟದ ಕುರಿತು ಯೋಚಿಸಬೇಡಿ. ಕಲಕತ್ತೆ ಬಿಡುವ ಮೊದಲು ನಿಮ್ಮನ್ನು ಕಂಡು ಹೋಗಲು ಬಂದೆ" ಎಂದರೂ ಕೇಳದೇ, "ನಾನೂ ಏನಾದರೂ ಹೊಟ್ಟೆಗೆ ಹಾಕಿಕೊಳ್ಳಬೇಕಲ್ಲ? ಆಸ್ಪತ್ರೆಗೆ ಹೋಗುವದು ಇದ್ದೇ ಇದೆ. ಒಂದಿಷ್ಟು ಕುಳಿತಿರಿ !" ಎಂದು ಹೇಳಿ ಬೇಗನೇ ಸ್ನಾನಮುಗಿಸಿ, ಮೇಲಂತಸ್ತಿನ ಊಟದ ಮನೆಗೆ ಕರೆದೊಯ್ದರು.

ಅವರ ದಿವಾಣಖಾನೆಯಲ್ಲಿ, ಓದುವ ಕೊಠಡಿಯಲ್ಲಿ, ಊಟದ ಮನೆಯಲ್ಲಿ ಸಹ ಕಡಿಮೆ ಎತ್ತರದ ಖುರ್ಚಿ, ಟೇಬಲ್‌ಗಳು ಇದ್ದವು. ಪ್ರಥಮತಃ ಟಾಗೋರರು ಇಂಥವನ್ನು ಪ್ರಚಾರದಲ್ಲಿ ತಂದದ್ದು ನೆನಪಿಗೆ ಬಂದಿತು. ಸಣ್ಣಕ್ಕಿಯ ಕುಚ್ಚಕ್ಕಿಯನ್ನ, ಕಾಲಿಫ್ಲಾವರ ಪಲ್ಯ, ಬೇಳೆ ತೊವ್ವೆಯನ್ನು ಕೈಯಾರೆ ಬಡಿಸಿದರು. ಮೀನು, ಮಾಂಸಗಳ ವ್ಯಂಜನವನ್ನು ಅಡಿಗೆಯಾಳಿಗೆ ಬಡಿಸಲು ಹೇಳಿದರು. ನಂತರ ಟೊಮ್ಯಾಟೊ ಚಟ್ನಿ ಬಂದಿತು. ಬಂಗಾಲಿಗಳಲ್ಲಿ ಚಟ್ನಿ ಊಟದ ಕೊನೆಯಲ್ಲಿ ಬರುತ್ತದೆ. ನಮ್ಮಲ್ಲಿಯಂತೆ ಹುಳಿ, ಕಾರಗಳಿಲ್ಲದ ಸಿಹಿ ಚಟ್ನಿ ಅದು. ಅದನ್ನು ಮುಗಿಸಿದ ಮೇಲೆ ಪುಡಿಂಗ್ ಬಂದಿತು. ಅವರು ಅವಸರದಲ್ಲಿದ್ದರಿಂದ ನಾನು ಮಾತು ಬೆಳೆಸಲಿಲ್ಲ. ಊಟ ಮುಗಿದೊಡನೆ, ಅವರ ಆಶೀರ್ವಾದ ಕೋರಿ ಬಂಗಾಲಿ ಪದ್ಧತಿಯಲ್ಲಿ ನಮಸ್ಕರಿಸಿ ಪಾದಧೂಳಿ ಧರಿಸಿದೆ. ಅವರು ಸಂತೋಷಪಟ್ಟರು. ತಮ್ಮ 'ನ ಹನ್ಯತೇ' ಕಾದಂಬರಿಗೆ ರುಜುಹಾಕಿ ಕೊಟ್ಟರು. ಪತ್ರಬರೆಯಲು ಹೇಳಿದರು.

ಬೆಂಗಳೂರಿಗೆ ಬರುತ್ತಿದ್ದಂತೆಯೇ ಶ್ರೀ ಸೇನ್ ಅವರು ನಿಧನ ಹೊಂದಿದ ವಾರ್ತೆ ತಿಳಿಯಿತು. ಮೈತ್ರೇಯಿದೇವಿಯವರಿಗೆ ಸಂತಾಪಸೂಚಕ ಪತ್ರ ಬರೆದೆ.

ಹಲವು ವರ್ಷಗಳ ಬಳಿಕ. ಈ ಹಿರಿಯ ಲೇಖಕಿಯ ತಾರುಣ್ಯದಲ್ಲಿ ಕಾಣಿಸಿಕೊಳ್ಳುತ್ತಿದ್ದಂತೆ ಮಿಂಚಿ ಹೋದ ರುಮಾನಿಯನ್ ತರುಣ ಬೇರಾರೂ ಆಗಿರದೇ ಅಂತರ್ರಾಷ್ಟ್ರೀಯ ಖ್ಯಾತಿಯ ಭಾರತ ಶಾಸ್ತ್ರಜ್ಞರೂ, ದಾರ್ಶನಿಕರೂ ಆಗಿದ್ದ ಪ್ರೊ. ಮರ್ಸಿಯ ಈಲಿಯಡ್ ಅವರು ಎಂದು ತಿಳಿದಾಗ ಆದ ಸೋಜಿಗ ಅಷ್ಟಿಷ್ಟಲ್ಲ! ಶಿಕಾಗೋ ವಿಶ್ವವಿದ್ಯಾಲಯದಲ್ಲಿ ತುಂಬ ಕಾಲ ಪ್ರಾಧ್ಯಾಪಕರಾಗಿದ್ದ ಅವರ ಶಿಷ್ಯಕೋಟಿ ದೊಡ್ಡದು. ಅವರ ಹೆಸರಿನಲ್ಲಿ ಸಂಸ್ಕೃತ ಅಧ್ಯಯನ ಪೀಠ ಅಲ್ಲಿದ್ದು, ಅನೇಕ ಸಂಸ್ಕೃತಶಾಸ್ತ್ರ ಹಾಗೂ ಗ್ರಂಥಗಳ ಅಧಿಕೃತ ಅನುವಾದ ಅದರ ಮುಖಾಂತರ ನಡೆದೇ ಇರುತ್ತದೆ. ಮರ್ಸಿಯ ಈಲಿಯಡ್ ಬರೆದ ತನ್ನ ಸ್ವಾನುಭವದ, ಕಲಕತ್ತೆಯ ಭಗ್ನ ಪ್ರಣಯದ ಕಾದಂಬರಿಯ ಇಂಗ್ಲಿಷ್ ಅನುವಾದ 'ಬೆಂಗಾಲ್ ನೈಟ್ಸ್' ಕೊನೆಗೊಮ್ಮೆ ಓದಲು ದೊರೆಯಿತು. ತಮ್ಮ ೨೫ನೇ ವಯಸ್ಸಿನಲ್ಲೇ ಬರೆದ ಈ ಪುಸ್ತಕ ರುಮಾನಿಯನ್‌ದಿಂದ ಇತರ ಯುರೋಪಿಯನ್ ಭಾಷೆಗಳಿಗೆ ಅನುವಾದಗೊಂಡರೂ ಇಂಗ್ಲಿಷಿಗೆ ಬಂದದ್ದು ತಡವಾಗಿಯೇ! ಕಾದಂಬರಿಯ ಹಿನ್ನೆಲೆ ಮತ್ತು ಕಥಾ ನಾಯಕಿಯ ಪರಿಚಯವಿದ್ದುದರಿಂದ ಹೆಚ್ಚಿನ ಕುತೂಹಲದಿಂದ ಓದಿದೆ. ವಿದೇಶೀಯನೊಬ್ಬ ಭಾರತವನ್ನು ಅಚ್ಚರಿ, ಅಭಿಮಾನಗಳಿಂದ ಅರಿತುಕೊಳ್ಳುವ ಯತ್ನದ ಹಿನ್ನೆಲೆಯಲ್ಲಿ ಚೆನ್ನಾಗಿ ಓದಿಸಿಕೊಂಡು ಹೋಗುತ್ತದೆ. ಈಗ ಬಹುಮಟ್ಟಿಗೆ ಮಾಯವಾದ ಬಂಗಾಲ, ಆಸ್ಸಾಮಗಳ ನೈಸರ್ಗಿಕ ಸೌಂದರ್ಯದ ವರ್ಣನೆ, ಕಾವ್ಯಮಯವಾಗಿದೆ. ಆದರೆ, ಕಾಂಬರಿಯ ಮುಖ್ಯವಸ್ತುವಾದ ಪ್ರಣಯ ಪ್ರಸಂಗವು ಕೇವಲ ದೈಹಿಕ ಪಾತಳಿಯ ಮೇಲೆ ಹರಿದು ಹೋದಂತೆ ಚಿತ್ರಿಸಿದ ಬಗ್ಗೆ ಮಾತ್ರ ಸಖೇದಾಶ್ಚರ್ಯವುಂಟುಮಾಡಿತು. ಇಲ್ಲಿ ನಾಯಕಿ 'ಮೈತ್ರಿ' ಎಂದು ಕರೆಯಲ್ಪಟ್ಟಿದ್ದಾಳೆ. ಆಕೆಯೊಂದಿಗೆ ನಾಯಕ ಗಾಢ ದೈಹಿಕ ಸಂಬಂಧ ಹೊಂದಿದ ಬಿಚ್ಚು ವಿವರಗಳು ಕಾದಂಬರಿಯಲ್ಲಿವೆ. ಇದೆಲ್ಲ ಲೇಖಕನ ಕಲ್ಪನಾಲಹರಿಯಿದ್ದಿರಲು ಸಾಕು ಎನಿಸಿತು. ಹಲವು ಸನ್ನಿವೇಶಗಳು ಎರಡೂ ಕಾದಂಬರಿಗಳಲ್ಲಿ ಬರುತ್ತವೆ. ಮೈತ್ರಿಯ ತಂದೆ, ಕವಿ ಟಾಗೋರರು,

ಅಲ್ಲಲ್ಲಿ ನುಸುಳಿ ಹೋಗುತ್ತಾರೆ. ಒಂದೆರಡು ಕಡೆ ಸೂಕ್ಷ್ಮ ಪರಿಹಾಸಕ್ಕೂ ಒಳಪಟ್ಟಿದ್ದಾರೆ!

ಕಾದಂಬರಿಯ ಕೊನೆಯಲ್ಲಿ ಪ್ರೇಮಭಂಗದ ಪ್ರತೀಕಾರ ಸಾಧಿಸಲೆತ್ನಿಸಿದ ನಾಯಕಿ, ಓರ್ವ ಹಣ್ಣು ಮಾರುವವನೊಂದಿಗೆ ದೈಹಿಕ ಸಂಬಂಧ ಹೊಂದಿ ಗರ್ಭಿಣಿಯಾಗುವ ಪ್ರಸಂಗವಂತೂ ಅಸಹ್ಯವೆನಿಸುವ ವಿವರಗಳನ್ನು ಹೊಂದಿದೆ. ಬಹುಶಃ ತರುಣನಿಗಾದ ಪ್ರಣಯಭಂಗದ ತೀವ್ರತೆಯಲ್ಲಿ ಬರೆದ ಕೃತಿಯಾಗಿದ್ದರಿಂದ ಹಾಗಾಗಿರಲು ಸಾಕು. 'ನ ಹನ್ಯತೇ' ಅದೇ ನೋವಿನ ಸಾಂದ್ರತೆಯನ್ನು ಅನುಭವಿಸಿದ ಪ್ರೌಢೆಯೊಬ್ಬಳು ನಿವೇದಿಸಿಕೊಂಡ ಭಾರತೀಯ ದೃಷ್ಟಿಕೋನದ ಅಮರ ಪ್ರೇಮದ ಕಥೆಯಾಗಿದೆ. ಹಿನ್ನೆಲೆ ಗೊತ್ತಿಲ್ಲದವರಿಗೆ, ಈ ಎರಡೂ ಕೃತಿಗಳನ್ನು ಬೇರೆ ಬೇರೆಯಾಗಿ ಓದುವವರಿಗೆ, ಹೋಲಿಕೆ ಕಾಣುವದು ಕಠಿಣವೇ ಆಗಬಹುದಾದ ಪರಸ್ಪರ ವಿರುದ್ಧ ಓಘದಲ್ಲಿ ಕಾದಂಬರಿಗಳು ಓಡುತ್ತವೆ. ತಮ್ಮವೇ ಮೆರುಗು, ವಿನ್ಯಾಸ ಪಡೆದಿವೆ.

ಈಗ ಈ ಎರಡೂ ಹಿರಿಯ ಚೇತನಗಳು ಇಲ್ಲ. ಇಬ್ಬರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ತುಂಬ ಹೆಸರುವಾಸಿಯಾಗಿ ಬಾಳಿ, ಕಣ್ಮರೆಯಾದರು. ಒಟ್ಟಿಗೆ ತೀವ್ರ ಪ್ರಣಯಭಂಗ ಅನುಭವಿಸಿದ ಜೀವಿಗಳಿಬ್ಬರು, ವಿಶ್ವದ ಎರಡು ವಿರುದ್ಧಮೂಲೆಗಳಲ್ಲಿ ಬದುಕುತ್ತ ಬರೆದ ಇವೆರಡು ಸಾಹಿತ್ಯಕೃತಿಗಳು ತುಂಬ ವಿಶಿಷ್ಟವಾಗಿವೆ. ಮಾನವ ಲೋಕದ ಚಿರವಿನೂತನ, ಆದರೆ ಭಾರತೀಯ ಹಾಗೂ ಪಾಶ್ಚಾತ್ಯ ಪದ್ಧತಿಯ ಪ್ರಣಯವಿಶ್ಲೇಷಣೆಯ ವಿಭಿನ್ನ ಪ್ರಯೋಗಗಳಾಗಿ ಉಳಿದಿವೆ.

◈◈◈



ಅಪೂರ್ವ ಕಲಾವಿದೆ ಮುಕ್ತಾ ವೆಂಕಟೇಶ

(ಜ. ೧೯೦೩)

ಸ್ವಾತಂತ್ರ್ಯಪೂರ್ವದ ಮೈಸೂರು ಸಂಸ್ಥಾನದಲ್ಲಿ ಮೈಸೂರು ಮಹಾರಾಜರ ನೇರ ಮತ್ತು ಪರೋಕ್ಷ ಪ್ರೋತ್ಸಾಹಗಳಿಂದಾಗಿ ಅನೇಕಾನೇಕ ಸಂಗೀತ, ನೃತ್ಯ, ನಾಟಕ ಕಲಾವಿದರಿಗೆ ತಮ್ಮ ಅಭಿರುಚಿ ಬೆಳೆಸಿಕೊಳ್ಳಲು ಅವಕಾಶ ದೊರೆಯುತ್ತಿತ್ತು. ಪುಷ್ಪೋದ್ಯಾನಗಳಿಂದ ಸುಂದರವಾಗಿದ್ದ ಮೈಸೂರುನಗರ, ಹಲವಾರು ಉದಯೋನ್ಮುಖ ಕಲಾವಿದರಿಗೆ ಸ್ಫೂರ್ತಿಯಾಗಿತ್ತು. ಕ್ರಿ. ಶ. ೧೯೨೦ ರಲ್ಲಿ ಯುವ ಇಂಜಿನಿಯರ್ ಆಗಿ

ಮಹಾರಾಜರ ರೈಲ್ವೆ ಸರ್ವಿಸಿನಲ್ಲಿ ಸೇರ್ಪಡೆ ಹೊಂದಿ, ವೆಂಕಟೇಶಶಾಸ್ತ್ರಿಗಳು ಮೈಸೂರಿನಲ್ಲಿ ನೆಲೆಸಲು ಬಂದಾಗ, ಧರ್ಮಪತ್ನಿ ಮುಕ್ತಾ ಜೊತೆಕೊಟ್ಟರು.

ಮದ್ರಾಸಿನಲ್ಲಿ ಚಿಗುರಿದ ಅವರ ಕಲಾಭಿರುಚಿ, ಮೈಸೂರಿನಲ್ಲಿ ಮೊಗ್ಗಾಗಿ ಬೆಳೆದು, ಪತಿಯೊಂದಿಗೆ ಒಂದು ವರ್ಷದ ವಾಸ್ತವ್ಯಕ್ಕೆ ಇಂಗ್ಲೆಂಡಿಗೆ ತೆರಳಿದಾಗ ಹೂವಾಗಿ ಅರಳುವಂತಾಯಿತು. ಲಂಡನ್ನಿನಲ್ಲಿ ಬ್ರಿಟಿಷ್ ಚಿತ್ರಕಾರ ರ್ಝೋವಿಯರ್ ವಿಲ್ಸ್ ಅವರ ಹತ್ತಿರ ತರಬೇತಿ ಪಡೆದು ಮೈಸೂರಿಗೆ ಹಿಂತಿರುಗಿದಾಗ ಚಿತ್ರಾಸಕ್ತಿ ಹೆಮ್ಮರವಾಗಿತ್ತು. ಜಲವರ್ಣಕಲೆಯನ್ನು ತಮ್ಮ ಮಾಧ್ಯಮವಾಗಿ ಆರಿಸಿಕೊಂಡರು. ತಮ್ಮ ಸಫಲ ದೀರ್ಘಾಯುಷ್ಯದ ಉದ್ದಕ್ಕೂ ಪರಿಸರವನ್ನು ಚಿತ್ರಿಸುತ್ತಲೇ ಬಂದಿದ್ದಾರೆ. ಆದರೆ ಧನದಾಸೆಯಿಂದಲ್ಲ, ಖ್ಯಾತಿಯ ಹಪಾಹಪಿಯಿಂದಲ್ಲ, ಕೇವಲ ಆತ್ಮತೃಪ್ತಿಗಾಗಿ ಚಿತ್ರಕಲೆಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ಪ್ರಶಾಂತವಾದ ಯಾದವಗಿರಿಯ ಭವ್ಯವಾದ ಒಂದು ಬಂಗಲೆಯಲ್ಲಿ ತೊಂಬತ್ತಾರು ವರ್ಷದ ಇವರು ಒಂಟಿ ಜೀವನ ನಡೆಸುವುದನ್ನು ಕಂಡಾಗ ಮುಜುಗರವಾಯಿತು. "ಈ ಏಕಾಂತ ಜುಗುಪ್ಸೆ ತರುವುದಿಲ್ಲವೇ?" ಎಂದು ವಿಚಾರಿಸಿದೆ. "ಬರೆಹಗಾರರಂತೆಯೋ, ಕಲಾವಿದರೂ ಅವರ ಪಾಡಿಗೆ ಅವರನ್ನು ಬಿಟ್ಟರೆ ಒಳ್ಳೊಳ್ಳೆ ಕೃತಿಗಳನ್ನು ರಚಿಸಬಲ್ಲರು. ಈ ಪರಿಸರದೊಂದಿಗೆ ನನ್ನ ನಂಟು ಅರ್ಧಶತಮಾನಕ್ಕೂ ಮಿಕ್ಕಿದ್ದು. ಹೀಗಾಗಿ ಅದರ ಸಹವಾಸದಲ್ಲಿ ನಾನು ಏಕಾಂಗಿನಿ ಎಂದು ಭಾಸವಾಗಲೇ ಇಲ್ಲ. ಅಲ್ಲದೆ ಈ ಮನೆಯೂ ನನಗೆ ವಿಶೇಷ ಮುದ ನೀಡಿದ ತಾಣ. ಪತಿಯವರು ನನ್ನ ಕನಸುಗಳನ್ನೆಲ್ಲ ನನಸಾಗಿಸಲು ಕಟ್ಟಿಸಿದ್ದು. ಈ ಮನೆಯ ಪ್ರತಿಯೊಂದು ವಸ್ತುವಿನೊಂದಿಗೆ ನನಗೆ ಅಚಲವಾದ ಸ್ನೇಹವಿದೆ. ಪತಿಯವರು ಕೆಲ ವರ್ಷಗಳ ಹಿಂದೆ (೧೯೮೫) ಪರಂಧಾಮಕ್ಕೆ ತೆರಳಿದರು.... ಆದರೆ ಬಾಳಿನ ಸವಿನೆನಪುಗಳನ್ನು ನನಗಾಗಿ ಇಲ್ಲಿಯೇ ಬಿಟ್ಟುಹೋಗಿದ್ದಾರೆ. ಕುಂಚ, ಕಾಗದ, ಬಣ್ಣಗಳೇ ನನಗೀಗ ಸಂಗಾತಿ" ಎಂದು ವಿವರಿಸಿದರು.

ಕಸೂತಿಯಿಂದ ಚಿತ್ರಕಲೆಯತ್ತ

ಅವರು ತಮ್ಮ ವಿದ್ಯಾರ್ಥಿ ಜೀವನದಿಂದಲೇ ಕಸೂತಿಯಲ್ಲಿ ಆಸಕ್ತರಾಗಿದ್ದರು. ತಮ್ಮ ಕೊಠಡಿಯಿಂದ ಇಣಚಿ, ಬೆಕ್ಕು ಇತರ ಪ್ರಾಣಿಗಳ ಚಿತ್ರ ತಂದು ತೋರಿಸಿದರು. ಹಲವು ದಶಕಗಳ ಅನಂತರವೂ ಅವುಗಳು

ಅಂದ ಮತ್ತು ಬಣ್ಣವನ್ನು ಕಳೆದುಕೊಳ್ಳದೇ ಇರುವುದನ್ನು ಕಂಡು ಸೋಜಿಗವಾಯಿತು. "ಅನಂತರ ಹಣ್ಣು-ಹಂಪಲು, ಸೃಷ್ಟಿ ಸೌಂದರ್ಯದ ದೃಶ್ಯಗಳನ್ನು ರಚಿಸಲಾರಂಭಿಸಿದೆ" ಎಂದು ತಮ್ಮ ಕೃತಿಗಳನ್ನು ಒಂದೊಂದಾಗಿ ತೋರಿಸಲಾರಂಭಿಸಿದರು. ಒಂದರಲ್ಲಿ ಮೈಸೂರಿನ ಹೆದ್ದಾರಿಯೊಂದನ್ನು ಇಬ್ಬರು ಪುರಸಭಾ ಕರ್ಮಚಾರಿಗಳು ವಿರಾಮವಾಗಿ ಗುಡಿಸುತ್ತಿದ್ದರು. ಇನ್ನೊಂದರಲ್ಲಿ ಜೋಡೆತ್ತಿನ ಗಾಡಿಯೊಂದು ಗುಲ್‌ಮೊಹರ್ ವೃಕ್ಷಗಳ ದಾರಿಯಲ್ಲಿ ಪ್ರಯಾಣದಲ್ಲಿದೆ. ಮಗುದೊಂದರಲ್ಲಿ ದೇವಾಲಯದ ಪರಿಸರದಲ್ಲಿ ಸವಾರಿಮಾಡಿ ಬಂದ ಚಕ್ಕಡಿ ಗಾಡಿಗಳನ್ನು ನೆರಳಲ್ಲಿ ನಿಲ್ಲಿಸಿ, ಪೂಜೆ, ಅಡಿಗೆಗಳಲ್ಲಿ ಮೈಮರೆತವರ ಚಿತ್ರಣವಿದೆ. ತಮ್ಮ ಮನೆಯ ಇಕ್ಕೆಲದಲ್ಲಿರುವ ಹೆಮ್ಮರಗಳ ಹದಿವಯಸ್ಸಿನ ಚಿತ್ರಗಳನ್ನೂ ತೋರಿಸಿದರು. ಶಿವ, ನಟರಾಜನ ನೃತ್ಯಭಂಗಿಯ ಚಿತ್ರ ತೋರಿಸಿದರು. ಬೇರಾರೂ ಯತ್ನಿಸದ ಮಾದರಿಯಲ್ಲಿ ಶಿವನನ್ನು ಅವರು ಚಿತ್ರಿಸಿದ್ದಾರೆ.

"ನಿಸರ್ಗದ ಹತ್ತಾರು ಮುಖಗಳನ್ನು ಸತ್ವಯುತವಾಗಿ ಚಿತ್ರಿಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದರೂ, ಹೂವುಗಳನ್ನೇ ನಿಮ್ಮ ಅಭಿವ್ಯಕ್ತಿಯ ಮಾಧ್ಯಮವಾಗಿ ಆರಿಸಿಕೊಂಡದ್ದೇಕೆ?" ಎಂಬ ಪ್ರಶ್ನೆಗೆ "ಗಿಡಮರಗಳು, ರಸ್ತೆ-ದೇವಾಲಯಗಳು ನಮ್ಮೊಂದಿಗೆ ಬಹಳಕಾಲ ಬದುಕಬಲ್ಲವು. ಆದರೆ ಹೂಗಳು ಭಗವಂತನ ಅತ್ಯಂತ ಸೂಕ್ಷ್ಮ ಸೃಷ್ಟಿ. ನೋಡು ನೋಡುತ್ತಿದ್ದಂತೆ ಮೊಗ್ಗು ಅರಳಿ, ಕಂಪು ಸೂಸುತ್ತ, ಬಾಡಿ ಮುದುಡಿ ಬಿಡುತ್ತವೆ. ಅವುಗಳ ಸೌಂದರ್ಯವನ್ನು ಸದಾಕಾಲ ಸೆರೆಹಿಡಿಯುವ ಹಂಬಲದಿಂದ ಹೂವುಗಳನ್ನು ಹೆಚ್ಚೆಚ್ಚು ಪ್ರೀತಿಯಿಂದ ಚಿತ್ರಿಸಲಾರಂಭಿಸಿದೆ" ಎನ್ನುತ್ತಾ, ಸಂಪಿಗೆಯ ಗೊಂಚಲಿನ ಟೊಂಗೆಯ ಚಿತ್ರ ಮುಂದಿಟ್ಟರು. ಕಡುಹಸಿರು ಹಿನ್ನೆಲೆಯಲ್ಲಿ ಸಂಪಿಗೆ ಗೊಂಚಲು ಅತ್ಯಂತ ನೈಜವಾಗಿ ಚಿತ್ರಿತವಾಗಿತ್ತು. "ಈ ಹೂಗಳಿಗೆ ಅರುವತ್ತು ದಾಟಿತು! ಅಂದು ಕಂಡ, ಮೂಡಿಸಿದವುಗಳ ದರ್ಶನಲಾಭ ಇಂದು ನಿಮಗಾಗುತ್ತಿದೆ" ಎಂದರು.

"ಚಿತ್ರಕ್ಕೆ ಹಿನ್ನೆಲೆಯ ಬಣ್ಣಗಳನ್ನು ಹೇಗೆ ನಿರ್ಧರಿಸುತ್ತೀರಿ?" ಎಂದು ಕೇಳಿದಾಗ –

"ಛಾಯಾಚಿತ್ರಕಾರನಂತೆಯೇ ಚಿತ್ರಕಾರನೂ ತನ್ನ ಕೃತಿ ಸ್ಫುಟವಾಗಿ, ಆಕರ್ಷಕವಾಗಿ ವೀಕ್ಷಕನಿಗೆ ತೋರುವಂತೆ ಸದಾ ಹೆಣಗುತ್ತಿರುತ್ತಾನೆ.

ಅಂತೆಯೇ ವಿರುದ್ಧವಾದ ಬಣ್ಣಗಳನ್ನು ಬಳಸುವುದೇ ವಾಡಿಕೆ. ಬಿಳಿ, ಹಳದಿ, ಕೇಸರಿಗಳಂಥ ತಿಳಿಬಣ್ಣದ ಹೂಗಳನ್ನು ಚಿತ್ರಿಸುವಾಗ, ಕಪ್ಪು, ನೀಲಿ, ಕೆಂಪಿನಂಥ ರಬ್ಬಾದ ಬಣ್ಣಗಳನ್ನು ಹಿನ್ನೆಲೆಯಾಗಿ ಬಳಸಬೇಕಾಗುತ್ತದೆ. ರಬ್ಬಾದ ಹೂವುಗಳಿಗೆ ತಿಳಿಯಾದ ಹಿನ್ನೆಲೆ ಪೂರೈಸಬೇಕಾಗುತ್ತದೆ" ಎನ್ನುತ್ತಾ ಪುಷ್ಪಚಿತ್ರಗಳ ರಾಶಿಯನ್ನೇ ಮುಂದೆ ತಂದಿಟ್ಟರು. ಗುಲಾಬಿ, ಸದಾನಂದ, ನಂದಿಬಟ್ಟಲು, ಸೇವಂತಿಗೆ, ಕಣಗಿಲೆ, ಗೊಂಡೆ ಹೂಗಳೆಲ್ಲ ಅವುಗಳಲ್ಲಿ ಸೇರ್ಪಡೆಯಾಗಿದ್ದವು. ಬೋಗನ್‌ವಿಲ್ಲಾ ಕೂಡ ಇದ್ದು, ಚಿತ್ರಕಾರರನ್ನು ಆಕರ್ಷಿಸುವ ಹೂವಾದೀತು ಎಂದು ನನಗನಿಸಿರಲಿಲ್ಲ.

ಅಭ್ಯಾಸ ಮುಖ್ಯ

"ಮುಕ್ತಾರರವರೇ, ಕೆಲ ಚಿತ್ರಗಳಲ್ಲಿ ಹೂಗಳೊಂದಿಗೆ ಜೇನ್ನೊಣ, ಪಾತರಗಿತ್ತಿಗಳನ್ನೂ ಸೇರಿಸಿರುವಿರಲ್ಲ? ಕೀಟಗಳನ್ನು ಎಂದು ಅಭ್ಯಸಿಸಿದಿರಿ?" ಎಂದರೆ –

"ಕೀಟ, ಪಟ್ಟದಿಗಳ ಚಿತ್ರಣಕ್ಕೆ ಕೀಟಪಂಡಿತನಾಗಬೇಕಿಲ್ಲ. ಪುಷ್ಪಗಳ ಸಹಜೀವಿಗಳಾದ ಕೀಟಗಳನ್ನು ಅವುಗಳೊಂದಿಗೇ ಚಿತ್ರಿಸಿದರೇ, ಅವು ನೈಜವಾಗಿ ತೋರುತ್ತವೆ. ಇದಕ್ಕಾಗಿ ಕಣ್ಣಲ್ಲಿ ಕಣ್ಣಿಟ್ಟು ಅವನ್ನು ಅಭ್ಯಸಿಸುತ್ತೇನೆ. ವಿವರಗಳನ್ನು ತಿಳಿಯಲು ಕೆಲವು ಬಾರಿ ಅವನ್ನು ಸೆರೆಹಿಡಿದು ಇಟ್ಟಿರುತ್ತೇನೆ. ಈ ಸಸ್ಯತಗಣಿ ಚಿತ್ರಿಸಲು ಎಷ್ಟೊಂದು ಕಷ್ಟಪಟ್ಟೆ! ಅದರ ಸಂಗೀತ ಕೇಳುವುದು ಸುಲಭವಾದರೂ ದೃಷ್ಟಿಗೋಚರ ಸುಲಭವಲ್ಲ. ಕಂಡದ್ದನ್ನು ಕೈವಶಮಾಡಿಕೊಳ್ಳುವುದು ಇನ್ನೂ ಬಿಕ್ಕಟ್ಟಿನದು. ಒಂದನ್ನು ಗುಟ್ಟಾಗಿ ಸೆರೆಹಿಡಿದು ಅಭ್ಯಸಿಸಲು ಸಾಧ್ಯವಾದದ್ದಕ್ಕೆ ನೆಮ್ಮದಿ ಎನಿಸಿತು...."

ಕುಂಚ, ಕಾಗದ, ಬಣ್ಣಗಳನ್ನು ಸುಲಭವಾಗಿ ಪಡೆಯಬಹುದೇ ಎಂದಾಗ –

"ಅದರ ಬಗ್ಗೆ ಮಾತನಾಡದೆ ಇರುವುದೇ ಮೇಲು ಅನಿಸುತ್ತದೆ. ಸದ್ಯಕ್ಕೆ ಭಾರತದಲ್ಲಿ ಲಭ್ಯವಿರುವ ಬಣ್ಣಗಳು, ನೈಸರ್ಗಿಕ ವರ್ಣಗಳಿಗೆ ಸರಿಸಾಟಿಯೇ ಅಲ್ಲ. ಹೂವುಗಳನ್ನು ಇದ್ದಕ್ಕಿದ್ದಂತೆ ಚಿತ್ರಿಸಬೇಕಾದರೆ, ವಿದೇಶಿ ಬಣ್ಣಗಳನ್ನು ಬಳಸದೇ ಗತ್ಯಂತರವಿಲ್ಲ. ಇದ್ದವುಗಳನ್ನೇ ಅತ್ಯಂತ ಕೃಪಣತೆಯಿಂದ ಬಳಸುತ್ತಿದ್ದೇನೆ. ಕೆಲ ಸ್ನೇಹಿತರು ವಿದೇಶಗಳಿಗೆ ಹೋದಾಗ

ಒಂದಿಷ್ಟು ತಂದುಕೊಡುತ್ತಾರೆ. ಕುಂಚಗಳು. ಬಹುಕಾಲ ತಾಳಿಕೆ ಬರುವುದರಿಂದ ಸಮಸ್ಯೆಯಿಲ್ಲ. ಕೈಯಿಂದ ತಯಾರಿಸಿದ ಭಾರತೀಯ ಕಾಗದ, ವಿದೇಶೀ ಕಾಗದದಷ್ಟು ಉತ್ತಮವಾಗಿರದಿದ್ದರೂ ಅದನ್ನೇ ಬಳಸುತ್ತೇನೆ. ನನ್ನ ಸ್ನೇಹಿತೆ ಕೆರೊಲಿನ್ ಆಗಾಗ ಪತಿಯೊಂದಿಗೆ ಯುರೋಪು. ಅಮೇರಿಕೆ, ಜಪಾನ್‌ಗಳಿಗೆ ಹೋಗುತ್ತಿರುವುದರಿಂದ, ಹಿಂತಿರುಗುವಾಗ ನನಗೆ ಅತ್ಯವಶ್ಯವಿದ್ದ ಕಲಾ ಸಾಮಗ್ರಿಗಳನ್ನು ತಂದು ಕೊಡುತ್ತಾಳೆ. ಅವಳೇ ಇಂದಿನ ದಿನಗಳಲ್ಲಿ ದಾರಿದೀಪ...." ಎಂದು ಮಾತನ್ನ ಅರ್ಧಕ್ಕೆ ನಿಲ್ಲಿಸಿದರು.

"ನಿಮಗೆ ನೋವಾಗುವ ವಿಷಯವಿದ್ದರೆ ಹೇಳಬೇಕಿಲ್ಲ" ಎಂದಾಗ ಒಂದು ನಿಮಿಷ ಸುಮ್ಮನಿದ್ದು ಮುಂದುವರಿಸಿದರು. "ಇದು ವೈಯಕ್ತಿಕ ವಿಷಯ. ನಿಮಗೆ ಆಸಕ್ತಿ ಇರಲಿಕ್ಕಿಲ್ಲವೆಂದು ಹಿಂದೇಟು ಹಾಕಿದೆ. ನನ್ನವರು ತೊಂಬತ್ತು ವರ್ಷಗಳ ಪರಿಪಕ್ವ ವಯಸ್ಸಿನಲ್ಲಿ ಪರಲೋಕವಾಸಿಗಳಾದರು. ಹಣಕಾಸಿನ ವ್ಯವಸ್ಥೆಯನ್ನು ಸರಿಯಾಗಿ ಇಟ್ಟುಹೋಗಿದ್ದರು. ಆದರೆ ಇಂದಿನ ಬೆಲೆ ಏರಿಕೆಯ ದಿನಗಳಲ್ಲಿ ಅದು ಸಾಲದು! ಎಂದು ಶೀಘ್ರವೇ ಪೇಚಾಡುವಂತೆ ಆಯಿತು. ಕೆಲ ಆಪ್ತರು ಈ ಭವ್ಯ ಬಂಗಲೆಯನ್ನು ಮಾರಿ ಒಂದು ಕಿರುಮನೆಯಲ್ಲಿ ಇರುವಂತೆ, ಅದರ ಹಣದ ಬಡ್ಡಿಯಿಂದಲೇ ಜೀವನ ನಡೆಸಬಹುದೆಂದು ಸೂಚಿಸಿದರು. ನನಗೆ ಅದು ಅತ್ಯಂತ ನೋವಾಗುವ ವಿಷಯವಾದ್ದರಿಂದ ಒಪ್ಪಿಕೊಳ್ಳಲಿಲ್ಲ. ನನ್ನ ಕಲೆಗೆ ಮನ್ನಣೆ ಸಿಗಬೇಕಾದರೆ ಒಂದು ರಾಷ್ಟ್ರೀಯ ಪ್ರದರ್ಶನ ಏರ್ಪಡಿಸಬೇಕೆಂದು ನನ್ನ ಸ್ನೇಹಿತೆ ಕೆರೊಲಿನ್ ಕಷ್ಟಪಟ್ಟು ಜಪಾನಿನಲ್ಲಿ ಒಂದನ್ನು ಏರ್ಪಡಿಸಿಯೇ ಬಿಟ್ಟಳು. ಜಪಾನೀಯರಿಗೆ ಹೂಗಳೆಂದರೆ ಪಂಚಪ್ರಾಣವಷ್ಟೆ? ಬಂದವರೆಲ್ಲ ಹೂಗಳನ್ನು ಮೆಚ್ಚಿಕೊಂಡರು. ಬಹಳಷ್ಟು ಕೃತಿಗಳನ್ನು ಕೊಂಡುಕೊಂಡರು ಕೂಡ."

ಸೀರೆಯ ಬೆಲೆಯಾಯ್ತಲ್ಲಾ!?

"ಭಾರತದಲ್ಲಿ ಕೊಳ್ಳುವವರಿಲ್ಲವೇ?" ಎಂಬ ಪ್ರಶ್ನೆಯೆಸೆದಾಗ– "....ಆಧುನಿಕರು ಭವ್ಯ ಬಂಗಲೆ ಕಟ್ಟಿಸಿದ್ದಾರೆ. ಅಲಂಕರಿಸಲೆಂದು ಪುಷ್ಪಚಿತ್ರಗಳನ್ನು ಖರೀದಿಸಲು ಬಂದಿದ್ದರು. ನನ್ನ ಸ್ನೇಹಿತೆ ಒಂದರ ಬೆಲೆ ಐನೂರೈವತ್ತು ರೂಪಾಯಿಗಳೆಂದಾಗ, 'ಒಂದು ಒಳ್ಳೆ ಸೀರೆಯ ಬೆಲೆ

ಯಾಯ್ತು!' ಎಂದು ಉದ್ಗರಿಸಿದರು. ತೀರ ಪರಿಚಿತರು, ಕಲೆಯ ಬೆಲೆ ಬಲ್ಲವರು, ಕೇವಲ ಇನ್ನೂರು ರೂಪಾಯಿ ಕವರಿನಲ್ಲಿಟ್ಟು ಒಂದು ಚಿತ್ರವನ್ನು ಲಪಟಾಯಿಸಿಬಿಟ್ಟಿದ್ದರು. ಇದನ್ನರಿತ ಸ್ನೇಹಿತೆ, ಹೊಟೇಲಿಗೆ ದುಡ್ಡು ಸುರಿಯುವ ಧನಿಕರಿಗೆ ಕಲಾಕೃತಿಗೆ ದುಡ್ಡಿಲ್ಲವೇ? ಎಂದು ಕಿಡಿಕಿಡಿಯಾಗಿ ಪತ್ರಬರೆದು ಉಳಿದ ಹಣ ವಸೂಲು ಮಾಡಿಯೇ ಬಿಟ್ಟಳು. ಸದ್ಯಕ್ಕೆ ನನ್ನ ಕಲಾಕೃತಿಗಳನ್ನು ವಿದೇಶಗಳಲ್ಲಿ ಮಾರಿ ಬಂದ ಹಣವನ್ನು ನನ್ನ ಕೈಗೆ ಹಾಕುತ್ತಿದ್ದಾಳೆ. ಈ ಬಾರಿ ಪ್ಯಾಕ್ ಮಾಡುವಾತ ಅಡ್ಡ ಮೊಳೆ ಹೊಡೆದು ಚಿತ್ರಗಳಿಗೆ ತೂತಾಗಿದೆ. ಅವುಗಳನ್ನು ದುರಸ್ತಿಗೆ ತಂದುಕೊಟ್ಟಿದ್ದಾಳೆ'' ಎಂದರು.

"ಮಾತನಾಡುತ್ತಿದ್ದಾಗ ಕೈಗಳು ಬಿಡುವಾಗಿರುತ್ತವೆ. ದುರಸ್ತಿ ಕೆಲಸ ಮುಗಿಸಿಯೇ ಬಿಡುತ್ತೇನೆ" ಎಂದು ಕುಂಚ, ಬಣ್ಣ, ನೀರು, ಚಿತ್ರಗಳೊಂದಿಗೆ ಆಸೀನರಾಗಿ ಬಿಟ್ಟರು. ತೂತಾದೆಡೆ, ಹಿಂದಿನಿಂದ ಒಂದು ಕಾಗದದ ಚೂರನ್ನು ಅಂಟಿಸಿದರು. ಅನಂತರ ಅಲ್ಲಿ ಒಂದು ಪಕಳೆ, ಎಲೆ ಬಿಡಿಸಿದುರಸ್ತಿ ಕಾಣದಂತೆ ಮಾಡಿಬಿಟ್ಟರು.

ಎಂದಾದರೊಮ್ಮೆ ಅನಾರೋಗ್ಯದಿಂದ ಬಳಲಿದರೆ ಇವರು ಏನು ಮಾಡುತ್ತಾರೆ? ಎಂಬ ಪ್ರಶ್ನೆ ನನ್ನೊಳಗೆ ಮೂಡಿತು. ಅವರನ್ನು ಪ್ರಶ್ನಿಸಿದಾಗ– "ಎದುರಿನ ರವಿ ನರ್ಸಿಂಗ್ ಹೋಂ ನೋಡಿರುವಿರಲ್ಲವೇ? ಅಲ್ಲಿಯ ಮುಖ್ಯ ಡಾಕ್ಟರರು ಹುಟ್ಟಿದಾಗ, ತೊಟ್ಟಿಲಲ್ಲಿ ಹಾಕಲು ನಾನು ಹೋಗಿದ್ದೆ. ಅವರು ಈಗ ಉತ್ತಮ ಹೃದಯರೋಗತಜ್ಞ. ಸ್ವಲ್ಪ ಅಸೌಖ್ಯವಾದರೂ ಓಡಿ ಬರುತ್ತಾರೆ. ಹಿರಿಯ ಅಳಿಯ ರಾಜೀವ್ ತಾರಾನಾಥ್– ಖ್ಯಾತ ಸರೋದ್‌ವಾದಕರು– ಆಗಾಗ ಬಂದು ವಿಚಾರಿಸಿಕೊಂಡು ಹೋಗುತ್ತಾರೆ. ಕಿರಿಯ ಅಳಿಯ ಜರ್ಮನಿಯಲ್ಲಿ ಭಾರತದ ರಾಯಭಾರಿ. ಎರಡು ವರ್ಷಕ್ಕೊಮ್ಮೆ ಮಗಳು-ಅಳಿಯ ಬಂದು ಹೋಗುತ್ತಾರೆ. ಅಮೇರಿಕೆಯಲ್ಲಿರುವ ಮೂವರು ಮೊಮ್ಮಕ್ಕಳು ಎಂದಾದರೂ ಬಂದು ಹೋಗುವುದಲ್ಲದೇ ಕಾಯಂ ಪತ್ರವ್ಯವಹಾರ ಮಾಡುತ್ತಿರುತ್ತಾರೆ. ನೆರೆಹೊರೆಯವರು ಹಚ್ಚಿಕೊಂಡಿದ್ದಾರೆ. ನಾನು ವಿಶ್ವ ಕುಟುಂಬಿ. ನಿಮ್ಮಂಥ ಕಿರಿಯ(!) ವಯಸ್ಸಿನ ಎಷ್ಟೋ ಸ್ನೇಹಿತರು ಬಂದು

ಮಾತನಾಡಿಸಿ ಹೋಗುತ್ತಾರೆ. ನಿಮ್ಮ ಕಲಾಪ್ರೇಮಕ್ಕೆ ವಂದನೆಗಳು. ನನ್ನ ಇತ್ತೀಚಿನ ಕೆಲ ಕೃತಿಗಳು ಕೆರೊಲಿನ್ ಬಳಿ ಇವೆ" ಎಂದು ಹೇಳಿ ಬೀಳ್ಕೊಟ್ಟರು.

ಕೆರೊಲಿನ್ ಒಂದೊಂದೇ ಕಲಾಕೃತಿ ಎತ್ತಿ ತೋರಿಸುತ್ತಿದ್ದಂತೆ, ಮುಕ್ತಮ್ಮನವರ ಬಗ್ಗೆ ನಾನು ಅರಿತುಕೊಂಡದ್ದು ಅತ್ಯಲ್ಪವೆನಿಸಿತು.

"ಇಂಥ ಅಪೂರ್ವ ಕಲಾಕೃತಿಗಳು ವಿದೇಶಗಳಿಗೆ ಹೋಗುತ್ತಿರುವುದು ಶೋಚನೀಯವಲ್ಲವೇ?" ಎಂದಾಗ ಕೆರೊಲಿನ್ ಗೋಣು ಹಾಕಿದರು. ಭಾರತೀಯರಿಗೆ ಯಾವ ಕಲೆಯ ಬೆಲೆಯೂ ಅರಿಯದು ! ಎಂದು ಭಾರವಾದ ಹೃದಯದಿಂದ ಎದ್ದು ಹೊರಟೆ.

◈ ◈ ◈



ಅನಾಥರ ಅಮ್ಮ ಡಾ. ಆನಂದಿಬಾಯಿ ಪ್ರಸಾದ್

(೧೯೧೨-೧೯೯೩)

ಮೈಸೂರು ನಗರದಲ್ಲಿ ಕಸದ ತೊಟ್ಟಿಯಲ್ಲಿ ಬಿಸಾಕಿದ ಅನಾಥ ಶಿಶುಗಳನ್ನು ತಂದು ಸಾಕಿ ಬೆಳೆಸುತ್ತಿರುವ ವೈದ್ಯೆ, ಸಮಾಜಸೇವಿಕೆ ಒಬ್ಬರು ಇದ್ದಾರೆಂದು ಪತ್ರಿಕೆಗಳಿಂದ ತಿಳಿದಿತ್ತು. ಅವರನ್ನು ಭೇಟಿಮಾಡಲು ಕಿರಿಯ ಸಹೋದ್ಯೋಗಿಯೊಬ್ಬರೊಡನೆ ಗೋಕುಲಂ ಮೂರನೆಯ ಹಂತದಲ್ಲಿದದ್ದ "ಬಾಪೂಜಿ ಚಿಲ್ಡ್ರನ್ಸ ಹೋಂ"ಗೆ ಹೋದಾಗ ಅರ್ಧ ಎದ್ದ ಕಟ್ಟಡವೊಂದು ಕಂಡಿತು. ಪಕ್ಕದಲ್ಲಿ ಕಿರಿಯದಾದ ೩ ಕೊಠಡಿಗಳ ಎತ್ತರ ಮೆಟ್ಟಿಲಿನ ಕಟ್ಟಡದ ಹೊರಗೆ ಕುಳಿತಿದ್ದ ಸಾದಾ ಉಡುಪಿನ ಸೌಮ್ಯ ಮುಖಭಾವದ

ಅಪ್ಪಟ ಗೃಹಿಣಿಯ ಕಳೆಯುಳ್ಳ ಮಹಿಳೆಯನ್ನೇ ಡಾ. ಆನಂದಿಬಾಯಿ ಪ್ರಸಾದ್ ಎಂದು ಪರಿಚಯಿಸಲಾಯಿತು.

ಅವರ ತೊಡೆಯ ಮೇಲೆ ಒಂದು ವರ್ಷದ ಮಗುವಿತ್ತು. ಒಂದು ಕೈಯನ್ನು ಕಳೆದುಕೊಂಡ ಎರಡು ವರ್ಷದ ಇನ್ನೊಂದು ಮಗು ಒಂದೇ ಕೈಯಿಂದ ಅವರ ಸೀರೆಯ ನಿರಿಗೆ ಹಿಡಿದು ತಾನೂ ಅವರ ತೊಡೆಯೇರಿ ಕುಳಿತುಕೊಳ್ಳುವ ಯತ್ನದಲ್ಲಿತ್ತು. ಐದು ವರ್ಷದ ಇನ್ನೊಂದು ಹುಡುಗಿ ಖುರ್ಚಿಯ ಬೆನ್ನಹಿಂದೆ ಅವರ ಕೊರಳನ್ನು ಬಳಸಿ ನಿಂತಿದ್ದಳು. ಯಾವ ಸಲಹೆ ಸೂಚನೆ ಕೊಡದೇ ಅವರು ನಡೆಸುತ್ತಿದ್ದ ಅನಾಥಾಶ್ರಮಕ್ಕೆ ಹೋದಾಗ ಕಂಡ ನೋಟವಿದು. ತುಂಬ ಕಷ್ಟಪಟ್ಟು ಕಟ್ಟಡ ಮುಗಿಸಲು ನಿಧಿ ಹೊಂದಿಸುವಲ್ಲಿ ತೊಡಗಿದ್ದರು. ಆಗಷ್ಟೇ ವರ್ಗವಾಗಿ ಹೋಗಿದ್ದ ವಿಶೇಷ ಜಿಲ್ಲಾಧಿಕಾರಿಯಾಗಿ ಬಂದಿದ್ದ ಶ್ರೀ ಪ್ರಭಾಕರ ಅವರು ತಾವು ಕೇಳಿದಾಕ್ಷಣ ನಿವೇಶನವನ್ನು ಮಂಜೂರು ಮಾಡಿದ್ದನ್ನು ಕೃತಜ್ಞತಾಪೂರ್ವಕ ನೆನೆಸಿಕೊಂಡರು.

ಧನಸಹಾಯ ನಿರೀಕ್ಷಿತ ಪ್ರಮಾಣದಲ್ಲಿ ಒದಗದೇ ಇದ್ದುದರಿಂದ ೧೯೮೩ ರಲ್ಲಿ ಕಟ್ಟಡ ಅಪೂರ್ಣವಾಗಿತ್ತು. ಆಗ ಅನಾಥಾಶ್ರಮದಲ್ಲಿ ಮೂವತ್ತು ಮಕ್ಕಳಿದ್ದರು. ಎಲ್ಲವೂ ೧೨ ವರ್ಷದ ಒಳಗಿನವು. ಮೂವರು ಗಂಡುಮಕ್ಕಳು ಉಳಿದವೆಲ್ಲ ತಾಯಿಯ ಉಪೇಕ್ಷೆಗೆ ಒಳಗಾಗಿ ಬಿಸುಡಲ್ಪಟ್ಟವು. ಡಾಕ್ಟರರ ತೊಡೆಯ ಮೇಲಿದ್ದ ಮಗುವಿಗೆ ತಲೆಯಲ್ಲಿ ತಗ್ಗು ಬಿದ್ದು ಅಲ್ಲಿ ಕೂದಲಿರಲಿಲ್ಲ. ತೊಟ್ಟಿಯಲ್ಲಿ ಹಾಕಿದ ಹಸುಗೂಸಿಗೆ ಕಾಗೆ ಕುಕ್ಕಿ ಆದ ಗಾಯವೆಂದರು. ದಾರಿಹೋಕರು ನವಜಾತ ಶಿಶುವಿನ ಆಕ್ರಂದನ ಕೇಳಿ, ಅದು ಬರುತ್ತಿದ್ದ ಸ್ಥಳ ಪತ್ತೆಹಚ್ಚಿ ಪೊಲೀಸರಿಗೆ ತಿಳಿಸಿ ಆ ಕೂಡಲೇ ಕಸ್ಟಡಿಗೆ ತೆಗೆದುಕೊಳ್ಳುವಂತೆ ವಿನಂತಿಸಿದ್ದರಿಂದ ಮಗು ಬದುಕಿದ ವಿಚಾರ ಹೇಳಿದರು. ಮೊಂಡುಕೈಯ ಮಗುವನ್ನೆತ್ತಿಕೊಂಡು, ಅದರ ಕೈಯನ್ನು ನಾಯಿ ತಿಂದು ಹಾಕಿದ ವಿಚಾರ ಹೇಳಿದರು. ಪ್ರತಿ ಮಗುವಿಗೂ ಒಂದೊಂದು ಇತಿಹಾಸವಿದೆ. ತಾಯಿ ತಾನಾಗಿ ಬಂದು ಒಪ್ಪಿಸಿದ್ದು. ತಾಯಿಯಾದವಳು ಗಂಡ ಹಾಗೂ ಮಗುವನ್ನು ತ್ಯಜಿಸಿ ಇನ್ನೊಬ್ಬನೊಡನೆ ಓಡಿಹೋದಾಗ ಮಗುವನ್ನು ಇವರ ಮನೆಯ ಬಾಗಿಲಲ್ಲಿ ಇಟ್ಟಿದ್ದು, ತಾಯಿಯಿಲ್ಲದ ಮಗುವನ್ನು ಸಾಕುತ್ತಿದ್ದ ತಂದೆಯೇ

ದುರ್ಮರಣಕ್ಕೆ ಈಡಾಗಿ, ಪೊಲೀಸರು ಮಗುವನ್ನು ಇವರಿಗೆ ಒಪ್ಪಿಸಿದ್ದು. ಕೋರ್ಟು ಇವರಿಗೆ ಕೊಡಮಾಡಿದವು ಹೀಗೆ ಕೆಲವೊಬ್ಬರ ಚರಿತ್ರೆ ಹೇಳಿದರು. ಇನ್ನು ಕೆಲವು ಮಕ್ಕಳ ವಿಚಾರವನ್ನು ಹೇಳಲು ಅವರು ಇಷ್ಟಪಡಲಿಲ್ಲ.

ಆ ದಿನಗಳಲ್ಲಿ ಮಕ್ಕಳ ದೈನಂದಿನ ಆಹಾರ, ಔಷಧ, ಅವಶ್ಯಕ ಬಟ್ಟೆಗಳ ವ್ಯವಸ್ಥೆಯನ್ನು ಸ್ವಂತ ಖರ್ಚಿನಿಂದ ನೋಡಿಕೊಳ್ಳುತ್ತಿದ್ದರು. ಓರ್ವ ಸ್ಥಳೀಯ ಮಹಿಳೆ ಪ್ರತಿದಿನವೂ ೩೦ ಮೊಟ್ಟೆಗಳನ್ನು ಮಕ್ಕಳಿಗೆ ಕೊಡುತ್ತ ಅಜ್ಞಾತವಾಗಿಯೇ ಉಳಿಯಲು ಇಚ್ಛಿಸಿದ್ದರು. ಆ ಕೊಡುಗೆ ಅನೇಕ ವರ್ಷಗಳವರೆಗೆ ನಡೆದುಬಂದಿತು. ಕೆಲವರು ಹಳೇ ಬಟ್ಟೆಗಳನ್ನು ಮಕ್ಕಳಿಗೆ ಕೊಡಮಾಡಲು ಉತ್ಸುಕರಿದ್ದರು. ಡಾಕ್ಟರರು ಇದಕ್ಕೆ ಒಪ್ಪಲಿಲ್ಲ. ಮೊದಲೇ ಸಮಾಜದಿಂದ ತಿರಸ್ಕೃತವಾದವೆಂದು ತಿಳಿದ ಮಕ್ಕಳು, ಹೆರವರು ಉಟ್ಟು ಒಗೆದ ಬಟ್ಟೆಗಳನ್ನು ಧರಿಸಿ ಸತತವೂ ಆ ಭಾವನೆ ಬೆಳೆಸಿಕೊಂಡು ಬರುವದು ಅವರಿಗೆ ಬೇಡವಾಗಿತ್ತು. ಅದ್ದರಿಂದ ಹಣ ಅಥವಾ ಸಂಸ್ಥೆಗೆ ಸಹಾಯವಾಗುವಂಥ ಉಪಕರಣಗಳನ್ನಷ್ಟೆ ಸ್ವಾಗತಿಸಿದರು.

ಆದರೆ ಪರಿಸ್ಥಿತಿ ಬೇಗ ಸುಧಾರಿಸಲಾರಂಭಿಸಿತು. ಸಮಾಜ ಕಲ್ಯಾಣ ಇಲಾಖೆಯಿಂದ ಧನ ಸಹಾಯ ಒದಗಿತು. ಅವರ ನಿಸ್ವಾರ್ಥ ಸೇವೆಯನ್ನು ಕಣ್ಣಾರೆ ಕಂಡು ಅರಿತಿದ್ದ ದಾನಿಗಳಿಂದ ವಿವಿಧ ಕೊಡುಗೆಗಳ ರೂಪದಲ್ಲಿ ಸಹಾಯ ಬರಲಾರಂಭಿಸಿತು. ದೊಡ್ಡ ರೆಫ್ರಿಜಿರೇಟರ್, ಟೆಲಿವಿಷನ್, ಹಾಸಿಗೆಗಳು, ಬಟ್ಟೆಗಳು, ಮಕ್ಕಳಿಗೆ ಪುಸ್ತಕಗಳು, ಮಂಚ, ಟೇಬಲ್, ಒಗೆಯುವ ಯಂತ್ರ, ಕೊನೆಗೆ ಒಂದು ವ್ಯಾನ್‌ಕೂಡ ಬಂದಿತು! ಆದರೆ ಇಷ್ಟಾಗಲು ೫ ವರ್ಷಗಳು ಕಳೆದಿದ್ದವು.

ಪರಿಚಯವಾಗುತ್ತಿದ್ದಂತೆ ಒಂದು ದಿನ ಆನಂದಿಬಾಯಿಯವರು ಅಚ್ಚ ಕೊಂಕಣಿಯಲ್ಲಿ ಮಾತನಾಡಿದಾಗ ತುಂಬ ಆಶ್ಚರ್ಯವೆನಿಸಿತು. ತಾನು ಮೂಲತಃ ದಕ್ಷಿಣಕನ್ನಡಜಿಲ್ಲೆಯವಳಾದರೂ ಕೊಂಕಣಿತನವನ್ನಾಗಲಿ, ಆ ನೆಲದ ಯಾವ ಅಂಶಗಳನ್ನಾಗಲಿ ಉಳಿಸಿಕೊಂಡಿಲ್ಲವೆಂದು ಹೇಳಿದರು. ಅವರ ಜೀವನ-ಸಾಧನೆಗಳ ವಿವಿಧ ಹಂತಗಳನ್ನು ಅವರ ಬಾಯಿಂದಲೇ ಕೇಳಿ ತಿಳಿದುಕೊಂಡಾಗ ಈ ಮಾತು ಸ್ಪಷ್ಟವಾಗುತ್ತ ಬಂದಿತು.

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದ ನಾರಾಯಣ ಪೈ, ಅಕ್ಕಮ್ಮ ದಂಪತಿಗಳ ಒಂಭತ್ತನೆಯ ಮಗುವಾಗಿ ಆನಂದಿಬಾಯಿ ೧೯೧೨ ಏಪ್ರಿಲ್

೧೯ ರಂದು ಜನಿಸಿದರು. ತಂದೆಯವರದು ಹೆಸರಿಗೆ ಚಿಕ್ಕ ಅಂಗಡಿಯಿತ್ತು. ತುಂಬ ಬಡತನ. ತಾನು ಹುಟ್ಟುವಾಗ ತಾಯಿಗೆ ೪೦ ವರ್ಷವಾದರೂ ದಾಟಿದ್ದಿರಬೇಕು ಎನ್ನುತ್ತಿದ್ದರು. ಕೊನೆಯರಿಯದ ಬಡತನದಿಂದಾಗಿ ಎಲ್ಲ ಮಕ್ಕಳೂ ನಿರ್ಲಕ್ಷಿಸಲ್ಪಟ್ಟಿದ್ದರು. ಹಿರಿಯ ಗಂಡುಮಕ್ಕಳೆಲ್ಲ ಚಿಕ್ಕಪುಟ್ಟ ಕೆಲಸ ಹುಡುಕಿಕೊಂಡು ಚದುರಿಹೋದರು. ಒಬ್ಬಾತ ಡ್ರಾಯವರ್ ಆಗಿದ್ದ. ಪುಟ್ಟ ಆನಂದಿ, ಒಂದುವರೆ ವರ್ಷಕ್ಕೆ ತಂದೆಯನ್ನು ಕಳೆದುಕೊಂಡಳು. ಅಂಥದರಲ್ಲಿ ತಾಯಿ ತಮ್ಮನ್ನು ಹೇಗೆ ಬೆಳೆಸಿದರು ಎಂಬುದೇ ಆಶ್ಚರ್ಯವೆನ್ನುತ್ತಿದ್ದರು. ಚಿಕ್ಕಂದಿನ ಒಂದು ಘಟನೆ ತಮ್ಮ ನೆನಪಿನಲ್ಲಿ ಹಸಿರಾಗಿ ನಿಂತಿದ್ದನ್ನು ಹೇಳಿದ್ದರು. ಇಡೀ ದಿನ ಉಪವಾಸವಿದ್ದು ಸಂಜೆಗೆ ತಾಯಿ ಕೆಲಸಕ್ಕೆ ಹೋದ ಮನೆಯಿಂದ 'ಕಣಿ' (ನುಚ್ಚು)ಯನ್ನು ತಂದಿದ್ದರು. ಅದನ್ನು ಬೇಯಿಸಿದರೆ ಉಪ್ಪು ಕೂಡ ನೆಂಜಿಕೊಳ್ಳಲು ಇರಲಿಲ್ಲ. ನೆರೆಮನೆಯ ದೀವರ ಹೆಣ್ಣುಮಗಳ ಹತ್ತಿರ ಒಂದು ಪಾವಾಣೆ (ಅಂದಿನ ೩ ಕಾಸು) ಸಾಲಮಾಡಿ ಒಂದು ಕಾಸಿನ ಉಪ್ಪು, ಒಂದು ಕಾಸಿನ ಮೆಣಸು ತಂದು ಗಂಜಿಯೂಟ ಮಾಡುವ ಪ್ರಸಂಗ ಬಂದಿತು.

ಹಿರಿಯ ಅಕ್ಕಂದಿರನ್ನು ಮದುವೆ ಮಾಡಿಕೊಟ್ಟಿದ್ದರು. ಒಬ್ಬಳು ಸ್ಥಿತಿವಂತರ ಮನೆಯನ್ನೇ ಸೇರಿದ್ದಳು. ತಂದೆ ತೀರಿಕೊಂಡ ಅಲ್ಪಕಾಲದಲ್ಲೇ ಕೊನೆಯ ಇಬ್ಬರು ತಂಗೆಂದಿರನ್ನು ತನ್ನ ಮನೆಗೆ ಕರೆದೊಯ್ದು ಮಮತೆಯಿಂದ ಸಾಕಿದಳು. ಕನಸಿನಲ್ಲಿ ಕಾಣದ ಜರಿಲಂಗ, ರೇಶ್ಮೆ ಜಂಪರ್, ಚಿಕ್ಕ ಚಿನ್ನದ ಒಡವೆಗಳು ಬಾಲೆಯರಿಗೆ ಬಂದವು. ಅಕ್ಕ ಹೃದ್ರೋಗಿಯಾಗಿದ್ದಳು. ಮಕ್ಕಳಿರಲಿಲ್ಲ. 'ಆನಂದಿ ನೀನು ತುಂಬ ಓದಬೇಕು. ಚೆನ್ನಾಗಿ ಕಲಿತು ಡಾಕ್ಟರ್ ಆಗಬೇಕು. ನನ್ನಂಥ ರೋಗಿಗಳನ್ನು ಗುಣಪಡಿಸಬೇಕು' ಎಂದು ಆಗಾಗ ಹೇಳುತ್ತಿದ್ದರಂತೆ. ಆ ಪುಟ್ಟ ವಯಸ್ಸಿನಲ್ಲಿ ಡಾಕ್ಟರ್ ಆಗುವ ವಿಚಾರದ ಬೀಜವನ್ನು ಬಿತ್ತಿದ್ದು ಪ್ರಾಯಶಃ ಈ ಅಕ್ಕನೇ.

ಇನ್ನೊಂದು ಘಟನೆ ಇದೇ ಅಕ್ಕನಿಗೆ ಸಂಬಂಧಿಸಿದ್ದು. ಮನೆಗೆ ಬಂದ ನೆಂಟರು ಯಾವುದೋ ಪ್ರದರ್ಶನಕ್ಕೆ ಅಕ್ಕನೊಂದಿಗೆ ಜಟಕಾದಲ್ಲಿ ಹೊರಟಿದ್ದರು. ಪುಟ್ಟ ಆನಂದಿ ತಾನೂ ಬರುವದಾಗಿ ಹಟ ಹಿಡಿದಳು. ಜಟಕಾದಲ್ಲಿ ಸ್ಥಳವಿರಲಿಲ್ಲ. "ಆನಂದಿ ಹೇಗಿದ್ದರೂ ನೀನು ಪ್ರದರ್ಶನ

ನೋಡಿದ್ದಿಯಲ್ಲ, ಈಗ ಬರುವದು ಬೇಡ. ಬಂದವರಿಗೆ ಸ್ಥಳಕೊಡು ಎಂದು ಅಕ್ಕ ಹೇಳಿದರೂ ಅಕ್ಕನ ಮುದ್ದಿನಕಣಿ, ತಾನು ಪ್ರದರ್ಶನ ನೋಡಿಯೇ ಇಲ್ಲ! ಈಗ ಬಂದೇ ಬರುತ್ತೇನೆ ಎಂದು ಹಟ ಹಿಡಿದು ಕೊನೆಗೆ ಎಲ್ಲರೂ ಪ್ರದರ್ಶನದ ಸ್ಥಳ ತಲುಪಿದರು. ಅಲ್ಲಿ ಹೋದೊಡನೆ ಆನಂದಿ ತಾನೇ ಮುಂದಾಳ್ತನ ವಹಿಸಿಕೊಂಡು ಅಲ್ಲಿ ಹಾಗಿದೆ, ಇಲ್ಲಿ ಹೀಗಿದೆ ಎಂದು ವಿವರಣೆ ಕೊಡಲಾರಂಭಿಸಿದಳು. ಅಕ್ಕ ತನ್ನನ್ನೆ ಗಮನಿಸುತ್ತಿದ್ದ ವಿಚಾರ. ಆನಂದಿಗೆ ಹೊಳೆಯಲೇ ಇಲ್ಲ.

ಮನೆಗೆ ಹಿಂದಿರುಗಿದೊಡನೆ ಅಕ್ಕ 'ಆನಂದಿ, ಕೈಕಾಲು ತೊಳೆದುಕೊಂಡು ಇಲ್ಲಿ ಬಾ' ಎಂದು ದೇವರಕೋಣೆಯಿಂದ ಕರೆದಳು. ಅಕ್ಕ ಹೇಳಿದಂತೆ ಮಾಡಿ ಬಂದಾಗ ದೇವರೆದುರು ಕುಳ್ಳಿರಿಸಿ "ಇನ್ನು ಮುಂದೆ ಸುಳ್ಳು ಹೇಳುವದಿಲ್ಲ. ನನ್ನಿಂದಾದ ಸಹಾಯ ಇತರರಿಗೆ ಮಾಡದೇ ಇರುವದಿಲ್ಲ" ಎಂದು ಪ್ರಮಾಣ ಮಾಡಿಸಿದಳಂತೆ. ತನ್ನ ವಯಸ್ಸಿನ ಉಳಿದ ಮಕ್ಕಳ ಮೊಂಡುತನಗಳೆಲ್ಲ ತನ್ನಲ್ಲಿದ್ದವು. ಆದರೆ ಆ ಕ್ಷಣ ತನ್ನ ತಪ್ಪಿನ ಅರಿವೂ ಆಗಿತ್ತು. ಆ ಮಾತನ್ನು ಕೊನೆತನಕ ಪಾಲಿಸಿಕೊಂಡು ಹೋಗಬೇಕು ಎಂಬ ಮಾತು ಮನಸ್ಸಿನಲ್ಲಿ ನಿಂತು ಬಿಟ್ಟಿತು ಎನ್ನುತ್ತಿದ್ದರು.

ಈ ಅಕ್ಕ ಹೆಚ್ಚಿನ ಅಕ್ಕರೆಯಿಂದ ಇಬ್ಬರು ತಂಗೆಂದಿರನ್ನು ಬೆಳೆಸಿದರೂ ತನ್ನ ೨೬ ನೇ ವಯಸ್ಸಿಗೆ ತೀರಿಕೊಂಡರು. ತಿರುಗಿ ಇಬ್ಬರು ಸೋದರಿಯರು ತಬ್ಬಲಿಯಾದರು. ಡ್ರಾಯವರ್ ಅಣ್ಣ ಈ ತಂಗೆಂದಿರ ಶಿಕ್ಷಣ ನಿಂತು ಹೋಗಬಾರದೆಂದು ಅವರನ್ನು ಮುಂಬೈಗೆ ಕರೆದೊಯ್ದ.

ರಾಷ್ಟ್ರೀಯ ಚಳುವಳಿಯ ದಿನಗಳವು. ಸ್ತ್ರೀ ಶಿಕ್ಷಣ, ಗಾಂಧೀಜಿಯವರ ರಾಷ್ಟ್ರೀಯತೆಯ ಪ್ರಣಾಲಿ, ಸ್ತ್ರೀಯರನ್ನು ಸಕ್ರಿಯವಾಗಿ ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿಸುವ ಪ್ರಯತ್ನಗಳು ಜಾರಿ ಇದ್ದವು. ಸುದೈವದಿಂದ ಬಾಪೂಜಿಯವರ ಕಟ್ಟಾ ಅನುಯಾಯಿ, ಸುಪ್ರಸಿದ್ಧ ಸ್ವಾತಂತ್ರ್ಯ ಸೇನಾನಿ ಮತ್ತು ಸಮಾಜಸೇವಿಕೆ ಪ್ರೇಮಾ ಕಂಟಕ್ ಅವರು ನಡೆಸುತ್ತಿದ್ದ ಬೋರ್ಡಿಂಗ್‌ಸ್ಕೂಲಿನಲ್ಲಿ ಇವರಿಗೆ ಪ್ರವೇಶ ಸಿಕ್ಕಿತು. ದೇಶಪ್ರೇಮ, ಬಡವರ ಬಗೆಗಿನ ಅನುಕಂಪಗಳ ಜೊತೆಗೆ ಸ್ವಾವಲಂಬನ, ಕಷ್ಟಸಹಿಷ್ಣುತೆ, ನಿರಾಡಂಬರಗಳ ಜೀವನವನ್ನು ಕ್ರಮೇಣ ರೂಢಿಸಿಕೊಂಡರು. ಹಾಯಸ್ಕೂಲ

ಶಿಕ್ಷಣ ಅಂತೂ ಮುಗಿಸಿದರು. ಆದರೆ ಮಲೇರಿಯ ಜ್ವರ ಆಗಾಗ ಪೀಡಿಸುತ್ತಿತ್ತು. ಬದಲಾವಣೆಗೆಂದು ಊರಿಗೆ ಬಂದು ಮುಂದಿನ ಓದಿಗೆಂದು ಮೈಸೂರು ಸೇರಿಕೊಂಡರು.

ಆ ದಿನಗಳಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ತ್ರೀಶಿಕ್ಷಣಕ್ಕೆ ವಿಶೇಷ ಪ್ರೋತ್ಸಾಹವಿತ್ತು. ಫೀಯಲ್ಲಿ ರಿಯಾಯಿತಿ, ಬುದ್ಧಿವಂತ ಮತ್ತು ಯೋಗ್ಯತಾವಂತ ಹುಡುಗಿಯರಿಗೆ ವಿದ್ಯಾರ್ಥಿವೇತನ, ಹಾಸ್ಟೆಲ್ ಸವಲತ್ತುಗಳು ಒದಗುತ್ತಿದ್ದವು. ಈ ಇಬ್ಬರು ಸೋದರಿಯರು ತಮ್ಮ ವಿದ್ಯಾರ್ಥಿವೇತನದಲ್ಲಿಯೇ ಸ್ವಲ್ಪ ದುಡ್ಡು ಉಳಿಸಿ ತಾಯಿಗೆ ಆಗಾಗ ಹತ್ತು-ಹನ್ನೆರಡು ರೂಪಾಯಿ ಕಳಿಸುತ್ತಿದ್ದರಂತೆ.

ಇಂಟರ್‌ಮಿಡಿಯಟದಲ್ಲಿ ನಿರೀಕ್ಷಿಸಿದಷ್ಟು ಗುಣಗಳನ್ನು ಪಡೆಯಲಾಗದೇ ವೈದ್ಯಕೀಯ ಕಾಲೇಜಿಗೆ ಹೋಗಲಾಗದೇ ಬಿ. ಎಸ್‌ಸಿ. ಯನ್ನು ಮುಂದುವರಿಸಬೇಕಾಯಿತು. ತಾನು ಶಿಕ್ಷಕಿಯಾಗಿ ಅಕ್ಕನ ಬಿ.ಎಡ್ ಖರ್ಚು ನೋಡಿಕೊಳ್ಳುವದು. ನಂತರ ಅಕ್ಕನು ಶಿಕ್ಷಕಿಯಾಗಿ ತನ್ನನ್ನು ಓದಿಸುವದು ಎಂಬ ನಿರ್ಧಾರ ಕೈಕೊಂಡು ಇಬ್ಬರೂ ಅದರಂತೆ ನಡೆದುಕೊಂಡರು.

ಓದು, ಸ್ವತಂತ್ರ ವೃತ್ತಿಗಳು ಸಾಧಿಸಿದವು. ಆನಂದಿಯವರ ವೈದ್ಯಕೀಯ ಅಧ್ಯಯನ ಪ್ರಾರಂಭವಾಯಿತು. ಬಡತನ ಮುಂದುವರಿಯಿತು. ಹಿರಿಯರಾರೂ ಇಲ್ಲದ್ದರಿಂದ ಅಕ್ಕನ ವಿವಾಹ ಸುಲಭಸಾಧ್ಯವಿರಲಿಲ್ಲ. ಚಿಕ್ಕಂದಿನಲ್ಲೇ ಹುಟ್ಟೂರನ್ನು ಬಿಡಬೇಕಾಗಿ ಬಂದು ಮುಂಬೈ-ಮೈಸೂರುಗಳಲ್ಲಿದ್ದು. ಆಶ್ರಮ-ಹಾಸ್ಟೆಲುಗಳಲ್ಲಿ ಹಲವು ಜಾತಿ-ಪಂಥದ ಜನರೊಂದಿಗೆ ಸಹಜೀವನ ನಡೆಸಿ ಕುಲ, ಜಾತಿ, ಭಾಷೆಗಳೆಂಬ ಕೃತ್ರಿಮ ಭೇದದಲ್ಲಿ ವಿಶ್ವಾಸವನ್ನು ಸೋದರಿಯರು ಎಂದೋ ಕಳೆದುಕೊಂಡಿದ್ದರು. ರಾಷ್ಟ್ರೀಯ ಆಂದೋಲನವೆಂಬುದು ಅಸಂಖ್ಯ ಜಾತಿ-ಜನಾಂಗದವರನ್ನು ಬೆಸುಗೆ ಹಾಕಿದ ಪರಿ ವಿಸ್ಮಯಕಾರಿಯಾಗಿತ್ತೆಂದು ಡಾಕ್ಟರರು ಉದ್ಗರಿಸಿದ್ದರು. ಬಿ.ಎಸ್‌ಸಿ., ಬಿ.ಎಡ್. ಮುಗಿಸಿ ಶಿಕ್ಷಕಿಯಾಗಿದ್ದ ಹಿರಿಯ ಸೋದರಿಗೆ ಡಾಕ್ಟರಿ ಓದು ಪ್ರಾರಂಭಿಸಿದ ತಂಗಿಯೇ ವರಾನ್ವೇಷಣೆ ಪ್ರಾರಂಭಿಸಿದರು. ಒಂದು ದಿನಪತ್ರಿಕೆಯಲ್ಲಿ ವಿದೇಶದ ಶಿಕ್ಷಣ ಮುಗಿಸಿ ಒಳ್ಳೆಯ ನೌಕರಿಯಲ್ಲಿದ್ದ ಮಲಯಾಳಿ ಪಿಳ್ಳೆ ತರುಣನೊಬ್ಬ ತನಗೆ ಸುಶಿಕ್ಷಿತ ವಧು

ಬೇಕೆಂದು ಜಾಹೀರಾತು ಕೊಟ್ಟಿದ್ದನ್ನು ಆನಂದಿ ನೋಡಿದರು. ತನ್ನ ಅಕ್ಕನಿಗೆ ಯೋಗ್ಯ ವರನಾಗಬಹುದೆಂದು ಮುಂಬೈಗೆ ಧಾವಿಸಿದರು. ನೇರ ಆ ತರುಣ ಕೆಲಸ ಮಾಡುತ್ತಿದ್ದ ಕಂಪನಿಯ ಆಫೀಸಿಗೇ ನುಗ್ಗಿ, ನೇರವಾಗಿ ಬಾಸ್‌ನನ್ನೇ ಕಂಡು ತನ್ನನ್ನು ಪರಿಚಯಿಸಿಕೊಂಡು ವರನ ಬಗ್ಗೆ ಮಾಹಿತಿಪಡೆದರು. ಈ ತರುಣಿಯ ಧೈರ್ಯ, ಸಾಹಸಗಳಿಗೆ ಬೆರಗಾದ ಬಾಸ್ ಬೇಕಾದ ಎಲ್ಲ ಮಾಹಿತಿ ಪೂರೈಸಿದರಲ್ಲದೇ ವರನ ಕುರಿತು ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದರು. ನಂತರ ವರನನ್ನು ಕಂಡು ಮಾತನಾಡಿಸಿದರು. ಆತ ಬಂದು ಅಕ್ಕನನ್ನು ಕಂಡು ಮಾತನಾಡಿಸಿ ಒಪ್ಪಿ ಮದುವೆಯಾದರು. ಅಕ್ಕ ಆದರ್ಶಪ್ರಾಯವಾದ ಸಂಸಾರವನ್ನು ನಡೆಸಿದರು. Charity begins at home ಎಂಬ ಇಂಗ್ಲಿಷ್ ಗಾದೆಯಿದೆ. ದಾನ ಮನೆಯಲ್ಲೇ ಪ್ರಾರಂಭವಾಗುತ್ತದೆ ಎಂದು ಅಕ್ಕನ ಕನ್ಯಾದಾನದಿಂದಲೇ ತಮ್ಮ ಮುಂದಿನ ಸಾರ್ವಜನಿಕ ದಾನಕಾರ್ಯದ ಪ್ರಾರಂಭಕ್ಕೆ ಅಡಿಗಲ್ಲು ಹಾಕಿದರು ಆನಂದಿಬಾಯಿ.

ಬಿ.ಎಸ್‌ಸಿ. ಓದುತ್ತಿದ್ದಾಗಲೇ ಶ್ರೀ ಡಿ. ಆರ್. ಪ್ರಸಾದ್ ಅವರ ಪರಿಚಯ ಆನಂದಿಬಾಯಿಯವರಿಗೆ ಇತ್ತು. ಇಬ್ಬರೂ ಮೆಡಿಕಲ್ ಓದನ್ನು ಜೊತೆಗೇ ಪ್ರಾರಂಭಿಸಿದಾಗ ಪರಿಚಯ, ಪ್ರಣಯದಲ್ಲಿ ಪರಿಣಮಿಸಿತು. ಪ್ರಸಾದರು ಬೆಂಗಳೂರಿನ ನಗರ್ತ ವೈಶ್ಯಜನಾಂಗದ ಉತ್ತಮ ಮನೆತನ ಮತ್ತು ಶ್ರೀಮಂತ ಹಿನ್ನೆಲೆಯನ್ನು ಹೊಂದಿದವರು. ಆನಂದಿಬಾಯಿಯವರದು ತೀರ ಭಿನ್ನವಾದ ಹಿನ್ನೆಲೆ. ಆದರೆ ಅಂತಃಕರಣ ಪೂರ್ವಕ ಪ್ರೀತಿಗೆ ಯಾವ ಅಡ್ಡಿಯೂ ಬಾರದೆಂಬುದನ್ನು ಇಬ್ಬರೂ ಪರಸ್ಪರರಿಗಾಗಿ ಬಾಳಿ ತೋರಿದರು.

ಇತ್ತ ಡ್ರಾಯವರ್ ಅಣ್ಣನ ಕುಡಿತ ಹೆಚ್ಚಾಗಿ ತನ್ನ ಐದು ಮಕ್ಕಳನ್ನು ನೋಡಿಕೊಳ್ಳಲಾಗದ ಪರಿಸ್ಥಿತಿಯಲ್ಲಿ ಮೈಸೂರಿಗೆ ಕರೆತಂದು ತಂಗಿಗೆ ಒಪ್ಪಿಸಿ ಒಂದು ದಿನ ಕಣ್ಣುಮುಚ್ಚಿದ. ಸ್ವಂತ ಮಕ್ಕಳಿಲ್ಲದ ಪ್ರಸಾದ್ ದಂಪತಿಗಳು ಅವರಿಗೆಲ್ಲ ವಿದ್ಯಾ-ಬುದ್ಧಿ ನೀಡಿ ಎಲ್ಲರಿಗೂ ದಿಕ್ಕು ತೋರಿದರು. ಅಂದಿನಿಂದ ಪ್ರಸಾದರ ಮನೆ ಲೆಕ್ಕವಿಲ್ಲದಷ್ಟು ಅಸಹಾಯಕರಿಗೆ, ಅನಾಥರಿಗೆ ಒಂದಿಲ್ಲೊಂದು ವಿಧದ ಸಹಾಯ ನೀಡುವ ತಾಣವಾಗಿ ಪರಿಣಮಿಸಿತು.

ಎಂ. ಬಿ. ಬಿ. ಎಸ್. ಮುಗಿಸಿದವರಿಗೆ ಅಂದು ಸರಕಾರಿ ನೌಕರಿಗಳು ಸುಲಭವಾಗಿ ಲಭ್ಯವಿದ್ದವು. ಆದರೂ ಪ್ರಸಾದ್ ದಂಪತಿಗಳು ಖಾಸಗಿಯಾಗಿಯೇ ತಮ್ಮ ವೃತ್ತಿಜೀವನ ಪ್ರಾರಂಭಿಸುವದೆಂದು ನಿಶ್ಚಯಿಸಿದರು. ಅದಕ್ಕಾಗಿ ಅವರು ಆರಿಸಿದ ಸ್ಥಳ ಶ್ರೀರಂಗಪಟ್ಟಣ. ಆ ದಿನಗಳಲ್ಲಿ ಅದು ಮಲೇರಿಯ ಮತ್ತು ಕೊಕ್ಕೆಹುಳಗಳಿಗೆ ಕುಖ್ಯಾತಿ ಪಡೆದಿತ್ತು. ತಜ್ಞರಾದ ಒಬ್ಬ ಡಾಕ್ಟರರೂ ಇರಲಿಲ್ಲ. ಮೈಸೂರಿನಲ್ಲಿ ಮನೆಮಾಡಿದ ತರುಣ ಡಾಕ್ಟರ್ ದಂಪತಿಗಳು ಪ್ರತಿದಿನ ಬೆಳಿಗ್ಗೆ ಶ್ರೀರಂಗ ಪಟ್ಟಣಕ್ಕೆ ಹೊರಟುಬಿಡುವರು. ಆಗ ಬಸ್ಸುಗಳ ಸಂಚಾರ ಇರಲಿಲ್ಲ. ಟ್ರೇನುಗಳೂ ಕಡಿಮೆ. ಹೀಗಾಗಿ ಸ್ವಂತದ ಕುದುರೆಗಾಡಿ ಇಟ್ಟರಂತೆ. ಆ ಕುದುರೆ, ಸಂದರ್ಭ, ಅವಸರಗಳನ್ನು ಅರ್ಥಮಾಡಿಕೊಂಡು ಮಿಂಚಿನಂತೆ ಓಡುತ್ತಿದ್ದುದನ್ನು ಆನಂದಿಬಾಯಿಯವರು ಮಮತೆ, ಅಭಿಮಾನಗಳಿಂದ ನೆನೆದುಕೊಳ್ಳುತ್ತಿದ್ದರು.

ಬೆಳಿಗ್ಗೆ ಬುತ್ತಿಕಟ್ಟಿಕೊಂಡು ಮೈಸೂರು ಬಿಟ್ಟರೆ ತಿರುಗಿ ಸೇರುವದು ಸಾಯಂಕಾಲವೇ. ಮಧ್ಯಾಹ್ನ ಕಾವೇರಿಯ ದಂಡೆ ಅವರ ಊಟ, ವಿಶ್ರಾಂತಿಯ ಸ್ಥಳವಾಗಿತ್ತು. ಅನೇಕಬಾರಿ ಅಕ್ಕ-ಪಕ್ಕದ ಹಳ್ಳಿಗಳಿಗೂ ಹೋಗಿ ಬರುವರು. ಈ ವರ್ಷಗಳ ಜೀವನ ಗ್ರಾಮೀಣ ಮಹಿಳೆಯರ ದೈನಂದಿನ ಬವಣೆಯ ಒಳ್ಳೆಯ ಪರಿಚಯ ನೀಡಿತು. ಗಂಡ ಮತ್ತು ಮಕ್ಕಳಿಗಾಗಿ ಜೀವತೇದು ಸ್ವತಃ ಅರೆಹೊಟ್ಟೆ ಇದ್ದು ಕಾಯಿಲೆಯಿಂದ ಹಣ್ಣಾದವರ ಹತ್ತಿರ ಫೀ ಕೇಳಲು ಮನಸ್ಸಾಗುತ್ತಿರಲಿಲ್ಲ. ತಾವಾಗಿ ಕೊಟ್ಟಷ್ಟನ್ನೇ ತೆಗೆದುಕೊಳ್ಳುತ್ತಿದ್ದರು. ಆದರೆ ಮೂರೇ ವರ್ಷಗಳಲ್ಲಿ ಜನರ ಪ್ರೀತಿ-ವಿಶ್ವಾಸಗಳೊಂದಿಗೆ ಹಣದ ಸುರಿಮಳೆಯೇ ಆಯಿತು! ಎಂದು ಉದ್ಗರಿಸುತ್ತಿದ್ದರು.

ಗೃಹಜೀವನದ ಹೊಣೆಗಳು ಹೆಚ್ಚಿದವು. ಮೈಸೂರಿನಲ್ಲೇ ಪ್ರ್ಯಾಕ್ಟಿಸು ಪ್ರಾರಂಭಿಸಿದರು. ಮನೆಯಲ್ಲಿ ಸೋದರನ ಮಕ್ಕಳಿದ್ದರು. ಇನ್ನೊಬ್ಬಳನ್ನು ದತ್ತು ತೆಗೆದುಕೊಂಡರು. ಮುಂದಿನ ವರ್ಷಗಳಲ್ಲಿ ಒಂದು ಗಂಡು ಮಗುವನ್ನು ಸಾಕಿಕೊಂಡರು. ಚಿತ್ರಲೇಖಾ ಮತ್ತು ದೀಪಕ್, ಡಾ. ಪ್ರಸಾದ್ ದಂಪತಿಗಳ ಕಣ್ಮಣಿಗಳಾಗಿ ಮನೆ-ಮನ ತುಂಬಿದರು.

ಮೊದಲಿಗೆ "ಪ್ರಸಾದ್ ನರ್ಸಿಂಗ್ ಸೆಂಟರ್" ಎಂದು ೧೯೪೭ರಲ್ಲಿ ಪ್ರಾರಂಭವಾದ ಸಂಸ್ಥೆ ಮೈಸೂರುನಗರದ ಖಾಸಗೀ ನರ್ಸಿಂಗ್ ಹೋಂಗಳಲ್ಲಿ ಮೊದಲನೆಯದಾಗಿತ್ತು. ಅದರ ನಿರ್ಮಾಣದ ಪ್ರಥಮ ಹಂತದಿಂದಲೇ ಪೂರ್ಣಹೊಣೆ ಹೊತ್ತ ಆನಂದಿಬಾಯಿಯವರು ತಮ್ಮ ಕೊನೆಯ ವರ್ಷಗಳವರೆಗೂ ಒಂದಿಲ್ಲೊಂದು ವಿಧದಲ್ಲಿ ಅದನ್ನು ಬೆಳೆಸುತ್ತಲೇ ಇದ್ದರು.

ಡಾ. ಪ್ರಸಾದರಿಗೆ ಉತ್ತಮ ಅಭಿರುಚಿಗಳಿದ್ದವು. ಸಿರಿವಂತಿಕೆಯಲ್ಲೇ ಬೆಳೆದ ಅವರು ಅಚ್ಚುಕಟ್ಟಾದ ಸುಖಜೀವನ ನಡೆಸಿದವರು. ಹೀಗಾಗಿ ವೈಯಕ್ತಿಕ ಜೀವನದಲ್ಲಿ ಯಾವ ಕೊರತೆಯೂ ಬಾರದಂತೆ ಆನಂದಿಬಾಯಿಯವರು ಗೃಹಿಣಿಯಾಗಿ ಪರಿಶ್ರಮಿಸಲು ಅದ್ಯತೆಕೊಟ್ಟು ವೃತ್ತಿಗೆ ಗೌಣಸ್ಥಾನ ನೀಡಬೇಕಾಯಿತು. ತಮ್ಮ ಮಮತಾಮಯ ಸರಳ ಸ್ವಭಾವದಿಂದ ಅವರು ಅತ್ಯಂತ ಜನಪ್ರಿಯರಾಗಿದ್ದರು. ಆದರೂ ಪತಿಯ ವೃತ್ತಿಗೌರವ ಹೆಚ್ಚಿನದು ಎಂದು ಮನಗಂಡು ಭಾರತೀಯ ನಾರಿಗೆ ಸಹಜವಾದ ತ್ಯಾಗದಿಂದ ಸಕ್ರಿಯ ಪ್ರ್ಯಾಕ್ಟೀಸ್‌ನ್ನು ಬೇಗನೆ ತೊರೆದರು. ತಮ್ಮಿಬ್ಬರ ಕನಸಿನ ಆದರ್ಶವಾಗಿದ್ದ ನರ್ಸಿಂಗ್ ಹೋಂನ್ನು ನನಸಾಗಿಸುವತ್ತ ಲಕ್ಷ್ಯ ಪೂರೈಸಿದರು. ಅದರ ಕಟ್ಟಡ, ಆಡಳಿತ ಸಂಘಟನೆ, ಮಕ್ಕಳಿಬ್ಬರ ಪಾಲನೆ-ಪೋಷಣೆ ಮತ್ತು ಹತ್ತಾರು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿದರು.

ಡಾ. ಪ್ರಸಾದರು ವಿಶಾಲ ಹೃದಯದವರೂ ಕರುಣಾಳುಗಳೂ ಆಗಿದ್ದರು. ಆದರೆ ಪುಕ್ಕಟೆ ಔಷಧ ಕೊಡುತ್ತಿರಲಿಲ್ಲ. ಅದಕ್ಕೆ ಅವರು ಕೊಡುತ್ತಿದ್ದ ಕಾರಣ ಮನಗಾಣುವಂತೆ ಇತ್ತು. ಯಾರಿಗೇ ಆಗಲಿ ಪುಕ್ಕಟೆ ಬಂದ ಸಾಮಾನಿನ ಬಗ್ಗೆ ಆದರವಿರುವದಿಲ್ಲ ಎಂಬುದು ಅನುಭವದ ಮಾತು. ಪುಕ್ಕಟೆ ಔಷಧ ಒಯ್ದ ಹಳ್ಳಿಗ ರೋಗಿ, ಸ್ವಲ್ಪ ಗುಣಕಂಡರೆ ಔಷಧಿ ಚೆಲ್ಲಿಬಿಡುತ್ತಾನೆ. ಅದೇ ೧-೨ ಆಣೆಯಾದರೂ ಕೈಬಿಡುವಂತಾದರೆ ಮರುಗುತ್ತ, ಔಷಧ ಎಷ್ಟೇ ಕಹಿಯಿದ್ದರೂ ತೊಟ್ಟೂ ಬಿಡದೇ ಕುಡಿಯುತ್ತಾನೆ! ಎಂದು ಔಷಧಿಗೆ ತೀರಕಡಿಮೆ ದರ ಇಡುತ್ತಿದ್ದರು.

ಡಾ. ಪ್ರಸಾದರಿಗೆ ಚಿಕ್ಕಂದಿನಿಂದಲೂ ಸಿಗರೇಟು ಸೇವನೆಯ ಮಿತಿಮೀರಿದ ಚಟವಿತ್ತು. ಪ್ರತಿ ಹುಟ್ಟುಹಬ್ಬಕ್ಕೆ ಇನ್ನು ಮುಂದೆ ಬಿಟ್ಟು

ಬಿಡುತ್ತೇನೆ ಎಂದು ಪ್ರತಿಜ್ಞೆ ಮಾಡುತ್ತಿದ್ದರು. ಎಂಟೇ ದಿನಗಳಲ್ಲಿ ತಿರುಗಿ ಪ್ರಾರಂಭಿಸಿದರೆಂದರೆ ಸೇವನೆ ಮೊದಲಿನ ಪ್ರಮಾಣವನ್ನೂ ಮೀರಿರುತ್ತಿತ್ತು. ಕೊನೆಗೂ ನಿರೀಕ್ಷಿತ ಸಾವು ಅವರನ್ನು ಕಾದಿತ್ತು. ೧೯೬೭ ರಲ್ಲಿ ಶ್ವಾಸಕೋಶದ ಕ್ಯಾನ್ಸರಿಗೆ ಬಲಿಯಾಗಿದ್ದರು. ಅವರನ್ನು ಉಳಿಸಿಕೊಳ್ಳಲು ಡಾ. ಆನಂದಿಬಾಯಿ ಅವರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ವಿದೇಶಕ್ಕೂ ಹೋಗಿಬಂದರು ದಂಪತಿಗಳು. ನೀರಿನಂತೆ ಹಣ ವೆಚ್ಚಮಾಡಿದರು. ಸ್ವತಃ ವೈದ್ಯೆ. ನರ್ಸ್. ಕೊನೆಗೆ ದಾಯಿಯೂ ಆಗಿ ಅಹರ್ನಿಶಿ ಪತಿಯ ಸೇವೆ ಮಾಡಿದ್ದನ್ನು ಆತ್ಮೀಯರು ನೆನಪಿಸಿಕೊಳ್ಳುತ್ತಾರೆ. ಪತಿಯ ನಿಧನದ ಆಘಾತದಿಂದ ಅವರನ್ನು ಚೇತರಿಸಿಕೊಳ್ಳುವಂತೆ ಮಾಡಿದ್ದು ಅವರ ಬಹುವಿಧ ಸಮಾಜಸೇವೆ.

ವೈದ್ಯಕೀಯ ವೃತ್ತಿ ವ್ಯಾಪಾರವಾಗಬಾರದೆಂದು ಮೊದಲಿನಿಂದಲೂ ಆನಂದಿಬಾಯಿಯವರು ದೃಢವಾಗಿ ನಂಬಿದ್ದರು. ಅವರ 'ಪ್ರಸಾದ್ ನರ್ಸಿಂಗ್ ಸೆಂಟರ್' ಈಗ 'ಪ್ರಸಾದ್ ಮೆಮೋರಿಯಲ್ ಮೆಡಿಕಲ್ ಸೆಂಟರ್' ಎಂಬ ಹೆಸರು ಪಡೆಯಿತು. ಅದನ್ನು ಒಂದು ಸಾರ್ವಜನಿಕ ಟ್ರಸ್ಟ್ ಆಡಳಿತಕ್ಕೆ ಒಳಪಡಿಸಿದರು. ತಮ್ಮ ಮಕ್ಕಳೂ ಅಲ್ಲಿ ದುಡಿಯಲೆಂದು ಚಿತ್ರಲೇಖಾಗೆ ಡಾಕ್ಟರ್ ಓದಿಸಿದರು. ಅಳಿಯನೂ ಡಾಕ್ಟರ್. ಇಬ್ಬರೂ ಇಂಗ್ಲೆಂಡಿನಲ್ಲಿ ಉಚ್ಚವ್ಯಾಸಂಗ ಮುಗಿಸಿ ನರ್ಸಿಂಗ್ ಹೋಂದಲ್ಲೇ ಸೇವೆ ಸಲ್ಲಿಸುತ್ತಿದ್ದಾರೆ. ಮಗ ದೀಪಕ್ ಡೆಂಟಲ್ ಸರ್ಜನ್ ಆಗಿದ್ದಾನೆ.

ವರ್ಷಗಳು ಕಳೆದಂತೆ ಡಾ. ಆನಂದಿಬಾಯಿ ಸಾರ್ವಜನಿಕ ಸೇವೆಯಲ್ಲಿ ಹೆಚ್ಚೆಚ್ಚು ಪ್ರವೃತ್ತರಾದರು. ನಗರದ ಹಲವು ಶೈಕ್ಷಣಿಕ ಸಂಸ್ಥೆಗಳಿಗೆ ದೊಡ್ಡ ಮೊತ್ತದ ಧನಸಹಾಯ ನೀಡಿದರು. ಮಹಾಜನ ವಿದ್ಯಾಲಯ ಮತ್ತು ವನಿತಾ ಸದನಗಳು ಅವರ ಹೆಚ್ಚಿನ ಔದಾರ್ಯಕ್ಕೆ ಭಾಜನವಾದ ಸಂಸ್ಥೆಗಳು. ಅವುಗಳ ಆಡಳಿತ ಹಾಗೂ ಸಲಹಾಮಂಡಳಿಗಳ ಸದಸ್ಯರಾಗಿದ್ದರು. ಇಂಡಿಯನ್ ಮೆಡಿಕಲ್ ಅಸೋಸಿಯೇಶನ್‌ದ ಮೈಸೂರು ಶಾಖೆಯ ಸದಸ್ಯರಾಗಿ ಹಲವು ವರ್ಷ ದುಡಿದರು. ಅಖಿಲಭಾರತ ಮಹಿಳಾವೈದ್ಯರ ಸಂಘದ ಮೈಸೂರುಶಾಖೆಗೆ ಕಾರ್ಯದರ್ಶಿಯೆಂದು ಪುನಃ ಪುನಃ ಆಯ್ಕೆಯಾಗುತ್ತಿದ್ದರು.

೧೯೬೩ ರಿಂದಲೇ ಮೈಸೂರಿನಲ್ಲಿ ಕುಟುಂಬಕಲ್ಯಾಣ ಕೇಂದ್ರವನ್ನು ನಡೆಸುತ್ತ ಬಂದರು.

ಆದರೆ ತನಗೆ ಬಾಳಿನ ಸಾರ್ಥಕತೆ ನೀಡಿದ್ದು. ಹೆಚ್ಚಿನ ಸಂತೋಷ. ಸಮಾಧಾನಗಳನ್ನು ಕೊಟ್ಟಿದ್ದು. 'ಬಾಪೂಜಿ ಚಿಲ್ಡ್ರನ್ಸ್ ಹೋಂ'ದ ಸ್ಥಾಪನೆ. ಎಂದು ಅವರು ಆಗಾಗ ಹೇಳಿದ್ದುಂಟು. ಕಟ್ಟಡ ಪೂರ್ತಿಯಾಗಿ ಕೆಲವು ಜನ ಸಿಬ್ಬಂದಿಯನ್ನು ನೇಮಿಸಿದರೂ ಹೆಚ್ಚಿನ ಸಮಯವನ್ನು ಅವರು ಮಕ್ಕಳೊಂದಿಗೆ ಅಲ್ಲಿಯೇ ಕಳೆಯುತ್ತಿದ್ದರು. ರಾತ್ರಿ ಒಂಟಿಕೊಪ್ಪಲಿನ ತಮ್ಮ ಮನೆಗೆ ಹೋಗುವಾಗಲೂ ಕೆಲವು ಮಕ್ಕಳು ಅವರೊಂದಿಗೆ ಹೊರಟು ಬಂದು ರಾತ್ರಿ ಜೊತೆ ಕೊಡುತ್ತಿದ್ದವು. ಪ್ರತಿ ಮಗುವಿನ ಕಡೆಗೂ ವೈಯಕ್ತಿಕ ಲಕ್ಷ್ಯ ಪೂರೈಸುವರು. ನರ್ಸರಿ. ಪ್ರೈಮರಿ. ಹೈಸ್ಕೂಲುಗಳಲ್ಲಿ ಓದುತ್ತಿದ್ದ ಈ ಮಕ್ಕಳು ಅಚ್ಚುಕಟ್ಟಾಗಿ ಬಟ್ಟೆ ಧರಿಸಿ. ಸ್ಕೂಲಿಗೆ ಹೋಗಿ ಬಂದಾಗ ಸಾಯಂಕಾಲ ಮಕ್ಕಳ ಮನೆಯಲ್ಲಿ ಹಕ್ಕಿಗಳ ಕಲರವ ಕೇಳಬರುತ್ತಿತ್ತು. ಪ್ರಾರ್ಥನೆ. ಓದುಗಳೆಲ್ಲ ಶಿಸ್ತಿನಿಂದ ನಡೆಯುತ್ತಿದ್ದವು. ಮಕ್ಕಳಿಗೆ ಹಾಲು. ಹಣ್ಣು ಹಂಪಲು. ತಿಂಡಿ. ಊಟಗಳು ಪುಷ್ಕಳವಾಗಿ ದೊರೆತು ಆರೋಗ್ಯದಿಂದ ನಳನಳಿಸುತ್ತಿದ್ದವು. ಅಮ್ಮನೇ ನುರಿತ ವೈದ್ಯೆಯಿರುವಾಗ ಅವುಗಳು ಕಾಯಿಲೆ ಕಸಾರಕಿಯಿಂದ ನರಳುವದುಂಟೇ?

ಮಕ್ಕಳಿಗೆಲ್ಲ ಪ್ರೇಮ. ದಯಾ. ಕರುಣಾ. ಮಮತಾ ಎಂದು ಹೆಸರುಗಳನ್ನು ಇಟ್ಟಿದ್ದರು. ಅವಕ್ಕೆಲ್ಲ ಕೊನೆಯವರೆಗೂ ಅನಾಥಪ್ರಜ್ಞೆ ಕಾಡಬಾರದು. ಅವರಿಗೆ ಒಂದು ಮನೆತನದ ಹೆಸರು ಇರಬೇಕು. ತನ್ನ ಹೆಸರು ಕೊಡುವಂತಿಲ್ಲ. ತಾಯಿಯ ಹೆಸರು ಹೊಂದಿದವರು ಹೆಚ್ಚಿನ ತಿರಸ್ಕಾರಕ್ಕೆ ಪಾತ್ರರಾಗುತ್ತಾರೆ! ಎಲ್ಲವುಗಳಿಗೆ ಪ್ರಸಾದ್ ಎಂದೇ ಹೆಸರಿಟ್ಟರೆ ಹೇಗೆ? ಎಂದು ಒಮ್ಮೆ ಉದ್ಗರಿಸಿದ್ದರು.

ಹತ್ತುವರ್ಷಗಳಲ್ಲಿ ಅವರ ಮಕ್ಕಳ ಮನೆ ಯಾವತ್ತೂ ಸೌಕರ್ಯದ ಉಪಕರಣಗಳನ್ನು ಪಡೆದು ಸುಸಜ್ಜಿತವಾಯಿತು. ಅನುದಾನವೂ ಸಾಕಷ್ಟು ಬಂದಿತು. ಆದರೆ ಸಂಸ್ಥೆಗೇ ತಮ್ಮನ್ನು ಮುಡುಪಿಟ್ಟು ದುಡಿಯುವ ಜನ ನಮ್ಮಲ್ಲಿ ಸಿಗುವದು ದುರ್ಲಭ. ದಿನಹೋದಂತೆ. ನಿಸ್ವಾರ್ಥಿ ಕೆಲಸಗಾರರು ಸಿಗುವದು ಕಷ್ಟಸಾಧ್ಯವೆಂದು ಡಾಕ್ಟರರಿಗೆ ಮನವರಿಕೆಯಾಗತೊಡಗಿತು. ತನ್ನ ನಂತರ ಸಂಸ್ಥೆಯನ್ನು ತೂಗಿಸಿಕೊಂಡು ಹೋಗುವವರು ಯಾರೆಂಬ ಚಿಂತೆ ಅವರನ್ನು ಕಾಡತೊಡಗಿತು. ಹಿಂದೊಮ್ಮೆ ಕಾಣಿಸಿಕೊಂಡು ಮಾಯವಾಗಿದ್ದ ಕ್ಯಾನ್ಸರ್ ಮರುಕಳಿಸಿತು.

೧೯೯೨ ರ ಜೂನ ತಿಂಗಳಲ್ಲಿ ಅವರನ್ನು ಭೇಟಿಮಾಡಲು ಹೋದಾಗ ತುಂಬ ಹಣ್ಣಾಗಿದ್ದರು. ೩೦ ಪೌಂಡು ತೂಕ ಕಡಿಮೆ ಆಗಿ. ಆ ಮೊದಲಿದ್ದ ಕಾಲುನೋವು ಮಾಯವಾಗಿತ್ತು. ಆದರೆ ಸ್ಪಾಂಡಿಲೈಟಿಸ್ ಕಾಣಿಸಿಕೊಂಡಿತ್ತು. ದಿನವಿಡೀ ಕಾಲರ್ ಧರಿಸಬೇಕಾಗುತ್ತಿತ್ತು. ಇನ್ನೆಷ್ಟು ದಿನ ನರಳಬೇಕೋ! ಎಂದು ಕ್ಯಾನ್ಸರ್ ಚಿಕಿತ್ಸೆಯ ಯಾತನೆಯನ್ನು ನೆನೆದು ಕಣ್ಣೀರಿಟ್ಟರು. ಅಸಂಖ್ಯರ ನೋವು ಕಡಿಮೆ ಮಾಡಿದ, ಸಾಂತ್ವನ ನೀಡಿದ, ತಬ್ಬಲಿ ಮಕ್ಕಳ ಮಹಾತಾಯಿ ಒಂಟಿಯಾಗಿ ನರಳುತ್ತ ಮಲಗಿದ್ದನ್ನು ನೋಡಿ ಸಂಕಟವಾಯಿತು. ಎರಡೇ ನಿಮಿಷ! ಮತ್ತೆ ಚೇತರಿಸಿಕೊಂಡು ಆ ಧೀರ ಮಹಿಳೆ ಮೊದಲಿನಂತಾಗಿದ್ದರು. ನನ್ನ ಬಗ್ಗೆ, ಮಗ, ಪತಿಯ ಬಗ್ಗೆ ಆತ್ಮೀಯವಾಗಿ ವಿಚಾರಿಸಿಕೊಂಡರು. ನನ್ನ ಗಂಟಲುನೋವು, ಚಿಕಿತ್ಸೆಯ ವಿವರಗಳನ್ನು ತಿಳಿದುಕೊಂಡು ಮೆಲ್ಲಗೆ ಮಾತನಾಡಲು ಸೂಚಿಸಿದರು. ಹೆಚ್ಚಿನ ತೊಂದರೆಯಾದರೆ ನಿವೃತ್ತಿಯನ್ನು ಕೈಕೊಳ್ಳುವಂತೆಯೂ ಸಲಹೆ ಇತ್ತಿದ್ದರು.

ಕೊನೆಗಾಲ ಸಮೀಪಿಸುತ್ತಿದ್ದಂತೆ ಡಾಕ್ಟರ್ ಹುಡುಗಿಯೊಬ್ಬಳನ್ನು ಸೊಸೆಯಾಗಿ ಮನೆತುಂಬಿಸಿಕೊಂಡರು. ಮೊಮ್ಮಗ ಹುಟ್ಟುವ ಎರಡು ತಿಂಗಳು ಮೊದಲೇ ಕಣ್ಮುಚ್ಚಿದರು. (ಏಪ್ರೀಲ ೧೭, ೧೯೯೩)

ಮೈಸೂರು ನಾಗರಿಕರ ದೈನಂದಿನ ಜೀವನದಲ್ಲಿ ವಿಶೇಷ ಆಸ್ಥೆವಹಿಸಿದ, ಬಿಸಾಕಿದ ಮಕ್ಕಳ ತಾಯಿ ಆನಂದಿಬಾಯಿಯುವರನ್ನು ಮೈಸೂರಿನ "ಮದರ್ ತೆರೇಸಾ" ಎಂದು ಸ್ಥಳೀಯ ಪತ್ರಿಕೆಗಳು ಕರೆದವು. ೧೯೭೪ ರಲ್ಲಿ ಇಂಡೋನೇಷ್ಯದ ಅಂತರ್ರಾಷ್ಟ್ರೀಯ ಮಹಿಳಾ ಸಮ್ಮೇಳನದಲ್ಲಿ, ೧೯೮೭ ರಲ್ಲಿ ಮಾರಿಶಸ್‌ದಲ್ಲಿ ಜರುಗಿದ ಅಂಥದೇ ಮಹಾಸಮ್ಮೇಳನದಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. ಮೊದಲಿನಿಂದಲೂ ಮಹಿಳೆಯರ ಆರೋಗ್ಯ-ಸೌಕರ್ಯಗಳಿಗೆ ಹೋರಾಡುತ್ತಲೇ ಬಂದಿದ್ದರು. ಉದ್ಯೋಗಸ್ಥ ಮಹಿಳೆಯರಿಗಾಗಿ ಹಾಸ್ಟೆಲ್ ಸ್ಥಾಪಿಸಬೇಕೆಂದು ಯತ್ನಿಸಿ ಉತ್ತಮ ನಿವೇಶನವೊಂದನ್ನು ದೊರಕಿಸುವದರಲ್ಲಿ ಯಶಸ್ವಿಯಾದರು. ವೃದ್ಧಾಶ್ರಮವೊಂದನ್ನು ಸ್ಥಾಪಿಸುವ ಅವರ ಹಿಂದಿನ ಕನಸೂ ನನಸಾಗುವದರಲ್ಲಿತ್ತು. ಆದರೆ ಅವರಂತೆಯೇ ಶ್ರಮ-ಆದರ್ಶಗಳಿಗೆ ಮಿಡಿದು

ದುಡಿಯುವ ಸ್ವಯಂಸೇವಕರು ದೊರೆಯದೇ ಹೋದದ್ದು ನಮ್ಮೆಲ್ಲರ ದುರ್ಭಾಗ್ಯ.

ಐದು ದಶಕಗಳ ನಿಸ್ವಾರ್ಥಸೇವೆಯಿಂದಾಗಿ ಸರಕಾರ ಹಾಗೂ ಸಾರ್ವಜನಿಕರ ಹೆಚ್ಚಿನ ಮನ್ನಣೆಗೆ ಪಾತ್ರರಾಗಿದ್ದರು. ತುಂಬ ಹಿಂದೆಯೇ ಮೈಸೂರು ಸರಕಾರ ಅವರಿಗೆ ನಗರದ ಗೌರವ ಮ್ಯಾಜಿಸ್ಟ್ರೇಟ್ ಹುದ್ದೆ ಕೊಡಮಾಡಿತ್ತು. ೧೯೭೭ ರಲ್ಲಿ ಇಂಡಿಯನ್ ಮೆಡಿಕಲ್ ಅಸೋಸಿಯೇಶನ್‌ದವರು ಕೇಂದ್ರ ಆರೋಗ್ಯ ಸಚಿವರಿಂದ ಅವರಿಗೆ ಸನ್ಮಾನಿಸಿದ್ದರು. ತುಂಬ ಮೊದಲೇ ಅವರನ್ನು ಮುಂಚೂಣಿಯಲ್ಲಿರಿಸಿ ಅವರ ಮಾರ್ಗದರ್ಶನದಲ್ಲಿ ಅಬಲಾಶ್ರಮ, ವೃದ್ಧಾಶ್ರಮಗಳನ್ನು ಸ್ಥಾಪಿಸಿ ನಡೆಸಲು ಸಾಧ್ಯವಿತ್ತು. ಆದರೆ ನಮ್ಮ ದೇಶದಲ್ಲಿ ಸ್ವಯಂಸೇವಕರ ಅಭಾವ ಎಂದಿಗಿಂತ ಹೆಚ್ಚಾಗಿದೆ. ಡಾ. ಆನಂದಿಬಾಯಿಯವರಂಥ ನಿಸ್ವಾರ್ಥಿ, ನಿಗರ್ವಿ, ಸರಳ ಮತ್ತು ಪ್ರಾಮಾಣಿಕ ಮುಂದಾಳುಗಳಂತೂ ಅಪರೂಪಕ್ಕೆ ಕಾಣಿಸಿಕೊಳ್ಳುತ್ತಾರೆ. ಅಂಥವರು ಕಣ್ಮರೆಯಾದರೆ ಎಲ್ಲವೂ ಸ್ಥಗಿತವಾಗುವದು ಸಾಮಾನ್ಯ.

ಚಿಕ್ಕಂದಿನಲ್ಲೇ ರೂಪಿಸಿಕೊಂಡ ಆದರ್ಶಗಳನ್ನು ಡಾ. ಆನಂದಿಬಾಯಿ ಬಹುಮಟ್ಟಿಗೆ ನನಸಾಗಿಸಿದರು. ಸೇವಾಸಂಸ್ಥೆ ಕಟ್ಟಿ, ಶಿಕ್ಷಣ ಸಂಸ್ಥೆಗಳಿಗೆ ಧಾರಾಳ ನೆರವು ನೀಡಿ, ಅನಾಥಾಶ್ರಮವನ್ನು ಸ್ಥಾಪಿಸಿ, ಬೆಳೆಸಿ ಅವುಗಳ ರೂಪದಲ್ಲಿ ಇಂದು ಜೀವಂತವಾಗಿದ್ದಾರೆ.



ಚಿರಸ್ಮರಣೆಯಾದ ಚಿ. ನ. ಮಂಗಳಾ

(೧೯೩೮-೧೯೯೭)

೧೯೮೫ನೆಯ ವರ್ಷವೆಂದು ತೋರುತ್ತದೆ. ನಾನಾಗ ಮೈಸೂರಿನಲ್ಲಿದ್ದೆ. ಒಂದು ದಿನ ಪ್ರೊ. ಚಿ. ನ. ಮಂಗಳಾ ತಮ್ಮ ಇಬ್ಬರು ಸಹೋದ್ಯೋಗಿಗಳೊಡನೆ ಆಕಾಶವಾಣಿಗೆ ಬಂದರು. "ಮಹಿಳಾ' ಜಗತ್ತಿಗೇ ಮೀಸಲಾದ ವಸ್ತುಗಳ ಸಂಗ್ರಹಾಲಯವೊಂದನ್ನು ನಿರ್ಮಿಸುವ ಪ್ರಯತ್ನದಲ್ಲಿದ್ದೇವೆ. ಅಡಿಗೆಗಳ. ಮನೆವಾಳ್ತೆಯ. ಈಗ ಉಪಯೋಗಿಸದ ಪಾತ್ರೆ-ಪಡಗ. ಬೊಂಬೆ. ಕಸೂತಿ. ಗುಳೋಪು. ಚಿತ್ರಗಳಾದಿ ಕಲಾಕೌಶಲ್ಯ ಬಿಂಬಿಸುವ. ಮಹಿಳಾ ನಿರ್ಮಿತ ಸಾಮಾನುಗಳನ್ನು ಶೇಖರಿಸುತ್ತಿದ್ದೇವೆ.

ನಿಮ್ಮ ಸಹಕಾರ ಬೇಕು" ಎಂದರು. ಮಂಗಳಾ. ಆಗಲೇ ಜನಪ್ರಿಯ ಪ್ರಾಂಶುಪಾಲರಾಗಿ ಶಿಕ್ಷಣಕ್ಷೇತ್ರದಲ್ಲಿ ಹಲವಾರು ಪ್ರಯೋಗಗಳಿಂದ ಪ್ರಸಿದ್ಧರಾಗಿದ್ದರೂ ಅವರನ್ನು ವೈಯಕ್ತಿಕವಾಗಿ ಭೇಟಿಮಾಡಿ ಮಾತನಾಡಿಸುವ ಸಂದರ್ಭ ಬಂದಿರಲಿಲ್ಲ. ಆದರೆ ತುಂಬ ದಿನಗಳ ಸ್ನೇಹಿತೆಯನ್ನು ಕಂಡ ಬಗೆಯ ಅವರ ಆತ್ಮೀಯತೆ. ಕಳಕಳಿಗಳು ಕ್ಷಣಾರ್ಧದಲ್ಲಿ ಹೆಚ್ಚಿನ ಪ್ರಭಾವ ಬೀರಿದವು. ಆಗ ಸಾಮಯಿಕವಾದ ವಿಷಯವೊಂದರ ಕುರಿತು 'ದಿನ ವಾರ್ತೆ' ಮೈಸೂರಿನಿಂದ ಪ್ರಸಾರವಾಗುತ್ತಿತ್ತು. ಮಂಗಳಾ ಅವರ ಧ್ವನಿಯಲ್ಲೇ ಅಂದೇ 'ಶಾಶ್ವತೀ' ಮಹಿಳಾ ಸಂಗ್ರಹಾಲಯಕ್ಕೆ ಕೊಡುಗೈಯಿಂದ ಹಳೇ ಸಾಮಾನುಗಳನ್ನು ನೀಡುವ ವಿನಂತಿಯೊಂದನ್ನು ಪ್ರಸಾರ ಮಾಡಲಾಯಿತು. ಪ್ರಸಾರ ಮುಗಿಯುತ್ತಿದ್ದಂತೆ, ಅನೇಕ ಮಹಿಳೆಯರು ಆಟೋದಲ್ಲಿ ಬಂದು. ಅವರು ಇಳಿದುಕೊಂಡಲ್ಲಿ ಹಲವಾರು ಸಾಮಾನುಗಳನ್ನು ತಲುಪಿಸಲಾರಂಭಿಸಿದರು! ಮಹಿಳೆಯರ ಈ ಉತ್ಸಾಹ ಮಂಗಳಾ ಅವರಿಗೆ ಹೆಚ್ಚಿನ ಗೆಲುವು ನೀಡಿದರೆ. ನನಗೆ ಮೈಸೂರು ಕೇಂದ್ರದ ಈ ಪುಟ್ಟ ಕಾರ್ಯಕ್ರಮವನ್ನೂ ಬಿಡದೇ ಕೇಳಿ, ಆ ಕೂಡಲೇ ಗೃಹಿಣಿಯರೆಲ್ಲ ಪ್ರತಿಕ್ರಿಯಿಸಿದ್ದು ತುಂಬ ಸಂತೋಷಕೊಟ್ಟಿತ್ತು. ನಂತರ ಮಂಗಳಾರ 'ಶಾಶ್ವತೀ'ಗೆ ಒಬ್ಬಿಬ್ಬ ಕಲಾವಿದೆಯರಿಂದ ಕಾಣಿಕೆ ಕೊಡಿಸಿ ಹಿರಿಯ ಲೇಖಕಿ ವಾಣಿ ಅವರಲ್ಲಿ ಕರೆದೊಯ್ದು. ಅವರ ಮನೆಯಿಂದ ಸಾಂಕೇತಿಕವಾಗಿ ಪುಟ್ಟ ಪಾದಯಾತ್ರೆಯನ್ನು ಸಾಮಾನುಗಳ ಸಂಗ್ರಹಕ್ಕೆಂದು ಕೈಕೊಂಡೆವು.

ಈ ವಿಚಾರವನ್ನು ಮಂಗಳಾ ಚೆನ್ನಾಗಿ ನೆನಪಿಟ್ಟಿದ್ದರೆಂದು ತೋರುತ್ತದೆ. ಕೆಲ ವರ್ಷಗಳ ಬಳಿಕ 'ಶಾಶ್ವತೀ' ಕುರಿತಾದ ವಿಶೇಷ ಸಂಚಿಕೆಯನ್ನು ಹೊರತರಲಿದ್ದು ನನ್ನದೊಂದು ಲೇಖ ಕೋರಿ ಪತ್ರಬರೆದರು. ಆಗಷ್ಟೆ ಮುಂಬೈಯಿಂದ ಬೆಂಗಳೂರಿಗೆ ವರ್ಗವಾಗಿ ಬಂದಿದ್ದ ನಾನು 'ಶಾಶ್ವತೀ' ನೋಡಿರಲಿಲ್ಲ. ಈ ನೆಪದಲ್ಲಿ ಅಲ್ಲಿ ಹೋಗುವದೆಂದುಕೊಂಡೆ. ಆದರೆ ಲೇಖ ಬರೆಯುವ ಶ್ರಮ ಉಳಿಸಲು ಅಲ್ಲಿಯ ಕೆಲ ಅಪರೂಪದ ಚಿತ್ರಗಳನ್ನು ಹಾಕುವದೆಂದು ಯೋಚಿಸಿ, ತುಂಬ ಕಷ್ಟದಿಂದ ನನ್ನೊಂದಿಗೆ ಬರುವಂತೆ, ನನ್ನ ಪತಿ, ಡಾ. ಕೃಷ್ಣಾನಂದ ಕಾಮತರ ಮನಒಲಿಸಿದೆ. ಒಂದು ರವಿವಾರ ಬೆಳಿಗ್ಗೆ ನಾವಿಬ್ಬರೂ ಬರುವದಾಗಿ ಮಂಗಳಾ ಅವರಿಗೆ

ಫೋನಿಸಿದಾಗ ಸಂತೋಷ ವ್ಯಕ್ತಪಡಿಸಿದರು. ರಜಾದಿನವಾದ್ದರಿಂದ "ಯಾರೂ ಬರದಿದ್ದರೆ ಸರಿ, ಸಾಮಾನುಗಳನ್ನು ಎತ್ತಿ ಇಟ್ಟು ಛಾಯಾಗ್ರಹಣಕ್ಕೆ ಅನುಕೂಲ ಒದಗಿಸಲು ಒಬ್ಬ ಸಹಾಯಕರಿದ್ದರೆ ಸಾಕು" ಎಂದು ಹೇಳಿದೆ.

ನಾವಿಬ್ಬರೂ ಬಸ್ ಹತ್ತಿ, ಎನ್. ಎಮ್. ಕೆ. ಆರ್. ವಿ. ಕಾಲೇಜು ತಲುಪಿದೆವು. ಗೇಟು ತಲುಪುತ್ತಿದ್ದಂತೆ ಸ್ವತಃ ಮಂಗಳಾ ಅವರೇ ಸ್ವಾಗತಿಸಲು ಗೇಟ್ ಬಳಿ ಸಂಭ್ರಮದಿಂದ ಬಂದಾಗ ವಿಸ್ಮಯವಾಯಿತು. ತಾವೇ ನಮ್ಮನ್ನು ಶಾಶ್ವತೀ ಸಂಗ್ರಹಾಲಯಕ್ಕೆ ಕರೆದೊಯ್ದರು. ಅಲ್ಲಿಯ ಪ್ರತಿಯೊಂದು ಕಲಾಕೃತಿಯ ಇತಿಹಾಸ ಅವರಿಗೆ ಗೊತ್ತಿತ್ತು! ವಸ್ತುವನ್ನು ಕೊಡಮಾಡಿದ ವ್ಯಕ್ತಿ, ಊರು, ದೊರಕಿಸಿದ ಹಿನ್ನೆಲೆ ಕುರಿತು, ಅವರ ಅಸ್ಖಲಿತ ವಾಣಿಯಲ್ಲಿ ರನಿಂಗ್ ಕಾಮೆಂಟ್ರಿ ಪ್ರಾರಂಭವಾಯಿತು. ಅದನ್ನು ಮೀರಿಸುವಂತೆ ಕಾಮತರ ಕ್ಲಿಕಿಂಗ್ ನಡೆಯಿತು. ನಾನಾದಾರೋ, ಅಲ್ಲಿಯ ಅಸಂಖ್ಯ ವಸ್ತುಗಳೊಂದಿಗೆ ಮಂಗಳಾರ ಒಡನಾಟದ ಪರಿಯನ್ನು ವೀಕ್ಷಿಸುತ್ತ ಮೂಕ ವಿಸ್ಮಯದಿಂದ ನಡೆಯುತ್ತ ಇದ್ದೆ. ಅಂದು ಮಂಗಳಾ ಅವರೊಂದಿಗೆ ಕಳೆದ ಮೂರುಗಂಟೆಗೂ ಮಿಕ್ಕಿದ ಸಮಯದಲ್ಲಿ ಅವರ ಕಲಾಪ್ರೇಮ, ಕೊನೆಯರಿಯದ ಕನಸುಗಳು ಮತ್ತು ಮಹಿಳಾ ಮುನ್ನಡೆಯಲ್ಲಿ ಅವರಿಗಿದ್ದ ತೀವ್ರ ಕಳಕಳಿಗಳ ಪರಿಚಯವಾಯಿತು. ಸಂಸ್ಥೆಯಲ್ಲೆಲ್ಲ ಓಡಾಡಿಸಿ ರಜಾದಿನವೂ ಅಲ್ಲಿದ್ದ ಕೆಲ ಸಿಬ್ಬಂದಿ ಸದಸ್ಯರ ಭೇಟಿ ಮಾಡಿಸಿದರು. ಸೊಗಸಾದ ಟಿಫಿನ್, ಕಾಫಿ ಕೊಡಿಸಿದರು. ಕಾಮತರು ಬಂದಿದ್ದು ಅವರಿಗೆ ಹೆಚ್ಚಿನ ಖುಷಿಕೊಟ್ಟಿತು. ಮುಂದೆ ಸಚಿತ್ರ ಲೇಖವೂ ಪ್ರಕಟವಾಯಿತು. ಕಾಮತರು ತೆಗೆದ ಚಿತ್ರಗಳೆಲ್ಲ ತುಂಬ ಸೊಗಸಾಗಿವೆ! ಎಂದು ಉದ್ಗರಿಸಿದ್ದರು. ಆದರೆ ವರ್ಣಚಿತ್ರಗಳನ್ನೆಲ್ಲ ಕೇವಲ ಕಪ್ಪು, ಬಿಳುಪು ರೂಪದಲ್ಲಿ ಮುದ್ರಿಸುವಂತೆ ಆದದ್ದಕ್ಕೆ ವಿಷಾದ ಸೂಚಿಸಿ, ತಮ್ಮ ಸಹಜ ಸೌಜನ್ಯ ವ್ಯಕ್ತಪಡಿಸಿದ್ದರು.

'ಶಾಶ್ವತೀ ಸಂಗ್ರಹಾಲಯ' ಮಂಗಳಾರ ಬಹುಮುಖ ಚಟುವಟಿಕೆಗಳಲ್ಲಿ ಒಂದು. ಆದರೆ ಮುಖ್ಯವಾದದ್ದು.

ನಂತರದ ದಿನಗಳಲ್ಲಿ ಮಂಗಳಾ ಅವರನ್ನು ಇನ್ನೂ ಸನಿಹದಿಂದ ಅರಿಯುವ ಸಂದರ್ಭಗಳು ಒದಗಿದವು. ಅದಾಗಲೇ ಮಧುಮೇಹ ಕಾಯಿಲೆ ಅವರನ್ನು ಹಣ್ಣುಮಾಡಿತ್ತು. ಕೆಲಸಮಾತ್ರ ಕಡಿಮೆ ಮಾಡಿಕೊಳ್ಳಲು ಅವರು ಸಿದ್ಧರಿರಲಿಲ್ಲ. "ಬೌದ್ಧಿಕ ಶ್ರಮ ವಿಪರೀತ ಮಾಡುತ್ತೀರಿ! ಆರೋಗ್ಯ

ಗಮನಿಸಿ. ವಾಕ್ ಮಾಡಿ; ನಮಗೊಬ್ಬರೇ ಇದ್ದವರು ನೀವು ಸಿಎನ್ನೆಮ್ ! ವಿಶ್ರಾಂತಿಗಾಗಿ ಹೊರ ಊರುಗಳಿಗೆ ಹೋಗಿಬನ್ನಿ" ಎಂದು ಆಗಾಗ ಹೇಳುತ್ತಿದ್ದೆ. ನನ್ನ ಮಾತನ್ನು ಒಪ್ಪಿಕೊಂಡರೂ, ಅವಿಶ್ರಾಂತ ದುಡಿತ ಅವರಿಗೆ 'ಕೆಟ್ಟ ಚಟ'ವಾಗಿ ಬಿಟ್ಟಿತ್ತು! ಎಲ್ಲೂ ಏನೂ ತ್ರುಟಿ ಇರಬಾರದೆಂದೇ ಛಲ ಬೇರೆ. ತನ್ನ ಹತ್ತು ಹಲವು ಕನಸುಗಳೆಲ್ಲ ನನಸಾಗುವದನ್ನು ಕಾಣಲೆಂದೇ ಬದುಕಿದ್ದರೋ ಎನ್ನುವಂತೆ ನಿವೃತ್ತರಾದ ಒಂದು ವರ್ಷದಲ್ಲೇ ಇತಿಹಾಸವಾಗಿ ಹೋದರು. (೧೯೯೭)

ಮಹಿಳೆಯೋರ್ವಳು ತನ್ನ ಸಾಧನಾಕ್ಷೇತ್ರವೊಂದನ್ನು ಗುರುತಿಸಿಕೊಂಡು ಹೆಚ್ಚಿನ ಶ್ರಮದಿಂದ ಅದರಲ್ಲಿ ಅಪೂರ್ವಯಶಸ್ಸು ಗಳಿಸುವದು ಇಂದಿನ ದಿನಗಳಲ್ಲಿ ಅಪರೂಪವೇನಲ್ಲ. ಆದರೂ ಅಖಿಲ ಭಾರತೀಯ ಸಂದರ್ಭದಲ್ಲಿ ಕರ್ನಾಟಕ ಮಹಿಳೆಯರ ಸಾಧನೆ ಹೇಳಿಕೊಳ್ಳುವಂತಹದಲ್ಲ ಎಂಬ ಮಾತನ್ನು ವಿಷಾದದಿಂದ ಒಪ್ಪಿಕೊಳ್ಳಬೇಕಾಗುತ್ತದೆ! ನಮ್ಮಲ್ಲಿ ರುಕ್ಮಿಣಿ ಅರುಂಡೇಲ್, ಮಹಾಶ್ವೇತಾದೇವಿ, ಇಳಾ ಭಟ್, ಕಿರಣ್ ಬೇಡಿ, ಪಿ. ಟಿ. ಉಷಾರಂತಹವರು ಕಾಣಿಸಿಕೊಂಡಿಲ್ಲ! ಆದರೆ ಚಿ. ನ. ಮಂಗಳಾ ಓರ್ವರೇ ಹಲವು ಸಾಹಸಗಳನ್ನು ಸಾಧಿಸಿತೋರಿಸಿದ್ದರು. ಶೈಕ್ಷಣಿಕ ವೈಚಾರಿಕ ಸಾಮಾಜಿಕ ಪ್ರಯೋಗಗಳಲ್ಲಿ, ಸಾಹಿತ್ಯ ಕಲೆ ವಿಜ್ಞಾನಗಳಲ್ಲೆಲ್ಲ ಹೆಚ್ಚಿನ ಆಸಕ್ತಿಹೊಂದಿದ್ದರು. ದೀನದಲಿತರು ವಿಶೇಷತಃ ಮಹಿಳೆಯರ ಸರ್ವತೋಮುಖ ಪ್ರಗತಿಯಲ್ಲಿ ತೀವ್ರ ಕಳಕಳಿ ತಾಳಿದ ಅವರು ತಮ್ಮ ಅಪ್ರತಿಮ ಕಾರ್ಯಕುಶಲತೆಯಿಂದ, ಸಂಘಟನಾಶಕ್ತಿಯಿಂದ ಬಹುಶ್ರುತೆಯಾದರು. ಯಾವ ಕಾಲಕ್ಕೂ, ಯಾವುದೇ ಪ್ರದೇಶದಲ್ಲಿ ಅವರಂತೆ ತಮ್ಮ ಹತ್ತಾರು ಕನಸುಗಳಿಗೆ, ಅಲ್ಪಕಾಲದಲ್ಲೇ ಮೂರ್ತರೂಪಕೊಟ್ಟವರು ವಿರಳರೆಂದೇ ಹೇಳಬೇಕು. ಸಿಎನ್ನೆಮ್ (ಸಿ. ಎನ್. ಮಂಗಳಾ ಇದರ ಹ್ರಸ್ವರೂಪ. ಆತ್ಮೀಯರಿಗೆ, ಶಿಷ್ಯವರ್ಗಕ್ಕೆ ಈ ಹೆಸರಿನಿಂದಲೇ ಪರಿಚಿತರು,) ಇಂತಹ ವಿರಳ ವ್ಯಕ್ತಿಯಾಗಿದ್ದರು. ನಾಡಿನ ಹೆಮ್ಮೆಯ ಸಂಕೇತವಾಗಿದ್ದರು.

ಅನುಕೂಲ ಪರಿಸರ, ಸುಸಂಸ್ಕೃತ ಮನೆತನ, ಆದರ್ಶಪ್ರಾಯರಾಗಿದ್ದ ತಂದೆ-ತಾಯಿ, ಉತ್ತಮ ಶಿಕ್ಷಣದ ಹಿನ್ನೆಲೆ ಪಡೆದಿದ್ದ ಮಂಗಳಾ ತಾನು ರೂಢಿಸಿಕೊಂಡ ಅಧ್ಯಾಪನಕ್ಷೇತ್ರವೊಂದರಲ್ಲೇ ಹೆಸರು ಮಾಡಬಹುದಾಗಿತ್ತು.

ಸಂಸಾರಸ್ಥೆಯಾಗಿ ಬಾಳಿನಲ್ಲಿ ಧನ್ಯತೆ ಪಡೆಯಬಹುದಾಗಿತ್ತು. ಆದರೆ ಅವರು ಮಾರುಹೋದದ್ದು, ಕಷ್ಟ-ನಿಷ್ಠುರಗಳ ಸೇವಾಮಾರ್ಗಕ್ಕೆ ಅರ್ಪಿಸಿಕೊಂಡದ್ದು ಜನಜಾಗೃತಿಯ ವಿಸ್ತಾರವಾದ ಕ್ಷೇತ್ರಕ್ಕೆ. ಎರಡರಲ್ಲೂ ಯಶಸ್ವಿಯಾದರು. ಮನಸ್ಸು ಮಾಡಿದರೆ ಮಹಿಳೆಯೋರ್ವಳು ಎಷ್ಟೆಲ್ಲ ಕೆಲಸಮಾಡಬಹುದು! ಎಂಬುದಕ್ಕೆ ಮಾದರಿಯಾದರು.

ಬೊಬ್ಬೂರಕಮ್ಮೆ ಬ್ರಾಹ್ಮಣ ಕುಟುಂಬಕ್ಕೆ ಸೇರಿದ ಚಿ. ನ. ಮಂಗಳಾ, ನರಸಿಂಹಮೂರ್ತಿ, ರಾಜೇಶ್ವರಿಯವರ ನಾಲ್ವರು ಮಕ್ಕಳಲ್ಲಿ ಹಿರಿಯ ಮಗಳಾಗಿ ೧೯೩೮ ರಲ್ಲಿ ಜನಿಸಿದರು. ಶ್ರೀ ನರಸಿಂಹಮೂರ್ತಿ ಅವರು, ತುಂಬ ಕಷ್ಟದಿಂದ ಅನಾಥಾಲಯದಲ್ಲಿದ್ದು, ವಾರಾನ್ನ ಮಾಡಿಕೊಂಡು, ಪಾಠಹೇಳಿ, ತಾಯಿನಾಡು ಪತ್ರಿಕೆಗೆ ಬಾತ್ಮೀದಾರನಾಗಿ ಕೆಲಸಮಾಡಿ, ಓದಿದವರು. ಎಂ. ಎ. ಹಾಗೂ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗಳಲ್ಲಿ ಪ್ರಪ್ರಥಮರಾಗಿ ಆ ಬಳಿಕ ಸರಕಾರದ ಹಲವಾರು ಉನ್ನತ ಹುದ್ದೆಗಳಿಗೆ ಏರಿದರು. ಅವರ ಅಪೂರ್ವ ಸಾಹಸವೆಂದರೆ, ಬಾಲವಿಧವೆಯಾಗಿದ್ದ ರಾಜೇಶ್ವರಿಯನ್ನು ಮದುವೆಯಾದದ್ದು. ಆ ದಿನಗಳಲ್ಲಿ ಈ ಮದುವೆ ದೊಡ್ಡ ಸುದ್ದಿಯಾಗಿತ್ತು. ಮೈಸೂರು ಬೆಂಗಳೂರಿನ ಸಂಪ್ರದಾಯವಂತ ಸಮಾಜ ಈ ವಿವಾಹವನ್ನು ಸಹಿಸಿದ್ದೇ ಅಲ್ಲದೇ ಸ್ವಾಗತಿಸಿದ್ದು ದೊಡ್ಡ ವಿಚಾರವೆಂದು ಮಂಗಳಾ ಒಮ್ಮೆ ಉದ್ಗರಿಸಿದ್ದರು. ನರಸಿಂಹಮೂರ್ತಿ, ಪತ್ನಿಯ ಸಂಗೀತ-ಸಾಹಿತ್ಯಾಸಕ್ತಿಗಳನ್ನು ಪ್ರೋತ್ಸಾಹಿಸಿದ್ದೇ ಅಲ್ಲದೇ, ಟೆನಿಸ್ ಆದಿ ಆಟಗಳನ್ನು ಆಡುವಂತೆ ನೋಡಿಕೊಂಡರು. ಮಂಗಳಾ ಬೆಳೆದದ್ದು ಇಂಥ ವಾತಾವರಣದಲ್ಲಿ.

ಸಾಹಿತ್ಯ-ನಾಟಕಾಸಕ್ತಿಗಳನ್ನು ಎಳೆತನದಿಂದಲೇ ಹೊಂದಿಬೆಳೆಸಿ ಕೊಂಡಿದ್ದ ಮಂಗಳಾ ಡಾಕ್ಟರ್ ಆಗಲು ಬಯಸಿದ್ದರು. ಆದರೆ ಇಂಟರ್‌ಮೀಡಿಯಟ್ ದರ್ಜೆಯ ಪರೀಕ್ಷೆ ಹೊತ್ತಿಗೆ 'ಅಮ್ಮ' (ಸಿಡುಬು) ಎದ್ದು ಹಾಸಿಗೆ ಹಿಡಿದರು. ಬಳಿಕ ಚೇತರಿಸಿಕೊಂಡರಾದರೂ ದೃಷ್ಟಿ ಬಲಹೀನವಾಯಿತು. ಪರೀಕ್ಷೆಯಲ್ಲಿಯೂ ಬರೆಯಲಿಕ್ಕಾಗದೇ ಮೂರನೆಯ ವರ್ಗದಲ್ಲಿ ಪಾಸಾದರು. ವೈದ್ಯೆಯಾಗುವ ಆಸೆ ಬಿಟ್ಟು ಇಂಗ್ಲಿಷ್ ಭಾಷಾ ವಿದ್ಯಾರ್ಥಿನಿಯಾದರು. ಪ್ರೊ. ಎಸ್. ವಿ. ರಂಗಣ್ಣ, ವಿ. ಸೀ. ಜಿ. ಪಿ. ರಾಜರತ್ನಂ ಅವರಂಥ ಅಧ್ಯಾಪಕರು ಅವರಿಗೆ ದೊರೆತರು. ಅಧ್ಯಯನ

ಶೀಲತೆ ಬೆಳೆಯುತ್ತ ಹೋಯಿತು. ಬಿ. ಎ. ಪರೀಕ್ಷೆಯಲ್ಲಿಯೂ ಮೂರನೆಯ ದರ್ಜೆಯೇ ಕಾದಿತ್ತು. ಆದರೂ ಧೃತಿಗೆಡದೇ ತಂದೆಗೆ ವರ್ಗವಾದ ಮದ್ರಾಸಿನಲ್ಲೆ ಓದು ಮುಂದರಿಸುವದೆಂದು ನಿಶ್ಚಯಿಸಿದರು. ಅವರ ನಿಜವಾದ ಯೋಗ್ಯತೆಯನ್ನು ಬಲ್ಲ ಪ್ರೊ. ಸಿ. ಡಿ. ಎನ್. ರ ಪತ್ರ, ಮದ್ರಾಸ ಪ್ರೆಸಿಡೆನ್ಸಿ ಕಾಲೇಜಿನ ಇಂಗ್ಲಿಷ್ ವಿಭಾಗದ ಮುಖ್ಯಸ್ಥೆ ಸಭಾ ಪಾರ್ಥಸಾರಥಿ ಅವರನ್ನು ಭೇಟಿಮಾಡಲು ಸಹಾಯವಾಯಿತು. ಕಡಿಮೆ ಮಾರ್ಕ್ಸ್ ಬರಲು ಕಾರಣಗಳನ್ನು ಅರ್ಥೈಸಿಕೊಂಡ ಶ್ರೀಮತಿ ಪಾರ್ಥಸಾರಥಿ, ಅಲ್ಲೇ ಕುಳಿತು, ವಾಚನಾಲಯದ ಗ್ರಂಥಗಳ ಆಧಾರದಿಂದ ಪ್ರಬಂಧ ಬರೆಯಲು ಮಂಗಳಾಗೆ ಹೇಳುತ್ತಾರೆ. ಬಳಿಕ ಪ್ರಬಂಧವನ್ನು ಸ್ವತಃ ಪರಿಶೀಲಿಸಿ, ಎಕ್ಸಲೆಂಟ್! ಎಂದು ಬೆನ್ನು ಚಪ್ಪರಿಸಿ ಎಂ. ಎ.ಗೆ ಪ್ರವೇಶ ನೀಡುವಂತೆ ಪ್ರಿನ್ಸಿಪಾಲರಿಗೆ ಪತ್ರಕೊಡುತ್ತಾರೆ. ಎಂ. ಎ. ಪರೀಕ್ಷೆಯನ್ನು ಉತ್ತಮರೀತಿಯಲ್ಲಿ ಮಂಗಳಾ ಪಾಸುಮಾಡುತ್ತಾರೆ. ಬಳಿಕ ಡಾಕ್ಟರೇಟೂ ಅವರದಾಗುತ್ತದೆ.

ಮುಂದೊಂದು ದಿನ, ಮಂಗಳಾ ಪ್ರಾಂಶುಪಾಲರಾದಾಗ ಆರನೇ ಬಾರಿ ಎಸ್. ಎಸ್. ಎಲ್. ಸಿ. ಗೆ ಕುಳಿತು ಪಾಸಾದ ವಿದ್ಯಾರ್ಥಿನಿ ಇನ್ನಾವ ಕಾಲೇಜಿನಲ್ಲೂ ಪ್ರವೇಶ ಸಿಗದೇ ಇವರ ಕಾಲೇಜಿಗೆ ಪ್ರವೇಶ ನೀಡಿರೆಂದು ಗೋಗರೆದಾಗ ಈ ಘಟನೆ ನೆನಪಿಸಿಕೊಳ್ಳುತ್ತಾರೆ. ಸಭಾ ಪಾರ್ಥಸಾರಥಿ ಆಗ ತಳೆದ ನಿಲುವಿನಿಂದಾಗಿ ತನ್ನ ಜೀವನಕ್ಕೆ ಹೊಸ ಆಯಾಮ ದೊರೆತಿತ್ತು ಎಂದು ಗ್ರಹಿಸಿ ಆ ವಿದ್ಯಾರ್ಥಿನಿಗೆ ಪ್ರವೇಶ ನೀಡುತ್ತಾರೆ. ಆಕೆ ಪಿ.ಯು.ಸಿ.ಯಲ್ಲಿ ಮೊದಲ ಪ್ರಯತ್ನದಲ್ಲೇ ಪ್ರಥಮದರ್ಜೆಯಲ್ಲಿ ತೇರ್ಗಡೆ ಹೊಂದುತ್ತಾಳೆ. ಬಿ.ಎ. ಎಂ.ಎ. ಗಳಲ್ಲೂ ಪ್ರಥಮದರ್ಜೆ, ಸ್ವರ್ಣಪದಕಗಳನ್ನು ಪಡೆಯುತ್ತಾಳೆ. ಅಕಾರಣವಾಗಿ ಕೆಲವೊಮ್ಮೆ ವಿದ್ಯಾರ್ಥಿಗಳು ಸೋಲುತ್ತಾರೆ; ಆಗ ಹತಾಶೆಗೆ ಅವಕಾಶ ಕೂಡದು. ಎಂದು ಸ್ವಂತ ಅನುಭವದಿಂದ ಕಂಡುಕೊಂಡದ್ದರಿಂದ ವಿದ್ಯಾರ್ಥಿಗಳ ಮಾನಸವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲವರಾಗಿದ್ದರು, ಅಂಕಗಳೇ ಯಶಸ್ಸಿನ ಮಾನದಂಡವಲ್ಲವಲ್ಲ!

ಮೊದಲಿಗೆ ಮಂಗಳಾ, ಆಚಾರ್ಯ ಪಾಠಶಾಲೆಯಲ್ಲಿ, ಆ ಬಳಿಕ ನ್ಯಾಶನಲ್ ಕಾಲೇಜಿನಲ್ಲಿ ಅಧ್ಯಾಪಕಿಯಾಗಿ ಹಲವರ್ಷ ಕೆಲಸ ಮಾಡಿದರು.

ಎರಡನೆಯ ಕಾಲೇಜಿನಲ್ಲಿ ಅವರ ನಾಟಕದ ಗೀಳಿಗೆ, ಪಠ್ಯೇತರ ಚಟುವಟಿಕೆಗಳಿಗೆ ಹೆಚ್ಚಿನ ಅವಕಾಶವಾದದ್ದನ್ನು ಹೇಳಿಕೊಂಡಿದ್ದಾರೆ. ಶ್ರೀನಿವಾಸ, ಕಪ್ಪಣ್ಣ, ಸಿಂಹ, ವಿಷ್ಣುವರ್ಧನ, ಲೋಕೇಶ್, ಬಿ. ಆರ್. ಜಯರಾಂ ಮೊದಲಾದ ರಂಗ ಹಾಗೂ ಸಿನೇ ಜಗತ್ತಿನ ಧುರಂಧರರೆಲ್ಲ ಈ ಕಾಲೇಜಿನಲ್ಲಿ ಪಳಗಿದವರೇ! ನಾಟಕಗಳನ್ನು ಕೂಡಿಸಿ, ಆಡಿಸುವಲ್ಲಿ ಅಲ್ಲಿ ಮಂಗಳಾರ ಪ್ರತಿಭೆಗೆ ಹೊಸ ಆಯಾಮ ದೊರೆಯಿತು, ಎಲ್ಲರೂ ನನ್ನವರೇ! (ಅರ್ಥರ್ ಮಿಲ್ಲರ್‌ನ All my sons ಭಾವಾನುವಾದ) ಸ್ವತಃ ಬರೆದು ನಿರ್ದೇಶಿಸಿದರು. ಹಲವಾರು ನಗರಗಳಲ್ಲಿ ಈ ನಾಟಕದ ಪ್ರದರ್ಶನ ನಡೆಯಿತು. ಕೆಲಕಾರಣಗಳಿಗಾಗಿ ನ್ಯಾಶನಲ್‌ಕಾಲೇಜನ್ನು ಬಿಡಬೇಕಾಗಿ ಬಂದರೂ ತಾವು ಸೇವೆ ಸಲ್ಲಿಸಿದ ಎರಡೂ ಸಂಸ್ಥೆಗಳ ಕುರಿತಾದ ಹೆಚ್ಚಿನ ಮಮತೆ-ಗೌರವಗಳನ್ನು ಅವರು ತಳೆದಿದ್ದರು. ಇದೇ ಸಂದರ್ಭದಲ್ಲಿ ತಂದೆಯವರ ಆಕಸ್ಮಿಕ ನಿಧನ ಅವರಿಗೆ ದೊಡ್ಡ ಆಘಾತವಾಗಿ ಪರಿಣಮಿಸಿತು. ಒಂದು ವರ್ಷಕಾಲ ಜ್ಞಾನಗಂಗೋತ್ರಿಯಲ್ಲಿ ಕಿರಿಯರ ವಿಶ್ವಕೋಶದ ಸಹಾಯಕ ಸಂಪಾದಕಿಯಾಗಿ ಕೆಲಸ ಮಾಡಿದರು.

ಖ್ಯಾತ ಶಿಕ್ಷಣಸಂಸ್ಥೆಯಾದ ರಾಷ್ಟ್ರೀಯ ಶಿಕ್ಷಣ ಸಮಿತಿಯ ಟ್ರಸ್ಟು, ಮಹಿಳೆಯರಿಗಾಗಿ ಕಾಲೇಜೊಂದನ್ನು ಸ್ಥಾಪಿಸಲು ನಿರ್ಧರಿಸಿತು. ನ್ಯಾಶನಲ್‌ಕಾಲೇಜಿನ ಪ್ರಿನ್ಸಿಪಾಲರಾಗಿ, ಮಂಗಳಾ ಅವರ ಪ್ರತಿಭೆ, ಕಾರ್ಯವೈಖರಿಗಳನ್ನು ಗಮನಿಸಿದ್ದ ಖ್ಯಾತ ಶಿಕ್ಷಣತಜ್ಞ ಡಾ. ಎಚ್. ನರಸಿಂಹಯ್ಯನವರು, ಮಹಿಳಾಕಾಲೇಜಿನ ಪ್ರಿನ್ಸಿಪಾಲರ ಹುದ್ದೆಗೆ ಅವರ ಹೆಸರನ್ನೇ ಸೂಚಿಸಿದರು. ಮಂಗಳಾರಿಗೂ ಈ ಹುದ್ದೆ ಒಪ್ಪಿಕೊಳ್ಳುವಂತೆ ಸ್ವತಃ ಒತ್ತಾಯಿಸಿದರು. ತಿರುಗಿ ಶಿಕ್ಷಣಕ್ಷೇತ್ರಕ್ಕೆ ಹೋಗಲು ಇಷ್ಟಪಡದೇ, ಮನಸ್ಸಿಲ್ಲದೆ, ಟ್ರಸ್ಟಿನ ಅಧ್ಯಕ್ಷರಾಗಿದ್ದ ಮೋಡಾ ಕಸ್ತೂರಿ ರಂಗಶೆಟ್ಟಿ ಅವರನ್ನು ಮಂಗಳಾ ಕಂಡರು. ಅವರಿತ್ತ ಆಶ್ವಾಸನೆ, ಆ ಹೊಣೆಯನ್ನು ಒಪ್ಪಿಕೊಳ್ಳುವಂತೆ ಮಾಡಿತು. "ಕಾಲೇಜು ಚೆನ್ನಾಗಿ ಅಭಿವೃದ್ಧಿ ಹೊಂದಬೇಕು. ಒಳ್ಳೆಯ ಶಿಕ್ಷಣ ನೀಡಬೇಕು. ಅದಕ್ಕೆ ಏನು ಬೇಕೋ ಎಲ್ಲ ಮಾಡಿ ! ನಾವು ಮಧ್ಯೆ ಪ್ರವೇಶಿಸುವದಿಲ್ಲ. ಎಲ್ಲಾ ಹೊಣೆ ನಿಮ್ಮದೇ! ನಿಮಗೆ ಏನು ಸಹಾಯ ಸಹಕಾರ ಬೇಕೋ ಹೇಳಿ, ನಾವು ಮಾಡುತ್ತೇವೆ". ೧೯೭೧ ರಲ್ಲಿ

ಅವರಿಗೆ ಶೆಟ್ಟರಿಂದ ದೊರೆತ ಆಶ್ವಾಸನೆ, ನಿವೃತ್ತಿಯ ದಿನದ ತನಕವೂ ಏಕಪ್ರಕಾರವಾಗಿ ನಡೆದು ಬಂದಿತು.

ಅಧ್ಯಾಪಕರ ನೇಮಕಾತಿಯೂ ಸಂಸ್ಥೆಗೇ ಸೇರಿತ್ತು. ಅವರೋ ಪ್ರಾಂಶುಪಾಲರಿಗೇ ಈ ವಿಚಾರದಲ್ಲಿ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದರಿಂದ, ಸೇವಾನಿಷ್ಠ, ದಕ್ಷತೆ ಹಾಗೂ ವಿದ್ವತ್ತಿಗೆ ಹೆಸರಾದವರನ್ನು ಆಯ್ಕೆಮಾಡಲು ಮಂಗಳಾರಿಗೆ ಅನುಕೂಲವಾಯಿತು. ಮುಂದೆ ಅವರೊಂದಿಗೆ ಹೆಗಲು ಕೊಟ್ಟು ದುಡಿಯುವ ಕರ್ತವ್ಯಪರ ಟೀಮ್ ತಯಾರಾಗಿ ಕಾಲೇಜಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಯಿತು.

ಮೊದಲಿನಿಂದಲೂ ಪ್ರತ್ಯೇಕತೆಯನ್ನು ವಿರೋಧಿಸುತ್ತ ಬಂದವರು, ಮಹಿಳಾಕಾಲೇಜಿನ ಪ್ರಾಂಶುಪಾಲತ್ವಕ್ಕೆ ಹೇಗೆ ಒಪ್ಪಿಕೊಂಡರು? ಪರಿಚಿತವಲಯದಲ್ಲಿ ಎಲ್ಲರಿಗೂ ಇದೊಂದು ಗೂಢವೆನಿಸಿತಂತೆ! ಹಲವರು ಟೀಕಿಸಿಯೂ ಇದ್ದರು. ಉತ್ತರ ಕೊಡಲು ಒಂದು ವರ್ಷದ ಕಾಲಾವಕಾಶ ಕೇಳಿ, ನಿರ್ದಿಷ್ಟ ಅವಧಿ ಮುಗಿದಾಕ್ಷಣ ಮಂಗಳಾ ಪತ್ರಿಕಾಗೋಷ್ಠಿ ಕರೆದರು. "ಮಹಿಳಾ ಕಾಲೇಜುಗಳು ಬೇಕೇ ಬೇಕು. ಮಹಿಳಾ ಸಮ್ಮೇಳನಗಳು, ಸಂಘ-ಸಂಸ್ಥೆಗಳು, ಗೋಷ್ಠಿಗಳೂ ಬೇಕು! ನಮ್ಮಲ್ಲಿ ಮಹಿಳೆಯರ ವಿಕಾಸಕ್ಕೆ ಸಹಶಿಕ್ಷಣ ಕ್ಷೇತ್ರದಲ್ಲಿ ಇನ್ನೂ ಭೂಮಿ ಹದವಾಗಿಲ್ಲ..... ಸಹಶಿಕ್ಷಣದಲ್ಲಿ ನೂರಕ್ಕೆ ಒಬ್ಬ ಮಹಿಳೆ ತಲೆ ಎತ್ತಬಹುದು, ಆದರೆ ಮಹಿಳೆಯರಿಗಾಗಿಯೇ ಇರುವ ಸಂಸ್ಥೆಗಳಲ್ಲಿ ನೂರಕ್ಕೆ ಐವತ್ತು ಜನರಾದರೂ ತಲೆಯೆತ್ತಿ ನಿಲ್ಲುವ ಸಾಮರ್ಥ್ಯ ಪಡೆಯುತ್ತಾರೆ..... ವ್ಯಕ್ತಿತ್ವ ಕಂಡುಕೊಳ್ಳಲು ಹವಣಿಸುತ್ತಾರೆ ! ಎಂದು ತಮ್ಮ ನಿಲುವು ಸಾರಿದರು. ಇಪ್ಪತ್ತೈದು ವರ್ಷಗಳ ಬಳಿಕ ಈ ಸಿದ್ಧಾಂತ, ಅವರಲ್ಲಿ ಇನ್ನೂ ಗಟ್ಟಿಯಾಗಿ ಬೇರು ಬಿಟ್ಟಿತ್ತು.

ಆಸಕ್ತಿಯ ವೃತ್ತಿ, ವೃತ್ತಿ ಸ್ವಾತಂತ್ರ್ಯ, ಸ್ವತಂತ್ರ ಕಲ್ಪನೆ ಹಾಗೂ ಸ್ಪಷ್ಟ ಯೋಜನೆಗಳಿಂದಾಗಿ, ಮಂಗಳಾರ ಪುಟ್ಟ ದೇಹದಲ್ಲಿ ಅಡಗಿದ್ದ ದೈತ್ಯಚೈತನ್ಯ ರಭಸದಿಂದ ಹೊರಬಿತ್ತು. ಅವರ ಭಾಷೆಯಲ್ಲೇ ಹೇಳುವದಾದರೆ, "ಬರೀ ಬ್ಲ್ಯಾಂಕ್ ಲುಕ್ ಹಾಕಿಕೊಂಡಿದ್ದ, ನಾಲ್ಕೂ ಮುಕ್ಕಾಲಡಿಯ, ತೊಂಭತ್ತು ಪೌಂಡಿನ, ಮೋಟು ಜಡೆಯ ಬಚ್ಚಾ ಪ್ರಿನ್ಸಿಪಾಲ್ ಆಗಿದ್ದರು! ಆಗ ಅವರ ವಯಸ್ಸು ಕೇವಲ ೩೩ ವರ್ಷ. ಎರಡೇ ದಶಕಗಳಲ್ಲಿ ಅವರ ಕಾಲೇಜು ಬೃಹದ್ ಸಂಸ್ಥೆಯಾಗಿ ಬೆಳೆಯಿತು.

ಪದವಿ ವರ್ಷದಲ್ಲೇ ೩೦೦೦ ವಿದ್ಯಾರ್ಥಿನಿಯರು, ೧೫೦ ಅಧ್ಯಾಪಕರು, ೧೦೦ ಜನ ಸಿಬ್ಬಂದಿಗಳ ಜೊತೆ, ಸ್ನಾತಕೋತ್ತರ ಬೋಧನೆಗೆ ಸಿದ್ಧವಾಯಿತು.

ಆದರೆ ಹುಟ್ಟಾ ಕನಸುಗಾರ್ತಿಯಾದ ಮಂಗಳಾ, ಕಾಲೇಜೊಂದರ ಉಸ್ತುವಾರಿಯಲ್ಲೇ ತೃಪ್ತಿಪಡುವ ಜೀವವಾಗಿರಲಿಲ್ಲ. ಹೊಸ ಪಠ್ಯಕ್ರಮದ, ಮಹಿಳಾ ಅಧ್ಯಯನದ ಕೋರ್ಸ್ ಪ್ರಾರಂಭಿಸಿದರು. ಮಹಿಳಾ ಜಾಗೃತಿಯ ಅಡಿಗಲ್ಲು ಹಾಕಿದರು. ಮಾನವತಾವಾದವೇ ಇದಕ್ಕೆ ಬುನಾದಿಯಾಗಿತ್ತೇ ಹೊರತು ಪುರುಷ ದ್ವೇಷವಲ್ಲ! ಎಂದು ಸ್ಪಷ್ಟಪಡಿಸಿದರು. ಕ್ಷೇತ್ರಕಾರ್ಯಕ್ಕೆ ಹೆಚ್ಚಿನ ಒತ್ತುಕೊಟ್ಟರು. ಕೊಳೆಗೇರಿಗಳ ಪರಿಚಯ, ಜೈಲುಗಳಿಗೆ ಭೇಟಿ, ವೃದ್ಧಾಶ್ರಮ-ಆಸ್ಪತ್ರೆ, ಅನಾಥಾಲಯಗಳಿಗೆ ಹೋಗಿ ವಿದ್ಯಾರ್ಥಿನಿಯರು ಬದುಕಿನ ರೀತಿ ನೀತಿಗಳನ್ನು ಅರಿಯುವ ಅವಕಾಶ ಕಲ್ಪಿಸಿದರು. 'ಸಮನ್ವಿತಾ' ಎಂದು ಮಹಿಳಾ ಅಧ್ಯಯನದ ಕಕ್ಷ ಬೆಳೆಯಿತು.

೧೯೭೩ ರಷ್ಟು ಹಿಂದೆಯೇ 'ಶಾಶ್ವತೀ' ಕಲ್ಪನೆ ರೂಪಗೊಂಡಿತ್ತು. ವಿಶ್ವಮಾತೆಯ, ಸ್ತ್ರೀ ಶಕ್ತಿಯ ಪ್ರತೀಕವಾದ 'ಶಾಶ್ವತೀ'ಯ ಉಲ್ಲೇಖ ಲಲಿತಾಸಹಸ್ರನಾಮದಲ್ಲಿ ಬರುವಂತೆ ಆ ಹೆಸರಿನ ಬ್ರಹ್ಮವಾದಿನಿಯೂ ಆಗಿ ಹೋದಳು. ವಸ್ತುಸಂಗ್ರಹಾಲಯದ ಸ್ಪಷ್ಟರೂಪ ಬೆಳೆದದ್ದು ಎಂಭತ್ತರ ದಶಕದಲ್ಲಿ. ಮನೆಮನೆಗೆ ಊರಿಂದೂರಿಗೆ ಭೇಟಿಯಿತ್ತು. ಗೃಹಜೀವನಕ್ಕೆ ಸಂಬಂಧಿಸಿದ ಸಾಮಾನುಗಳನ್ನು ಕಲೆ ಹಾಕಲಾರಂಭಿಸಿದರು. ಭಾರತೀಯ ಮಹಿಳೆ, ಬೆಳೆದು ಬಂದ ದಾರಿಯನ್ನು ಬಿಂಬಿಸುವ ಉದ್ದೇಶದಿಂದ ಜೀವನದ ಸ್ಥಿತಿ-ಗತಿ, ಸಾಂಸ್ಕೃತಿಕ ಸಾಧನೆಗಳನ್ನು ಎತ್ತಿ ಹಿಡಿಯುವ ರೀತಿಯಲ್ಲಿ ವಸ್ತುಸಂಗ್ರಹಾಲಯ ರೂಪಗೊಂಡಿತು. ಮಹಿಳೆಯರು ಬರೆದ ಗ್ರಂಥಗಳು, ಲೇಖಿಸಿದ ಪತ್ರಗಳು, ಭಾವಚಿತ್ರಗಳು, ಶತಕದ ಹಿಂದಿನ ಕಲಾಪತ್ತಿನ ಸೀರೆಗಳು, ಕಸೂತಿಯ ವಿಧಾನಗಳು, ಪಾತ್ರೆಪಡಗ, ಗ್ರಾಮೋಫೋನ ರಿಕಾರ್ಡಗಳು, ಆಭರಣಗಳ ಪ್ರತಿಕೃತಿಗಳು, ಏನುಂಟು, ಏನಿಲ್ಲ? "ಶಾಶ್ವತೀ" ಹೆಸರಿಗೆ ತಕ್ಕಂತೆ ದಿನದಿನವೂ ಬೆಳೆಯುತ್ತಲೇ ಶಾಶ್ವತತೆಯತ್ತ ದಾಪುಗಾಲು ಇಡುತ್ತಲಿದೆ.

ಕನ್ನಡಿಗರ ಇತಿಹಾಸ ಪ್ರಜ್ಞೆಯ ಕೊರತೆ, ಮಂಗಳಾರನ್ನು ತುಂಬ ಕಾಡಿತ್ತು. ಆಧುನಿಕ ಕನ್ನಡದ ಮೊದಲ ಲೇಖಕಿ ತಿರುಮಲಾಂಬಾ ಇನ್ನೂ ಬದುಕಿರುವ ವಿಚಾರ ತಿಳಿದಾಕ್ಷಣ ಕಾರ್ಯೋನ್ಮುಖಿಯಾದರು. ಕಷ್ಟಪಟ್ಟು

ಅವರು ಅಜ್ಞಾತರಾಗಿ ಬದುಕುತ್ತಿದ್ದ ತಾಣವನ್ನು ಕಂಡುಹಿಡಿದರು. ತಿರುಮಲಾಂಬಾ ಅವರನ್ನು ಜನರೆಲ್ಲ ಶಾಶ್ವತವಾಗಿ ನೆನಪಿಡುವಂತೆ ಈ ಕನ್ನಡದ ಮೊದಲ ಪ್ರಕಾಶಕಿ, ಪತ್ರಿಕಾಕರ್ತೆ, ಸಂಪಾದಕಿ, ಸಮಾಜಸೇವಿಕೆಯನ್ನು ಪುನಶ್ಚೇತನಗೊಳಿಸಿದರು. ಸತ್ಕಾರ, ಸಮಾರಂಭಗಳನ್ನು ಏರ್ಪಡಿಸಿದ್ದೇ ಅಲ್ಲದೇ ಅವರ ಹೆಸರಿನ ರಾಷ್ಟ್ರಮಟ್ಟದ ಪ್ರಶಸ್ತಿಯನ್ನು ಆಯೋಜಿಸಿದರು. ಭಾರತೀಯ ಭಾಷೆಯಲ್ಲಿ ಬರೆಯುತ್ತಿರುವ ಲೇಖಕಿಯೋರ್ವಳ ಅತ್ಯುತ್ತಮ ಗ್ರಂಥಕ್ಕೆ ೨೦,೦೦೦ ರೂ. ಗಳ ಬಹುಮಾನ ಹಾಗೂ ಕಾಮಧೇನು ಪ್ರತಿಮೆಗಳನ್ನು ನೀಡಲಾಗುತ್ತಿದೆ. ಮರಾಠಿ, ಮಲಯಾಳಂ, ತಮಿಳು, ಉರ್ದು, ಪಂಜಾಬಿ, ಅಸಾಮಿ, ಬಂಗಾಲಿ, ಸಂಸ್ಕೃತ, ಹಿಂದಿ, ಕನ್ನಡ ಲೇಖಕಿಯರೆಲ್ಲ ಈ ಪ್ರಶಸ್ತಿಗೆ ಭಾಜನರಾದರು.

ಜೊತೆಗೆ ಮಹಿಳಾ ಸಂಬಂಧಿತ ಸಂಶೋಧನೆ, ಸಾಹಿತ್ಯ ಸಂಪಾದನೆ ಇತ್ಯಾದಿಗಳಲ್ಲಿ 'ಸದೋದಿತಾ', 'ಕರ್ನಾಟಕ ಕಲ್ಪವಲ್ಲರಿ' ಪಾರಿತೋಷಕಗಳನ್ನೂ ಪ್ರಾರಂಭಿಸಿದರು. ಸದ್ದುಗದ್ದಲವಿಲ್ಲದೇ ತಮ್ಮ ಪಾಡಿಗೆ ತಾವು ಮನೆಯಲ್ಲೇ ಇದ್ದರೂ ಜಾನಪದ ಹಾಡುಗಳು, ಸಂಪ್ರದಾಯ ಗೀತಗಳು ಮುಂತಾದವನ್ನು ಸಂಗ್ರಹಿಸಿ, ಮೌಲಿಕ ಕ್ಷೇತ್ರಕಾರ್ಯಮಾಡಿ ಪುಸ್ತಕಗಳನ್ನು ಹೊರತಂದ ಕನ್ನಡ ನಾಡಿನ ಸೋದರಿಯರಿಗೆ ಈ ಪಾರಿತೋಷಕದಿಂದ ಸಿಕ್ಕ ಪ್ರೋತ್ಸಾಹ ಅಷ್ಟಿಷ್ಟು ಎಂದು ಹೇಳಲಾಗದು!

'ಕರ್ನಾಟಕದ ಮಹಿಳೆಯರು' ಮಂಗಳಾರ ಸ್ಮರಣೀಯವಾದ ಇನ್ನೊಂದು ಸಾಹಸ, ಕಲೆ, ಸಾಹಿತ್ಯ, ಸಂಸ್ಕೃತಿ, ಜನಜೀವನಗಳನ್ನು ಶ್ರೀಮಂತಗೊಳಿಸಿದ ಕನ್ನಡ ಮಹಿಳೆಯರು ಅನೇಕ ಜನರಿದ್ದು, ಹಲವರು ಎಲೆಯ ಮರೆಯಲ್ಲೇ ಇದ್ದು, ಬಾಳಿ ಬರೆದೂ ಇನ್ನಿತರ ಸೃಜನಶೀಲತೆಯನ್ನು ಮೆರೆದೋ ಕಣ್ಮರೆಯಾಗಿಹೋಗಿದ್ದಾರೆ. ಅಂಥವರನ್ನು ಶಾಶ್ವತವಾಗಿ ನೆನಪಿಡುವ ಕೈಪಿಡಿಗಳನ್ನು ಹೊರತರುವ ಯತ್ನ ಪ್ರಾರಂಭಿಸಿದರು. ಲೇಖಕಿಯರು, ಕಲಾವಿದೆಯರು, ಶಿಕ್ಷಣವೇತ್ತರು, ರಾಜಕಾರಣಿಗಳು, ಆಡಳಿತಾಧಿಕಾರಿಗಳು, ಸಮಾಜ ಸೇವಕರು, ಕ್ರೀಡಾ ಪಟುಗಳು, ವಿಜ್ಞಾನಿಗಳು, ಮುಂತಾದವರ ಕುರಿತಾದ ಐದು ಸಂಪುಟಗಳನ್ನು ಹೊರತರಲು ಯೋಚಿಸಿದ್ದರು. ನಮ್ಮ ಸಂಸ್ಕೃತಿಯಲ್ಲಿ ವ್ಯಕ್ತಿಸಂಬಂಧಿತ ಐತಿಹಾಸಿಕ ದಾಖಲೆಗಳಿಗೆ ಮಹತ್ವವಿರದೇ, ಅನೇಕರ ಅದರಲ್ಲಿಯೂ ಮಹಿಳೆಯರ

ಕುರಿತು ಮಾಹಿತಿ ಇರದ್ದು ಹಾಗೂ ತಿರುಮಲಾಂಬಾ ಅವರ ಶೋಧದಲ್ಲಿ ಮಂಗಳಾ ತಾವು ಎದುರಿಸಿದ ಸಮಸ್ಯೆಗಳೇ ಸೂಚಿಗಳನ್ನು ಪ್ರಕಟಿಸಲು ಪ್ರೇರಣೆಯಾಯಿತು ಎಂದು ಹೇಳುತ್ತಿದ್ದರು. ೧೯೯೦ ರಲ್ಲಿ ಇಂಗ್ಲಿಷ್ ಹಾಗೂ ಕನ್ನಡದಲ್ಲಿ ಲೇಖಕಿಯರ ಕುರಿತಾದ ಸಂಪುಟ, ರಾಷ್ಟ್ರೀಯ ಶಿಕ್ಷಣ ಸಮಿತಿಯ ಸುವರ್ಣ ಮಹೋತ್ಸವ ಪ್ರಕಟನೆಯಾಗಿ ಹೊರಬಂದಿತು. ಪರಿಷ್ಕೃತ, ವಿಸ್ತೃತ ಆವೃತ್ತಿ ೧೯೯೩ ರಲ್ಲಿ ಬಂದಿತು. ಇದೇನು ಸುಲಭದ ಕೆಲಸವಾಗಿರಲಿಲ್ಲ. ವ್ಯಕ್ತಿಗತ ವಿವರ, ಕೃತಿ ವಿವರಗಳ ಕೋರಿಕೆಯನ್ನು ಎಲ್ಲಾ ಮುಖ್ಯ ಪತ್ರಿಕೆ, ನಿಯತಕಾಲಿಕಗಳಲ್ಲಿ ಪ್ರಕಟಿಸಿದರು. ಹಲವಾರು ಮನೆಗಳಿಗೆ ಹೋಗಿ ಮಾಹಿತಿ ತಂದರು. ಎಡಬಿಡದೇ ಪತ್ರವ್ಯವಹಾರ ಮಾಡಿದರು. ತಂತಿಗಳನ್ನು ಕೊಟ್ಟರು, ದೂರವಾಣಿಯಲ್ಲಿ ಸಂಪರ್ಕಿಸಿದರು. "ಒಬ್ಬ ಪ್ರಖ್ಯಾತ ಲೇಖಕಿ ನಮ್ಮ ಹದಿನಾರನೆಯ ಕಾಗದಕ್ಕೆ ಉತ್ತರಿಸಿದರೆ, ಮತ್ತೊಬ್ಬ ಜನಪ್ರಿಯ ಲೇಖಕಿಯು ಮನೆ ವಿಳಾಸದ ಕಾಲಮ್ಮಿಗೆ 'ನಿಮಗೇ ಗೊತ್ತಿದೆ. ಬೇಡದಿದ್ದರೂ ಆರೇಳು ಪತ್ರಬರೆದಿದ್ದೀರಿ!' ಎಂದೂ "ಕೊನೆಗೆ ನನ್ನ ಪಾಡಿಗೆ ನಾನು ಶಾಂತವಾಗಿ ಸಾಹಿತ್ಯಸೇವೆ ಮಾಡುವೆ. ದಯವಿಟ್ಟು ತೊಂದರೆ ಕೊಡಬೇಡಿ. ಪುನಃ ಪತ್ರ ಬರೆಯಬೇಡಿ. ನಿಮ್ಮಿಂದ ನಮಗೆ ಪ್ರಚಾರ ಬೇಕಿಲ್ಲ!" ಎಂದು ಉತ್ತರಿಸಿದ್ದಾಗಿ ಪರಿಷ್ಕೃತ ಸಂಪುಟದ ಮುನ್ನುಡಿಯಲ್ಲಿ ಸಂಪಾದಕರು ಹೇಳಿಕೊಂಡಿದ್ದಾರೆ. ಜನೋಪಯೋಗಿ ಉತ್ಕೃಷ್ಟ ಪ್ರಯತ್ನವೊಂದಕ್ಕೆ ಜಾಗೃತವರ್ಗದ ಮಹಿಳೆಯರು ನೀಡುವ 'ಸಹಕಾರದ' ಕಲ್ಪನೆ ಇದರಿಂದ ಬರುತ್ತದೆ. ಇನ್ನಿತರ ಸಂಪುಟಗಳು ಹೊರಬರದ್ದಕ್ಕೆ ಕಾರಣಗಳನ್ನೂ ಊಹಿಸಬಹುದು!

ಒಳ್ಳೆಯ ಲೇಖಕಿಯಾಗಿಯೂ ಮಂಗಳಾ ಹೆಸರು ಮಾಡಿದ್ದಾರೆ. ಜೀವನ ಚರಿತ್ರೆ, ವಿಮರ್ಶೆ, ನಾಟಕ, ಅನುವಾದ, ಕವನಗಳು, ವೈಚಾರಿಕತೆ ಸ್ಮೃತಿಗ್ರಂಥ, ಆತ್ಮಕತೆ ಹೀಗೆ ವಿವಿಧ ಕ್ಷೇತ್ರಗಳಲ್ಲಿ ಇವರ ಹನ್ನೊಂದು ಕೃತಿಗಳು ಪ್ರಕಟವಾಗಿವೆ. ಹಲವು ಬಾರಿ ವಿದೇಶಗಳಿಗೆ ಹೋಗಿ ಬಂದ ಅನುಭವಗಳನ್ನೆಲ್ಲ ೧೯೯೭ ರಲ್ಲಿ ಬಂದ "ಸ್ನೇಹಸಿಂಧು" ಆತ್ಮವೃತ್ತಾಂತದಲ್ಲಿ ಸೇರ್ಪಡೆಮಾಡಿದ್ದಾರೆ. ಮೂವತ್ತೇಳು ವರ್ಷಗಳ ತಮ್ಮ ಶಿಕ್ಷಣಕ್ಷೇತ್ರದ ಅನುಭವಗಳನ್ನೆಲ್ಲ ಮುಚ್ಚುಮರೆಯಿಲ್ಲದೇ ನಂಜು-ಬೇಸರಗಳಿಗೆ ಅವಕಾಶ ಕೊಡದೇ ಹೇಳಿಕೊಂಡಿದ್ದಾರೆ. ಸಮಾಜದಿಂದ ಏನನ್ನೂ ನಿರೀಕ್ಷಿಸದೇ,

ಪಡೆದುದರ ನೂರು ಪಟ್ಟು ಹಿಂದಿರುಗಿಸಿದ ಈ ಪುಣ್ಯಜೀವಿಗೆ ಎಲ್ಲವೂ ಒಳ್ಳೆಯದಾಗಿ, ಎಲ್ಲರೂ ತನ್ನವರಾಗಿ ಕಾಣುತ್ತಿದ್ದರು. ಶಿಕ್ಷಣಕ್ಷೇತ್ರದ ಅಧೋಗತಿಗೆ ವ್ಯವಸ್ಥೆ, ಅಧ್ಯಾಪಕರು, ವಿದ್ಯಾರ್ಥಿಗಳು, ಪಾಲಕರು ಎಲ್ಲರೂ ಧಾರಾಳವಾಗಿಯೇ ಕೊಡಮಾಡಿದ್ದನ್ನು ನಿರ್ಲಿಪ್ತತೆಯಿಂದ ಹೇಳಿಕೊಂಡಿದ್ದರಿಂದ, 'ಸ್ನೇಹಸಿಂಧು' ಪ್ರಸಕ್ತ ಶಿಕ್ಷಣವ್ಯವಸ್ಥೆಯ ಕುರಿತು ಆಸಕ್ತರ ಕಣ್ಣು ತೆರೆಸುವ ಪುಸ್ತಕವಾಗಿದೆ. "ಶಾಶ್ವತೀ" ಪರವಾಗಿ ನೂತನ ಪ್ರಯೋಗಾತ್ಮಕ ಕಾರ್ಯಕ್ರಮಗಳು ನಡೆದೇ ಇದ್ದವು. ಮೂರು ತಿಂಗಳ ಡಿಪ್ಲೊಮಾ ಪ್ರಾರಂಭಿಸಿದರು. ಸ್ವಂತ ಉದ್ಯೋಗ, ಗೃಹೋದ್ಯೋಗ, ಅಡಿಗೆ ಮುಂತಾದವುಗಳನ್ನು ಕಲಿಯುವಲ್ಲಿ ಅಜ್ಜಿ, ಮಗಳು, ಮೊಮ್ಮಗಳು, ಅತ್ತೆ-ಸೊಸೆ ಎಲ್ಲ ತಲೆಮಾರಿನವರೂ ಬಂದು ಆಧುನಿಕತೆಗೆ ಸ್ವಯಂ ಪ್ರೇರಣೆಯಿಂದ ತೆರೆದುಕೊಂಡಿದ್ದಾರೆ. ತರಬೇತಿಯ ಲಾಭ ಪಡೆದಿದ್ದಾರೆ.

ಮಹಿಳಾಜಾಗೃತಿ ಹಾಗೂ ಉನ್ನತಿಯ ಬಗ್ಗೆ ವಿಶೇಷ ಕಳಕಳಿ ಹೊಂದಿದ್ದ ಮಂಗಳಾ, ನಮ್ಮ ಸಮಾಜದಲ್ಲಿ ಸ್ತ್ರೀ ಪುರುಷರ ಸ್ಥಾನಮಾನಗಳ ಬಗ್ಗೆ ಸ್ಪಷ್ಟಕಲ್ಪನೆ ಹೊಂದಿದವರಾಗಿದ್ದರು..... "ಸ್ತ್ರೀಪರವಾದಿಗಳು ಮಹಿಳೆಯರ ಸಮಸ್ಯೆಗಳಿಗೆಲ್ಲ ಪುರುಷರನ್ನೇ ಕಾರಣವನ್ನಾಗಿ ಮಾಡಿದರು. ಈ ದೃಷ್ಟಿ ಸಮಂಜಸವಲ್ಲ. ಮಹಿಳಾ ಅಧ್ಯಯನ, ಈ ದೃಷ್ಟಿಕೋನವನ್ನು ಒಪ್ಪುವದಿಲ್ಲ. ಮಹಿಳೆಯರ ಬಾಳಿನ ನಿಷ್ಪಕ್ಷಪಾತ ಅಧ್ಯಯನವಾಗಬೇಕು. ಸಮಾಜ, ಸೌಹಾರ್ದತೆಯಿಂದ ಬಾಳಬೇಕಾದರೆ ಸ್ತ್ರೀ ಪುರುಷರು ಒಬ್ಬರಿಗೊಬ್ಬರು ಅರಿಯಬೇಕು. ಶೋಷಣೆ ತಪ್ಪಬೇಕು. ಸ್ತ್ರೀ ಪುರುಷರು ಒಬ್ಬರಿಗೊಬ್ಬರು ಪೂರಕವಾಗಬೇಕು ಹೊರತು ಮಾರಕವಾಗಬಾರದು" ಎಂದು ಮಹಿಳಾ ಅಧ್ಯಯನ ಪಠ್ಯಕ್ರಮ ರೂಪಿಸಿದ ಸಂರ್ಭದಲ್ಲಿ ಹೇಳಿಕೊಂಡಿದ್ದಾರೆ. ವಿವೇಕಾನಂದ, ಗಾಂಧೀಜಿಯ ಶಿಕ್ಷಣ ವಿಚಾರಗಳನ್ನು ಮೈಗೂಡಿಸಿಕೊಂಡಂತೆ, ವಿದೇಶ ಪ್ರವಾಸಗಳನ್ನು ಕೈಕೊಂಡಾಗೆಲ್ಲ ವಿವಿಧ ಶಿಕ್ಷಣಸಂಸ್ಥೆಗಳ ಪಠ್ಯಕ್ರಮವನ್ನು ತೌಲನಿಕವಾಗಿ ಅಭ್ಯಸಿಸಿ, ತಜ್ಞರನ್ನು ಭೇಟಿಮಾಡಿ, ವಿವಿಧ ಮಹಿಳಾ ಚಳುವಳಿಗಳ ಆಂತರ್ಯವನ್ನು ತಿಳಿದುಕೊಳ್ಳಲು ಶ್ರಮಿಸಿದ್ದರು. "ನನ್ನ ಪ್ರವಾಸಗಳು, ಕೆಲವು ಜೀವನ ಸಂದರ್ಭಗಳಲ್ಲಿನ ನನ್ನ ಅನುಭವ, ಶುದ್ಧ ಗುಣಾತ್ಮಕ ಮೌಲ್ಯವಾದ ಸ್ವಾತಂತ್ರ್ಯ ಅಸಾಧ್ಯವಾದುದು ಎಂಬ ನಂಬಿಕೆಯನ್ನು ಬಲಪಡಿಸಿವೆ.

ಸ್ವಾತಂತ್ರ್ಯ, ಕುಟುಂಬ, ಮತ್ತು ಸಮಾಜನಿಷ್ಠೆ ಇವು ಮೂರೂ ಒಟ್ಟಿಗೆ ಬದುಕನ್ನು ಪ್ರೇಮಮಯ ಹಾಗೂ ಜೀವಂತವಾಗಿಸುತ್ತವೆ ಎಂದು ಪ್ರಾಮಾಣಿಕವಾಗಿ ನಂಬುತ್ತೇನೆ" ಎಂದು ಒಪ್ಪಿಕೊಂಡಿದ್ದಾರೆ. ಸೌಹಾರ್ದಮಯ ಕೌಟುಂಬಿಕ ಜೀವನಕ್ಕೆ ಇನ್ನಿಲ್ಲದಷ್ಟು ಪ್ರಾಶಸ್ತ್ಯ ನೀಡಿದ್ದರು.

ಅಪರೂಪದ ಮನೋಬಲ, ಸ್ಪಷ್ಟನಿಲುವು, ದಕ್ಷತೆ, ಪರಿಶ್ರಮಗಳಿಂದಾಗಿ ಚಿ. ನ. ಮಂಗಳಾ ಶ್ರೇಷ್ಠ ಸಾಧಕಿ ಎನಿಸಿಕೊಂಡರು. ಆದರೆ ಸಾಧಕಿಗೆ ಸಾಂಘಿಕ ಹಾಗೂ ಸಾಂಸ್ಥಿಕ ಬೆಂಬಲ ಬೇಕೇ ಬೇಕು. ಸುದೈವದಿಂದ, ಮುಖ್ಯತಃ ಅವರ ಸುಸ್ವಭಾವದಿಂದ ಇವೆರಡೂ ಲಭಿಸಿದವು. ಎನ್. ಎಮ್. ಕೆ. ಆರ್. ವಿ. ಸಂಸ್ಥೆಯ ಸ್ಥಾಪಕ ಆಡಳಿತ ವರ್ಗ, ಮೊದಲಿನಿಂದಲೂ ಅವರಿಗೆ ಮಾದರಿಯ ಬೆಂಬಲ ಕೊಡಮಾಡಿತು. ಆದರೆ ಇದಕ್ಕೆ ಮಂಗಳಾ ಅವರ ನಿಸ್ವಾರ್ಥ, ನಿಸ್ಪೃಹ ವ್ಯಕ್ತಿತ್ವ, ಸತತವಾದ ಕಾರ್ಯತತ್ಪರತೆ, ಮುಂದಾಳ್ತನಗಳು ಕಾರಣವೆಂದು ಮರೆಯುವಂತಿಲ್ಲ. ಹಾಲು-ಜೇನಿನಂತೆ, ಶ್ರಮ, ಬೆಂಬಲಗಳು ಬೆರೆತು ಅನನ್ಯಸಂಸ್ಥೆಯೊಂದು ಬೆಳೆದುಬಂದಿತು. ವ್ಯಕ್ತಿಯಾಗಿ ಮಂಗಳಾ ಹಾಗೂ ಅವರ ಸಂಸ್ಥೆಯನ್ನು ಬೇರ್ಪಡಿಸುವದು ಕಠಿಣವಾಗಿ ಬಿಟ್ಟಿತು.! ತನ್ನ ಅನುಭವಗಳ ಕೃತಿ 'ಸ್ನೇಹ-ಸಿಂಧು'ವನ್ನು ನೆಚ್ಚಿನ ಮಾತೃಸಂಸ್ಥೆ ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಹಾಗೂ ತನ್ನ ಕಾಲೇಜಿಗೆ ಅವರು ಅರ್ಪಿಸಿದ್ದಾರೆ. ಹೆಜ್ಜೆ ಹೆಜ್ಜೆಗೆ ಬೆಂಬಲ ದೊರೆತ ವಿಚಾರವನ್ನು ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ.

ಈ ವ್ಯಕ್ತಿ-ಸಂಸ್ಥೆಯ ಅವಿನಾ ಸಂಬಂಧವನ್ನು ನೆನಪಿಸಿಕೊಂಡಾಗ, ಒಂದು ವಿಚಾರ ಹೇಳಲೇಬೇಕು. ಸ್ವಾಮಿ ವಿವೇಕಾನಂದರು ಹಾಗೂ ರಾಮಕೃಷ್ಣ ಮಿಶನ್ನಿನ ವಿಶೇಷ ಪ್ರಭಾವಕ್ಕೆ ಒಳಗಾಗಿದ್ದ ಮಂಗಳಾ, ಮಿಶನ್ನಿನವರು ಕುಗ್ರಾಮವೊಂದರಲ್ಲಿ ನಡೆಸುತ್ತಿದ್ದ ವ್ಯಕ್ತಿವಿಕಾಸದ ಪ್ರಾಯೋಗಿಕ ಶಾಲೆಯಲ್ಲಿ ಕೆಲಕಾಲ ಶಿಕ್ಷಕಿಯಾಗಿ ಹೋಗಿದ್ದರು. ಸ್ವಯಂಪ್ರೇರಣೆಯಿಂದ ಪ್ರಾಂಶುಪಾಲರ ಪ್ರತಿಷ್ಠೆ ಹಾಗೂ ನಗರ ಜೀವನದ ಯಾವತ್ತೂ ಸೌಕರ್ಯಗಳನ್ನು ತ್ಯಜಿಸಿ, ಎಳೆಯರ ನಡುವೆ ಹಾಯಾಗಿದ್ದರು. ಕೊನೆಗೆ ಕಟ್ಟಿ ಬೆಳೆಸಿದ ಸಂಸ್ಥೆ ಹಾಗೂ ತಾನೇ ಹಮ್ಮಿಕೊಂಡಿದ್ದ ಹಲವಾರು ಚಟುವಟಿಕೆಗಳ ನಿರ್ವಹಣೆಯ ಕರೆಯನ್ನು ನಿರ್ಲಕ್ಷಿಸಲಾಗದ ಒತ್ತಡಗಳಿಂದ

ವಾಪಸ್ ಬಂದರು. ಆದರೆ ಅವರ ಮನಸ್ಸು ಸದಾ ದೀನ ದಲಿತರ ಬಗ್ಗೆ, ಶೋಷಿತ ಮಹಿಳೆಯರ ಬಗ್ಗೆ ಮಿಡಿಯುತ್ತಿತ್ತು. ಹುಟ್ಟಾ ಸೇವಾಮನೋಭಾವವನ್ನು ಹೊಂದಿದ್ದ ಅವರಿಗೆ ಐಹಿಕ ಸುಖಗಳು ಆಕರ್ಷಿಸುತ್ತಿರಲಿಲ್ಲ. ಶ್ರೀಮಂತ ಕುಟುಂಬದ ಹಿನ್ನೆಲೆಯಿದ್ದರೂ ಸನ್ಯಾಸಿನಿಯಂತೆ ಬದುಕಿದರು. ನಿರಾಭರಣದ ಶ್ವೇತವಸನದ ಅತ್ಯಂತ ಸಾದಾ ಜೀವನ ಅವರದಾಗಿತ್ತು. ಪರೀಕ್ಷಾ ಮಂಡಳಿಯ ಅಧ್ಯಕ್ಷತೆ, ಕೊಳಗೇರಿಗಳ ಸ್ವಚ್ಛತೆ, ಜೈಲುವಾಸಿಗಳಿಗೆ ಬೋಧನೆ, ಮಾದಕ ವಸ್ತು ಸೇವನೆಯ ವಿರುದ್ಧ ಹೋರಾಟ, ಪ್ರೌಢಶಿಕ್ಷಣ, ನಾಟಕ ಪ್ರಯೋಗಗಳು ಹೀಗೆ ಅವರ ಹೊಣೆ ಹಾಗೂ ಆಸಕ್ತಿಯ ಕ್ಷೇತ್ರಗಳು ವೈವಿಧ್ಯಮಯವಾಗಿದ್ದವು.

ಚಿ. ನ. ಮಂಗಳಾ, ಜನಪ್ರಿಯ ಅಧ್ಯಾಪಕಿಯಾದರು, ಅನನ್ಯ ಶಿಕ್ಷಣ ಸಂಸ್ಥೆಯೊಂದನ್ನು ಕಟ್ಟಿ ಬೆಳೆಸಿದರು. ದಕ್ಷ ಆಡಳಿತಗಾರ್ತಿ ಎನಿಸಿಕೊಂಡರು. ಮಹಿಳಾ ಅಧ್ಯಯನಕ್ಕೆ ಕರ್ನಾಟಕದಲ್ಲಿ ನೆಲೆಗಟ್ಟು ಹಾಕಿದರು. ಸಾಹಿತ್ಯ ಪ್ರವರ್ತಕಿಯಾದರು. ಸ್ವತಃ ಒಳ್ಳೆಯ ಸಾಹಿತ್ಯ ರಚಿಸಿದರು. ಸಮಾಜ ಸೇವಕಿಯಾದರು, ಶೈಕ್ಷಣಿಕ ಸುಧಾರಣೆಗಳಿಗೆ ಹವಣಿಸಿದರು. ಅಖಿಲಭಾರತ ಮಟ್ಟದ ಪ್ರಶಸ್ತಿಯನ್ನು ಪ್ರಾರಂಭಿಸಿದರು. ಅಪರೂಪದ ಮಹಿಳಾ ಸಂಗ್ರಹಾಲಯವೊಂದನ್ನು ಸ್ವತಃ ಓಡಾಡಿ, ನಾಡಿನಾದ್ಯಂತದಿಂದ ಸಾಮಾನು ತಂದು, ತರಿಸಿ, ಸ್ಥಾಪಿಸಿದರು. ಮಹಿಳಾ ಲೇಖಕಿಯರ ಕೈಪಿಡಿ ತಂದರು. ಮಹಿಳಾ ಅಭ್ಯುದಯಕ್ಕೆ ಸಂಬಂಧಿಸಿದ ಯಾವತ್ತೂ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಅಹೋರಾತ್ರಿ ದುಡಿದರು. ತಮ್ಮ ಪ್ರಯತ್ನಗಳೆಲ್ಲ ಫಲಪ್ರದವಾಗುತ್ತ ಬಂದಂತೆ, ಮಹಿಳಾ ಸಾಧನೆಯ ಉತ್ಕೃಷ್ಟ ಉದಾಹರಣೆಯಾಗಿ, ದಂತಕತೆಯಾಗಬಹುದಾಗಿದ್ದ ಹಂತದಲ್ಲಿ ಕಣ್ಮರೆಯಾದರು. ಒಂದು ದೃಷ್ಟಿಯಲ್ಲಿ ನಾಲ್ಕಾರು ಮಹಿಳೆಯರು ಬೇರೆ ಬೇರೆಯಾಗಿ ಸಾಧಿಸಬಹುದಾಗಿದ್ದನ್ನು ಒಬ್ಬರೇ ಮಾಡಿತೋರಿಸಿದ್ದಾರೆ. ಕನ್ನಡನಾಡಿನ ಸಾಧನಾಶೀಲೆಯರ ಕೊರತೆಯನ್ನು ಬಹುಮಟ್ಟಿಗೆ ತುಂಬಿತಂದಿದ್ದಾರೆ!



ಜೀವಿ, ನೋವಿಗೆ ಮಿಡಿದ ಕುಸುಮಕ್ಕ

(೧೯೩೭-೧೯೯೮)

೧೯೯೮ ರ ಮಾರ್ಚ ೧೫ ನೇ ದಿನ. ಸೆಕೆ, ಮೋಡಕವಿದ, ನಿರುತ್ಸಾಹಕಾರಿ ವಾತಾವರಣ. ನಸುಕು ಹರಿಯುತ್ತಿದ್ದಂತೆ ಫೋನು ಕಿರುಚಿಕೊಂಡಿತು. ಹೊನ್ನಾವರದಿಂದ ಮೈದುನ ಫೋನಿಸಿದ್ದ.

"ಕುಸುಮಕ್ಕ..... ಡಾ. ಕುಸುಮಾ ಸೊರಬ ಇನ್ನಿಲ್ಲ!"

ಎದೆ ಧಸ್ಸೆಂದಿತು. "ಏಕೆ? ಏನಾಯ್ತು?"

"ಬೆಂಗಳೂರಿನಿಂದ ಹೊನ್ನಾವರಕ್ಕೆ ಬಸ್ಸಿನಲ್ಲಿ ಹೊರಟಿದ್ದರು. ನಡುರಾತ್ರಿ ಬಸ್ಸು ಹೈವೇ ಪಕ್ಕದಲ್ಲಿ ನಿಲ್ಲಿಸಿದಾಗ, ಜಲಬಾಧೆ ತೀರಿಸಿಕೊಳ್ಳಲು

ಹೋಗಿದ್ದರಂತೆ. ಅತ್ಯಂತ ರಭಸದಿಂದ ಓಡುತ್ತಿದ್ದ ಟ್ರಕ್ ಕೆಡವಿ ಹಾಕಿ ಓಡಿತು. ಸ್ಪಾಟ್‌ಡೆತ್..... ದೇಹವನ್ನು ತರಲು ವಿವೇಕಾನಂದ ಧಾಮದ ಸಿಬ್ಬಂದಿ ಹೊರಟಿದೆ" ಹೆಚ್ಚಿನ ವಿವರಗಳನ್ನು ಮತ್ತೆ ತಿಳಿಸುವದಾಗಿ ಹೇಳಿ ಫೋನು ಕೆಳಗಿಟ್ಟ.

ನಾನು ಕುರ್ಚಿಯಲ್ಲಿ ಕುಸಿದಿದ್ದೆ. ಅತ್ಯಂತ ಆತ್ಮೀಯರನ್ನು ಇದ್ದಕ್ಕಿದ್ದ ಹಾಗೆ ಕಳೆದುಕೊಂಡಂಥ ಶೂನ್ಯಭಾವ ಆವರಿಸಿತ್ತು. ಚೇತರಿಸಿಕೊಂಡು ಕುಸುಮಕ್ಕನ ಬಗ್ಗೆ ಆದರವಿದ್ದ ಸಂಬಂಧಿಗಳಿಗೆ, ಪರಿಚಯವಿದ್ದವರಿಗೆ ಈ ವಿಚಾರ ತಿಳಿಸಿದೆ. ನನ್ನ ಸಮವಯಸ್ಕಳಾಗಿದ್ದ ಕುಸುಮಾ, ದೂರದ ಸಂಬಂಧಿಕಳೂ ಆಗಿದ್ದಳು. ಮನಸ್ಸು ನಾಲ್ಕು ವರ್ಷ ಹಿಂದೆ ಓಡಿತು. ಕುಸುಮಕ್ಕನ ಸ್ನೇಹಕುಂಜದಲ್ಲಿ ನಿಶ್ಚಿಂತೆಯಿಂದ ಒಂದು ತಿಂಗಳಕಾಲ ದೇಹ-ಮನಸ್ಸುಗಳಿಗೆ ಚಿಕಿತ್ಸೆ ಪಡೆದು ಮರಳಿದ ದಿನಗಳನ್ನು ನೆನಪಿಸಿತು.

***

೧೯೯೪ ರ ಅಗಸ್ಟ ತಿಂಗಳ ಕೊನೆ. ಹೊನ್ನಾವರದಲ್ಲಿದ್ದ ನನ್ನ ಅತ್ತೆಯವರು ಬಿದ್ದು ಮೂಳೆ ಮುರಿತಕ್ಕೊಳಗಾದರು. ಕಾಸರಕೋಡದ ಡಾ. ಕುಸುಮಾ ಸೊರಬ ಅವರ 'ವಿವೇಕಾನಂದ ಧಾಮ'ದಲ್ಲಿ ಅನೇಕ ಬಗೆಯ ಚಿಕಿತ್ಸಾಕ್ರಮಗಳು ಲಭ್ಯವಿದ್ದು, ಶಾಕ ಕೊಡುವದು, ಪೋಲ್ಟಿಸ್ ಹಾಕುವದು, ತೈಲ ಲೇಪ, ಉಗಿಸ್ನಾನಗಳಂತಹ ಶುಶ್ರೂಷೆಗಳಿಂದ ವಯಸ್ಸಾದ ಅತ್ತೆಯವರಿಗೆ ನೆಮ್ಮದಿ ದೊರೆಯಬಹುದು ಎಂಬ ಸಲಹೆ ಬಂದಿತು. ಈ ಸಲಹೆ ಅತ್ಯಂತ ಸಮರ್ಪಕವೆನಿಸಿ ಆ ಕೂಡಲೇ ಅವರನ್ನು ಕೆಲವೇ ಕಿಲೋಮೀಟರ ದೂರದಲ್ಲಿದ್ದ 'ವಿವೇಕಾನಂದ ಆರೋಗ್ಯಧಾಮ'ಕ್ಕೆ ಸಾಗಿಸಿದೆವು. ನಾನಾಗ ಸಂಧಿವಾತದಿಂದ ಬಳಲುತ್ತಿದ್ದೆ. ಹೀಗಾಗಿ ಅಲ್ಲಿ ಲಭ್ಯವಿದ್ದ ನಿಸರ್ಗ ಚಿಕಿತ್ಸೆಗಳಿಗೆ ಒಳಪಡುವದೆಂದು ನಿಶ್ಚಯಿಸಿ ಅತ್ತೆಯವರೊಂದಿಗೆ ನಾನೂ ಪೇಶಂಟ್ ಆಗಿ ಸೇರಿಕೊಂಡೆ! ಆ ಅವಧಿಯಲ್ಲಿ ಕುಸುಮಕ್ಕನನ್ನು ಆಗಾಗ ಭೇಟಿಮಾಡುತ್ತ, ಅವಳ ಹಲವಾರು ಚಟುವಟಿಕೆಗಳನ್ನು ಸಮೀಪದಿಂದ ನೋಡುವ ಅವಕಾಶ ದೊರೆಯಿತು. ಜೊತೆಗೆ ಈ ವರೆಗೆ ನಾನು ಕಂಡುಕೊಂಡಿರದ, ಅತ್ಯಪರೂಪವಾದ ಸ್ತ್ರೀ ವ್ಯಕ್ತಿತ್ವವೊಂದರ ಬಹುಮುಖ ದರ್ಶನವಾಗತೊಡಗಿತು.

ವಿವೇಕಾನಂದ ಧಾಮ, ಸ್ನೇಹಕುಂಜಗಳ ಆಡಳಿತಕ್ಕೆ ಹೊಣೆಗಾರರಾದ ವಿಶ್ವಸ್ಥಮಂಡಳಿಯ ಸಭೆ ನಡೆದಿತ್ತು. ವಿಶ್ವಸ್ಥೆ ಮುಂಬೈಯ ಶ್ರೀಮತಿ ಮೀರಾ ಕಾಗಾಲ್ ಪರಿಚಿತರು. ಅನೌಪಚಾರಿಕವಾಗಿ ಮಾತನಾಡುತ್ತಿದ್ದಾಗ, ಕುಸುಮಕ್ಕ ತನ್ನನ್ನು ಸಂದಿಗ್ಧಕ್ಕೆ ಸಿಲುಕಿಸಿದ ವಿಚಾರ ಹೇಳಿದರು. "ಇಂದಿರಾ ಪ್ರಿಯದರ್ಶಿನಿ" ವೃಕ್ಷಮಿತ್ರ ಪ್ರಶಸ್ತಿ, ವರ್ಷ ವರ್ಷವೂ ಪರಿಸರ ರಕ್ಷಣೆಯಲ್ಲಿ ಸಕ್ರಿಯವಾಗಿ ತೊಡಗಿಕೊಂಡು, ವೃಕ್ಷಾರೋಪಣಾದಿಗಳನ್ನು ಕೈಕೊಂಡ ವ್ಯಕ್ತಿ ಅಥವಾ ಸಂಸ್ಥೆಗೆ ಸಲ್ಲುತ್ತದಷ್ಟೆ? ಎರಡು ದಶಕಗಳಿಂದಲೂ ಪರಿಸರ ರಕ್ಷಣೆ, ಜಾಗೃತಿ ಕಾರ್ಯಗಳನ್ನು ಕೈಕೊಂಡದ್ದೇ ಅಲ್ಲದೇ ಅಪರೂಪದ ಔಷಧಸಸ್ಯಗಳ ದೊಡ್ಡವನವನ್ನೇ ಕುಸುಮಕ್ಕ ನಿರ್ಮಿಸಿದ್ದರು. ಆದ್ದರಿಂದ ಆ ವರ್ಷದ ಪ್ರಶಸ್ತಿ ಕುಸುಮಕ್ಕನಿಗೆ ದೊರೆಯಬೇಕೆಂದು ಮೀರಾ ತುಂಬ ಪ್ರಯತ್ನಿಸಿದರು. ಸ್ನೇಹಕುಂಜ ಬಳಗದ ಕಾರ್ಯವೈಖರಿಯ ಪರಿಚಯವಿದ್ದವರೆಲ್ಲ ಆ ಸಲಹೆಯನ್ನು ಬೆಂಬಲಿಸಿದರು. ಇನ್ನೇನು ಪ್ರಶಸ್ತಿ ದೊರೆಯಲಿದ್ದು, ಆ ಕುರಿತು ಕುಸುಮಕ್ಕಳಿಗೆ ತಿಳಿಸಿದಾಗ, ಅದನ್ನು ಖಡಾಖಂಡಿತ ನಿರಾಕರಿಸಿದಳು. "ಕಡ್ಡಿ ಮುರಿದಂತೆ ತಿರಸ್ಕರಿಸಿದಳೆಂದು" ಮೀರಾ ಹೇಳಿ ಮಿಡುಕಿದರು. ಅಷ್ಟರಲ್ಲಿ ಅಲ್ಲಿ ಬಂದ ಕುಸುಮಕ್ಕನಿಗೆ ಪ್ರಶಸ್ತಿ ತಿರಸ್ಕರಿಸಿದ ಕಾರಣ ಕೇಳಿದೆ.

"ದೇಶದಲ್ಲಿ ಪ್ರಜಾಪ್ರಭುತ್ವವನ್ನು ನಾಶಗೊಳಿಸುವ ಹಲವಾರು ಅವಕಾಶಗಳನ್ನು ಮಾಡಿಕೊಟ್ಟು, ಭ್ರಷ್ಟಾಚಾರವನ್ನು ಬೆಳೆಯುವಂತೆ ಮಾಡಿದ ಮಹಿಳೆಯ ಹೆಸರಿನ ಪ್ರಶಸ್ತಿ ಸ್ವೀಕರಿಸುವದು ವೈಯಕ್ತಿಕ ಅವಮಾನ! ಜನಸಮುದಾಯಕ್ಕೆ ದೊಡ್ಡದ್ರೋಹ! ತುರ್ತುಪರಿಸ್ಥಿತಿಯನ್ನು ಆಕೆ ಹೇರಿದಾಗ ನಡೆದ ಅನ್ಯಾಯ, ಹಿಂಸೆ, ಭ್ರಷ್ಟಾಚಾರಗಳನ್ನು ಕಣ್ಣಾರೆ ಕಂಡು ಪರಿತಪಿಸಿದ್ದೇನೆ! ಇಂಥ ವ್ಯಕ್ತಿಯನ್ನು ಅಜರಾಮರವಾಗಿಸಲು, ಆಕೆಯ ಹೆಸರಿನಿಂದ ಪ್ರಶಸ್ತಿ ಬೇರೆ ನಿರ್ಮಿಸಿದ್ದಾರೆ! ಅದನ್ನು ಸ್ವೀಕರಿಸಿ, ಆಕೆಯ ದುಷ್ಕೃತ್ಯಗಳಿಗೆ ಪರೋಕ್ಷ ಬೆಂಬಲ ಕೊಡಲಾರೆ!" ಒಂದೇ ಉಸುರಿನಲ್ಲಿ ಕುಸುಮಕ್ಕ ಘೋಷಿಸಿದಳು. ತನ್ನ ನಂಬಿಕೆಯ ಮೌಲ್ಯಗಳ ಜೊತೆಗೆ ಕುಸುಮಕ್ಕ ಎಂದೂ ರಾಜಿ ಮಾಡಿಕೊಳ್ಳುವವಳಾಗಿರಲಿಲ್ಲ.

ಸಂಸ್ಥೆಗೆ ಸುಲಭದಲ್ಲಿ ದೊರೆಯಬಹುದಾಗಿದ್ದ ೫೦,೦೦೦ ರೂಪಾಯಿಗಳ ಸಹಾಯಧನ ತಪ್ಪಿ ಹೋಯಿತೆಂದು ವಿಶ್ವಸ್ಥೆ ಮರುಗಿದರು.

ರಾಜ್ಯದ ರಾಜಧಾನಿಯಲ್ಲಿದ್ದ ನನಗೆ ಈ ಪ್ರಶಸ್ತಿಗಾಗಿ ಸರಕಾರಿ/ಸರಕಾರೇತರ ಸಂಸ್ಥೆ ಹಾಗೂ ವ್ಯಕ್ತಿಗಳು ಪ್ರತಿವರ್ಷ ನಡೆಸುತ್ತಿದ್ದ ಪೈಪೋಟಿಯ ವಿಚಾರ ಗೊತ್ತಿತ್ತು. ಬೆಂಗಳೂರಿನ ಸುಪ್ರಸಿದ್ಧ ಮದ್ಯ ತಯಾರಕರು ದಾನರೂಪದಲ್ಲಿ ಕೊಡಮಾಡಲಿದ್ದ ಎರಡು ಲಕ್ಷರೂಪಾಯಿಗಳನ್ನು ಈ ಗಾಂಧಿಭಕ್ತೆ ತಿರಸ್ಕರಿಸಿದಾಗ ಆಶ್ಚರ್ಯವಾಗದಿದ್ದರೂ, ಸ್ನೇಹಕುಂಜದವರು ಹೆಚ್ಚಿನ ಶ್ರಮದಿಂದ ನಿರ್ಮಿಸಿದ ವನೌಷಧಿಗಳ ತೋಟಕ್ಕಾಗಿ 'ವೃಕ್ಷಮಿತ್ರ' ಸ್ವೀಕರಿಸಬಹುದಿತ್ತು! ಅನಿಸದೇ ಇರಲಿಲ್ಲ.

ಗಣೇಶ ಚತುರ್ಥಿ ಬಂದಿತು. ಸ್ನೇಹಕುಂಜದ ಸಿಬ್ಬಂದಿಯೆಲ್ಲ ತುಂಬ ಉತ್ಸಾಹದಲ್ಲಿದ್ದರು. ಬಗೆಬಗೆಯ ಹೂ, ಎಲೆ, ಕಾಯಿಗಳಿಂದ ಅವರು ಹಾಕಿದ ರಂಗೋಲಿಗಳ ಚೆಲುವು ಬಣ್ಣಿಸಲು ಅಸಾಧ್ಯವಾಗಿತ್ತು. ಪ್ರತಿವರ್ಷ, ಗಣೇಶನ ಅಗ್ರಪೂಜೆಗೆ ಮುಖ್ಯ ಅತಿಥಿಯೆಂದು ಅತ್ಯಂತ ಹಿಂದುಳಿದ ದಲಿತವರ್ಗದ ಮಹಿಳೆಯನ್ನು ಕುಸುಮಕ್ಕ ಬರಮಾಡಿಕೊಳ್ಳುತ್ತಿದ್ದಳು. ಈ ಬಾರಿ ಹುಲಸ್ವಾರ ಪಂಗಡದವಳನ್ನು ಆಮಂತ್ರಿಸಿದ್ದಳು. ಗೌರೀ ಗಣೇಶರ ಹಬ್ಬವೆಂಬುದು ಸಮುದಾಯದ ಆಚರಣೆಯಾಗಿ ಈಗ ಬೆಳೆದುಬಂದಿದೆಯಾದರೂ, ಪೂಜಾವಿಧಾನದಲ್ಲಿ ಸಹ ಜಾತ್ಯತೀತ ರೂಪವನ್ನು ಅಳವಡಿಸಿದ್ದು ಹೆಚ್ಚಿನ ಸಂತೋಷಕೊಟ್ಟಿತು. ನೆರೆದವರಿಗೆಲ್ಲ ಆ ಮಹಿಳೆಯಿಂದಲೇ ತೀರ್ಥ, ಪ್ರಸಾದಗಳ ವಿತರಣೆಯಾಯಿತು.

ಸ್ನೇಹಕುಂಜ, ಸಂತ್ರಸ್ತರ ಸಹಾಯಕ್ಕೆ ಸದಾ ತೆರೆದಿರುತ್ತಿತ್ತು. ಹೆರಿಗೆಯಂತೂ ಸರಿಯೇ, ಹೊಟ್ಟೆಯ ನೋವಿನ ಕಾಯಿಲೆಯವರು, ಮೂಳೆಮುರಿತ, ಆಸ್ತಮಾ, ಗೂರಲು, ಇನ್ನಿತರ ಕಾಯಿಲೆಯವರೂ ಅಲ್ಲಿದ್ದರು. ೧೫ ರೂಪಾಯಿಗೆ ಹೆರಿಗೆ ಮಾಡಿಸಿ ಕಳಿಸುವದು ಸಾಮಾನ್ಯ. ಅದನ್ನೂ ಕೊಡುವ ತಾಕತ್ತಿಲ್ಲದವರಿಗೆ ಪುಕ್ಕಟೆ ಪರೀಕ್ಷೆ, ಔಷಧಗಳ ಏರ್ಪಾಡೂ ಇತ್ತು. ದೀರ್ಘಚಿಕಿತ್ಸೆಗೆ, ಊಟೋಪಚಾರಗಳಿಗೆ ಹಣ ಒದಗಿಸಲಾಗದವರಿಗೆ ಎಷ್ಟುದಿನ ಉಚಿತ ಚಿಕಿತ್ಸೆ ನೀಡಲು ಸಾಧ್ಯ? ಇಂಥವರ ಬಗ್ಗೆ ಕುಸುಮಕ್ಕ ತುಂಬ ಕನಿಕರಪಡುತ್ತಿದ್ದಳು. ಮೂತ್ರಕೋಶದಲ್ಲಿ ಕಲ್ಲಿನ ತೊಂದರೆಯಿಂದ ಬಳಲುತ್ತಿದ್ದ ಮಹಿಳೆಯೊಬ್ಬಳಿಗೆ ಬೆಂಗಳೂರಿನಲ್ಲಿ ಮಾತ್ರ ಚಿಕಿತ್ಸಾಕ್ರಮ ಸಾಧ್ಯವಿತ್ತು. ಆಯುರ್ವೇದ ವಿಧಾನದಿಂದ ಚಿಕಿತ್ಸೆ ತುಂಬ ನಿಧಾನವಾದರೂ

ಕಾಸರಕೋಡಿನಲ್ಲೇ ಅದನ್ನು ಒದಗಿಸುವ ವ್ಯವಸ್ಥೆ ಆಯಿತು. ಆದರೆ ತಿಂಗಳುಗಟ್ಟಲೆ ಕಾಸರಕೋಡಿನಲ್ಲಿ ಇರುವದು ಕೂಲಿಕಾರ ಮಹಿಳೆಗೆ ಸಾಧ್ಯವಿರಲಿಲ್ಲ. ಅಡಿಕೆ ಸುಲಿಯುವ ಕೆಲಸ ಬಿಟ್ಟರೆ ಉಪವಾಸ ಬೀಳುವ ಪರಿಸ್ಥಿತಿ. ತನ್ನ ಮನೆಯಲ್ಲಿ ಊಟೋಪಚಾರ ಹಾಸಿಗೆ ಉಚಿತವಾಗಿ ಕೊಡುವದಾಗಿ ಕುಸುಮಕ್ಕ ಹೇಳಿದರೂ ಮಹಿಳೆ ಹಿಂದಿರುಗಿ ಹೋದಳು. ಇಂಥ ಬಡಪಾಯಿಗಳಿಗೆ ಹೇಗೆ ನೆರವು ನೀಡುವದೆಂದು ತಿಳಿಯದಾಗಿದೆ! ಎಂದು ಕುಸುಮಕ್ಕ ಆಕೆ ಹೋದ ಬಳಿಕ ನನ್ನೆದುರು ಉದ್ಗರಿಸಿದ್ದಳು.

ಅವರ ಸ್ನೇಹಕುಂಜ ಹಕ್ಕಿಪಕ್ಕಿ. ಆಕಳು, ಕುದುರೆ, ನಾಯಿ. ಬೆಕ್ಕುಗಳಿಗೆಲ್ಲ ತಾಣವಾಗಿದ್ದಿತು. ತಾನು ತೊಡಗಿಕೊಂಡ ಹತ್ತಾರು ಚಟುವಟಿಕೆಗಳ ಓಡಾಟದಿಂದಾಗಿ ಕುಸುಮಕ್ಕ ಇತ್ತೀಚೆಗೆ ಆಸ್ಪತ್ರೆಗೆ ಬರುವದು ಕಡಿಮೆಯಾಗಿತ್ತು. ಒಂದು ರಾತ್ರಿ ಅವಳು ಮನೆಗೆ ಹಿಂದಿರುಗಿ ಬಂದಿರುವ ವಿಚಾರ ತಿಳಿದು ಹೋದೆ. ಮನೆಯೇ ಕಾರ್ಯಾಲಯ, ಶಾಲೆ, ಸಭಾಮಂದಿರ, ಪ್ರಾರ್ಥನಾಸ್ಥಳ ಎಲ್ಲವೂ ಹೌದು. ಆಗತಾನೆ ಊಟಮುಗಿಸಿ ಬಂದು ಕುಳಿತಿದ್ದಂತೆ ಬೆಕ್ಕೊಂದು ಆರ್ತಧ್ವನಿಯಿಂದ ಮುಲುಗುತ್ತ ಬಂದು ಕುಸುಮಕ್ಕಳ ಮಡಿಲು ಸೇರಿತು. ಇದಕ್ಕೆ ಹೆರಿಗೆಯ ನೋವು ಪ್ರಾರಂಭವಾಗಿದೆ! ಎಂದು ಮೃದುವಾಗಿ ಅದರ ಹೊಟ್ಟೆ ನೀವಲಾರಂಭಿಸಿದಳು ಈ ವೈದ್ಯೆ. ಆ ಬೆಕ್ಕು ತೊಡೆಯ ಮೇಲೆ ಬೆನ್ನೂರಿ ನಾಲ್ಕೂ ಕಾಲುಗಳನ್ನು ಚಾಚಿ ಹೊಟ್ಟೆ ನೇವರಿಸಲು ಅನುವು ಮಾಡಿಕೊಟ್ಟು ಕುಂಯ್‌ಗುಡುತ್ತಿತ್ತು. ಶ್ವಾನ-ಮಾನವ ರೀತಿಗಳನ್ನು ಏಕಕಾಲಕ್ಕೆ ನೆನಪಿಸಿಕೊಡುತ್ತಿತ್ತು. ನಾನು ಹಾಗೆ ಹೇಳಿದಾಗ, 'ನಿಜಕ್ಕೂ ಈ ಬೆಕ್ಕಿನಲ್ಲಿ ನಾಯಿಯ ಗುಣವಿದೆ! ರಾತ್ರಿ, ಅಪರಾತ್ರಿ ನಾನು ಜೀಪಿನಲ್ಲಿ ಹಿಂದಿರುಗಿ ಬರುತ್ತಿದ್ದರೆ, ಓಡೋಡಿ ಬಂದು ನನ್ನನ್ನು ಎದುರುಗೊಳ್ಳುವವರಲ್ಲಿ ಈಕೆ ಮುಂದಾಗಿರುತ್ತಾಳೆ ಗೊತ್ತಾ?' ಎಂದಳು. ಪ್ರಸವ ವೇದನೆಯಲ್ಲಿದ್ದ ಬೆಕ್ಕಿನೊಡನೆ ಕೊಂಕಣಿಯಲ್ಲಿ ಆಕೆಯ ಸಾಂತ್ವನದ ಮಾತು, ಮಗಳ ನೋವನ್ನು ಸ್ವತಃ ಅನುಭವಿಸುವಂತಿದ್ದ ತಾಯಿಯನ್ನು ನೆನಪಿಸುತ್ತಿತ್ತು.

ಆಸ್ಪತ್ರೆಯಲ್ಲಿ ಉಪವಾಸ, ಉಗಿಸ್ನಾನ, ಮುಂತಾದ ಚಿಕಿತ್ಸೆಗಳಿಂದ ನನಗೆ ಗುಣ ಕಂಡಿತ್ತು. ಅತ್ತೆಯವರೂ ಗುಣಮುಖರಾಗುತ್ತ ಇದ್ದರು. ಲೋಕಾಭಿರಾಮವಾಗಿ ಮಾತನಾಡುತ್ತ ವಾಡಿಕೆಯಂತೆ 'ವಿವೇಕಾನಂದ

ಧಾಮ'ದ ಆಸ್ಪತ್ರೆಯಲ್ಲಿ ಸಿಬ್ಬಂದಿಯ ಹೆಸರು, ಪರಿಣತಿಗಳನ್ನು ಸಾರುತ್ತ ನಿಂತ ಬೋರ್ಡಿನಲ್ಲಿ ಅವಳ ಹೆಸರಿನ ಮುಂದೆ ಇದ್ದ ಅವಳ ಎಂ.ಬಿ.ಬಿ.ಎಸ್., ಎಮ್.ಎಸ್.ಗೂ ಮೊದಲಿನ ಆರ್.ಎಮ್.ಎನ್. ಡಿಪ್ಲೊಮ ಕುರಿತು ಕೇಳಿದೆ.

"ಓ! ಅದೇ? ನಾನು ವೃತ್ತಿಜೀವನವನ್ನು ಪ್ರಾರಂಭಿಸಿದ್ದು ನರ್ಸ್‌ಆಗಿ, ಎಂದು ನಿನಗೆ ಗೊತ್ತಿದೆಯಲ್ಲ? ರಜಿಸ್ಟರ್ಡ್ ಮಿಡ್‌ವೈಫ್ ಹಾಗೂ ನರ್ಸ್ ಆಗಿರುವ ನಾನು, ಡಾಕ್ಟರ್ ಅಥವಾ ಸರ್ಜನ್ ಸ್ನಾತಕೋತ್ತರ ಪದವಿಗಿಂತ ಈ ತರಬೇತಿಗಾಗಿ ಹೆಮ್ಮೆ ಪಡುತ್ತೇನೆ! ಈ ಮೂಲ ತರಬೇತಿಯೇ ನನ್ನನ್ನು ಅನೇಕ ವರ್ಷ ಸಾಕಿತು. ಡಾಕ್ಟರ್ ಆಗಲು ಸಹಾಯ ನೀಡಿತು. ವೈದ್ಯಕೀಯ ವೃತ್ತಿಗೆ ಬೇಕಾದ ಸಲಹೆ, ಶ್ರಮ, ಅಂತಃಕರಣ, ಮಮತೆ, ಸದಾ ಜಾಗರೂಕತೆಗಳ ಅವಶ್ಯಕತೆಯ ಅರಿವು ಮಾಡಿಕೊಟ್ಟಿದೆ. ಈಗಲೂ ನಾನು ಮೂಲತಃ ದಾದಿಯೇ! ಆದ್ದರಿಂದ ನನ್ನ ಪರಿಣತಿಯ ಯಾದಿಯಲ್ಲಿ ಮೊದಲಿಗೆ ಅದನ್ನು ಕಾಣಿಸಿದ್ದೇನೆ" ಎಂದಳು. ಮ್ಯಾಂವಗುಡುತ್ತ ಮಡಿಲಲ್ಲಿದ್ದ ಬೆಕ್ಕು ತಲೆಯೆತ್ತಿ ಅವಳ ಮಾತು ಕೇಳುತ್ತಿದ್ದ ಭಾಸವಾಗುತ್ತಿತ್ತು.

ಸಿಸ್ಟರ್ ಕೆಲಸ ಹೀನವಾದದ್ದು, ಎಂದು ತಿಳಿಯುವ ಅದೆಷ್ಟು ಜನ ನಮ್ಮಲ್ಲಿಲ್ಲ?

ಹುಟ್ಟು ಹೋರಾಟಗಾತಿಯಾದ ಕುಸುಮಕ್ಕ ಹುಟ್ಟಿದ್ದು ೧೯೩೭ ರಲ್ಲಿ. ತಂದೆ ಹೊನ್ನಾವರದ ಕೆರವಳ್ಳಿಯ ಭವಾನಿಶಂಕರ ಸೊರಬ ಹಾಗೂ ತಾಯಿ ಮಿತ್ರಾಬಾಯಿ. ಇಬ್ಬರೂ ಗಾಂಧಿಭಕ್ತರು. ಹುಬ್ಬಳ್ಳಿಯಲ್ಲಿ ನೆಲೆಸಿದ್ದು, ನಾ. ಸು. ಹರ್ಡೀಕರರ ಸೇವಾದಲದ ಚಟುವಟಿಕೆಗಳಲ್ಲಿ ಮುಂದಾಗಿದ್ದರು. ಬಾಲ್ಯದಿಂದಲೂ ಸ್ವಾವಲಂಬನ, ಸೇವಾಭಾವಗಳು ಬೆಳೆದು ಬರಲು ತನ್ನ ತಾಯಿಯ ಕೊಡುಗೆ ದೊಡ್ಡದು ಎಂದು ಕುಸುಮಕ್ಕ ಹೇಳುತ್ತಿದ್ದರು. ಹುಬ್ಬಳ್ಳಿಯ ಪ್ರೌಢಶಾಲೆಯಲ್ಲಿ ಆಟ-ಪಾಠಗಳಲ್ಲಿ ಮುಂದಾಗಿದ್ದ ಹುಡುಗಿ ಪ್ರಬಂಧ-ಬರವಣಿಗೆಯಲ್ಲೂ ಕುಶಲತೆ ಮೆರೆದಿದ್ದಳೆಂದು ಸಹಪಾಠಿಗಳು ನೆನೆಸಿಕೊಳ್ಳುತ್ತಾರೆ. ಆ ಬಳಿಕ ಬಿಜಾಪುರದಲ್ಲಿ ದಾದಿಯ ತರಬೇತಿ ಮುಗಿಸಿ, ಮುಂಬೈಯಲ್ಲಿ ಸರ್ವಿಸ್ ಪ್ರಾರಂಭಿಸಿದಳು. ಡಾಕ್ಟರ್ ಆಗಬೇಕೆಂಬ ಕನಸು ನನಸಾಗಿಸಲು ಯತ್ನ ಸುರುವಾಯಿತು. ವೈದ್ಯಕೀಯ ಶಿಕ್ಷಣ ಬಿಗಿಯಾಗಿದ್ದು, ಕಾಲೇಜುಗಳೂ ಕಡಿಮೆಯಿದ್ದು ನರ್ಸ್ ಆದಾಕೆಗೆ ಇದು ಸುಲಭವಾಗಿರಲಿಲ್ಲ.

ಕುಸುಮಾನ ನಾಗರಿಕ ಹಕ್ಕುಗಳ ಕುರಿತಾದ ಹೋರಾಟ ಇಲ್ಲಿಂದಲೇ ಪ್ರಾರಂಭವಾಗಿರಬೇಕು. ಸಂಬಂಧಪಟ್ಟ ಎಲ್ಲ ಅಧಿಕಾರಿಗಳನ್ನು ಮಂತ್ರಿಗಳನ್ನು ಭೇಟಿಮಾಡಿದಳು. ತಾನು ಮುಂದೆ ಹಮ್ಮಿಕೊಳ್ಳಲಿದ್ದ ಗ್ರಾಮಾಂತರ ವೈದ್ಯಕೀಯ ನೆರವಿನ ಕಲ್ಪನೆ ನೀಡಿದಳು. ಆಗ ಆರೋಗ್ಯಮಂತ್ರಿಯಾಗಿದ್ದ ಡಾ. ಸುಶೀಲಾ ನಯ್ಯರ್ ಹಾಗೂ ಮುಂಬೈ ಗ್ರ್ಯಾಂಟ್ ಮೆಡಿಕಲ್ ಕಾಲೇಜಿನ ಡೀನರಾಗಿದ್ದ ವೀರಕರ್, ಕುಸುಮಳ ಕೆಚ್ಚೆದೆ ಕಂಡು ಪ್ರಭಾವಿತರಾದರು. ಆಕೆಗೆ ವೈದ್ಯಕೀಯ ಪರೀಕ್ಷೆಗೆ ಪ್ರವೇಶ ದೊರಕಲು ಸಹಾಯಮಾಡಿದರು. ಅಷ್ಟೇ ಅಲ್ಲ. ಆ ಬಳಿಕ ವಿಶ್ವವಿದ್ಯಾಲಯದಲ್ಲಿ ಹೊಸ ನಿಯಮವೇ ಜಾರಿಗೆ ಬಂದಿತಂತೆ! ನರ್ಸಿಂಗ್ ವಿದ್ಯಾರ್ಥಿಗಳಿಗೆ ಡಾಕ್ಟರ ಓದಿ ಅವಕಾಶ ಮಾಡಿಕೊಡುವ ನಿಯಮ.

ಹಗಲು ಮೆಡಿಕಲ್‌ಕಾಲೇಜ ಓದು, ರಾತ್ರಿ ದಾದಿಯ ಕೆಲಸ. ಉಳಿದ ಅತ್ಯಲ್ಪ ಸಮಯದಲ್ಲಿ ಮನೆವಾಳ್ತೆ ಹಾಗೂ ಸೋದರರ ಓದಿನ ಜವಾಬ್ದಾರಿ. ಒಂದು ರಾತ್ರಿ ಸ್ಪೆಶಲ್‌ವಾರ್ಡಿನ ಡ್ಯೂಟಿಯಲ್ಲಿದ್ದಾಗ ಪ್ರಾಧ್ಯಾಪಕ-ವೈದ್ಯರು ರೌಂಡಿಗೆ ಬಂದರು. ಸ್ಟೂಲಿನ ಮೇಲಿದ್ದ ದಪ್ಪ ಅನಾಟಮಿ ಪುಸ್ತಕ ನೋಡಿ ಬೆರಗಾಗಿ ಇದು ಇಲ್ಲಿ ಹೇಗೆ ಬಂದಿತು? ಎಂದು ವಿಚಾರಿಸಿದರು. ಸಮೀಪದಲ್ಲೇ ವೈದ್ಯಕೀಯ ಪರೀಕ್ಷೆಗೆ ಕಟ್ಟಲಿದ್ದ ಈ ಪುಟ್ಟ ನರ್ಸಕ್ಕನ ಸಾಹಸ ಕುರಿತು ವಿಶೇಷ ಮೆಚ್ಚಿಗೆ ಸೂಚಿಸಿದರಂತೆ! ವಿದ್ಯಾರ್ಥಿ ವರ್ಷಗಳ ಕಡಿಮೆ ನಿದ್ರೆಯ ಅಭ್ಯಾಸದಿಂದಲೋ ಏನೋ, ಆ ಬಳಿಕವೂ ಕುಸುಮಾಗೆ ದಿನಕ್ಕೆ ೨-೩ ಗಂಟೆಗಳ ನಿದ್ರೆ ಸಾಕಾಗುತ್ತಿತ್ತು. ಕೈಗಾ, ಶರಾವತಿ ಟೇಲ್‌ರೇಸ್ ಪ್ರತಿಭಟನಾ ದಿನಗಳಲ್ಲಿ ಅಪರಾತ್ರಿ ಹಿಂದಿರುಗಿದರೂ ಬೆಳಿಗ್ಗೆ ೩-೩೦ ಕ್ಕೆ ಎದ್ದು ಬಿಡುವಳು. ಮತ್ತೆ ಬಿಡುವಿಲ್ಲದ ದಿನಚರಿ ಪ್ರಾರಂಭವಾಗುತ್ತಿತ್ತು.

ಎಂ.ಬಿ.ಬಿ.ಎಸ್., ಎಂ.ಎಸ್. ಮುಗಿಸಿ ವೈದ್ಯೆಯಾಗಿ ಆಸ್ಪತ್ರೆಯಲ್ಲಿ ಸೇವೆ ಪ್ರಾರಂಭವಾದರೂ ಮನಸ್ಸಿಗೆ ನೆಮ್ಮದಿಯಿರಲಿಲ್ಲ. ಅಹಮ್ಮದ ನಗರದ ರುಕ್ಷವಾತಾವರಣದಲ್ಲಿದ್ದವಳಿಗೆ, ಸಮುದ್ರ, ಸಹ್ಯಾದ್ರಿಗಳೆರಡೂ ಕೈಬೀಸಿ ಕರೆಯುತ್ತಿದ್ದವು. ಬಾಲ್ಯದ ಕನಸನ್ನು ಪುನಃ ಪುನಃ ನೆನಪಿಸುತ್ತಿದ್ದವು. ನೌಕರಿಗೆ ತಿಲಾಂಜಲಿಯಿತ್ತು ಮರಳಿ ಗೂಡಿಗೆ ಬಂದಳು. ಶರಾವತಿ ನದಿಯಾಚೆಯ ಕಾಸರಕೋಡಿನಲ್ಲಿ ಜಮೀನು ಕೊಂಡು ತನ್ನ

ಕನಸಿನ ಆರೋಗ್ಯಧಾಮಕ್ಕೆ ರೂಪ ಕೊಡಲಾರಂಭಿಸಿದಳು. ಮುಂಬೈಯ ಪರಿಚಯಸ್ಥರಿಂದ ಎಕ್ಸ್‌ರೇ ಯಂತ್ರ, ಶಸ್ತ್ರಚಿಕಿತ್ಸಾ ಉಪಕರಣಗಳು, ಫರ್ನಿಚರ್, ಹಾಸಿಗೆಗಳು ಎಲ್ಲ ನೆರವನ್ನು ಎಷ್ಟು ಸಾಧ್ಯವೊ ಅಷ್ಟನ್ನು ದಾನರೂಪದಲ್ಲಿ ಪಡೆದಳು. ಬಗಲಲ್ಲಿ ಜೋಳಿಗೆ ಹಾಕಿ, ಆರೋಗ್ಯ ಲೆಕ್ಕಿಸದೇ ದೇಶದಾದ್ಯಂತ ಓಡಾಡಿ ಹಣ ಸಂಗ್ರಹಿಸಿದಳು. ಈ ದಿನಗಳಲ್ಲೇ ಕಣ್ಣಿಗಾದ ಸೋಂಕನ್ನು ನಿರ್ಲಕ್ಷಿಸಿ, ಚಿಕಿತ್ಸೆಗೆ ಗಮನಕೊಡದೇ ಒಂದು ಕಣ್ಣನ್ನು ಕಳೆದುಕೊಂಡಳು. ಕೊನೆಗೂ ತನ್ನ ಕಲ್ಪನೆಯ ಚಿಕಿತ್ಸಾಲಯಕ್ಕೆ ರೂಪಕೊಡುವಲ್ಲಿ ಯಶಸ್ವಿಯಾದಳು. ಕಾಸರಕೋಡಿನ ಕಡಲತೀರಕ್ಕೆ ಹೊಂದಿದ್ದ ಸ್ಥಳದಲ್ಲಿ 'ಸ್ನೇಹಕುಂಜ' ಕಾಣಿಸಿಕೊಂಡಿತು. ಚಿಕ್ಕಗುಡಿಸಲುಗಳಲ್ಲಿ ಬಗೆಬಗೆಯ ಚಿಕಿತ್ಸಾಕ್ರಮಗಳು ಪ್ರಾರಂಭವಾದವು. ಮತ್ತೆ ಧನಸಂಗ್ರಹಕ್ಕೆ ಓಡಾಟ. ಕ್ರಮೇಣ 'ವಿವೇಕಾನಂದ ಆರೋಗ್ಯಧಾಮ'ದ ಪಕ್ಕಾ ಕಟ್ಟಡ ಮೇಲೆದ್ದಿತು. ಗ್ರಾಮಾಂತರ ಪ್ರದೇಶದಲ್ಲಿ ಶುಶ್ರೂಷಾ ವಿಧಾನಗಳು ಅತ್ಯಂತ ಅಸಮರ್ಪಕವಿದ್ದುದನ್ನು ಮನಗಂಡು ದಾದಿ ತರಬೇತಿಕೇಂದ್ರ ತೆರೆದಳು. ಎರಡು ದಶಕಗಳಲ್ಲಿ ಈ ತರಬೇತಿಕೇಂದ್ರದಲ್ಲಿ ತರಬೇತಾದ 'ಹಳ್ಳಿ ಹುಡುಗಿ'ಯರಲ್ಲಿ ಅನೇಕರು ಮಹಾನಗರದ ಇತರ ನಗರಗಳ ಆಸ್ಪತ್ರೆಗಳಲ್ಲಿ ದುಡಿಯುತ್ತಿದ್ದಾರೆ.

ಆಲೋಪತಿ, ಆಧುನಿಕ ಶಸ್ತ್ರಚಿಕಿತ್ಸೆಗಳಲ್ಲಿ ಪರಿಣತೆಯಿದ್ದರೂ ಕುಸುಮಕ್ಕನಿಗೆ ಆಯುರ್ವೇದ, ನಿಸರ್ಗಚಿಕಿತ್ಸೆ, ಗಾಂವಠಿ ಔಷಧಿಗಳ ಬಳಕೆಯಲ್ಲಿ ಹೆಚ್ಚಿನ ಒಲವು ಹಾಗೂ ನಂಬಿಕೆ. ಹನ್ನೊಂದು ಎಕರೆ ಜಮೀನನ್ನು ಪಡೆದು ಅರಣ್ಯ ಇಲಾಖೆಯ ಸಹಕಾರದಿಂದ ವನೌಷಧಿಗಳ ತೋಟ ನಿರ್ಮಿಸುವಲ್ಲಿ ಯಶಸ್ವಿಯಾದಳು. ಗ್ರಾಮಸ್ಥರಿಗೆ ವನೌಷಧಗಳು ಸುಲಭ ಲಭ್ಯವೆಂದು ಅವುಗಳ ಪ್ರಚಾರವನ್ನು ಹವಣಿಸಿದಳು.

ಮೊದಲು ರಾಜ್ಯದ ಪ್ರಮುಖ ಅರಣ್ಯಜಿಲ್ಲೆಯೆಂದು ಹೆಸರು ಪಡೆದು, ಭರದಿಂದ ಬರಡಾಗಿ, ಈಗಲೂ ಬೋಳಾಗುತ್ತಲೇ ನಡೆದ ಉತ್ತರ ಕನ್ನಡಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಪರಿಸರ ಜಾಗೃತಿ ಮೂಡಿಸುವಲ್ಲಿ ಕುಸುಮಕ್ಕಳ ಪಾತ್ರ ಹಿರಿದಾದದ್ದು, ಅಲ್ಲಲ್ಲಿ ಕಾಡುಗಳ ಉಳಿವಿಗೆ ಜಾಗೃತಿಶಿಬಿರಗಳನ್ನು ನಡೆಸಿದಳು. ಪರಿಸರ ಪ್ರಜ್ಞೆಯ ಕಾರ್ಯಕ್ರಮಗಳಲ್ಲೆಲ್ಲ ಸರಕಾರಿ ಮತ್ತು ಸರಕಾರೇತರ ಎಂದು

ಭೇದಮಾಡದೇ ತನ್ನನ್ನು ತೊಡಗಿಸಿಕೊಂಡಳು. ಮರಗಳ ಅಕ್ರಮ ಕಡಿತ, ಅರಣ್ಯಭೂಮಿಯ, ನದಿ ಪ್ರದೇಶದ ಅತಿಕ್ರಮಣ ನಡೆದಲ್ಲೆಲ್ಲ ಆಕೆ ಹಾಜರ್! ಕಡ್ಡಿದೇಹದ ಈ ವ್ಯಕ್ತಿ ಮಾತಿನ ಬೆಂಕಿಹತ್ತಿಸುವ ಜ್ವಾಲೆಯಾಗುತ್ತಿದ್ದಳು. ಕೂಗಿ ಕೂಗಿ ಮಾತನಾಡುವಳು. ಕನ್ನಡಿಗರಲ್ಲಿ ಮೈಯುಂಡ ಜಡತ್ವವನ್ನು ವಾಗ್ಬಾಣಗಳಿಂದ ಚುಚ್ಚಿ ನಿವಾರಿಸಲು ಯತ್ನಿಸುವಳು. ಚಳವಳಿ, ಪ್ರತಿಭಟನೆ, 'ಅಪ್ಪಿಕೋ' ಜಾಗೃತಿ, ಧರಣಾಗಳಿಂದಾಗಿ ಸಾಕಷ್ಟು ಅಪ್ರಿಯಳಾಗಿದ್ದಳು. ನದಿ ದಂಡೆಯ ಮರಳು ರಾಶಿಯನ್ನು ಕದ್ದೊಯ್ಯುವವರು, ಅಕ್ರಮ ಮದ್ಯತಯಾರಕರು, ವಿತರಕರು, ಅರಣ್ಯಗುತ್ತಿಗೆದಾರರ ಹೆಸರಲ್ಲಿ ನಾಟಾ ಸಾಗಿಸುವವರು, ಮುಂತಾದ ಸಮಾಜದ್ರೋಹಿಗಳು ಅವಳ ಜನಜಾಗ್ರತಿಯ ಸಂಘಟನೆಯನ್ನು ಸಹಿಸಲು ಸಾಧ್ಯವೇ? ಸುತ್ತಮುತ್ತಲ ಜನ ತುಂಬ ಹಿಂಸೆ ಕೊಟ್ಟರು. ಆದರೆ ಕುಸುಮಕ್ಕ ಹಿಂದೆಗೆದವಳಲ್ಲ. ಪ್ರತಿಹೋರಾಟವೂ ಅನ್ಯಾಯಗಳ ವಿರುದ್ಧದ ಅವಳ ಹಠವನ್ನು ಹೆಚ್ಚಿಸುತ್ತಿತ್ತು.

ನೈಸರ್ಗಿಕ ವಸ್ತುಗಳ ಉಪಯೋಗದ ಮೇಲೆ ಒತ್ತುಕೊಟ್ಟಳು. ಖಾದಿಯಲ್ಲದಿದ್ದರೂ ಆಸ್ಪತ್ರೆ ನಿವಾಸಿಗಳಿಗೆಲ್ಲ ನೂಲಿನ ಬಟ್ಟೆ ಧರಿಸುವದು ಕಡ್ಡಾಯವಾಗಿತ್ತು. ಕುಚ್ಚಕ್ಕಿಯ ಅನ್ನ, ಹಸಿರು ಎಲೆಯ ತಂಬುಳಿ, ಕಾರ, ಮಸಾಲೆಗಳು ಅತಿಕಡಿಮೆಯಿದ್ದ ಅಡಿಗೆಯೇ ರೋಗಿ, ನಿರೋಗಿ, ವಿದ್ಯಾರ್ಥಿ, ದಾದಿಯರಿಗೆಲ್ಲ ಸಿಗುತ್ತಿತ್ತು. ಪ್ಲಾಸ್ಟಿಕ್ ಸಾಮಾನು, ಬಿಂದಿ, ಸೌಂದರ್ಯ ಪ್ರಸಾಧನಗಳಿಗೆ ಕುಸುಮಕ್ಕನ ಸಂಸಾರದಲ್ಲಿ ಸ್ಥಳವಿರಲಿಲ್ಲ. ತಾನಂತೂ ಸದಾ ಬಿಳಿ ಉಡುಪಿನ ದಾದಿ, ಕಾಯಾ ವಾಚಾ ಮನಸಾ ಶುಶ್ರೂಷಾ ಮಣಿಯೇ!

ಬರಬರುತ್ತ ಕುಸುಮಕ್ಕಳ ಪರಿಸರಪ್ರಜ್ಞಾ ಚಳುವಳಿ, ಜಿಲ್ಲೆಯಾಚೆ, ರಾಜ್ಯದಾಚೆ ವ್ಯಾಪಿಸಿತು, ಕೈಗಾ ಅಣುಸ್ಥಾವರ ಯೋಜನೆಯಾಗಲಿ, ಶರಾವತಿ ತುದಿಕಟ್ಟು ಯೋಜನೆಯಾಗಲಿ, ಜೀವಕೋಟಿಯ ನಿರ್ಮೂಲನಕ್ಕೆ ನಿಂತವುಗಳು. ಅರಣ್ಯಜಿಲ್ಲೆಯ ಕೊನೆಯುಸಿರನ್ನೂ ಹಿಸುಕಿಹಾಕುವಂಥವು. ಈ ಕುರಿತು ದೇಶದ ಪರಿಸರಪ್ರೇಮಿಗಳೆಲ್ಲರ ಗಮನ ಸೆಳೆಯುವದು ಅವಶ್ಯವಿತ್ತು. ಸರಿ, ಪಾದಯಾತ್ರೆ ಪ್ರಾರಂಭಿಸಿದಳು. ಕೇರಳ, ತಮಿಳನಾಡು, ಗೋವಾಗಳಲ್ಲೆಲ್ಲ ಸಂಚರಿಸಿದಳು. ಪಶ್ಚಿಮ ಘಟ್ಟಗಳ ಉಳಿವಿಗಾಗಿ ಸಾಧ್ಯವಿದ್ದಲ್ಲೆಲ್ಲ ಸ್ಲೈಡ್ ಶೋ, ಭಾಷಣ, ನಾಟಕಗಳ ಕಾರ್ಯಕ್ರಮ

ಏರ್ಪಡಿಸಿದಳು. ನಾಡಿನ ಪರಿಸರ ರಕ್ಷಣೆಯಲ್ಲಿ ಮುಂಚೂಣಿಯಲ್ಲಿದ್ದವರ ನಿಕಟ ಸಂಪರ್ಕ ಹೊಂದಿದ್ದಳು.

೧೯೯೩-೯೪ ರಲ್ಲಿ ಕುಸುಮಕ್ಕಳನ್ನು ಸಾಕ್ಷರತಾ ಆಂದೋಲನದ ಮೌಲ್ಯಮಾಪನ ಸಮಿತಿಯ ಅಧ್ಯಕ್ಷೆ ಮಾಡಲಾಗಿತ್ತು. ಜಿಲ್ಲೆಯಲ್ಲೇ ಏನೂ ಕೆಲಸ ನಡೆಯದೇ ಹೆಚ್ಚಿನ ಸಂಖ್ಯೆಯಲ್ಲಿ ಸಾಕ್ಷರರೆಂದು ನಮೂದಿಸಿದ ವಂಚನೆಯ ಬಗೆ ಬಗೆಯ ಅಕ್ರಮಗಳನ್ನು ಪತ್ತೆ ಹಚ್ಚಿದಳು. ಸರಕಾರಿ ಕಾರ್ಯವೈಖರಿ ಹಾಗೂ ಹಣ ದೊಡ್ಡ ಪ್ರಮಾಣದಲ್ಲಿ ಪೋಲಾಗುತ್ತಿದ್ದ ವಿಚಾರವನ್ನು ಅರಿತವರಿಗೆ ಇದೊಂದು ಹೊಸಮಾತಲ್ಲ. ಆದರೆ ಪ್ರತಿ ಅನ್ಯಾಯದ ವಿರುದ್ಧ ಸಿಡಿದೇಳುವದು, ಪ್ರತಿಭಟಿಸಿ ದಣಿಯುವದು, ಕುಸುಮಕ್ಕಳ ಸ್ವಭಾವವಾಗಿತ್ತು. ಯಾರಾದರೂ ಒಬ್ಬರು ಧ್ವನಿ ಏರಿಸಬೇಕಲ್ಲ? ಒಂಟಿ ಧನಿ ಆದರೂ ಏನಂತೆ? ಇದು ಅವಳ ಉದ್ಗಾರ.

ಅವಳೊಂದಿಗಿದ್ದ ಸಲಿಗೆಯಿಂದ ಒಮ್ಮೆ ಹೇಳಿದೆ. "ಹತ್ತಾರು ಚಟುವಟಿಕೆಗಳಲ್ಲಿ ಈ ರೀತಿ ತೊಡಗಿರುತ್ತಿ! ರಕ್ತಮಾಂಸದ ದೇಹಕ್ಕೆ ಕಾಯಂ ಎನರ್ಜಿ ಎಲ್ಲಿಂದ ಬರಬೇಕು? ಈ ಸಂಸ್ಥೆಯನ್ನು ಎಷ್ಟೊಂದು ಬೆಳೆಸಿದ್ದಿ.... ನಂತರ ನೋಡಿಕೊಳ್ಳುವವರು ಯಾರು? ನಿನ್ನಿಂದ ಉಪಕೃತರಾದವರು ಅಸಂಖ್ಯರು. ಆದರೆ ನಿನ್ನೊಂದಿಗಿದ್ದು ಹೆಗಲಿಗೆ ಹೆಗಲು ಕೊಡುವವರು ಎಷ್ಟು ಕಡಿಮೆ ಜನರಿದ್ದಾರೆ! ಮುಂದೆ ಹೇಗೆ ಮ್ಯಾನೇಜ್ ಮಾಡುತ್ತೀಯಾ?"

ನನ್ನ ಮಾತಿಗೆ ಕುಸುಮಕ್ಕ ಕೋಪಿಸಿಕೊಳ್ಳಲಿಲ್ಲ. ಉಸಿರ್ಗರೆದಳು. ಸಮಾಜಸೇವೆಯಲ್ಲಿ ತೊಡಗ ಬಯಸುವವರು, ಸ್ವಂತ ಸುಖ-ವಿರಾಮಗಳನ್ನು ಮರೆತುಬಿಡಬೇಕಾಗುತ್ತದೆ. ಚಿಕಿತ್ಸಾ ಪರಿಣತರಿದ್ದೂ ಸಮಾನ ಮನಸ್ಕ ಸಹೋದ್ಯೋಗಿಗಳು ದೊರೆಯುವದು ಅತ್ಯಪರೂಪವೆಂದು ನಮ್ಮಿಬ್ಬರಿಗೂ ಗೊತ್ತಿದ್ದ ವಿಚಾರವೇ! ವಿವೇಕಾನಂದ ಧಾಮದ ಮೇಲಾಡಳಿತಕ್ಕೆ ವಿಶ್ವಸ್ಥ ಮಂಡಳಿ ಇತ್ತು. ಸ್ನೇಹಕುಂಜದ ಕೆಲನಿಷ್ಠಾವಂತ ಬಳಗದವರು, ಕುಸುಮಕ್ಕನ ಅನುಪಸ್ಥಿತಿಯಲ್ಲಿ, ಯಾವ ವ್ಯತ್ಯಯವೂ ಬಾರದಂತೆ ನೋಡಿಕೊಳ್ಳುತ್ತಿದ್ದರು. ಆದರೆ ಎರಡನೆ ಹಂತದ ಕೆಲಸಗಾರರನ್ನು ತರಬೇತುಗೊಳಿಸುವಲ್ಲಿ ತನ್ನ ಯತ್ನ ವಿಫಲವಾದದ್ದನ್ನು ಕುಸುಮಕ್ಕ ತೋಡಿಕೊಂಡಳು.


ತನಗಿದ್ದ ಸಮುದಾಯಸಂಸಾರ ಸಾಲದೆಂಬಂತೆ ಒಂದು ತಬ್ಬಲಿ ಗಂಡು ಮಗುವನ್ನು ಸಾಕಿದ್ದಳು. ಭರತನೆಂದು ಹೆಸರಿಟ್ಟು

ಮಾತೃಪ್ರೇಮವನ್ನೆಲ್ಲ ಅವನ ಮೇಲೆ ಧಾರೆಯೆರೆದಳು. ತನ್ನ ಮಿತಿಯಿಲ್ಲದ ಆಸಕ್ತಿಗಳಲ್ಲಿ ಆತನನ್ನು ಮರೆಯದೇ ಸಲಹಿದಳು. ಸಾಧ್ಯವಿದ್ದಲ್ಲೆಲ್ಲ ಜೊತೆಗೆ ಕರೆದೊಯ್ಯುತ್ತಿದ್ದಳು. ಎರಡನೆ ಬಾರಿ ಆತನನ್ನು ತಬ್ಬಲಿಯಾಗಿಸಿ ಹೊರಟೇ ಹೋದಳು.

ಕುಸುಮಕ್ಕನನ್ನು ನಿಕಟವಾಗಿ ಬಲ್ಲ ಅವಳ ಚಟುವಟಿಕೆಗಳನ್ನೆಲ್ಲ ಹತ್ತಿರದಿಂದ ಕಂಡ ಹೆಸರಾಂತ ಲೇಖಕ, ವಿಮರ್ಶಕ, ಮ್ಯಾಗ್ಸೆಸೆ ಪ್ರಶಸ್ತಿ ವಿಜೇತ ಕೆ. ವಿ. ಸುಬ್ಬಣ್ಣನವರು, ಸುಂದರವಾದ ಶ್ರದ್ಧಾಂಜಲಿಯನ್ನು ಈ ಶ್ರಮಜೀವಿಗೆ ಕೊಡಮಾಡಿದರು. 'ಮೂಕ ಸಹ್ಯಾದ್ರಿಗೆ ಮಾತುಕೊಟ್ಟ ಧೀರೆ' ಲೇಖನದಲ್ಲಿ ಕುಸುಮಕ್ಕಳ ಜೀವನ-ಸಾಧನೆಗಳನ್ನು ತ್ರೋಟೀಕರಿಸಿದ್ದಾರೆ.

"ಕುಸುಮಕ್ಕಳನ್ನು ಸಮಾಜ ಸೇವಕಿ-ಹೋರಾಟಗಾರ್ತಿ ಎಂದಷ್ಟೇ ತಿಳಿಯುವದಾದರೆ ನಮಗೇ ನಾವು ಅನ್ಯಾಯ ಮಾಡಿಕೊಳ್ಳುತ್ತೇವೆ. ಕಳೆದ ಹತ್ತಿಪ್ಪತ್ತು ವರ್ಷಗಳಲ್ಲಿ ನಮ್ಮಲ್ಲಿ ಬೇರೆ ಬೇರೆಯಾಗಿ, ತನ್ನಷ್ಟಕ್ಕೆ ತಾನು ಎನ್ನುವ ಹಾಗೆ, ಬೆಳೆದು ಬಂದ ದಲಿತ, ರೈತ, ಕನ್ನಡ, ಪರಿಸರ, ಬಳಕೆದಾರ ಈ ಐದು ಚಳುವಳಿಗಳಿಗೆ ಕುಸುಮಕ್ಕ ಒಂದೇ ನೆಲೆಯನ್ನು ಕಲ್ಪಿಸಿ ಒಗ್ಗೂಡಿಸಿದವರು. ಈಗಷ್ಟೇ ಮೊಳೆಯತೊಡಗಿರುವ ಸ್ತ್ರೀ ಚಳುವಳಿಯನ್ನು ಮೇಲಿನ ಎಲ್ಲ ಚಳುವಳಿಗಳ ಭಿತ್ತಿಯನ್ನಾಗಿ ಮಾಡಿದರು..... ಈ ಜನ ಶಿಕ್ಷಣ ಹೋರಾಟಗಳನ್ನೆಲ್ಲ ಮೀರಿ ಜೀವ ಶುಶ್ರೂಷೆಯನ್ನೆ ಧರ್ಮವಾಗಿವುಳ್ಳ "ಸ್ತ್ರೀಮಾನವತ್ವ"ದ ಮೂಲ ಸ್ತ್ರೋತ್ರವನ್ನು ಅವರು ತೆರೆದು ಕಾಣಿಸಿದ್ದಾರೆ.... ಇಂಥವರ ಚರಿತ್ರೆಯನ್ನು ಬರೆಯಲಿಕ್ಕಾಗುವದಿಲ್ಲ. ಇವರು ಕಾಲಕ್ರಮೇಣ ಸಮುದಾಯದ ಐತಿಹ್ಯ-ಪುರಾಣಗಳಲ್ಲಿ ಉದ್ಭವಿಸಿ ಕುಲದೈವತವಾಗುವಂಥವರು" ('ಸುಧಾ' ೧೨ ಜುಲೈ ೧೯೯೮)

ಸುಬ್ಬಣ್ಣ ನಿಜವಿದ್ದುದನ್ನೆ ಬರೆದರು. ಕುಸುಮಕ್ಕನನ್ನು ನಿಕಟವಾಗಿ ಬಲ್ಲ ನೂರಾರು ಜನರ ಒಡಲಾಳದ ಅನಿಸಿಕೆಗಳಿಗೆ ಮಾತಿನ ರೂಪಕೊಟ್ಟರು. ಆದರೆ ವಿಸ್ಮೃತಿಗೆ ಹೆಸರಾದ ನಮ್ಮ ಜನ, ಸಮಾಜಕ್ಕಾಗಿ ಹಲಬಗೆಯಲ್ಲಿ ಸವೆದು, ಸಮುದಾಯದ ಪುರಾಣ ಕತೆಯಾಗುವ ಹಂತದಲ್ಲಿ ಆಕಸ್ಮಿಕವಾಗಿ ಕಣ್ಮರೆಯಾದ ಈ ಕುಸುಮ ವಜ್ರವನ್ನು ನೆನಪಿಸಿಕೊಂಡಾರೇ?



ಮಿಂಚಿ ಮರೆಯಾದ ಎಮ್. ಕೆ. ಇಂದಿರಾ

(೧೯೧೭-೧೯೯೪)

"ಸ್ಕೂಲಿನಲ್ಲಿ ಓದುತ್ತಿದ್ದಾಗ, ಒಂದು ಪ್ರಶ್ನೆ (ನಿಬಂಧ ಬರೆಯಲು?) ಬಂದಿತ್ತು. ಮುಂದಿನ ಜನ್ಮದಲ್ಲಿ ನೀವು ಏನಾಗಿ ಹುಟ್ಟಬೇಕು? ಅನ್ನೋದು. ಆವಾಗ ಮಾವಿನ ಹಣ್ಣಿನಕಾಲ. ನಮ್ಮ ಮನೆಯಲ್ಲಿ ೪೭ ಮಾವಿನ ಹಣ್ಣಿನ ಮರಗಳಿದ್ದವು. ಆ ಪ್ರಶ್ನೆಗೆ ನಾನು ಉತ್ತರ ಬರೆದೆ. ಮುಂದಿನ ಜನ್ಮ ಇದೆಯೋ ಇಲ್ಲವೋ ಗೊತ್ತಿಲ್ಲ! ಹಾಗೊಂದು ವೇಳೆ ಇದ್ದರೆ ನಾನು ಮಾವಿನ ಮರವಾಗಿ ಹುಟ್ಟಬೇಕು ಅಂತ ಆಸೆ ಆಗುತ್ತದೆ. ಮಾವಿನ ಮರಕ್ಕೆ ಮದುವೆ ಬೇಡ, ಚಪ್ಪರ ಬೇಡ, ಮನೆ, ಮಕ್ಕಳು, ಗಂಡ ಬೇಡ,

ಸೀರೆ-ಕುಪ್ಪಸ ಏನೂ ಬೇಡ. ತನ್ನ ಪಾಡಿಗೆ ತಾನು ಬೆಳೆಯುತ್ತೆ. ಜನಕ್ಕೆ ಹಣ್ಣು ಕೊಡುತ್ತೆ. ಹಕ್ಕಿಪಕ್ಕಿಗಳು ತಿನ್ನುತ್ತವೆ. ಅದಕ್ಕೆ ಭೇದಭಾವ ಇಲ್ಲ. ಆಕ್ಷೇಪಣೆ ಇಲ್ಲ. ಕಾಲ ಮುಗಿಯುವ ತನಕ ತಾನು ಅಷ್ಟೊಂದು ಹಣ್ಣು ಬಿಟ್ಟರೂ ಒಂದೂ ಹಣ್ಣನ್ನು ಅದು ತಿನ್ನುವದಿಲ್ಲ. ಎಲ್ಲವನ್ನು ಇನ್ನೊಬ್ಬರಿಗೆ ಕೊಡುತ್ತೆ. ಆ ಥರ ನಾನು ಏನಿದ್ದರೂ ಇನ್ನೊಬ್ಬರಿಗೆ ಒಳ್ಳೇದನ್ನು ಮಾಡಬೇಕೇ ಹೊರತು ನಾನು ಮಾಡಿದ್ದನ್ನು ನಾನೇ ತಿಂದುಕೊಂಡು ಬಿಡಬಾರದು. ಹೀಗೆ ಹುಟ್ಟಿದರೆ ನಾನು ಮುಂದಿನ ಜನ್ಮದಲ್ಲಿ ಮಾವಿನ ಮರವಾಗಿ ಹುಟ್ಟಬೇಕು ಅಂತ...."

ಶಾಲೆಯ ನಿಬಂಧ ಬರೆಯುವಾಗ ತೋಡಿಕೊಂಡ ಬಾಲಕಿಯ ಮನದಿಚ್ಛೆ, ಹಲವು ವರ್ಷಗಳ ನಂತರ ಪೂರೈಸಿತ್ತು. ಅಸಂಖ್ಯರಿಗೆ ತನ್ನ ಸಾಹಿತ್ಯ ಕೃಷಿಯ ರಸ ಫಲಗಳನ್ನು ಕೊಡಮಾಡುವದರಲ್ಲಿ ಸಿದ್ಧಿಸಿತ್ತು. ಅದೇನು ಕಾಕತಾಲೀಯವೋ, ಈಕೆ ತಾವು ಬಾಲ್ಯದಲ್ಲಿ ನಿಕಟವಾಗಿ ನೋಡುತ್ತ ಬೆಳೆದ ಮಾವಿನ ಮರಗಳನ್ನೂ ಮೀರಿಸುವ ಸಂಖ್ಯೆಯಲ್ಲಿ ಕಾದಂಬರಿಗಳನ್ನು ಬರೆದರು. ೧೫ ಕಥಾ ಸಂಕಲನಗಳನ್ನು ಸೃಷ್ಟಿಸಿದರು. ಇತರ ಕೃತಿಗಳನ್ನೂ ರಚಿಸಿದರು.

ಮೇಲಿನ ಉದ್ಗಾರಗಳು ಅಪರೂಪದ ಲೇಖಕಿ, ಎಮ್. ಕೆ. ಇಂದಿರಾ ಅವರು ೨೭-೧೦-೧೯೯೩ ರಂದು ಆಕಾಶವಾಣಿಗಾಗಿ ರಿಕಾರ್ಡಮಾಡಿದ ಕೆಲ ಅನಿಸಿಕೆಗಳಲ್ಲಿ ಬಂದವುಗಳು. ಹಲವು ಹತ್ತು ಕ್ಷೇತ್ರಗಳಲ್ಲಿ ಮಹತ್ತರ ಸಾಧನೆ ಮಾಡಿದ ಕೆಲವು ಹಿರಿಯರ ಜೀವನಾನುಭವಗಳನ್ನು ಅವರ ಧ್ವನಿಗಳಲ್ಲಿ ಮುದ್ರಿಸಿಕೊಂಡು ಆಕಾಶವಾಣಿಯ ಬಾನುಲಿ ಭಾಂಡಾರದಲ್ಲಿ ಕಾಯ್ದಿರಿಸುವ ಯೋಜನೆಯೊಂದನ್ನು ಬೆಂಗಳೂರು ಕೇಂದ್ರ ಹಮ್ಮಿಕೊಂಡಿತ್ತು. "ಬದುಕು. ನನ್ನ ದೃಷ್ಟಿಯಲ್ಲಿ" ಎಂಬ ಶೀರ್ಷಿಕೆಯನ್ನು ಈ ಮಾಲಿಕೆಗೆ ಕೊಡಲಾಗಿತ್ತು. ಆಕಾಶವಾಣಿಯ ಕಾರ್ಯಕ್ರಮಗಳಿಗೆ ಇಂದಿರಾ ಅವರು ಎಂದೂ ಹಿಂದೇಟು ಹಾಕಿದವರಲ್ಲ. ಆದರೆ ಈ ಬಾರಿ ಅವರಲ್ಲಿ ಏನೂ ಉತ್ಸುಕತೆ ಕಂಡು ಬರಲಿಲ್ಲ. ಪುನಃ ಪುನಃ ಆಗ್ರಹಿಸಿ, ವೈಯಕ್ತಿಕವಾಗಿ ಕಂಡ ಬಳಿಕ, 'ಈಗ ಕುಳಿತು ಯಾವುದೇ ಭಾಷಣವಾಗಲಿ, ಲೇಖ, ಕಥೆಯಾಗಲಿ ಬರೆಯಲು ಆಗುತ್ತಿಲ್ಲ. ಬೇಕಿದ್ದರೆ ಸಂದರ್ಶನ ಮಾಡಿ! ನೆನಪಿದ್ದಷ್ಟು ಹೇಳುತ್ತೇನೆ' ಎಂದರು. ಇದಕ್ಕೆ ಒಪ್ಪಿಕೊಂಡ ಮೇಲೆ, ಬಾನುಲಿ

ಕೇಂದ್ರಕ್ಕೆ ಬಂದು ಕೆಲವು ಅನಿಸಿಕೆಗಳನ್ನು ರಿಕಾರ್ಡ ಮಾಡಿದರು. ಇದೇ ಅವರ ಕೊನೆಯ ಕಾರ್ಯಕ್ರಮವಾಯಿತು. ೧೫-೩-೯೪ಳ ರಂದು ಅವರು ವಿಧಿವಶರಾದರು. ದಿಢೀರ್ ಎಂದು ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಪ್ರವೇಶಿಸಿ, ಅಲ್ಪಾವಧಿಯಲ್ಲಿ ಜನಪ್ರಿಯತೆಯ ಶಿಖರ ತಲುಪಿ, ಅಷ್ಟೇ ಶೀಘ್ರವಾಗಿ ಮಾಯವಾದರು. ಕೊನೆಗಾಲದಲ್ಲಿ ಅವರು ತಮ್ಮ ಆತ್ಮಕಥೆಯನ್ನು ಬರೆಯುತ್ತ ಇದ್ದರು. ಸುಮಾರು ೨೦೦ ಪುಟಗಳಷ್ಟು ಬರೆದಿರುವದಾಗಿ ಹೇಳಿದ್ದರು. ಸಾವಿರದೈನೂರು ಪುಟಗಳಷ್ಟಾಗಬಹುದೇನೋ! ಮಲೆನಾಡಿನ ಸಮಗ್ರಜೀವನವನ್ನು ಚಿತ್ರಿಸಬೇಕೆಂದಿದ್ದೇನೆ' ಎಂದು ತಮ್ಮ ಸಂದರ್ಶನದಲ್ಲಿ ಹೇಳಿದ್ದರು. ಕನ್ನಡಿಗರ ದುರ್ದೈವ. ಅನೇಕ ಧೀಮಂತರನ್ನು ಕೊಡಮಾಡಿದ ಆ ಅನನ್ಯ ನೆಲೆವೀಡಿನ ಜನಜೀವನದ ಅಪೂರ್ವ ದಾಖಲೆಯೊಂದು ಲೇಖಕಿಯ ಆತ್ಮಕಥೆಯ ರೂಪದಲ್ಲಿ ಸಿಗಬಹುದಾದದ್ದು, ಎಂದೆಂದಿಗೂ ದೊರೆಯದೇ ಹೋಯಿತು.

ಇಂಗ್ಲಿಷಿನಲ್ಲಿ ಫಿನೊಮೆನನ್ ಎಂಬ ಶಬ್ದವಿದೆ. ಅದ್ಭುತಸೃಷ್ಟಿ ಅಥವಾ ಚಮತ್ಕಾರವೆಂದು ಅದರ ಅರ್ಥ. ವ್ಯಕ್ತಿಗೆ ಅದನ್ನು ಅನ್ವಯಿಸುವದಾದರೆ ಎಮ್. ಕೆ. ಇಂದಿರಾ ಕನ್ನಡ ಸಾಹಿತಿಗಳ ಲೋಕದಲ್ಲಿ ಚಮತ್ಕಾರವೇ! ಫಿನೊಮೆನನ್ ಆಗಿದ್ದರು. ಅವರ ಸಾಧನೆಗಳ ಮಿಂಚುನೋಟ ಕಂಡಾಗ ಈ ಮಾತಿನ ಅರಿವು ಆಗದಿರದು.

ಅವರು ಬರೆಯಲು ಪ್ರಾರಂಭಿಸಿದ್ದು ತಮ್ಮ ೪೫ ನೇ ವಯಸ್ಸಿನಲ್ಲಿ. ಖ್ಯಾತಿ ಪಡೆದದ್ದು ತಮ್ಮ ಮೊದಲ ಕಾದಂಬರಿಯಿಂದಲೇ. ಈ ಕಾದಂಬರಿಯ ಹಸ್ತಪ್ರತಿ ಕಳೆದು ಹೋಗಿ ಎರಡು ವರ್ಷಗಳ ಬಳಿಕ ಕೇವಲ ನೆನಪಿನಿಂದಲೇ ಇಡೀ ಕಾದಂಬರಿಯನ್ನು ಪುನರ್‌ಸೃಷ್ಟಿಸಿದರು. ಕೇವಲ ೧೫ ದಿನಗಳಲ್ಲಿ ಬರೆದು ಮುಗಿಸಿದರು.

ಇಪ್ಪತ್ತು ವರ್ಷಗಳಲ್ಲಿ ಅರವತ್ತೈದು ಪುಸ್ತಗಳನ್ನು ಬರೆದರು. ಇವರ ಐದು ಕಾದಂಬರಿಗಳು ಚಲಚಿತ್ರಗಳಾದವು. 'ಫಣಿಯಮ್ಮ' ಅಂತರ್ ರಾಷ್ಟ್ರೀಯ ವಲಯಗಳಲ್ಲಿ ಹೆಸರುಮಾಡಿತು.

ಮಿಡ್ಲಸ್ಕೂಲ್ ಎರಡನೇ ವರ್ಗ ಓದಿದ ಲೇಖಕಿಯ ಕೃತಿಗಳು ವಿಶ್ವವಿದ್ಯಾಲಯದ ಪದವಿ ಪರೀಕ್ಷೆಗೆ ಪಠ್ಯಗಳಾದವು! ಬೇರೆ ಬೇರೆ ಭಾಷೆಗಳಲ್ಲಿ ಇವರ ಕೃತಿಗಳ ಅನುವಾದಗಳು ಬಂದವು.

ಇವರ ಕೃತಿಗಳು ಪಿಎಚ್.ಡಿ. ಮಹಾಪ್ರಬಂಧಕ್ಕೆ ಗ್ರಾಸವೊದಗಿಸಿದವು. ಬರೆದ ಕಾದಂಬರಿಗಳೆಲ್ಲ ಮರುಮುದ್ರಣ ಕಂಡವು. ಬರಹದಿಂದ ಧನ ಹಾಗೂ ಖ್ಯಾತಿಯನ್ನು ಅಲ್ಪಾವಧಿಯಲ್ಲಿ ಪಡೆಯುವ ವಿರಳ ಸಾಧನೆ ಅವರದಾಯಿತು. ಈ ಅಂಶಗಳಲ್ಲಿ ಯಾವುದೇ ಒಂದನ್ನು ಸಾಧಿಸಿದರೂ ಇಂದಿರಾ ಅವರಿಗೆ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸ್ಥಾನ ಇದ್ದೇ ಇರುತ್ತಿತ್ತು. ಆದರೆ ಎಲ್ಲದರಲ್ಲೂ ಮಿಗಿಲೆನಿಸಿಕೊಂಡರು. ಅವರ ಜೀವನ-ಸಾಧನೆಗಳ ಮಿಂಚುನೋಟವು, ಅಪ್ಪಟ ಗೃಹಿಣಿಯಾದಾಕೆ, ಅವಕಾಶ ಸಿಕ್ಕೊಡನೆ ಏನೇನೆಲ್ಲ ಸಾಧಿಸಲು ಸಾಧ್ಯ-ಅದೂ ಸೃಜನಶೀಲ ಸಾಹಿತ್ಯದ ಕ್ಷೇತ್ರದಲ್ಲಿ ಎಂಬುದನ್ನು ಸಾರುತ್ತದೆ.

ಆದಿ ಕವಿ ಪಂಪನಂತೆ, ಎಮ್. ಕೆ. ಇಂದಿರಾ, ಮಾವಿಗೆ, ಮರಗಳ ರಾಜನಿಗೆ ಮರುಳಾಗಿದ್ದರೆ ಆಶ್ಚರ್ಯವಿಲ್ಲ! ಮಲೆನಾಡಿನ ಮಗಳಾದ ಅವರ ಪರಿಸರ ಪ್ರೀತಿ, ಅನೇಕ ಕಾದಂಬರಿಗಳಲ್ಲಿ ಉಕ್ಕಿಹರಿದಿದೆ. ಅವರು ಹುಟ್ಟಿ ಬೆಳೆದ, ನೋಡಿ ನಲಿದ, ಮಲೆನಾಡಿನ, ಮುಖ್ಯತಃ ತೀರ್ಥಹಳ್ಳಿಯ ಸುತ್ತಮುತ್ತಲಿನ ಜನಜೀವನವನ್ನು ಇಂದಿರಾ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದರು. ತಮ್ಮ ಸಾಂದ್ರ ಜೀವನಾನುಭವಗಳಿಗೆ, ಬರವಣಿಗೆಯ ರೂಪಕೊಟ್ಟರು. ಗ್ರಾಮ ಜೀವನದ ದಟ್ಟ ಅನುಭವಗಳ ಹಿನ್ನೆಲೆ ಕಾದಂಬರಿ ಬರವಣಿಗೆಗೆ ಎಂಥ ಸತ್ವ ನೀಡುತ್ತದೆ ಎಂಬುದನ್ನು ಕಾರಂತ, ಕುವೆಂಪು, ಭೈರಪ್ಪನವರ ಕಾದಂಬರಿಗಳಲ್ಲಿ ಕಂಡಿದ್ದೇವೆ. ಈ ಅಂಶವನ್ನು ಇಂದಿರಾರ ಕೆಲ ಕಾದಂಬರಿಗಳಲ್ಲಿ ಸ್ಪಷ್ಟವಾಗಿಯೇ ಗುರುತಿಸಬಹುದು. ಎಂದೂ ಇತರರ ವಿಚಾರಗಳನ್ನು ಎರವಲಾಗಿ ಪಡೆಯಲಿಲ್ಲ. ಯಾರ ಅನುಕರಣೆಯನ್ನೂ ಮಾಡಲಿಲ್ಲ. ಗೃಹಜೀವನದ ಮಿತಿಯಲ್ಲೇ ಸ್ವಂತಿಕೆಯನ್ನು ಮೆರೆದರು. ಆದರೆ ಅವರ ಜನಪ್ರಿಯತೆಯಿಂದಾಗಿ ಪ್ರಕಾಶಕರ ಎಡಬಿಡದ ಬೇಡಿಕೆ ಬರಲಾರಂಭಿಸಿತು. ಮುಂಗಡ ಹಣಕೊಟ್ಟು ಬರೆಸುವವರೂ ಕಾಣಿಸಿಕೊಂಡರು. ಬರವಣಿಗೆ ಕಡ್ಡಾಯವಾಯಿತು. ಇಂಥಲ್ಲಿ ಗುಣಮಟ್ಟ, ಏಕಪ್ರಕಾರವಾಗಿ ಕಾಯ್ದುಕೊಂಡು ಹೋಗುವದು ಕಠಿಣವೇ! ಆದರೂ ಅವರ ಕಾದಂಬರಿಗಳ ವಸ್ತುವೈವಿಧ್ಯ ವಿಸ್ಮಯಗೊಳಿಸುವಂತಹದು. ನಗರಜೀವನದ ಪರದಾಟ, ಅಂಗವಿಕಲತೆ ಮೆಟ್ಟಿನಿಂತ ಮಾನವಧೈರ್ಯ, ಕಿಶೋರಾವಸ್ಥೆಯ ದುಡುಕುತನ, ಹೆಣ್ಣಿನ ಅಸೀಮ ತಾಳ್ಮೆ, ಪಾಪಪ್ರಜ್ಞೆ, ಕೊನೆಗೆ ಪತ್ತೆದಾರಿಯ ರಹಸ್ಯಸ್ಫೋಟ ಮುಂತಾದವೂ ಅವರ ಲೇಖನಿಯಲ್ಲಿ ಜೀವಂತಿಕೆ ತಾಳಿದವು. ಅವರಿಗೆ

ಹೆಚ್ಚಿನ ಶ್ರೇಯಸ್ಸು ತಂದ ತುಂಗಭದ್ರ, ಸದಾನಂದ, ಫಣಿಯಮ್ಮ, ಗೆಜ್ಜೆಪೂಜೆಗಳು ಅವರು ಕಂಡುಂಡ ಅನುಭವಗಳ ಸಾರವಾಗಿದ್ದರೂ ಉಳಿದ ಕೃತಿಗಳ ಕಥಾವಸ್ತು ಕೂಡ ಪರಿಚಿತವೇ. ಅಲ್ಲದೇ ಆತ್ಮೀಯರಿಂದ ಪಡೆದವುಗಳು ಎಂದು ಇಂದಿರಾ ಹೇಳುತ್ತಿದ್ದರು. ಸುಂದರವಾದ ನಿರೂಪಣಾಶಕ್ತಿ, ಆಡುಮಾತಿನ ಕಸುವು, ಕಥೆಯನ್ನು ಹೇಳುವ ಕೌಶಲ್ಯ, ವಿವಿಧ ಸನ್ನಿವೇಶಗಳ ಸರಳ ಆಕರ್ಷಕ ನಿರ್ವಹಣೆ, ಹಾಗೂ ತಿಳಿಹಾಸ್ಯಗಳನ್ನು ಇಂದಿರಾ ಚೆನ್ನಾಗಿ ರೂಢಿಸಿಕೊಂಡದ್ದರಿಂದ ಅವರ 'ಸಾಧಾರಣ' ಕೃತಿಗಳೂ ಓದುಗರ ಮೆಚ್ಚಿಗೆಗೆ ಪಾತ್ರವಾದವು.

೧೯೯೧ ರಲ್ಲಿ ಇಂದಿರಾ ಅವರ ೭೫ ನೇ ವರ್ಧಂತಿಯನ್ನು ಬೆಂಗಳೂರಿನಲ್ಲಿ ವೈಭವದಿಂದ ಆಚರಿಸಲಾಯಿತು. ದೊಡ್ಡ ಮೊತ್ತದ ಹಮ್ಮಿಣಿ, ಕಂಗೊಳಿಸುವ ರೇಷ್ಮೆ ಸೀರೆ, ಅಸಂಖ್ಯ ಹಾರಗಳು, ಆತ್ಮೀಯರ ಸವಿನುಡಿಗಳಂತೂ ಸರಿಯೇ! ಆದರೆ ಕರ್ನಾಟಕ ಲೇಖಕಿಯರ ಸಂಘದ ವತಿಯಿಂದ ಅವರ ಬದುಕು-ಬರಹಗಳ ಕುರಿತಾದ 'ಸುರಗಿ' ಎಂಬ ಸಂಭಾವನಾ ಗ್ರಂಥದ ಬಿಡುಗಡೆ ಲೇಖಕಿಯೋರ್ವಳಿಗೆ ಬರಹಗಾರರ ಬಳಗವು ಕೊಡಬಹುದಾದ ಅಪೂರ್ವ ಕಾಣಿಕೆಯಾಗಿತ್ತು. ರವೀಂದ್ರ ಕಲಾಕ್ಷೇತ್ರದಲ್ಲಿ ಏರ್ಪಟ್ಟ ಈ ಸಮಾರಂಭ, ಅಭೂತಪೂರ್ವವಾದ ಸಾಹಿತ್ಯೋತ್ಸವವೆನ್ನಬೇಕು. ರಂಗಮಂದಿರದ ಕೆಳಗಿನ, ಮೇಲಿನ ಅಟ್ಟದ ಆಸನಗಳೆಲ್ಲ ಕಿಕ್ಕಿರಿದು ತುಂಬಿದ್ದೇ ಅಲ್ಲದೇ ಅಕ್ಕ-ಪಕ್ಕದ ಓಡಾಡುವ ಸ್ಥಳದಲ್ಲೂ ಜನ, ಗಂಟೆಗಟ್ಲೆ ನಿಂತುಕೊಂಡು ತಮ್ಮ ಮೆಚ್ಚಿನ ಲೇಖಕಿಗೆ ಮೀಸಲಾದ ಕಾರ್ಯಕ್ರಮ ನೋಡಿ, ಕೇಳಿ ನಲಿದರು. ಹಿರಿಯ ಸಾಹಿತಿಗಳನೇಕರು ಕೊಡಮಾಡಿದ ಶಾಬ್ದಿಕ ಸಂಭಾವನೆಯನ್ನು ಆಲಿಸಿ ತಣಿದರು.

'ಸುರಗಿ' ಇಂದಿರಾ ಅವರ ಆತ್ಮೀಯರು, ಬಳಗದವರು ನೆನಪಿಸಿಕೊಂಡ ನಿಕಟ ನೆನಪುಗಳ, ವ್ಯಕ್ತಿ ಪರಿಚಯದ ಜೊತೆಗೆ, ಅವರ ಸಾಹಿತ್ಯ ಕುರಿತಾದ ವಿಶ್ಲೇಷಣೆ, ಚಿಂತನಗಳನ್ನು ಒಳಗೊಂಡಿದೆ. ಶ್ರೀಮತಿ ಎಚ್. ಎಸ್. ಪಾರ್ವತಿ ಸಂಪಾದಿಸಿದ ೨೦೦ ಪುಟಕ್ಕೂ ಮಿಕ್ಕಿದ ಗ್ರಂಥ, ಮೂವತ್ತೇಳು ಸಾಹಿತಿಗಳ ಅಧ್ಯಯನಪೂರ್ಣ ಲೇಖನಗಳನ್ನು ಹೊಂದಿದೆ. ಜಾನಪದ ಕತೆಯ ಸತ್ವಹೊಂದಿದ ಅವರ ಮೊದಲ ಕಾದಂಬರಿ 'ತುಂಗಭದ್ರ'ದ ತುಂಬೆಲ್ಲ ಹೆಣ್ಣುಮಕ್ಕಳಿಗೆ ಮಾತ್ರ ವೇದ್ಯವಾಗಿರುವ

ಜೀವನದರ್ಶನವನ್ನು ಕೀರ್ತಿನಾಥ ಕುರ್ತಕೋಟಿಯವರು ಗುರುತಿಸಿದ್ದಾರೆ. ಅವರ ಬರವಣಿಗೆಯ ವೈಶಿಷ್ಟ್ಯವನ್ನು ಶ್ರೀನಿವಾಸ ಉಡುಪ, ಪ್ರೇಮಾ ಭಟ್, ವೈದೇಹಿ, ವಿಜಯಾ ಸುಬ್ಬರಾಜ್, ವಿಜಯಶ್ರೀ, ಕೆ. ಉಷಾ ಪಿ. ರೈ. ನಾ ಡಿಸೋಜ, ನೀಳಾದೇವಿ, ಸಾರಾ ಅಬೂಬಕ್ಕರ್ ಮೊದಲಾದವರು ಎತ್ತಿಹಿಡಿದ್ದಾರೆ. ಇಂದಿರಾ ಅವರ ಸ್ತ್ರೀಮಾನಸದ ಸೂಕ್ಷ್ಮಸಂವೇದನೆಗೆ ಮಾರು ಹೋದ ಮಂದಾಕಿನಿ ಪುರೋಹಿತ ಅವರು, ಇಂದಿರಾ ಬದುಕು-ಬರಹ ಕುರಿತೇ ಆಳ ಅಧ್ಯಯನ ನಡೆಸಿ ಡಾಕ್ಟರೇಟ್ ಪದವಿ ಪಡೆದರು. ಲೇಖಕಿಯೊಂದಿಗೇ ಅವರು ಹುಟ್ಟಿಬೆಳೆದ ಮಲೆನಾಡಿನ ಗ್ರಾಮ ಪ್ರದೇಶಗಳಲ್ಲೆಲ್ಲ ಸಂಚರಿಸಿದರು. ಅಲ್ಲಲ್ಲ ಹರಡಿಕೊಂಡ ಲೇಖಕಿಯ ಜನಪ್ರಿಯತೆಯ ಮಾದರಿಗಳನ್ನು 'ಸುರಗಿ'ಯಲ್ಲಿ ವಿವರಿಸಿದ್ದಾರೆ. ಜೊತೆಗೆ ಇಂದಿರಾರ ಮೊಟ್ಟಮೊದಲ ಕೃತಿ 'ತುಂಭದ್ರ'ದ ಹಸ್ತಪ್ರತಿ ಕಳೆದು ಹೋಗಿ ಎರಡು ವರ್ಷಗಳ ಬಳಿಕ ಕೇವಲ ನೆನಪಿನ ಆಧಾರದ ಮೇಲೆ ಈ ದೊಡ್ಡದಾದ ಕಾದಂಬರಿಯನ್ನು ಇಡಿಯದಾಗಿ ಮತ್ತೆ ಬರೆಯಬೇಕಾಗಿ ಬಂದ ಪ್ರಸಂಗಗಳನ್ನು ಲೇಖಕಿ, ಪ್ರಕಾಶಕರ ಪತ್ರಗಳ ಸಹಿತ, ಅಧಿಕೃತವಾಗಿ ದಾಖಲಿಸಿದ್ದಾರೆ. ಇಂದಿರಾ ಪತಿ ಕೃಷ್ಣರಾವ್ ಅವರು, ಪತ್ನಿಗೆ ಕೊಡಮಾಡಿದ ಸತತ ಪ್ರೋತ್ಸಾಹವನ್ನು ಶೇಷನಾರಾಯಣರು ನೆನಪಿಸಿಕೊಂಡಿದ್ದಾರೆ. ಜೊತೆಗೆ ಇಂದಿರಾ ಯಾವ ಕೀಳರಿಮೆಗೂ ಅವಕಾಶ ನೀಡದೇ ಜನ್ಮಜಾತ ಪ್ರತಿಭೆಯನ್ನು ಲೇಖಕಿಯಾಗಿ ಬೆಳೆಸಿಕೊಂಡ ಬಗೆ ಉಲ್ಲೇಖಿಸಿದ್ದಾರೆ.

'ಫಣಿಯಮ್ಮ'ದಲ್ಲಿ ಬಿ. ಟಿ. ಲಲಿತಾ ನಾಯಕರು ಬಂಡಾಯದ ಮಿಂಚನ್ನು ಕಂಡುಕೊಂಡರು. ನಾ. ಡಿಸೋಜ, ವ್ಯಂಗ್ಯ ವಿಡಂಬನೆಯ ಸೆಳಕನ್ನು ಹುಡುಕಿದರು. ವಸ್ತು-ಶೈಲಿಯ ವೈಶಿಷ್ಟ್ಯವನ್ನು ನೀಳಾದೇವಿ ತೋರಿಸಿಕೊಟ್ಟರು. ಇಂಗ್ಲಂಡಿನ ಬ್ರಾಂಟೆ ಸೋದರಿಯರ ಕೃತಿಗಳಂತೆ ಇಂದಿರಾ ಅವರ ಮಲೆನಾಡ ಹಿನ್ನೆಲೆಯ ಮೊದಲ ಕಾದಂಬರಿಗಳು ಶುದ್ಧ ಅನುಭವಗಳ ಸಾರವೆಂದು ಹೇಳುತ್ತ ನಂತರದ ಬಹುಸಂಖ್ಯೆಯ ಕಾದಂಬರಿಗಳು ತಮ್ಮ ಜನಪ್ರಿಯತೆಗೆ ಇಂದಿರಾ ಅವರು ತೆರಬೇಕಾಗಿ ಬಂದ ಬೆಲೆ! ಎಂದು ಮಾರ್ಮಿಕವಾಗಿ ಸೂಚಿಸಿದ್ದಾರೆ ನೀಳಾದೇವಿ. ಸ್ತ್ರೀಪರ ದೃಷ್ಟಿಯನ್ನು ಬಿ.ಎನ್. ಸುಮಿತ್ರಾಬಾಯಿ ವಿಶ್ಲೇಷಿಸಿದರೆ, ಬಿ. ಎಸ್. ವೆಂಕಟಲಕ್ಷ್ಮಿ ಪ್ರಗತಿಪರ ನಿಲುವನ್ನು ಸಮರ್ಥಿಸಿದ್ದಾರೆ. ಇಂದಿರಾ ಕೃತಿಗಳಲ್ಲಿಯ ಸಾಮಾಜಿಕ ಪ್ರಜ್ಞೆಯನ್ನು ಎನ್. ಗಾಯತ್ರಿ ಟಿಪ್ಪಣಿಸಿದರೆ, ನೇಮಿಚಂದ್ರ

ಅವರ ಕಥೆಗಳ ನಿರೂಪಣೆಯ ಲಾಲಿತ್ಯ, ಓದಿಸಿಕೊಂಡು ಹೋಗುವ ಗುಣಗಳನ್ನು ತೋರಿಸಿಕೊಡುವದರ ಜೊತೆಗೆ ಸಮಾಜವನ್ನು ಕೀಟದಂತೆ ಕೊರೆಯುತ್ತಿದ್ದ ಸಂಪ್ರದಾಯ, ಅಂಧಃಶ್ರದ್ಧೆಗಳ ಬಗ್ಗೆ ಇಂದಿರಾರ ಅಸಮಾಧಾನ ವ್ಯಂಗ್ಯವಾಗಿ ಸೂಚ್ಯವಾಗಿ ಬಂದುದನ್ನು ಕಂಡಿದ್ದಾರೆ. 'ಫಣಿಯಮ್ಮ' ಚಲಚ್ಚಿತ್ರ ನಿರ್ದೇಶಿಸಿದ ಪ್ರೇಮಾ ಕಾರಂತರು ಸ್ವಾನುಭವಗಳನ್ನು ಸ್ವಾರಸ್ಯವಾಗಿ ನಿವೇದಿಸಿದಂತೆ, ಚಲನಚಿತ್ರವಾದ ಇಂದಿರಾ ಕಾದಂಬರಿಗಳನ್ನು ಡಾ. ವಿಜಯಾ ವಿಶ್ಲೇಷಿಸಿದ್ದಾರೆ.

ಇಂದಿರಾ ಅವರ ಸಮಗ್ರ ಕೃತಿಗಳ ಯಾದಿಯನ್ನು ಪ್ರಕಾಶನದ ವರ್ಷಗಳ ಜೊತೆಗೆ ಅನುಬಂಧದಲ್ಲಿ ಮರೆಯದೇ ಸೇರಿಸಲಾಗಿದೆ.

ಲೇಖಕಿಯೊಬ್ಬರ ವೈಶಿಷ್ಟ್ಯಪೂರ್ಣ ವ್ಯಕ್ತಿತ್ವ ಹಾಗೂ ಕೃತಿಗಳ ಅನೇಕಾನೇಕ ಆಯಾಮಗಳನ್ನು ಪರಿಮಿತಿಗಳೊಂದಿಗೇ ಹಿರಿಯ ಸಾಹಿತಿಗಳೆಲ್ಲ ವಿಶ್ಲೇಷಿಸಿದ್ದರಿಂದ 'ಸುರಗಿ' ಇತ್ತೀಚಿನ ಅಭಿನಂದನಾ ಗ್ರಂಥಗಳಲ್ಲಿ ವಿಶೇಷ ಕಂಪನ್ನು ಪಡೆದಿದೆ.

'ಸುರಗಿ'ಯ ಪ್ರಬಂಧಗಳೆಲ್ಲ ವಿಮರ್ಶಕರ, ಸಾಹಿತ್ಯೋಪಾಸಕರ ದೃಷ್ಟಿಯಿಂದ ಬರೆದವುಗಳು. ಸಾಮಾನ್ಯ ಓದುಗರಲ್ಲಿ ಇಂದಿರಾ ಅಷ್ಟೊಂದು ಜನಪ್ರಿಯರಾದದ್ದು ಹೇಗೆ? ಬಹುಶಃ ಅವರ ಎಲ್ಲಾ ಕೃತಿಗಳೂ ಮರುಮುದ್ರಣ ಕಾಣಲು ಕಾರಣಗಳು ಯಾವವು? ಇವೆರಡೂ ಯೋಚಿಸಬೇಕಾದ ಅಂಶಗಳೇ!

ದೂರದರ್ಶನದ ಬಹು ಚಾನೆಲ್‌ಗಳು ಗ್ರಂಥ ಮುದ್ರಣ, ಹಾಗೂ ವಾಚನ ಸಂಸ್ಕೃತಿಯನ್ನು ಕಬಳಿಸುವ ಮುನ್ನ, ಅಂದರೆ ಇಪ್ಪತ್ತನೇ ಶತಕದ ಆರು, ಏಳು, ಎಂಟನೆಯ ದಶಕಗಳಲ್ಲಿ ಕಾದಂಬರಿ-ಮಾಧ್ಯಮ ಅತ್ಯಂತ ಜನಪ್ರಿಯವಾಗಿತ್ತು. ಕ್ರಮೇಣ ಜನರು ಮೆಚ್ಚಿಕೊಂಡ ಕಾದಂಬರಿಯ ವಸ್ತುವನ್ನು ಹೊಂದಿನ ಚಲಚ್ಚಿತ್ರಗಳೂ ಸಾಕಷ್ಟು ಕಾಣಿಸಿಕೊಂಡವು. ಸಾಹಿತ್ಯ (ಕಾದಂಬರಿ) ಹಾಗೂ ಚಲನಚಿತ್ರಗಳು ಒಂದಕ್ಕೊಂದು ಪೂರಕವಾಗಿವೆಯೇ? ಎನಿಸುವ ಮಟ್ಟಿಗೆ, ಎರಡೂ ಮಾಧ್ಯಮಗಳು ಒಟ್ಟಿಗೇ ಕಂಗೊಳಿಸಿದವು. ತ್ರಿವೇಣಿ, ಇಂದಿರಾರ ಕಾದಂಬರಿಗಳು ಅಪವಾದವಾಗಲಿಲ್ಲ. ಚಲನಚಿತ್ರಗಳು, ಅವರ ಕಾದಂಬರಿಗಳನ್ನು ಹೆಚ್ಚೆಚ್ಚಾಗಿ ಓದುಗರು ಕೊಂಡು ಓದುವಂತೆ ಪ್ರೇರೇಪಿಸಿದವು. ಬಿಡುವಿನ ವೇಳೆಯ ಮನರಂಜನೆಗೆ, ನಿದ್ರೆ ಬರಿಸುವ

ಸಾಧನವಾಗಿ ಇಂದು ಜನ ಟಿ. ವಿ. ಗೆ ಮೊರೆಹೋಗುವಂತೆ ಆ ಮೂರು ದಶಕಗಳಲ್ಲಿ ಜನ, ಕಥೆ-ಕಾದಂಬರಿಗೆ ಶರಣು ಹೋಗುತ್ತಿದ್ದರು. ಬೆಲೆಯೂ ಮಧ್ಯಮವರ್ಗದ ಕೈಗೆಟುಕುವಂತೆ ಇದ್ದುದರಿಂದ, ಕಾದಂಬರಿಗಳ ಮುದ್ರಣ-ಮರುಮುದ್ರಣಗಳು ಅಡೆ-ತಡೆಯಿಲ್ಲದೇ ಸಾಗಿದವು.

ಮಾನವ ಜೀವನದ ಚಿಂತನೆಗಳ ಸಂಕೀರ್ಣತೆ, ಸಮೂಹ ಸ್ಪಂದನ, ವೈಚಾರಿಕತೆ, ತಾತ್ವಿಕತೆಯ, ಅನುಲೇಪಗಳ ಕುರಿತು ಸಾಮಾನ್ಯ ಓದುಗರು ತಲೆ ಕೆಡಿಸಿಕೊಳ್ಳುವದಿಲ್ಲ! ಅವರಿಗೆ ಬೇಕಾದದ್ದು ತಮ್ಮ ಅನುಭವಗಳ ಪ್ರತಿಬಿಂಬ, ಪರಿಚಿತ ಪರಿಸರ, ಸರಳವಸ್ತು, ಸೊಗಸಾದ ನಿರೂಪಣೆ, ತಿಳಿಹಾಸ್ಯದ ರಂಜನೆ. ಈ ಅಂಶಗಳನ್ನು ಇಂದಿರಾ ತಮ್ಮ ಶೈಲಿಯಲ್ಲಿ ಅಳವಡಿಸಿಕೊಂಡಿದ್ದರು. ಅವರನ್ನು ನಿಕಟವಾಗಿ ಬಲ್ಲವರು ಅವರೊಬ್ಬ ಉತ್ತಮ ಕತೆಗಾತಿಯಾಗಿದ್ದರು ಎಂದು ಬರಹಗಾತಿಯ ಪೂರ್ವಜೀವನದಲ್ಲಿ 'ಸುರಗಿ'ಯಲ್ಲಿ ನೆನಪಿಸಿಕೊಂಡಿದ್ದಾರೆ. ಗ್ರಾಮಜೀವನವನ್ನು ಬಣ್ಣಿಸಿದಂತೆ, ನಗರದಲ್ಲಿ ಸ್ಥಾಯಿಯಾದ ಬಳಿಕ, ಮಧ್ಯಮ ವರ್ಗದವರ ನಾಡಿಮಿಡಿತವನ್ನೂ ಇಂದಿರಾ ಬಲುಬೇಗ ಕಂಡುಕೊಂಡರು. ಅವರ ಅನಿಸಿಕೆಗಳಿಗೆ ಸ್ಪಂದಿಸಿದರು. ಅವರ ಮೌಲ್ಯಗಳನ್ನೇ ತಮ್ಮ ನಂತರದ ಕೃತಿಗಳಲ್ಲಿ ಎತ್ತಿಹಿಡಿದರು. ಇದರಿಂದಾಗಿ ಅಲ್ಪಾವಧಿಯಲ್ಲಿ ಅವರು ತುಂಬ ಜನಪ್ರಿಯರಾದರು. ಅವರ ವ್ಯಕ್ತಿತ್ವದಂತೆಯೇ ಸಾದಾ-ಸರಳ ಆದರೆ ಆಕರ್ಷಕ ಬರವಣಿಗೆಯೇ ಅವರನ್ನು ಜನರ ಹತ್ತಿರ ಕೊಂಡೊಯ್ದಿತು.

ಲೇಖಕಿಯ ಸರಳ ವ್ಯಕ್ತಿತ್ವದ ಪರಿಚಯ, ಮೊದಲ ಭೇಟಿಯಲ್ಲೇ ಘಟಿಸಿತ್ತು. ಕರ್ನಾಟಕ ಲೇಖಕಿಯರ ಸಂಘದ ಮೊದಲ ವರ್ಷಗಳ ಪ್ರಸಂಗ. ಆಗಿನ್ನೂ ಸಂಘಕ್ಕೆ ತನ್ನದೇ ಆಫೀಸೂ ಇರಲಿಲ್ಲ. ಪ್ರತಿ ತಿಂಗಳು ಲೇಖಕಿಯೊಬ್ಬರ ಮನೆಯಲ್ಲಿ ಎಲ್ಲರೂ ಸಾಹಿತ್ಯಾಸಕ್ತೆಯರು ಸೇರುವದು. ಬರೆದು ಮುಗಿಸಿದ, ಅಥವಾ ಆಗಷ್ಟೆ ಪ್ರಕಟವಾದ ಕೃತಿಯನ್ನು ಲೇಖಕಿ ಪರಿಚಯಿಸಿ, ಕೆಲಭಾಗಗಳನ್ನು ಓದಿ ಹೇಳುವದು ಹಾಗೂ ಇತರರು ಚರ್ಚೆಯಲ್ಲಿ ಪಾಲುಗೊಳ್ಳುವದು ಸಾಮಾನ್ಯವಾಗಿತ್ತು. ಆಮಂತ್ರಿಸಿದ ಲೇಖಕಿ-ಯಜಮಾನಿ ಭರ್ಜರಿಯಾದ ತಿಂಡಿ-ತೀರ್ಥಗಳನ್ನು ಪೂರೈಸಿ ಇಂಥ ಅನೌಪಚಾರಿಕ ಸಾಹಿತ್ಯಸಭೆಗೆ ಸಂಭ್ರಮದ ಕಾರ್ಯಕ್ರಮದ ಮೆರುಗು ಕೊಡುತ್ತಿದ್ದರು ಎಂಬ ಮಾತನ್ನು ಒಪ್ಪಿಕೊಳ್ಳಬೇಕು! ಎಚ್. ಎಸ್. ಪಾರ್ವತಿ

ಅವರ ಮನೆಯಲ್ಲಿ ಇಂದಿರಾ ಅವರನ್ನು ಮೊದಲಬಾರಿ ಕಾಣುವಂತಾಗಿತ್ತು. ಅವರ "ಫಣಿಯಮ್ಮ" ಕಾದಂಬರಿ ರಾಜ್ಯ ಸಾಹಿತ್ಯ ಅಕಾಡಮಿಯಿಂದ ಪುರಸ್ಕೃತವಾದ ಸಂತೋಷಕ್ಕಾಗಿ ಇಂದಿರಮ್ಮ ಎಲ್ಲರಿಗೂ ಕೊಬ್ಬರಿ ಮಿಠಾಯಿ ಹಂಚಿದ್ದರು. ಕೋರಿಕೆಯಂತೆ 'ಫಣಿಯಮ್ಮ' ಮೂಡಿಬಂದ ಹಿನ್ನೆಲೆ ವಿವರಿಸಿದರು. ತಮ್ಮ ಅಜ್ಜನ ತಂಗಿಯಾದ ಆ ದುರ್ದೈವಿ, ೯ ವರ್ಷಕ್ಕೆ ಮದುವೆಯಾಗಿ, ವಿಧವೆಯಾಗಿ ೧೨ ನೇ ವಯಸ್ಸಿನಲ್ಲಿ ತಲೆ ಬೋಳಿಸಿಕೊಂಡು, ೧೧೨ ವರ್ಷ ಬದುಕಿದ್ದರು. ಯಾವ ಋಷಿಗೂ ಕಡಿಮೆಯಿಲ್ಲದ ತಪಸ್ಸಿನ ಜೀವನ ನಡೆಸಿದ ಈ ಹೆಣ್ಣು ಜೀವ, ಇಂದಿರಾರ ಮನಸ್ಸಿನ ಮೇಲೆ ಹೆಚ್ಚಿನ ಪ್ರಭಾವ ಬೀರಿತ್ತು. ತನ್ನ ಚಿಕ್ಕಂದಿನ ಸಮಾಜ, ಹೆಣ್ಣನ್ನು ನೋಡುವ ವಿವಿಧ ಕೋನಗಳ ಪರಿಚಯ 'ಫಣಿಯಮ್ಮ'ದಲ್ಲಿ ಕೊಡಲು ಹವಣಿಸಿದೆ ಎಂದು ಹೇಳಿದ್ದರು. "ಅಲ್ಲಿದ್ದ ಹೆಚ್ಚಿನ ಬರಹಗಾರ್ತಿಯರ ಕೃತಿಗಳನ್ನು ತಾನು ಓದಿಲ್ಲ !" ಎಂದು ಆ ಸಂದರ್ಭದಲ್ಲಿ ಹೇಳಿಯೂ ಇದ್ದರು.

ಇಂದಿರಾರ ಸರಳತೆ, ಅವ್ಯವಹಾರಿಕತೆಗಳಿಂದಾಗಿ, ಅವರ ಕೊನೆಯ ವರ್ಷಗಳಲ್ಲಿ ತುಂಬ ಕಷ್ಟ ಸಹಿಸಬೇಕಾಯಿತು. ತಮ್ಮದೆನಿಸಿಕೊಳ್ಳುವ ಒಂದು ಪುಟ್ಟಮನೆಯೂ ಅವರದಾಗಲಿಲ್ಲ. ಬರವಣಿಗೆಯಿಂದ ಹೇರಳ ಗೌರವಧನ ಪಡೆದ ವಿರಳ ಲೇಖಕಿ ಎಂದು ಮೊದಲಲ್ಲಿ ಹೇಳಿದ್ದಾಗಿದೆ. ಏನನ್ನೂ ಉಳಿಸಿಕೊಳ್ಳಲಿಲ್ಲ. ಅವರ ಆತ್ಮಕಥನ ಬರೆಯುತ್ತಿರುವ ವಿಚಾರ ತಿಳಿದಾಗ, ವಿಲ್ಸನ್ ಗಾರ್ಡನ್ ಬಳಿಯ ಚಿಕ್ಕಬಾಡಿಗೆ ಮನೆಯಲ್ಲಿ ಮಗನೊಂದಿಗೆ ವಾಸಿಸುತ್ತಿದ್ದವರನ್ನು ಭೇಟಿಯಾಗಲು ಹೋಗಿದ್ದೆ. ಕೆಲ ಅನುಭವಗಳನ್ನು ರಿಕಾರ್ಡ ಮಾಡಿರೆಂದು ಕೇಳಿಕೊಂಡೆ. ಆಗ ಕನ್ನಡ ಸಂಸ್ಕೃತಿ ಇಲಾಖೆಯ ಮಂತ್ರಿಗಳು ತಮ್ಮ ಮನೆಗೆ ಬಂದಿದ್ದು, ಕಾಲು ಮುಟ್ಟಿ ನಮಸ್ಕರಿಸಿದ್ದು, ಆಶೀರ್ವಾದ ಬೇಡಿದ್ದು, "ತಮ್ಮ ಪುಸ್ತಕಗಳನ್ನು ಓದಿದ್ದೇನೆ. ತಮ್ಮಂಥವರ ದರ್ಶನವೇ ಮಹಾಪುಣ್ಯ! ನನ್ನಿಂದದೇನು ಸೇವೆ ಬೇಕು?" ಎಂದು ಕೇಳಿದ್ದನ್ನು ಸಂಭ್ರಮದಿಂದ ಹೇಳಿ ತನಗೆ ವಾಸಕ್ಕೊಂದು ಮನೆಯಿಲ್ಲದ್ದನ್ನು ಹೇಳಿಕೊಂಡಾಗ, "ಇನ್ನೆರಡು ತಿಂಗಳಲ್ಲಿ ಒಂದು ಬಿ. ಡಿ. ಎ. ಮನೆ ತಪ್ಪಿದರೆ ಸೈಟ್ ನಿಮ್ಮದಾಗುತ್ತದೆ! ಎಂದು ಆಶ್ವಾಸನೆ ಕೊಟ್ಟಿದ್ದಾರೆ" ಎಂದು ಗೆಲುವಿನಿಂದ ಹೇಳಿದ್ದರು.

ಮುಂದೊಂದು ವರ್ಷ ಜಾರಿಕೊಂಡ ಬಳಿಕ ಆ ವಿಚಾರ ಕೇಳಿದಾಗ, ಏನೂ ಆಗಲಿಲ್ಲವೆಂದು ತಿಳಿಯಿತು. ರಾಜಕಾರಣಿಗಳ ಆಶ್ವಾಸನೆಯನ್ನು ಎಂದಿಗೂ ನಂಬಕೂಡದು ಎಂಬ ಲೋಕವ್ಯವಹಾರದ ಮಾತು ಆ ಸೀದಾಸಾದಾ ಜೀವಿಗೆ ಹೊಳೆಯಲೇ ಇಲ್ಲ! ಮಂತ್ರಿಗಳು ಹೇಳಿದ್ದಾರೆ. ಹಿಂಬಾಲಕರೆಲ್ಲ ಸಾಕ್ಷಿಇದ್ದಾರೆ. ಲೇಖಕಿ ಮನೆ ಮಾತಾಗಿದ್ದಾರೆ. ಸರಕಾರದ ಮಾಸಿಕ ವೇತನದ ೫೦೦/- ರೂ. ಬಿಟ್ಟರೆ ಬೇರೆ ಆಧಾರವಿಲ್ಲ ಎಂಬ ಸತ್ಯವನ್ನೇ ಪಟ್ಟುಹಿಡಿದು, ವಿಧಾನ ಸೌಧ ಅಲೆದು, ಮಂತ್ರಿಗಳನ್ನು ಬೆಂಬತ್ತಿ ಮನೆ/ಸೈಟ್ ಗಿಟ್ಟಿಸುವ ಛಲ ಚಾಣಾಕ್ಷತೆಗಳಾಗಲಿ, ಇತರರಿಂದ ಇಂಥ ಕೆಲಸ ಮಾಡಿಸುವ ಧೂರ್ತತನವಾಗಲಿ ಮಲೆನಾಡಿನ ಮುಗುದೆಯಲ್ಲಿ ಎಲ್ಲಿಂದ ಬರಬೇಕು? ಕೊನೆಗೂ ತನ್ನದೆಂಬ ನೆಲೆಗಾಣದೇ ಆಪ್ತೇಷ್ಟರ ಬೇರೆ ಬೇರೆ ಮನೆಗಳಲ್ಲಿ ಅಲ್ಪಕಾಲದ ಅತಿಥಿಯಾಗಿ ಮುಂದರಿದರು. ಕುಳಿತು ಬರೆಯಲು ಬೇಕಾಗುವ ಅಲ್ಪಸೌಕರ್ಯಗಳಾಗಲಿ, ನೆಮ್ಮದಿಯ ಮನಸ್ಥಿತಿಯಾಗಲೀ ಕಾಣದೇ ಆರೋಗ್ಯವು ತೀರ ಹದಗೆಟ್ಟು, ನರ್ಸಿಂಗ್ ಹೋಂ ಸೇರಿಸಬೇಕಾಯಿತು. ತೀವ್ರ ಯಾತನೆಯ ಅವರ ಕೊನೆ ಅವರೇ ಚಿತ್ರಿಸಿದ ಅಥವಾ ಚಿತ್ರಿಸಬಹುದಾಗಿದ್ದ ಯಾವುದೇ ಕಥೆಗಿಂತ ದಾರುಣವಾಗಿತ್ತು.

'ಬದುಕು ನನ್ನ ದೃಷ್ಟಿಯಲ್ಲಿ' ಮಾಲಿಕೆಗಾಗಿ ತಮ್ಮ ಅನಿಸಿಕೆಗಳನ್ನು, ಕುಳಿತು ಬರೆಯಲಾಗದಂಥ ಸ್ಥಿತಿಯನ್ನು ಇಂದಿರಾ ತಲುಪಿದ್ದರು. ಇದು ಆ ಬಳಿಕ ತಿಳಿದು ಬಂದ ವಿಚಾರ. ಆದರೆ ಅವರು ಜೀವನೋಲ್ಲಾಸವನ್ನು ಕಳೆದುಕೊಳ್ಳದಂತೆ ಪ್ರಯತ್ನ ನಡೆಸಿಯೇ ಇದ್ದರು. ತನ್ನನ್ನು ಸಮಾಜ, ಹೆಚ್ಚಿನ ಪ್ರೀತಿಯಿಂದ ಕಂಡಿದೆ. ಗೌರವಿಸಿದೆ. ಅದನ್ನು ಹಿಂದಿರುಗಿಸಬೇಕು ಎಂಬ ಆಸೆ ಅವರದಾಗಿತ್ತು. ಅದನ್ನು ಸಾಧಿಸಿಯೂ ಇದ್ದರು. ಮೌಲಿಕ ಕೃತಿಗಳನ್ನು ಧಾರಾಳವಾಗಿ ಕನ್ನಡ ಜನತೆಗೆ ನೀಡಿದರು.

ತಮ್ಮ ರಚನಾಸಾಮರ್ಥ್ಯದ ಪರಿಮಿತಿಯ ಅರಿವು ಇಂದಿರಾ ಅವರಿಗಿತ್ತು. ನಗರಜೀವನ ಕುರಿತಾದ ಅವರ ಕೃತಿಗಳಲ್ಲಿ ಜೀವಂತತೆ ಇಲ್ಲವೆಂದಾಗ ಅವರು ಒಪ್ಪಿಕೊಂಡೂ ಇದ್ದರು. ಅನುಭವವೇ ನನ್ನ ಬರವಣಿಗೆಯ ಜೀವಾಳವಾದ್ದರಿಂದ ಅಷ್ಟಾಗಿ ತಿಳಿಯದ ವಿಚಾರಗಳ ಬಗ್ಗೆ ಬರೆದಾಗ ಅಸಹಜವಾಗಿರಲು ಸಾಕು.... ಹೆಸರು ಬಂದಂತೆ, ಪತ್ರಿಕೆ-

ಪ್ರಕಾಶಕರಿಂದ ಬೇಡಿಕೆ ಹೆಚ್ಚುತ್ತ ಹೋಗಿ ಬರೆಯಲೇಬೇಕಾಯಿತು. ಆದರೆ 'ಟು ಲೆಟ್' ಕಾದಂಬರಿ ಧಾರಾವಾಹಿಯಾಗಿ ಪ್ರಕಟವಾದಾಗ ಜನ ಕುತೂಹಲದಿಂದ ಮುಂದಿನ ಸಂಚಿಕೆಗಾಗಿ ಕಾಯುತ್ತಿದ್ದರು' ಎಂದು ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಕೊನೆಯಲ್ಲಿ ಒಂದು ಮಾತು ಹೇಳಬೇಕು. ಭರದಿಂದ ಮರೆಯಾಗುತ್ತಿರುವ ಮಲೆನಾಡಿನ ಜನಜೀವನವನ್ನು ಅಧಿಕೃತವಾಗಿ ಆದರೆ ಅತ್ಯಂತ ಸ್ವಾಭಾವಿಕವಾಗಿ, ಇಂದಿರಾ ತಮ್ಮ ಕೃತಿಗಳಲ್ಲಿ ಚಿತ್ರಿಸಿದರು. ದಾಖಲಿಸಿದರು. ಈ ಪ್ರಬಂಧ ಬರೆಯಲು ನಾನು, ಈ ವರೆಗೆ ಓದಲು ಸಿಗದ ಇಂದಿರಾ ಕೃತಿಗಳನ್ನು ಪಡೆಯಲು ಹಲವೆಡೆ ಯತ್ನಿಸಿ ವಿಫಲಳಾದೆ. ಸಾರ್ವಜನಿಕ ವಾಚನಾಲಯಗಳಲ್ಲಿಯ ಅವರ ಅಳಿದುಳಿದ ಕೃತಿಗಳು, ಹಿಂದುಮುಂದಿನ ಪುಟಗಳನ್ನು ಕಳೆದುಕೊಂಡು ಅನಾಥವಾಗಿವೆ. ಪು.ತಿ.ನ. ಅವರು ತುಂಬ ಮೆಚ್ಚಿಕೊಂಡ 'ತೆಗ್ಗಿನ ಮನೆ ಸೀತೆ'ಯ ದರ್ಶನವೂ ಆಗಲಿಲ್ಲ!

ಇಂದಿರಾ ದಾಖಲಿಸಿದ ಜನಜೀವನವನ್ನು ಕಾಯ್ದಿರಿಸಬೇಕಾದರೆ, ಅವರ ಎಲ್ಲ ಕೃತಿಗಳನ್ನು ಮೈಕ್ರೋಫಿಲ್ಮ್ ರೂಪದಲ್ಲಿ ದಾಖಲಿಸಿಡುವ ಪ್ರಯತ್ನ ಶೀಘ್ರವೇ ಆಗಬೇಕು. ಈಗ ಜಾಗತೀಕರಣದ ದಾಳಿ ನಾಲ್ಕೂ ಕಡೆಯಿಂದ ನಡೆದಿದೆ. ಇದು ಬೇರೂರುತ್ತ ನಡೆದಂತೆ ಪ್ರಾದೇಶಿಕ ಭಾಷೆ-ಸಂಸ್ಕೃತಿಗಳು ಅಳಿದುಹೋಗುವ ಸಂಭವ ಹೆಚ್ಚು! ಜಾಗತಿಕ ಭಾಷೆಯಾದ ಇಂಗ್ಲಿಷಿನ ಅಬ್ಬರ ಹೆಚ್ಚಿದಂತೆ, ಜನಾಂಗೀಯ ಭಾಷಾ ಪ್ರಕಾರಗಳು, ಸಾಂಸ್ಕೃತಿಕ ವೈಶಿಷ್ಟ್ಯಗಳು ಇಲ್ಲವಾಗುತ್ತವೆ. ಇಂದಿಗೆ ನೂರು ವರ್ಷಗಳ ಬಳಿಕ ಕನ್ನಡ ಸಂಸ್ಕೃತಿಯ, ಮಲೆನಾಡಿನ ಉಪಭಾಷೆ-ಸಂಸ್ಕೃತಿಯ ಸ್ವರೂಪ ಹೇಗೆ ಉಳಿದೀತು? ಎಂದು ಊಹಿಸುವದೂ ಕಷ್ಟ! ಬರಲಿರುವ ಪೀಳಿಗೆಗಾಗಿ, ಇಂದಿರಾ ಸಾಹಿತ್ಯದರ್ಶನ ಒದಗಿಸಲು ಅವರ ಸಮಗ್ರ ಕೃತಿಗಳನ್ನು ಕಾಯ್ದಿರಿಸುವ ಕೆಲಸ ಜರೂರಾಗಿ ನಡೆಯಬೇಕಾಗಿದೆ. ಕನ್ನಡ ಲೇಖಕಿಯರ ಬಳಗದವರು, ಸಂಘ ಸಂಸ್ಥೆಗಳು, ಇಂದಿರಾ ಅಭಿಮಾನಿಗಳು, ಈ ಕೆಲಸ ಕೈಕೊಂಡಾರೇ? ಮಧ್ಯಮವಯಸ್ಸಿಗೆ ಬರವಣಿಗೆ ಕೈಕೊಂಡು, ಅಲ್ಪಾವಧಿಯಲ್ಲಿ ಅಪಾರ ಮೆಚ್ಚಿಗೆ ಗಳಿಸಿ, ಮಿಂಚಿ ಮಾಯವಾದ ಇಂದಿರಾ ನೆನಪನ್ನು ಕಾಯ್ದಿಡುವ ಉಪಾಯ ಇದೊಂದೇ!



ವಾಗರ್ಥ ಸಂಪನ್ನೆ ವಾಗೀಶ್ವರಿ ಶಾಸ್ತ್ರಿ

(ಜ. ೧೯೨೬)

"ನಾನು ಹುಟ್ಟಿ ಬೆಳೆದ, ಜೀವಿಸಿದ ಈ ನೆಲ ಜಲದ, ಈ ಸಮಾಜದ ಋಣವನ್ನು ಈ ಬಗೆಯಿಂದ (ಹಾಡಿ, ಹಾಡಿಸಿ, ಅರ್ಥೈಸಿ, , ಬರೆದು) ತೀರಿಸಿದ ತೃಪ್ತಿ ನನಗಿದೆ. ಮಧ್ಯಮ ವರ್ಗದ ಸಾಮಾನ್ಯ ಹೆಂಗಸೊಬ್ಬಳು ತುಂಬು ಸಂಸಾರಿಯಾಗಿ, ಗೃಹಕೃತ್ಯಗಳನ್ನೆಲ್ಲ ನಿರ್ವಹಿಸಿದೆ. ದೈವ ಬಲವಿದ್ದರೆ ಇನ್ನೂ ಈ ದಿಸೆಯಲ್ಲಿ ಮಾಡಬೇಕಾದ ಕೆಲಸ ಬೇಕಾದಷ್ಟು ಬಾಕಿ ಇದೆ" ಎನ್ನುತ್ತ ತೀರ ಇತ್ತೀಚೆಗೆ (೧೯೯೮) ಸೊಗಸಾದ ಪ್ರವಾಸ ಕಥನವನ್ನು ಹೊರತಂದು, ಇನ್ನೂ ಬರೆಯುತ್ತಲೇ ಇರುವವರು ವಾಗೀಶ್ವರಿ ಅವರು.

ಕಟ್ಟಾ ಸಂಪ್ರದಾಯಸ್ಥ ಮನೆತನದಲ್ಲಿ ಹುಟ್ಟಿ, ಬಾಳಿ, ಅಪ್ಪಟ ಗೃಹಿಣಿಯಾಗಿ, ಏಳು ದಶಕಗಳನ್ನು ಮನೆಯಲ್ಲೇ ಕಳೆದು, ಗೃಹ ಜೀವನದ ಸೌಂದರ್ಯವನ್ನು, ಸಮಷ್ಟಿಜೀವನವನ್ನು, ಹಾಡುಗಳ ಮೂಲಕ ಹಾಡುಗಾರಿಕೆ, ಸಂಪಾದನೆ, ಕ್ಯಾಸೆಟ್ ಮೂಲಕ ತೋರಿಸಿಕೊಡುತ್ತ, ಅಪರ ವಯಸ್ಸಿನಲ್ಲಿ ವಿದೇಶ ಸಂಚಾರವನ್ನೂ ಕೈಕೊಂಡು ವನಿತಾಸಾಧನೆಯ ವಿಸ್ಮಯವಾಗಿದ್ದಾರೆ. ದೇಹ ಹಣ್ಣಾದರೂ, ಮೀರಿದ ಜೀವನೋಲ್ಲಾಸದಿಂದ ಹೃದಯವನ್ನು ಹಸಿರಾಗಿಯೇ ಉಳಿಸಿಕೊಂಡಿದ್ದಾರೆ. ಸಾಂಪ್ರದಾಯಿಕ ಹಿನ್ನೆಲೆ, ಆಧುನಿಕತೆಯ ಅಳವಡಿಕೆಗಳ ಹಿತಮಿತ ಮಿಶ್ರಣವಾಗಿದ್ದಾರೆ. ಹಳೆ ಬೇರು-ಹೊಸ ಚಿಗುರಿನ ಪ್ರತೀಕವಾಗಿದ್ದಾರೆ.

೧೯೨೬ ರಲ್ಲಿ ಹೊಳೆ ನರಸಿಪುರದಲ್ಲಿ ಜನ್ಮವೆತ್ತಿದ ವಾಗೀಶ್ವರಿ ಅವರ ತಂದೆ, ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಸಬ್ ಓವರ್‌ಸಿಯರ್ ಆಗಿದ್ದ ವೆಂಕಟೇಶಯ್ಯನವರು. ತಾಯಿ ಅನ್ನಪೂರ್ಣಮ್ಮ. ವಾಗೀಶ್ವರಿಗೂ ಮುನ್ನ ತಾಯಿಗೆ ಸಾಲಾಗಿ ಮೂವರು ಹೆಣ್ಣುಮಕ್ಕಳೇ ಹುಟ್ಟಿದ್ದರು. ಹೀಗಾಗಿ ವಾಗೀಶ್ವರಿಯ ಜನ್ಮ ತಾಯಿಗೆ ಹೆಚ್ಚಿನ ನಿರಾಶೆಯನ್ನೇ ತಂದಿತ್ತು. ಆದರೆ ಅಜ್ಜಿ ಸುಬ್ಬಮ್ಮ ಸೊಸೆಯನ್ನು ಸಂತೈಸಿದರು. ಬಾಣಂತಿ ಕಣ್ಣೀರು ಹಾಕದಂತೆ ನೋಡಿಕೊಂಡರು. ವಿಜೃಂಭಣೆಯಿಂದ ನಾಮಕರಣ ಇಟ್ಟುಕೊಂಡು, ವಿದ್ಯಾಧಿದೇವತೆಯ ಹೆಸರನ್ನೇ ಮೊಮ್ಮಗಳಿಗೆ ಇಟ್ಟರು. ಈ ಅಜ್ಜಿ, ಎಳೆತನದಿಂದಲೇ ತನ್ನ ಮೇಲೆ ಬೀರಿದ ಪ್ರಭಾವ ಬಲು ದೊಡ್ಡದೆಂದು ವಾಗೀಶ್ವರಿ ಅಭಿಮಾನದಿಂದ ಹೇಳುತ್ತಾರೆ.

ವಾಗೀಶ್ವರಿ, ಐದು ವರ್ಷದವಳಿದ್ದಾಗ, ಅಜ್ಜಿಯೊಂದಿಗೆ ಕಾಶೀಯಾತ್ರೆ ಮುಗಿಸಿಕೊಂಡು ಬಂದ ತಾತ ಮಂಜಯ್ಯನವರು, ಹಠಾತ್ ಹಾಸನದಲ್ಲಿ ಸಾವಿಗೀಡಾದರು. ಅಂದಿನ ಪದ್ಧತಿಯಂತೆ ಅಜ್ಜಿ ಮಡಿಯಾಗಬೇಕಾಯಿತು. ಉತ್ತರಾದಿ ಕ್ರಿಯೆಗಳೆಲ್ಲ ಮುಗಿದು ತಾವಿದ್ದ ಬಾಳೆಹೊನ್ನೂರಿಗೆ ತಂದೆ ತಾಯಿ ಹೊರಟುನಿಂತಾಗ ವಾಗೀಶ್ವರಿಯನ್ನು ತನ್ನ ಬಳಿ ಬಿಡುವಂತೆ ಅಜ್ಜಿ ಸುಬ್ಬಮ್ಮ ಕೇಳಿಕೊಂಡರಂತೆ. ವಾಗೀಶ್ವರಿಯ ಬಳಿಕವೂ ಇನ್ನೆರಡು ಮಕ್ಕಳನ್ನು ಪಡೆದು, ದೊಡ್ಡದಾದ ಸಂಸಾರ ಸಂಭಾಳಿಸಬೇಕಾಗಿ ಬಂದ ಅನ್ನಪೂರ್ಣಮ್ಮ ಈ ಸೂಚನೆಗೆ ಒಪ್ಪಿಕೊಂಡರು.

ಸುಬ್ಬಮ್ಮ ತುಂಬ ಒಳ್ಳೆಯ ಹಾಡುಗಾತಿಯಾಗಿದ್ದರು. ಅಪರೂಪದ ಬಹಳಷ್ಟು ಹಾಡುಗಳು, ಹಾಡುಗಬ್ಬಗಳು ಅವರಿಗೆ ಕಂಠಸ್ಥವಿದ್ದವು. ಎಲ್ಲ ವಿಶೇಷ ಪ್ರಸಂಗಗಳಲ್ಲಿ ನೆರೆಕೆರೆಯಲ್ಲೆಲ್ಲ ಹಾಡಿ ಜನರನ್ನು ನಲಿಸುತ್ತಿದ್ದವರು ಈಗ ಮನೆಯ ಮೂಲೆ ಸೇರುವಂತಾಗಿತ್ತು. ತನ್ನ ವಿಕೇಶಿತನದ ವಿದ್ರೂಪ, ಎಳೆಯ ವಾಗೀಶ್ವರಿಗೆ ರೂಢಿಯಾದ ಬಳಿಕ ಹಾಡುಗಳನ್ನು ಹೇಳಿ ಕೊಡಲಾರಂಭಿಸಿದರು, ಹಾಡುವ ಅದಮ್ಯ ಆಸೆಯನ್ನು ಮೊಮ್ಮಗಳಲ್ಲಿ ಸೂರೆಗೊಂಡರು, ಯಕ್ಷಗಾನರೂಪದಲ್ಲಿದ್ದ 'ಬಬ್ರುವಾಹನ ಕಾಳಗ'ವೆಂಬ ದೀರ್ಘಕಾವ್ಯವನ್ನು ಕೊಂಚಕೊಂಚವಾಗಿ ತಿಳಿಸಿ, ಸಂಪೂರ್ಣವಾಗಿ ಹಾಡಲು ಕಲಿಸಿದರು. ಕಿವಿಗೊಟ್ಟು ಕೇಳುವ, ಕೇಳಿದ್ದನ್ನು ಮನನ ಮಾಡುವ ಕಲೆಯನ್ನು ಅಜ್ಜಿ ಚಿಕ್ಕಂದಿನಲ್ಲೆ ಮೈಗೂಡಿಸಿದರು. ಜ್ಞಾಪಕಶಕ್ತಿಯನ್ನೂ ಹೆಚ್ಚುವಂತೆ ಮಾಡಿದ ಅಜ್ಜಿ, ನಿಜಕ್ಕೂ ಉತ್ತಮ ಶಿಕ್ಷಕಿಯಾಗಿದ್ದರು ಎನ್ನುತ್ತಾರೆ ವಾಗೀಶ್ವರಿ.

ಮನೆಯಲ್ಲಿ ಕ್ರಮವಾಗಿ ಕಲಿತ ಹಾಡುಗಾರಿಕೆಯಿಂದ ಪ್ರಾಥಮಿಕ ಶಾಲೆಯಲ್ಲಿ ಮೇಲುವರ್ಗದ ಇತರ ಹುಡುಗಿಯರಿಗಿಂತ ಸಾಕಷ್ಟು ಮುಂದಿದ್ದರು. ತನಗಿಂತ ಎಷ್ಟೋ ದೊಡ್ಡ ವಯಸ್ಸಿನ, ಮೇಲಿನ ವರ್ಗದ ವಿದ್ಯಾರ್ಥಿನಿಯರನ್ನು ಮೀರಿಸಿದ ಅವರಿಗೆ ಬಳಪದ ಪೆಟ್ಟಿಗೆ ಮೊದಲ ಬಹುಮಾನವಾಗಿ ಬಂದಿತು!

ವಾಗೀಶ್ವರಿ ತನ್ನ ಏಳನೆಯ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡರು. ಐದು ಹೆಣ್ಣು, ಒಂದು ಗಂಡು ಮಗುವನ್ನು ಬೆಳೆಸುವ ದೊಡ್ಡ ಹೊಣೆ ಸುಬ್ಬಮ್ಮನವರ ಮೇಲೆ ಬಿತ್ತು. ಇಷ್ಟಿದ್ದರೂ ಎಲ್ಲ ಹೆಣ್ಣುಮೊಮ್ಮಕ್ಕಳಿಗೆ ಅವರ ಶಾರೀರದ ಗುಣಧರ್ಮದ ಪ್ರಕಾರ ಬೇರೆ ಬೇರೆ ಹಾಡುಗಳನ್ನು ಕಲಿಸಿದರು. ವ್ರತ ಕತೆಗಳು, ಪೂಜೆ-ಪುನಸ್ಕಾರಗಳು, ಹೂ ಮುಡಿಸುವ, ಬಳೆ ತೊಡಿಸುವ, ಬೇರೆ ಬೇರೆ ಹಬ್ಬಗಳಲ್ಲಿ ದೇವತೆಗಳನ್ನು ಅರ್ಚಿಸುವ, ಹಾಡುಗಳನ್ನು ತೆಲುಗು, ಕನ್ನಡ ಭಾಷೆಗಳಲ್ಲಿ ಕಲಿಸಿದರು. ಅಕ್ಕಂದಿರಿಗೆ ಕಲಿಸಿದವುಗಳನ್ನೆಲ್ಲ ಎಳೆಯ ವಾಗೀಶ್ವರಿ ತನ್ನವನ್ನಾಗಿಸಿಕೊಂಡಳು.

ಏಕಾದಶಿ, ಶಿವರಾತ್ರಿ, ಋಷಿ ಪಂಚಮಿ ಮುಂತಾದ ಜಾಗರಣೆಯ ಸಂದರ್ಭಗಳಲ್ಲಿ ಹಾಡುವ ಹಾಡುಗಳೂ ವಾಗೀಶ್ವರಿಗೆ ಕಂಠಸ್ಥವಾದವು.

ಅವಕ್ಕೆಲ್ಲ ತಿಳಿಯಾಗಿ ವ್ಯಾಖ್ಯಾನವನ್ನು ಸುಬ್ಬಮ್ಮ ಕೊಡಮಾಡಿ ವಠಾರದ ಹೆಂಗಳೆಯರಿಗೆಲ್ಲ ಅಚ್ಚುಮೆಚ್ಚಾಗಿದ್ದರು. ಅಂದಿನ ದಿನಗಳಲ್ಲಿ ಹೆಚ್ಚಿನ ಹೆಂಗಳೆಯರಲ್ಲೆಲ್ಲ ಅಚ್ಚುಮೆಚ್ಚಾಗಿದ್ದರು. ಸುಬ್ಬಮ್ಮ ಕಲಿಸಿ ಕೊಡಮಾಡಿ ವಠಾರದ ಹೆಂಗಸರೆಲ್ಲ ಆ ಹಾಡುಗಳನ್ನು ಬಲ್ಲವರಾಗಿದ್ದರು. ಕಿರಿಯರು ಆಸಕ್ತಿಯಿಂದ ಕಲಿಯುತ್ತಿದ್ದರು. ಸಮೂಹಗಾನದ ಸಂದರ್ಭಗಳು ಸತ್‌ಕಾಲಕ್ಷೇಪದ, ಜ್ಞಾನ ಪ್ರಸಾರದ ಅವಕಾಶಗಳಾಗಿದ್ದವು. ಹದಿನಾಲ್ಕನೆಯ ವಯಸ್ಸಿನವರೆಗೆ ವಾಗೀಶ್ವರಿಗೆ ಹಾಡುಗಾರಿಕೆ-ಸಂಗೀತಾಭ್ಯಾಸಗಳು ಒದಗಿ ಬಂದವು. ಲೋಯರ್ ಸೆಕೆಂಡರಿವರೆಗೆ ಶಿಕ್ಷಣವೂ ದೊರೆಯಿತು. ಆಗಲೇ ಅವರ ವಿವಾಹವೂ ಜರುಗಿತು. ಗೃಹಿಣಿ ಪಟ್ಟದೊಂದಿಗೇ ತಾಯ್ತನದ ಪದವಿಬಂದದ್ದು ಒಂದು ವಿಶೇಷ !

ಅರಮನೆ ವಿದ್ವಾಂಸರಾಗಿದ್ದ, ಹರಿಕಥಾ ವಿದ್ವಾನ್ ಕೋಣನೂರು ಶ್ರೀಕಂಠಶಾಸ್ತ್ರೀಗಳ ಮಗ ರಾಮಕೃಷ್ಣಶಾಸ್ತ್ರಿಗಳು, ಹೆಂಡತಿಯನ್ನು ಕಳೆದುಕೊಂಡಿದ್ದರು. ಮೂರುತಿಂಗಳ ಮಗು ಇಂದಿರಾಗೆ ವಾಗೀಶ್ವರಿ ಈಗ ತಾಯಿಯಾದರು. ರಾಮಕೃಷ್ಣಶಾಸ್ತ್ರಿಗಳ ಕುಟುಂಬದಲ್ಲಿ ಸಂಗೀತ-ಸಾಹಿತ್ಯಗಳ ನಿತ್ಯಾರಾಧನೆ ನಡೆಯುತ್ತಿತ್ತು. ಪತಿ ಮಿಡ್ಲಸ್ಕೂಲು ಶಿಕ್ಷಕರಾಗಿದ್ದು, ಆಗಾಗ ಚಿಕ್ಕ ಊರುಗಳಿಗೆ ವರ್ಗವಾಗುತ್ತಿತ್ತು. ಪತ್ನಿಯ ಪ್ರತಿಭೆಯ ಅರಿವು ಇದ್ದರೂ ಶಾಲಾ ಶಿಕ್ಷಣ ಕೊಡಿಸಲು ಅಂದಿನ ಸಾಮಾಜಿಕ ಪರಿಸರವಿನ್ನೂ ಪಕ್ವವಾಗಿರಲಿಲ್ಲ. ಮನೆಯಲ್ಲೇ ವಾಗೀಶ್ವರಿಯು ಸಂಗೀತಾಭ್ಯಾಸದಲ್ಲಿ ತೃಪ್ತಿಕಾಣಬೇಕಾಯಿತು.

ಸುದೈವದಿಂದ ಶಾಸ್ತ್ರಿಗಳ ಕುಟುಂಬ ವಿದ್ವಾಂಸರದು. ಶ್ರೀಕಂಠ ಶಾಸ್ತ್ರಿಗಳಿಗೆ ಉತ್ತಮವಾದ ಸಂಗೀತ ತರಬೇತಿ ದೊರೆತಿತ್ತು. ಜೊತೆಗೆ ಸಂಸ್ಕೃತ, ತೆಲುಗು, ಕನ್ನಡ ಭಾಷೆಗಳಲ್ಲಿ ಉತ್ತಮ ಪರಿಶ್ರಮವಿದ್ದು ತನ್ನ ಇಬ್ಬರು ಮಕ್ಕಳಿಗೂ ಅವುಗಳಲ್ಲಿ ತರಬೇತಿ ನೀಡಿದ್ದರು. ವಾಗೀಶ್ವರಿಯ ಅತ್ತೆಯಂತೂ ಸಂಪ್ರದಾಯದ ಹಾಡುಗಳ ದೊಡ್ಡಗಣಿಯಾಗಿದ್ದರಂತೆ! ಜಾನಪದ ತ್ರಿಪದಿಗಳನ್ನು ಸುಸ್ವರದಲ್ಲಿ ಹಾಡಿ ಅವರಂತೆ ಅರ್ಥೈಸುವವರೇ ಇರಲಿಲ್ಲ. ಅದಾಗಲೇ ಅಜ್ಜಿಯಿಂದ ಕಲಿತ ಸಂಗ್ರಹಕ್ಕೆ ಇನ್ನಷ್ಟು ಹಾಡುಗಳನ್ನು ವಾಗೀಶ್ವರಿ ಧಾರಾಳವಾಗಿ ಸೇರ್ಪಡೆ ಮಾಡಿದರು. ಮನೆ ವಾಳ್ತೆಯ ಹಬ್ಬ, ಹರಿದಿನಗಳ ಸಂದರ್ಭದಲ್ಲಿ ಹಾಡುವ ಯಾವತ್ತೂ

ಹಾಡುಗಳನ್ನು ತಮ್ಮವನ್ನಾಗಿಸಿದರು. ಮನೆಯಲ್ಲಿ ನಡೆಯುತ್ತಿದ್ದ ಸಂಗೀತ-ಸಾಹಿತ್ಯ ಸಲ್ಲಾಪ-ಚರ್ಚೆಗಳನ್ನು ಮನಸ್ಸುಗೊಟ್ಟು ಕೇಳುತ್ತಲೇ ಸಾಕಷ್ಟು ಸಂಸ್ಕೃತ ಶ್ಲೋಕಗಳನ್ನು ಗಾದೆ ಮಾತುಗಳನ್ನು ಸಂಗೀತದ ವಿವಿಧ ಮಟ್ಟುಗಳನ್ನು, ತಾಳವಿಧಾನಗಳನ್ನು ಅರಿತರು. ಜನ್ಮತಃ ಪಡೆದ ಬಲವಾದ ಜ್ಞಾಪಕಶಕ್ತಿ, ಸೂಕ್ಷ್ಮ-ಗ್ರಹಣಶೀಲತೆಗಳು, ಅವರ ಸಹಾಯಕ್ಕೆ ಬಂದವು.

ಕ್ರಮೇಣ ವಾಗೀಶ್ವರಿ ಐದು ಹೆಣ್ಣು ಮಕ್ಕಳು ಮೂರು ಗಂಡು ಮಕ್ಕಳ ತಾಯಾದರು. ತುಂಬು ಸಂಸಾರ, ಸೀಮಿತ ಆದಾಯ, ಅನಿಶ್ಚಿತ ವರ್ಗಾವರ್ಗಿಯ ಕಷ್ಟದ ದಿನಗಳಲ್ಲಿ ಅವರಿಗೆ ಸಾಂತ್ವನ ದೊರಕಿದ್ದು ಹಾಡುಗಾರಿಕೆಯಿಂದಲೇ! ಯಜಮಾನರ ಪ್ರೋತ್ಸಾಹ ಇದ್ದೇ ಇತ್ತು. ಅವರು ಪುರಂದರದಾಸರ ಪದಗಳ ಪುಸ್ತಕವೊಂದನ್ನು ಪತ್ನಿಗೆ ಕಾಣಿಕೆಯಾಗಿ ಕೊಟ್ಟರು. ಸುಮಾರು ಮೂರು ನೂರು ದೇವರ ನಾಮುಗಳು ವಾಗೀಶ್ವರಿಯವರಿಗೆ ಕಂಠಸ್ಥವಾದವು. ವಚನಗಳು, ತ್ರಿಪದಿಗಳು ರೂಢಿಯಾದವು. ವಾಚನಾಲಯದಿಂದ ಪುಸ್ತಕಗಳನ್ನು ತಂದು ಬಿಡುವಿದ್ದಾಗ ಓದುತ್ತಿದ್ದರು. ಮನೆ ಬಿಟ್ಟು ಹೊರಗೆ ಹೋಗಲು ದೊರೆಯದಿದ್ದರೂ ಮುಕ್ತವಾಗಿ ಹಾಡಿಕೊಳ್ಳುವ ಅವಕಾಶ ಧಾರಾಳವಾಗಿತ್ತು. ಮಕ್ಕಳೆಲ್ಲ ಎಳೆತನದಿಂದಲೇ ಸಂಗೀತ, ಸಾಹಿತ್ಯಾಸಕ್ತಿಯ ವಾತಾವರಣದಲ್ಲಿ ಬೆಳೆದರು. ಎಲ್ಲ ಮಕ್ಕಳು ಶಾಲೆ-ಕಾಲೇಜುಗಳ ಓದಿನಲ್ಲಿ ಮುಂದಾಗಿಯೇ ಇದ್ದದ್ದು ತಾಯ್ತಂದೆಗಳಿಗೆ ದೊಡ್ಡ ನೆಮ್ಮದಿಯ ವಿಚಾರವಾಗಿತ್ತು.

ಚಿಕ್ಕ ಚಿಕ್ಕ ಊರುಗಳ ವಾಸ್ತವ್ಯದಿಂದ, ಆಯಾ ಪ್ರದೇಶದ ಸಾಂಸ್ಕೃತಿಕ ಹಿನ್ನೆಲೆಯನ್ನು ಅರಿಯಲು ಸಹಾಯವಾಯಿತು ಎನ್ನುವದು ವಾಗೀಶ್ವರಿ ಅವರ ಅಭಿಪ್ರಾಯ. ಕುಣಿಗಲ್, ಗುಬ್ಬಿ, ಕೃಷ್ಣರಾಜನಗರ, ಅರಸೀಕೆರೆ, ಗೊರೂರುಗಳಲ್ಲೆಲ್ಲ ಶಾಲಾಮಕ್ಕಳಿಗೆ ಹಾಡು ಕಲಿಸುವದು, ನಾಟಕ ಹೊಂದಿಸುವದು ಮೊದಲಾದ ವಿಚಾರಗಳಲ್ಲಿ ಪತಿಗೆ ಬೆಂಬಲವಾದರು. ದೈವಭಕ್ತಿ ಹೆಚ್ಚುತ್ತ ಹೋಯಿತು. ಮೊದಲು ಹಾಡು ಕಲಿಯಲು ಕೇವಲ ಆಸಕ್ತಿ ಇದ್ದದ್ದು, ಪ್ರೌಢಾವಸ್ಥೆಯಲ್ಲಿ ಭಗವಂತನನ್ನು ಅರಿಯುವ ಮಾರ್ಗವಾಗಿ ಪರಿಣಮಿಸಿತು. ಗೊರೂರಿನಲ್ಲಿದ್ದಾಗ, ಗೊರೂರು ರಾಮಸ್ವಾಮಿ ಅಯ್ಯಂಗಾರರ ಮನೆಯಲ್ಲಿ ಮಹಿಳೆಯರಿಗೆ ಕಾವ್ಯವಾಚನ ನಡೆಸುತ್ತಿದ್ದ ಸಂದರ್ಭಗಳನ್ನು ವಾಗೀಶ್ವರೀ ನೆನಪಿಸಿಕೊಳ್ಳುತ್ತಾರೆ. ಯಾವ

ಊರಿನಲ್ಲಿದ್ದರೂ ಪಂಗಡ-ಪಂಥಗಳ ಭೇದಮಾಡದೇ ಅವರ ಹಾಡುಗಾರಿಕೆಗೆ ಬೇಡಿಕೆ-ಮೆಚ್ಚಿಗೆಗಳು ಬರುತ್ತಿದ್ದವು. ಕ್ರಮೇಣ ರಾಮಾಯಣದ ಸುಂದರಕಾಂಡ, ಭಗವದ್ಗೀತಾ ವಾಚನಗಳನ್ನೂ ರೂಢಿಸಿಕೊಂಡರು. ತಮ್ಮ ಮಕ್ಕಳಿಗೆಲ್ಲ ಉಚ್ಚವಿದ್ಯಾಭ್ಯಾಸ ಕೊಡಿಸುವ ಸಂಕಲ್ಪ ಪೂರ್ಣವಾಯಿತು. ಎಲ್ಲರೂ ಸ್ನಾತಕೋತ್ತರ ಪದವಿಗಳನ್ನು ಪಡೆದರು. ಹೆಣ್ಣು ಮಕ್ಕಳನ್ನು ನೌಕರಿಗೆ ಕಳಿಸುವ ಧೈರ್ಯ ತೋರಿದರು. ಅದಕ್ಕೂ ಮೊದಲು ಅವರ ಮನೆತನದಲ್ಲಿ ಯಾರೂ ಈ ಸಾಹಸ ಮಾಡಿರಲಿಲ್ಲ. ಈಗ ದೇವಾಲಯಗಳಲ್ಲಿ ವಿಶೇಷ ಸಂದರ್ಭಗಳಲ್ಲಿ ಹಾಡುಗಾರಿಕೆಯಿಂದಾಗಿ ಜನರಿಗೆ ತುಂಬ ಹತ್ತಿರವಾದರು.

ಬರಹಗಾತಿಯಾಗಿ :

ಹಾಡುಗಾರಿಕೆ, ಪ್ರವಚನ, ವ್ಯಾಖ್ಯಾನಗಳನ್ನೆಲ್ಲ ಉಸಿರಾಡಿಸಿದಷ್ಟು ಸುಲಭವಾಗಿ ಮೈಗೂಡಿಸಿಕೊಂಡ ವಾಗೀಶ್ವರಿಯವರ ಪ್ರತಿಭೆಯ ಇನ್ನೊಂದು ಆಯಾಮ ಪ್ರಕಟವಾಗುವ ಸಮಯ ಒದಗಿಬಂದಿತು. ಇವರ ಬಳಿಯಿದ್ದ ಅಪೂರ್ವ ಹಾಡುಗಳ ಭಂಡಾರವನ್ನು ಗಮನಿಸಿದ ಕನ್ನಡ ಪ್ರಾಧ್ಯಾಪಕ, ಜಿ. ಅಶ್ವತ್ಥನಾರಾಯಣ ಅವರು, ಅವನ್ನು ಬರೆದಿಡಿ ಎಂದು ಹೇಳುತ್ತಲೇ ಇದ್ದರು. ಅದಾಗಲೇ ವಾಗೀಶ್ವರಿ, ಹಲವಾರು ಪತ್ರಿಕೆಗಳಿಗೆ ಲೇಖ ಬರೆದಿದ್ದರು. ಬೆಂಗಳೂರಿನಲ್ಲಿ ನೆಲೆಸಿದ ಬಳಿಕ, ಆಕಾಶವಾಣಿಯಲ್ಲಿ ತಪ್ಪುತಪ್ಪಾಗಿ ಪ್ರಸಾರವಾಗುತ್ತಿದ್ದ ಸಂಪ್ರದಾಯದ ಹಾಡುಗಳನ್ನು ಕೇಳುತ್ತ, ನೋವು-ಕ್ರೋಧಗಳು ಹೆಚ್ಚುತ್ತ, ತನ್ನಲ್ಲಿದ್ದ ಹಾಡಿನ ಸಂಗ್ರಹಕ್ಕೊಂದು ವ್ಯವಸ್ಥಿತ ರೂಪಕೊಡಲು ನಿಶ್ಚಯಿಸಿದರು.

ಬೆಂಗಳೂರಿನ ಗಾಯನ ಸಮಾಜದ ೧೨ ನೇ ಸಂಗೀತ-ಸಮ್ಮೇಳನದಲ್ಲಿ ಸಂಪ್ರದಾಯ ಹಾಡುಗಳ ಬಗ್ಗೆ ವಾಗೀಶ್ವರಿಯವರು ಮಾಡಿದ ಸೋದಾಹರಣ ಭಾಷಣ ಹೆಚ್ಚು ವಿದ್ವಜ್ಜನರು ಹಾಗೂ ಆಸಕ್ತರಿಗೆ ತಲುಪುವಂತಾಯಿತು. ಅಲ್ಲಿ ದೊರೆತ ಪ್ರೋತ್ಸಾಹ-ಮೆಚ್ಚಿಕೆಗಳಿಂದ, ಆತ್ಮವಿಶ್ವಾಸ ಬೆಳೆದು, ಹೊಸ ಹುರುಪು ಕಾಣಿಸಿಕೊಂಡಿತು. ಬಿಡುವಿನ ವೇಳೆಯಲ್ಲಿ ಕುಳಿತು ನೆನಪಿದ್ದ ಹಾಡುಗಳನ್ನೆಲ್ಲ ಬರೆಯಲಾರಂಭಿಸಿದರು. ಇಪ್ಪತ್ತು ದೊಡ್ಡ ನೋಟ್‌ಬುಕ್‌ಗಳು ತುಂಬಿ ಹೋದವು! ಅವನ್ನು ಆರು ವಿಭಾಗಗಳಲ್ಲಿ ವ್ಯವಸ್ಥಿತವಾಗಿ ಹಂಚಿ, ತಾನು ಕಂಡುಂಡ ಅನುಭವಗಳ ಹಿನ್ನೆಲೆಯ,

ಅಜ್ಜಿಯಿಂದ ಕೇಳಿ ತಿಳಿದುಕೊಂಡ ವಿಚಾರಗಳ ಪೂರ್ವ ಪರಿಚಯ ನೀಡಿದರು. ಆಗ ಮದ್ರಾಸದಿಂದ ಪ್ರಕಟವಾಗುತ್ತಿದ್ದ 'ವನಿತಾ' ಮಾಸಪತ್ರಿಕೆ ೧೪ ತಿಂಗಳ ಕಾಲ ಅವನ್ನು ವಿವರಣೆಯೊಂದಿಗೆ ಪ್ರಕಟಿಸಿದ್ದು ಬಲುದೊಡ್ಡ ಪ್ರೋತ್ಸಾಹವಾಗಿತ್ತು. ಬಳಿಕ ಅವನ್ನೆಲ್ಲ ಪುಸ್ತಕರೂಪದಲ್ಲಿ ತರುವ ಚಪಲ ಕಾಣಿಸಿಕೊಂಡಿತು. ಈ ಪ್ರಯತ್ನದಲ್ಲಿ ಹೆಚ್ಚಿನ ರೀತಿಯಲ್ಲಿ ಸಹಕರಿಸಿ, ಅಚ್ಚುಕಟ್ಟಾಗಿ ಪ್ರತಿ ಮಾಡಿ, ಮುದ್ರಣದ ಸಿದ್ಧರೂಪ ಕೊಡಮಾಡಿದ ಯಜಮಾನರ ಸಹಾಯವನ್ನು ವಾಗೀಶ್ವರಿ ಅವರು ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಾರೆ.

ಹಸ್ತಪ್ರತಿಯೇನೋ ಸಿದ್ಧವಾಯಿತು. ಆದರೆ ಅದರ ಪ್ರಕಟನೆಗೆ ಬಂದ ಅಡ್ಡಿ, ಆತಂಕಗಳು ಅಷ್ಟಿಷ್ಟಲ್ಲ! ಜಾನಪದ ಪರಿಷತ್ತು, ಕನ್ನಡ ಸಾಹಿತ್ಯ ಪರಿಷತ್ತು, ಅಧ್ಯಯನ, ಸಂಶೋಧನ ಸಂಸ್ಥೆಗಳ, ಹಣವುಳ್ಳ ಪ್ರಕಾಶನ ಸಂಸ್ಥೆಗಳಿಗೆಲ್ಲ ಹಸ್ತಪ್ರತಿಸಹಿತ ಅಲೆದಲೆದು ವಾಗೀಶ್ವರಿ ದಣಿದರು. ಕನ್ನಡ ಲೇಖಕಿಯರ ಸಂಘಕ್ಕೆ ಆಸಕ್ತಿ ಇದ್ದರೂ, ಧನಬಲ ಎಳ್ಳಷ್ಟೂ ಇರಲಿಲ್ಲ. ಕನ್ನಡ– ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದ ಶ್ರೀ ಕಟಾವಿ ಅವರು ಹಸ್ತಪ್ರತಿಯನ್ನು ಸ್ವತಃ ಪರಿಶೀಲಿಸಿ, ಇಲಾಖೆಯಿಂದ ಪ್ರಕಟಿಸಲು ಸಹಾಯ ಮಾಡುವದಾಗಿ ಭರವಸೆಯಿತ್ತರು. ಆದರೆ ಹಠಾತ್ ನಿಧನ ಹೊಂದಿದ್ದರಿಂದ ಆ ಪ್ರಯತ್ನಕ್ಕೂ ತಡೆಯುಂಟಾಯಿತು.

ಕೊನೆಗೂ ೧೫ ಸಾವಿರ ರೂಪಾಯಿಗಳ ಸಹಾಯಧನವನ್ನು ಆ ಇಲಾಖೆಯಿಂದ ಪಡೆಯುವದರಲ್ಲಿ ವಾಗೀಶ್ವರಿ ಯಶಸ್ವಿಯಾದರು. ಆದರೆ ಅಷ್ಟೇ ಮೊತ್ತದ ಪ್ರಕಟಿತ ಪುಸ್ತಕಗಳನ್ನು ಕೊಟ್ಟು ಸಹಾಯಧನ ಪಡೆಯಬೇಕಾಗಿತ್ತು. ಕ್ಯಾನರಾಬ್ಯಾಂಕಿನಲ್ಲಿ ೫೦ ಸಾವಿರ ರೂಪಾಯಿಗಳ ಸಾಲ ಪಡೆದು, ಪುಸ್ತಕ ಪ್ರಕಟವಾದಾಗ ದೊಡ್ಡ ಯುದ್ಧವನ್ನು ಗೆದ್ದ ನೆಮ್ಮದಿ ಒದಗಿತ್ತು. ಜಾನಪದ ವಿದ್ವಾಂಸರಾಗಿದ್ದ ಜೀ. ಶಂ. ಪರಮಶಿವಯ್ಯನವರ ಮುನ್ನುಡಿ. ಎಮ್. ವಿ. ಸೀತಾರಾಮಯ್ಯ, ಗೊರೂರು, ನಿಸ್ಸಾರ್ ಅಹಮ್ಮದ್, ಚಿ.ನ. ಮಂಗಳಾ ಮೊದಲಾದ ಸಾಹಿತಿಗಳ ಮೆಚ್ಚಿಕೆಯ ನುಡಿ, ನಲ್ನುಡಿ, ಚೆನ್ನುಡಿಗಳಿಂದ "ಹೃದಯ ಸಂಪುಟ" ರಂಜಿಸುವಂತೆ ಆಯಿತು.

೩೬೬ ಹಾಡುಗಳ ೯೫೦ ಪುಟಗಳ 'ಹೃದಯ ಸಂಪುಟ', ಶಾಸ್ತ್ರದ ಹಾಡು, ಹಸೆ ಹಾಡು, ಆರತಿ, ಹಬ್ಬಗಳು, ವ್ರತಕಥೆಗಳು, ಜೋಗುಳ, ನಿತ್ಯಪಾರಾಯಣಾದಿಗಳ ಸಂದರ್ಭಗಳಿಗೂ ಹೆಂಗಳೆಯರು ಹಾಡುತ್ತಿದ್ದ ಹಾಡುಗಳನ್ನು ಒಳಗೊಂಡಿದೆ. ಎಲ್ಲ ಭಾಗಗಳಿಗೂ ಸಮರ್ಪಕ ಪೀಠಿಕೆ ಇದೆ. ಪ್ರಾಚೀನ ಕಾಲದಿಂದ ತೀರ ಇತ್ತೀಚಿನವರೆಗೆ ಉಳಿದುಬಂದಿದ್ದ ಮಹಿಳಾಲೋಕದ ಸಮಷ್ಟಿ ಜೀವನದ ನೋಟಗಳನ್ನು ವಾಗೀಶ್ವರಿ ಪರಿಚಯಿಸಿದ್ದಾರೆ. ಧಾರ್ಮಿಕ, ಸಾಮಾಜಿಕ, ಸಂದರ್ಭಗಳನ್ನೆಲ್ಲ ಹಿಂದಿನ ಮಹಿಳೆಯರು ಸಮೂಹ ಚಿಂತನೆಗೆ, ಸ್ಪಂದಿಸಲಿಕ್ಕೆ ಬಳಸಿದ್ದು, ಹಾಡುಗಳ ಮೂಲಕವೇ ದೈವಭಕ್ತಿಯ ಜೊತೆಗೆ ನೋವು ಮರೆತು ನಲಿವು ತೋರಲು ಯತ್ನಿಸಿದ್ದು ಮತ್ತು ಅದರಲ್ಲಿ ಸಫಲರಾಗಿದ್ದು ಸ್ಫುಟವಾಗಿ ಎದ್ದು ತೋರುವ ಅಂಶವಾಗಿದೆ. ಮುಕ್ಕಾಲು ಪಾಲು ಅಳಿದೇ ಹೋದವುಗಳು, ಅಳಿವಿನಂಚಿನಲ್ಲಿದ್ದ ಹಾಡುಗಳೆಲ್ಲ ವಾಗೀಶ್ವರಿಯವರ ಕಂಠದಲ್ಲಿ ಜೀವತಳೆದು ನಿಂತಿದ್ದವು. ಅವೆಲ್ಲವೂ ಕೊನೆಗೊಮ್ಮೆ ಮುದ್ರಿತರೂಪದಲ್ಲಿ ೧೯೮೫ ರಲ್ಲಿ ಹೊರಬಂದ ಈ ಬೃಹದ್ ಗ್ರಂಥದಲ್ಲಿ ಉಳಿಯುವಂತಾಯಿತು.

ಬಹುಶಃ ಕನ್ನಡದ ಎಲ್ಲ ದಿನಪತ್ರಿಕೆಗಳು, ಸಾಪ್ತಾಹಿಕಗಳು ಕೃತಿಯ ಕುರಿತು ಮೆಚ್ಚಿಗೆಯ ವಿಮರ್ಶೆ ಬರೆದವು. ವರ್ಷದ ಉತ್ತಮ ಗ್ರಂಥಗಳಲ್ಲಿ 'ಹೃದಯ ಸಂಪುಟ'ದ ಸೇರ್ಪಡೆಯಾಯಿತು. ಈ ಕೃತಿಗೆ ಕಾವ್ಯಾನಂದ ಪುರಸ್ಕಾರ, ಜಾನಪದ ಅಕಾಡೆಮಿಯ ಪುರಸ್ಕಾರ ಹಾಗೂ ೧೯೯೪ ನೇ ವರ್ಷದ ಶಾಶ್ವತಿ ಸಂಸ್ಥೆಯ 'ಕರ್ನಾಟಕ ಕಲ್ಪವಲ್ಲಿ' ಪ್ರಶಸ್ತಿಗಳು ಸಂದಿವೆ.

ಧ್ವನಿ ಸುರುಳಿಗಳಲ್ಲಿ ಸಂಪ್ರದಾಯದ ಹಾಡುಗಳನ್ನು ವಿವರಣೆಯೊಂದಿಗೆ ಹಾಡಿ, ಹಾಡಿಸಿ ಬಿಡುಗಡೆ ಮಾಡಿದ್ದು ವಾಗೀಶ್ವರಿಯವರ ಇನ್ನೊಂದು ಸಾಹಸ! ತೊಟ್ಟಿಲ ಹಾಡುಗಳು, ಚೌಲ, ಮುಂಜಿವೆಯ ಹಾಡು, ಮದುವೆಯ ಹಾಗೂ ಮದುವೆ ಮೋಜಿನವು, ಗೌರಿ, ಗಣಪನ ಹಾಡು, ಹೆಣ್ಣುಮಕ್ಕಳ ಬಯಕೆ, ಹೂಮುಡಿಸುವ, ಬಳೆತೊಡಿಸುವ, ಉಡಿ ತುಂಬುವ ವಿಧಿಗಳಿಗೆ ಸಂಬಂಧಿಸಿದವು, ಬೇರೆ ಬೇರೆ ಹಬ್ಬ, ವ್ರತಕಥೆಗಳ ಹತ್ತಿಪ್ಪತ್ತು ಧ್ವನಿ ಸುರುಳಿಗಳು ಹೊರಬಂದಿವೆ.

ವಾಗೀಶ್ವರಿಯ ವಾಗ್ಮಿತೆಗೆ ಬೇಡಿಕೆ ಹೆಚ್ಚಿತು. ಸೋದಾಹರಣ ಭಾಷಣಗಳಿಗೆ, ಉಪನ್ಯಾಸಗಳಿಗೆ ಬೇರೆ ಊರುಗಳಿಂದಲೂ ಆಮಂತ್ರಣ

ಬರಲಾರಂಭಿಸಿತು. ಆಕಾಶವಾಣಿ, ದೂರದರ್ಶನಗಳಲ್ಲೂ ಕಾರ್ಯಕ್ರಮಗಳಾದವು.

ಇದಲ್ಲದೇ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ವಾಗೀಶ್ವರಿಯವರು ಒಳ್ಳೆಯ ಕೃಷಿ ಮಾಡಿದ್ದಾರೆ! ಅಗ್ರಪಂಕ್ತಿಯ ಹರಿಕಥಾ ವಿದ್ವಾಂಸರಾಗಿದ್ದ ಕೋಣನೂರು ಶ್ರೀಕಂಠಶಾಸ್ತ್ರೀಗಳ ಜೀವನಚರಿತ್ರೆ ಬರೆದಿದ್ದಾರೆ (೧೯೯೩). ಮೈಸೂರು ಅರಮನೆಯ ವಿದ್ವಾಂಸರಲ್ಲಿಯೇ ಶಾಸ್ತ್ರೀಯಸಂಗೀತದ ಆಳವಾದ ಅಧ್ಯಯನ ನಡೆಸಿ ಹರಿಕಥಾ ಪ್ರಕಾರವನ್ನು ವೃತ್ತಿಯಾಗಿ ಕೈಕೊಂಡ ಮಹನೀಯರು ಅತ್ಯಂತ ವಿರಳರು! ಆದರೆ ಆ ಕಾಲಕ್ಕೆ ಚಲಿಸುವ ವಿದ್ಯಾಲಯದಂತಿದ್ದು ಸಂಗೀತ, ಸಾಹಿತ್ಯ, ರಂಜನೆಗಳೊಂದಿಗೆ ಸಮಸಾಮಯಿಕ ಮಾಹಿತಿ ನೀಡುವ ಬಹುಮುಖ ಪ್ರಜ್ಞಾವಂತಿಕೆ ಕೀರ್ತನಕಾರರಲ್ಲಿ ಇರುತ್ತಿತ್ತು. ಶ್ರೀಕಂಠಶಾಸ್ತ್ರಿಗಳು ಅಂಥ ಅಮೋಘ ವಿದ್ವಾಂಸರಾಗಿದ್ದರು. ವಾಗೀಶ್ವರಿ, ಅವರ ಮಾವನವರ ಚರಿತ್ರೆ ಬರೆದರೂ ವೈಯಕ್ತಿಕ ಕೋನ ಬಾರದಂತೆ ಜಾಗ್ರತೆ ವಹಿಸಿದ್ದಾರೆ. ಅಚ್ಚುಕಟ್ಟಾಗಿ ವಿಷಯವನ್ನು ವಿಭಜಿಸಿ, ಓದುಗರಿಗೆ ರಂಜಕವೆನಿಸುವ ಘಟನೆಗಳನ್ನೇ ಸೇರಿಸಿದ್ದಾರೆ. ಸ್ವಯಂಸ್ಫೂರ್ತಿಯಿಂದ ಕಥೆ-ಕವನಗಳನ್ನು ರಚಿಸುತ್ತಿದ್ದು ಚಿಟಿಕೆ ತಾಳ ಕೈಯಲ್ಲಿ ಹಿಡಿಯದೇ ಚಿಟಿಕೆ ಹಾಕಿ ಹಾಡುತ್ತಿದ್ದರೆ ಮೈಕ್ ಇಲ್ಲದ ದಿನಗಳಲ್ಲಿ ಸಾವಿರಾರು ಜನರ ಸಭೆಯಲ್ಲಿ ಕೊನೆಯ ಸಾಲಿನಲ್ಲಿ ಕುಳಿತವರಿಗೂ ಹಾಡು ಕೇಳಿಸುತ್ತಿತ್ತಂತೆ! ಪ್ರೌಢರ ಶಿಕ್ಷಣದ ಮುಖ್ಯ ಮಾಧ್ಯಮವಾಗಿದ್ದು, ಈಗ ಅಳಿವಿನ ಅಂಚಿನಲ್ಲಿದ್ದ ಶ್ರೇಷ್ಠ ಕಲೆಯೊಂದರ ಹಿಂದಿನ ಜನಪ್ರಿಯ ಪ್ರತಿನಿಧಿಯನ್ನು ಪರಿಚಯಿಸಿದ್ದು, ವಾಗೀಶ್ವರಿಯವರ ವಿಶಿಷ್ಟಕೊಡುಗೆ.

'ಸುಲಭ ಸಾಂಪ್ರದಾಯಿಕ ವಿವಾಹ' (೧೯೯೩) ವಾಗೀಶ್ವರಿ ಅವರ ಒಂದು ಗಮನಾರ್ಹ ವೈಚಾರಿಕ ಕೃತಿ. ಮಧ್ಯಮ ಹಾಗೂ ಕೆಳ ಮಧ್ಯಮ ವರ್ಗಕ್ಕೆ ಭಯಾನಕ ಸಮಸ್ಯೆಯಾಗಿ ಪರಿಣಮಿಸಿದ ಹೆಣ್ಣುಮಕ್ಕಳ ವಿವಾಹ ಪದ್ಧತಿಯ ಚಾರಿತ್ರಿಕ ಹಿನ್ನೆಲೆಯನ್ನು ಸ್ವಾನುಭವದ ಚಿಂತನೆಯೊಂದಿಗೆ ಬೆರೆಸಿ ಚರ್ಚಿಸಿದ್ದಾರೆ. ಸಾಂಪ್ರದಾಯಿಕ ವಿವಾಹಗಳನ್ನು ಆತಂಕ ಗೊಂದಲಗಳಿಲ್ಲದೇ ನಡೆಸಲು ಹೇಗೆ ಸಾಧ್ಯ? ಎಂಬುದರ ಕುರಿತು ವ್ಯಾವಹಾರಿಕ ಸಲಹೆಗಳನ್ನು ಕೊಟ್ಟಿದ್ದಾರೆ. ವಿವಾಹವಿಧಿಗಳೆಲ್ಲ ಅತಿ

ಪುರಾತನವಿದ್ದರೂ ಕೆಲವು ಮಂತ್ರಾರ್ಥಗಳು ನಂತರದ ಯುಗದ ಪ್ರಕ್ಷೇಪಗಳು ಎಂದು ಸರಿಯಾಗಿಯೇ ಊಹಿಸಿದ್ದಾರೆ. ಮಂತ್ರಾರ್ಥಗಳ ತಾತ್ಪರ್ಯ ಕೊಡುತ್ತ, ವರೋಪಚಾರ, ವರಪೂಜೆ, ವರದಕ್ಷಿಣೆಗಳೆಲ್ಲ ಇತ್ತೀಚೆಗೆ ಬೆಳೆದು ಬಂದ ದುಷ್ಪಪದ್ಧತಿಗಳೆನ್ನುತ್ತಾರೆ.

ಈಗಿನ ಕೆಲವು ವಧುಮಣಿಗಳೂ ಹೆಚ್ಚೆಚ್ಚು ಆಸೆಬುರುಕತನ ತೋರುತ್ತಿದ್ದಂತೆ, ಉಳ್ಳವರು ಬಳುವಳಿಯ ಸಾಮಾನುಗಳನ್ನೆಲ್ಲ ಸಾರ್ವಜನಿಕವಾಗಿ ಪ್ರದರ್ಶಿಸಿ ತಮ್ಮ ಪ್ರತಿಷ್ಠೆಮೆರೆಸುವದನ್ನು ನೋವಿನೊಂದಿಗೆ ಗಮನಿಸಿದ್ದಾರೆ. ಮದುವೆ, ಅತ್ಯಂತ ಖಾಸಗೀ ಪದ್ಧತಿಯಾಗಿ ಬೆಳೆದು ಬರಬೇಕು ಎನ್ನುವದು ಅವರ ಅಭಿಪ್ರಾಯ. ಕಡು ಸಂಪ್ರದಾಯವಂತೆಯೊಬ್ಬಾಕೆ, ಸಂಪ್ರದಾಯಗೀತೆಗಳನ್ನು ರಕ್ಷಿಸಲು ಹೆಣಗಿದಾಕೆ, ಬದಲಾದ ವಾತಾವರಣದಲ್ಲಿ ಪ್ರಜ್ಞಾವಂತೆಯಾಗಿ ಬೆಳಗಬಲ್ಲಳು ಎಂಬುದನ್ನು ಸ್ವತಃಸಿದ್ಧ ನಿದರ್ಶನವಾಗಿಸಿದ್ದಾರೆ.

ಹಲವಾರು ಸಾಮಯಿಕತೆ ಕಳೆದುಕೊಂಡ ವಿವಾಹವಿಧಿಗಳನ್ನು ಸಲೀಸಾಗಿ ಕೈಬಿಡಲು ಸಾಧ್ಯ ಎಂದೂ ಸೂಚಿಸಿದ್ದಾರೆ!

ವಾಗೀಶ್ವರಿಯವರ ಸುಲಭವಿವಾಹದ ಮನದಾಶಯ, ಸಹಸ್ರಾರು ಜಾಗೃತ ಪಾಲಕರ ಮನದಾಶಯವೇ ಆಗಿದೆ. ಆದರೆ ಸಾಮಾಜಿಕ ಸ್ಪರ್ಧೆ, ತೀವ್ರವಾಗುತ್ತಿರುವ ದಿನಗಳಲ್ಲಿ ಸರಳ ಮದುವೆ ಮಾಡಿಕೊಡಲು ಹಲವರು, ಮಾಡಿಕೊಳ್ಳಲು ಕೆಲವರು ಸಿದ್ಧರಿದ್ದರೂ ಸಾಮಾಜಿಕ ಒತ್ತಡಗಳು ಹಾಗಾಗದಂತೆ ಮಾಡುತ್ತವೆಂದು ಪ್ರತಿದಿನವೂ ನೋಡುತ್ತಿರುತ್ತೇವೆ! ಅನೇಕ ವಿವಾಹವಿಧಿಗಳನ್ನು, ಶಾಸ್ತ್ರಕ್ರಮಗಳನ್ನು ಸರಳವಾಗಿ ವಿವರಿಸಿದ್ದರಿಂದ ಅವನ್ನು ಅರಿಯಲು ಬಯಸುವವರಿಗೆ ಇದು ಉತ್ತಮ ಕೈಪಿಡಿಯಾಗಿದೆ.

ಅನುಬಂಧ ಭಾಗದಲ್ಲಿ ಮನೆ ದೇವರು, ಸಪ್ತಪದಿ, ಆರುಂಧತಿ ಕುರಿತಾದ ವಿಚಾರಗಳು ಉಪಯುಕ್ತವಾಗಿವೆ. ವಿವಾಹಕಾಲದಲ್ಲಿ ಕೇವಲ ಯಾಂತ್ರಿಕವಾಗಿ ಪುನರುಚ್ಚರಿಸುವ ಸಪ್ತಪದಿ ಮಂತ್ರವಿಧಿಯನ್ನು ವಿಶ್ಲೇಷಿಸಿದಂತೆ, ಆರುಂಧತಿ ದರ್ಶನ ವಿಧಿಯ ಹಿಂದಿದ್ದ ಸುಭದ್ರ ದಾಂಪತ್ಯದ ಆಶಯವನ್ನು ಅಜ್ಞಾತ ಕನ್ನಡ ಕವಿಯೊಬ್ಬಾತನ ರಚನೆಯನ್ನು ಬೆಳಕಿಗೆ ತರುವದರ ಮೂಲಕ ಸೊಗಸಾಗಿ ವಿವರಿಸಿದ್ದಾರೆ.

೧೯೯೫ ರಲ್ಲಿ ಪ್ರಕಟವಾದ 'ಚಿತೆಯಿಂದ ಚಿಂತೆಗೆ' ಕೂಡ ಅವರ ಪಾರಂಪರಿಕ ಹಾಗೂ ಆಧುನಿಕ ವಿಚಾರಗಳ ಸಮತೋಲವನ್ನು ಎತ್ತಿ ಹಿಡಿಯುತ್ತದೆ. ತೀರ ಪ್ರಾಚೀನ ಯುಗದಲ್ಲಿ ವಿಧವೆಯರಿಗಿದ್ದ ಸ್ವಾತಂತ್ರ್ಯ-ನೆಮ್ಮದಿಗಳು ಯುಗಯುಗದಲ್ಲಿ ಮಾಯವಾಗಿ ಹೋದ ಬಗೆಯನ್ನು ವಿಶ್ಲೇಷಿಸಲು ಯತ್ನಿಸಿದ್ದಾರೆ. ಹಾಗಾಗಲು ಚಾರಿತ್ರಿಕ ಕಾರಣಗಳನ್ನು ಕಂಡುಹಿಡಿಯಲೂ ಪ್ರಯತ್ನ ಮಾಡಿದ್ದಾರೆ. ಸಾಮಾಜಿಕ ಅರಕ್ಷಿತತೆ, ಮುತ್ತೈದೆ ಸಾವಿಗೆ ಕಲ್ಪಿಸಿದ ಕೃತ್ರಿಮ ಪ್ರತಿಷ್ಠಿತ ಸ್ಥಾನದಿಂದಾಗಿ ದುರ್ದೈವಿ ಮಹಿಳೆಯರಲ್ಲಿ ಕೀಳರಿಮೆ ಬೆಳೆಯಲು ಅವಕಾಶವಾಯಿತು ಎಂದಿದ್ದಾರೆ. ಗಾದೆಮಾತು. ನಾಣ್ಣುಡಿ. ಜಾಣ್ಣುಡಿಗಳನ್ನು ಧಾರಾಳವಾಗಿ ಬಳಸಿದ್ದಾರೆ. ಈ ಲೋಕೋಕ್ತಿಗಳೇ ಜನಮನದಲ್ಲಿ ಆಳವಾಗಿ ಬೇರು ಬಿಟ್ಟು ನಮ್ಮ ಸಮಾಜದಲ್ಲಿ ಅನಿಷ್ಟಗಳು ಹೆಚ್ಚುತ್ತ ಹೋಗಲು ಕಾರಣವಾದದ್ದೂ ನಿಜ!

ಆಧುನಿಕ ಮಹಿಳೆಯರಲ್ಲಿ ರಾಜಕೀಯವಾಗಿ. ಸಾಮಾಜಿಕವಾಗಿ ಕೊಂಚ ಬದಲಾವಣೆ ಕಂಡುಬಂದರೂ ಧಾರ್ಮಿಕವಾಗಿ ಹಳೆ (ಮೂಢ) ನಂಬಿಕೆಗಳೇ ಮುಂದುವರಿದು ಬಂದದ್ದನ್ನು ಬಟ್ಟು ಮಾಡಿ ತೋರಿಸಿದ್ದಾರೆ. ವಿಧವೆಯರ ಬಗ್ಗೆ, ಸಕೇಶಿ ವಿಧವೆಯರ ಬಗ್ಗೆ ಸಾಮಾನ್ಯ ಜನತೆಯ, ಮಠಮಾನ್ಯತೆಯ ತಾತ್ಸಾರ ಭಾವನೆ ಹಾಗೇ ಉಳಿದದ್ದು ಧಾರ್ಮಿಕ ದುರಂತವೆನ್ನುತ್ತಾರೆ. ದೃಶ್ಯಮಾಧ್ಯಮಗಳಲ್ಲಿ ಕೂಡ ವಿಧವೆಯರನ್ನು ತಟ್ಟನೆ ಗುರುತಿಸುವಂತೆ ವೇಷ-ಭೂಷಣಗಳನ್ನು ಅಳವಡಿಸಿದ ಬಗೆಯನ್ನು ಖಂಡಿಸುತ್ತಾರೆ. ಸ್ವತಃ ಮಹಿಳೆಯರಲ್ಲಿ ಈ ಕುರಿತಾದ ಏಕಾಭಿಪ್ರಾಯದ ಕೊರತೆ. ಸಮಾಜದ ನಿರ್ಲಕ್ಷ್ಯಗಳ ಕುರಿತು ವಾಗೀಶ್ವರಿಯವರಿಗೆ ಹೆಚ್ಚಿನ ನೋವಿದೆ. ವೈಧವ್ಯದ ಬಲಾತ್ಕಾರದ ಬಾಹ್ಯಾಚಾರಣೆಗಳನ್ನು ಖಂಡಿಸಿದ್ದೇ ಅಲ್ಲದೇ ಸತ್ವಃ ಅವನ್ನು ಪಾಲಿಸದೇ ಇರುವ ಹಿರಿಮೆ ಅವರದು. "ಶುದ್ಧ ಸಂಪ್ರದಾಯಸ್ಥಳಾದ ನಾನು ನನ್ನ ವೈಧವ್ಯವನ್ನು ಕನಸುಮನಸಿನಲ್ಲಿಯೂ ಎಣಿಸಿರಲಿಲ್ಲ. ಯಾವ ಹಿಂದೂ ಸ್ತ್ರೀಯೂ ವೈಧವ್ಯವನ್ನು ಬಯಸಳು.... ನನ್ನ ಬಯಕೆಯೂ ಸಹ ಮುತ್ತೈದೆ ಸಾವಿನತ್ತಲೇ ಹರಿದಿತ್ತು..... ೮೫ ವರ್ಷಗಳ ಪೂರ್ಣಾಯುಸ್ಸು ಬಾಳಿ ಕರ್ತವ್ಯಗಳನ್ನೆಲ್ಲ ಪೂರೈಸಿ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳನ್ನೆಲ್ಲ ಕಂಡು ಸುಖವಾಗಿ ಸಾವನ್ನು ಅಪ್ಪಿದ ನನ್ನವರ ಬಗ್ಗೆ ಅಪಾರಗೌರವ, ಭಕ್ತಿ ಇದ್ದು, ಅವರ ಸಾವು ಸಹಜವೆನಿಸಿದರೂ

ತಪ್ಪಿದ ಮುತ್ತೈದೆಭಾಗ್ಯ ನನ್ನನ್ನು ಕಂಗೆಡಿಸಿತು" ಎಂದು ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ.

ಆದರೆ ಸ್ವಭಾವತಃ ಸ್ಪಂದನಶೀಲೆಯಾಗಿರುವ ವಾಗೀಶ್ವರಿ, ತುಂಬ ವರ್ಷಗಳಿಂದ ಹಿಂದೂ ನಾರಿಯ ಈ ದುಃಸ್ಥಿತಿಯ ಕುರಿತು ಯೋಚಿಸುತ್ತಲೇ ಬಂದಿದ್ದಾರೆ. ಈಗ ಸ್ವಂತದ ವಿಯೋಗ, ಅವರ ವ್ಯಾಪಕ ಚಿಂತನವನ್ನು ಒರೆಗೆ ಹಚ್ಚಿ ಪರೀಕ್ಷಿಸುವ ಸಂದರ್ಭ ಒದಗಿಸಿತು. ಹಿಂದಿನ, ಇಂದಿನ ಮುಂದೊದಗಬಹುದಾದಂಥ ಬದಲಾವಣೆ ಕುರಿತಾದ ಅನಿಸಿಕೆಗಳನ್ನು ಓದುಗರೊಂದಿಗೆ ಹಂಚಿಕೊಂಡಿದ್ದಾರೆ.

ಈ ಪುಸ್ತಕವನ್ನು ಬಾಳ ಸಂಗಾತಿ ಕೋಣನೂರು ರಾಮಕೃಷ್ಣ ಶಾಸ್ತ್ರಿಗಳ ಸ್ಮೃತಿಗೆ ಅರ್ಪಿಸಿದ್ದಾರೆ.


ಮಕ್ಕಳಿಗಾಗಿ 'ಹಿರಿಯರು ಹೇಳಿದ ಕಥೆಗಳು', ಎಂಬ ಕಿರುಹೊತ್ತಿಗೆಯನ್ನೂ ವಾಗೀಶ್ವರಿ ರಚಿಸಿದ್ದಾರೆ.

೧೯೯೭ ರ ಸಿಂಗಪುರ ಪ್ರವಾಸ, ವಾಗೀಶ್ವರಿಯವರ ಚಿಕಿತ್ಸಕ ಬುದ್ಧಿಗೆ, ಕುತೂಹಲದ ಸ್ವಭಾವಕ್ಕೆ, ಹೊಸಹೊಸದನ್ನು ನೋಡಬೇಕು ಅರಿಯಬೇಕು ಎಂಬ ಹುಮ್ಮಸ್ಸಿಗೆ, ಹೊಸ ಆಯಾಮಗಳನ್ನು ಕಲ್ಪಿಸಿತು. 'ಸಿರಿಸಿಂಗಾರದ ಸಿಂಗಪುರ' ಅವರ ಕಂಡ ಹೊಸ ನಗರನಾಡಿನ ಪರಿಚಯದೊಂದಿಗೆ ಹಲವು ಸಮಸ್ಯೆಗಳ ಕುರಿತು ಭಾರತೀಯ ದೃಷ್ಟಿಕೋನದ ವಿಮರ್ಶೆಯನ್ನೂ ನೀಡುತ್ತದೆ. ನಮ್ಮವರ ಹಲವಾರು ಕೊರತೆಗಳ ಬಗ್ಗೆ ಯೋಚಿಸುವಂತೆ ಮಾಡುತ್ತದೆ. ಮಕ್ಕಳ ಬಗ್ಗೆ, ವಯಸ್ಕರ ಬಗ್ಗೆ, ನಾಗರಿಕ ಸಮಸ್ಯೆಗಳ ಬಗ್ಗೆ ವಾಗೀಶ್ವರಿಯವರಿಗೆ ಹೆಚ್ಚಿನ ಆತಂಕವಿದೆ. ವಿದೇಶ ಪ್ರವಾಸದಲ್ಲಿ ತೌಲನಿಕವಾಗಿ, ಭಾರತೀಯರ ದೈನಂದಿನ ಪರದಾಟ ಹಾಗೂ ಸಿಂಗಪುರದ ಜನ ಅವಕ್ಕೆ ಕಂಡುಕೊಂಡ ಪರಿಹಾರಗಳನ್ನು ಪರಿಚಯಿಸುತ್ತಾರೆ. ಸ್ವತಃ ಕಣ್ಣಿಟ್ಟುನೋಡಿದ ಜನಜೀವನ, ಅಭ್ಯಸಿಸಿ ತಿಳಿದುಕೊಂಡ ಚರಿತ್ರೆ-ರಾಜಕಾರಣ ಇತ್ಯಾದಿಗಳನ್ನು ತಿಳಿಯಾಗಿ ವಿವರಿಸುತ್ತಾರೆ. ಸಹಜವಾಗಿಯೇ ಸಿಂಗಪುರದ ದೇವಾಲಯಗಳು ಮತ್ತಿತರ ಧರ್ಮಗಳ ಪೂಜಾಸ್ಥಾನಗಳ ಕುರಿತು ಆಕರ್ಷಣೆ ಇದ್ದರೂ ಇತರ ಪ್ರೇಕ್ಷಣೀಯ ಸ್ಥಳಗಳು, ಸೌಕರ್ಯಗಳು, ಆಡಳಿತ, ಕಲಾಪ್ರಕಾರಗಳನ್ನೆಲ್ಲ ಚರ್ಚಿಸಿದ್ದಾರೆ. ತರುಣರನ್ನು ನಾಚಿಸುವ ಉತ್ಸಾಹದಿಂದ ಅವರು ಸಿಂಗಪುರದಲ್ಲಿ ಸುತ್ತಾಡಿದ್ದಾರೆ. ಮಕ್ಕಳ

ಆಸಕ್ತಿಯಿಂದ, ಹೊಸ ಹೊಸ ನೋಟಗಳನ್ನು ವೀಕ್ಷಿಸಿದ್ದಾರೆ. ವಯಸ್ಕರ ಪರಿಪಕ್ವತೆಯಿಂದ ಕಂಡದ್ದನ್ನು ಕೇಳಿದ್ದನ್ನು ಓದಿದ್ದನ್ನು, ಪರಾಮರ್ಶಿಸಿ, ಪ್ರವಾಸಕಥನವನ್ನು ಬರೆದಿದ್ದಾರೆ. ನಮ್ಮ ದೇಶದ ಕುಸಿಯುತ್ತಿರುವ ಮೌಲ್ಯಗಳ ಬಗ್ಗೆ ಕಳವಳಗೊಂಡ ವಾಗೀಶ್ವರಿ, ಅದರ ಮೂಲ ಕಾರಣಗಳನ್ನೂ ಕಂಡು ಹಿಡಿಯಲು ಯತ್ನಿಸಿದ್ದಾರೆ. ಜೊತೆಗೆ ಕೇವಲ ನಗರರಾಜ್ಯವಾದ ಸಿಂಗಪುರವನ್ನು ಬೃಹತ್ ದೇಶವಾಗಿದ್ದ ಭಾರತದೊಂದಿಗೆ ಹೋಲಿಸಲಾಗದೆಂಬ ಸ್ಫುಟವಾದ ಪ್ರಜ್ಞೆಯನ್ನೂ ತೋರ್ಪಡಿಸಿದ್ದಾರೆ.

ನಮ್ಮದು ಮೌಖಿಕ ವಿದ್ಯೆಗೆ ಆದ್ಯತೆಯಿತ್ತನಾಡು. ವಾಕ್ ಅಥವಾ ಆಡುನುಡಿ ಹಾಗೂ ಶ್ರವಣ ಅಥವಾ ಕಿವಿಗೊಟ್ಟು ಕೇಳಿ ಮನನಮಾಡಿದ್ದನ್ನು ಹಿರಿಯರಿಂದ ಕೇಳಿ ಕಲಿತ ಕಿರಿಯರು, ಅದನ್ನು ಮುಂದಿನ ಪೀಳಿಗೆಗೆ ವರ್ಗಾಯಿಸಿದ್ದರಿಂದಲೇ ವೇದವಿದ್ಯೆಯಿಂದ ಲೋಕವಿದ್ಯೆ (ಜಾನಪದ) ಪ್ರಕಾರಗಳೆಲ್ಲ ಕಂಠಸ್ಥವಾಗಿ ಮುಂದುವರಿದುಬಂದವು. ಸಂಪ್ರದಾಯದ ಹಾಡುಗಾರಿಕೆ, ಈ ಲೋಕವಿದ್ಯೆಯ ಪ್ರಮುಖ ಪ್ರಕಾರವಾಗಿದೆ. ಸನಾತನವಾದ ಮೌಖಿಕಪರಂಪರೆಯ ಮಹತ್ವದ ಪ್ರತಿನಿಧಿಯಾಗಿ, ಕಲಿತ ಹಾಡುಗಳನ್ನೆಲ್ಲ, ಹಾಡಿ, ಹಾಡಿಸಿ, ಅರ್ಥೈಸಿ ಅವಕ್ಕೆಲ್ಲ ಸಂಗ್ರಹಗ್ರಂಥ, ಧ್ವನಿಸುರುಳಿಗಳ ರೂಪಕೊಟ್ಟು ಬಿತ್ತರಿಸಿ ಪುನಶ್ಚೇತನ ನೀಡಿದ ವಾಗೀಶ್ವರಿ ಅವರು, ತಮ್ಮ ಹೆಸರನ್ನು ಶಬ್ದಶಃ ಸಾರ್ಥಕವಾಗಿಸಿದ್ದಾರೆ. ವಾಗರ್ಥಸಂಪನ್ನೆ ಅನಿಸಿಕೊಂಡಿದ್ದಾರೆ.

◈ ◈ ◈



ತಬ್ಬಲಿಗಳ ತಾಯಿ : ಶಾಂತಾಬಾಯಿ

(ಜ. ೧೯೦೬)

ಬೆಂಗಳೂರು ಮಹಾನಗರದಲ್ಲಿ ಮಲ್ಲೇಶ್ವರಂ ೧೫ನೇ ಕ್ರಾಸ್‌ದಲ್ಲಿ ಎಮ್. ಎಲ್. ಎ. ಶೈಕ್ಷಣಿಕ ಸಂಸ್ಥೆಗೆ ಇದಿರಾಗಿ ವಿಸ್ತಾರವಾದ ಆವರಣದಲ್ಲಿ ಸಾದಾ ಚಿಕ್ಕಕಟ್ಟಡವಿದೆ. ನೂರಕ್ಕೂ ಮಿಕ್ಕಿದ ಸದಸ್ಯರನ್ನು ಹೊಂದಿನ ತಾಣ ಅದೆಂದು ಒಳಗೆ ಹೊಕ್ಕು ಪರಿಸರವನ್ನು ಗಮನಿಸಿದಾಗಲೇ ತಿಳಿಯುವದು. ಇದೇ 'ಸೇವಾ ಸದನ' ಐವತ್ತು ವರ್ಷಗಳಿಂದ ಅಸಂಖ್ಯ ಅನಾಥರಿಗೆ ಆಶ್ರಯನೀಡಿ, ಅವರಿಗೊಂದು ನೆಲೆ ಕಲ್ಪಿಸಿಕೊಟ್ಟು, ಜೀವನದಲ್ಲಿ ದಿಕ್ಕೊಂದನ್ನು ತೋರಿದ ಅಭಯಧಾಮ. ಅದರ ಮುಖ್ಯಸ್ಥೆ

೯೨ ವಸಂತಗಳನ್ನು ಕಂಡು ಮಾಗಿದ ಜೀವ, ಶಾಂತಾಬಾಯಿ ನಾಗರಮಠ ಅವರು. ಚಿಕ್ಕಮಕ್ಕಳ ಕಿಲಿಕಿಲಿ ನಗು, ಎಳೆಯರ ಗಜಿಬಿಜಿ ಮಾತುಕತೆ, ಹಿರಿಯ ಮಕ್ಕಳ ಮಾರ್ಗದರ್ಶನದಲ್ಲಿ ಪ್ರಾರ್ಥನೆ. ಓದು, ಆಟ. ಪಾಟ, ಎಲ್ಲರ ಊಟ-ತಿಂಡಿಗಳ ವ್ಯವಸ್ಥೆಯನ್ನು ಗಮನಿಸುತ್ತ ಬಾಳಸಂಜೆಯನ್ನು ಕಳೆಯುತ್ತಿದ್ದಾರೆ. "ಪುನರ್ಜನ್ಮವೆಂಬುದೊಂದು ಇದ್ದರೆ ಮತ್ತೆ ಹುಟ್ಟಿಬಂದು ಇಂಥ ಮಕ್ಕಳಿಗೆ ತಾಯಾಗುವ ಯೋಗವನ್ನೇ ದೇವರಿಗೆ ಬೇಡಿಕೊಂಡೇನು!" ಎಂದು ಭಾವುಕತೆಯಿಂದ ಉದ್ಗರಿಸಿದ ಈ ಮಹಾತಾಯಿ. ಜೀವನದ ಕಷ್ಟ-ಕಾರ್ಪಣ್ಯಗಳನ್ನು ಎಡಬಿಡದೇ ಅನುಭವಿಸಿದವರು. ಇದರಿಂದಾಗಿಯೇ ಇನ್ನೊಬ್ಬರ ಕಷ್ಟ-ದುಃಖಗಳಲ್ಲಿ ಪಾಲುಗೊಂಡು. ಸುಖ ಸಂತೋಷಗಳಲ್ಲಿಯೂ ನಲಿವನ್ನು ಕಂಡವರು.

ಶಾಂತಾಬಾಯಿ ತುಂಬಿದ ಮನೆಯಲ್ಲಿ ಹುಟ್ಟಿಬೆಳೆದವರು. ತಂದೆ ದಕ್ಷಿಣ ಕನ್ನಡದ ಮಂಜೇಶ್ವರದ ಬಡಾಜೆಯ ಶಾನುಭೋಗರಾಗಿದ್ದರು. ೯ ಜನ ಹೆಣ್ಣುಮಕ್ಕಳಲ್ಲಿ ಆರನೇಯವರಾದ ಇವರು ಓದಿದ್ದು ಇಂಗ್ಲಿಷ್ ೨ ನೇ ಕ್ಲಾಸು (೬ ನೇ ವರ್ಗ) ಮಾತ್ರ. ಅಂದಿನ ದಿನಮಾನಕ್ಕನುಸಾರವಾಗಿ. ೧೪ ನೇ ವಯಸ್ಸಿಗೇ ಶಾಂತಾಬಾಯಿಯ ಮದುವೆ ಆಯಿತು. ಎರಡನೇ ಹೆಂಡತಿಯಾಗಿ ಕೈಹಿಡಿದ ವಿಧುರ ನಾಗರಮಠರು ಕೋರ್ಟಿನಲ್ಲಿ ಟಾಯ್‌ಪಿಸ್ಟ್‌ರಾಗಿದ್ದರು. ಕಡಿಮೆಸಂಬಳ. ಮನೆತುಂಬ ಜನ. ಕೊಟ್ಟಿಗೆಯಲ್ಲಿ ದನಕರು. ಮನೆಗೆ ಬಂದುಹೋಗುವ ಜನರೂ ತುಂಬ. ಕಷ್ಟದಲ್ಲೇ ಬೆಳೆದ ಶಾಂತಾಬಾಯಿಗೆ ಮನೆಗೆಲಸ, ಹಟ್ಟಿಯ ಕೆಲಸಗಳನ್ನು ಸಾಗಿಸುವದು ಕಷ್ಟವಾಗಲಿಲ್ಲ. ಆದರೆ ಹುಟ್ಟಿದ ಎರಡು ಮಕ್ಕಳೂ ೭ ನೇ ವಯಸ್ಸೂ ದಾಟದೇ ಇಲ್ಲವಾದದ್ದು ಅವರ ಮನಸ್ಸಿಗೆ ತೀರ ಆಘಾತವಾಯಿತು. ನಂತರ ಕೆಲವೇ ವರ್ಷಗಳಲ್ಲಿ ಯಜಮಾನರೂ ನಿಧನ ಹೊಂದಿದರು. ಆ ಕತ್ತಲೆಯ ದಿನಗಳಲ್ಲಿ ತಂದೆ ತುಂಬ ನೆರವಾದರು. ಬಹಳಷ್ಟು ಸಮಾಧಾನ ಹೇಳಿದರು. ತನ್ನ ನೆರೆಮನೆಯ ಹುಡುಗಿಗೆ ಮದುವೆಯಾದ ಒಂದು ತಿಂಗಳಿಗೇ ವೈಧವ್ಯ ಬಂದಿತ್ತು. ಕೈಯೊಳಗಿನ ಹಸಿರುಬಳೆ ಹಾಗೇ ಇದ್ದವು... ಗಂಡ ಹೋದಾಗ, ಅವಳ ಅಗಾಧ ದುಃಖದ ಮುಂದೆ ತನ್ನದು ಅಷ್ಟು ದೊಡ್ಡದಲ್ಲ! ಎಂದು ಸಮಾಧಾನ ತಾಳಲು ಯತ್ನಿಸುತ್ತಿದ್ದರಂತೆ.

ಪತಿಯ ಅಕಾಲನಿಧನದ ನಂತರ ಮುಂದೇನು? ಎಂಬ ಪ್ರಶ್ನೆ ಭೂತಾಕಾರ ತಳೆಯಿತು. ಸಂಬಂಧಿಗಳ ಮನೆಯಲ್ಲಿ ಕೆಲಕಾಲ ಕಳೆದರು. ಹಿತೈಷಿಯೊಬ್ಬರು, ಹಳ್ಳಿಯಲ್ಲಿ ಯಾವ ಅವಕಾಶವೂ ಇಲ್ಲ. ಸಾಮಾಜಿಕ ಸುಧಾರಣೆಗಳು ನಗರಗಳಲ್ಲಷ್ಟೆ! ಶಿಕ್ಷಣ-ನೌಕರಿಗೆ ಸಹಾಯವಾಗಬಹುದಾದ ಬೆಂಗಳೂರಿಗೆ ಏಕೆ ಹೋಗಬಾರದು? ಎಂದು ಸೂಚನೆಯಿತ್ತರು. ಅದು ಮನಸ್ಸಿಗೆ ಒಪ್ಪಿಗೆಯಾಗಿ ಹೊರಟುನಿಂತರು. ದೂರದ ಸಂಬಂಧಿಯೊಬ್ಬರು ಬೆಂಗಳೂರು ಪ್ರವಾಸದ ವೆಚ್ಚಭರಿಸುವದರ ಜೊತೆಗೆ ಸೋಪು, ಹಣಿಗೆ, ಪಂಜಿ (ಟಾವೆಲ್) ಮುಂತಾದವನ್ನು ಒದಗಿಸಿದರು. ಶಾಂತಾಬಾಯಿಗೆ ಉಟ್ಟಸೀರೆ ಚೀಲದೊಳಗೆ ಇನ್ನೊಂದು ಸೀರೆ ರವಿಕೆ ಬಿಟ್ಟರೆ ತನ್ನದೆನ್ನುವ ವಸ್ತುವಿರಲಿಲ್ಲ. ೧೯೩೯ ರ ಪ್ರಾರಂಭದಲ್ಲಿ ಪರಿಚಯಪತ್ರ ಕೈಯಲ್ಲಿ ಹಿಡಿದು ಬೆಂಗಳೂರಿನ ರಾಜೀವಿಬಾಯಿಯವರ ಮನೆಗೆ ಬಂದು ಇಳಿದಾಗ ಈ ಸೋದರಿಯ ಬೆಸುಗೆಯಿಂದಾಗಿ ತನಗೆ ಪುನರ್ಜೀವನ ಲಭಿಸೀತೆಂಬ ಭರವಸೆ ೨೭ ವರ್ಷದ ತರುಣಿಯಲ್ಲಿರಲಿಲ್ಲ.

ರಾಜೀವಿಬಾಯಿ. ಪತಿ ಶಿವರಾವ್ ಸುರ್ಕುಂದರ ನಿವೃತ್ತಿಯನಂತರ ಬೆಂಗಳೂರಿಗೆ ಬಂದು ನೆಲೆಸಿ ೪-೫ ವರ್ಷಗಳಾಗಿದ್ದವು. ಹೈದರಾಬಾದಿನಲ್ಲಿ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿದ ಶಿವರಾಯರು ಭಾವುಕರು. ಎಳೆಯ ಮಕ್ಕಳೆಂದರೆ ಅವರಿಗೆ ಬಲುಜೀವ. ಅವರ ಮುದ್ದಿನ ಮಗಳು ೧೪ ವರ್ಷಕ್ಕೆ ಸಾವಿಗೀಡಾದಾಗ ಪತಿ-ಪತ್ನಿಯರಿಗೆ ಬಲುದೊಡ್ಡ ಆಘಾತವಾಗಿತ್ತು. ಸಂಬಂಧಿಕರ ಮಕ್ಕಳನ್ನು ಬೆಳೆಸಿದರು. ಅನಾಥಶಿಶುಗಳ ಪಾಲನೆ-ಪೋಷಣೆಗೆ ತಮ್ಮ ಉಳಿದ ಬಾಳನ್ನು ಮೀಸಲಿಡಲೆಂದು ದಂಪತಿ, ಬೆಂಗಳೂರಿಗೆ ಬರುವಾಗಲೇ ನಿರ್ಧರಿಸಿದ್ದರು.

ಈಗ ಶಾಂತಾಬಾಯಿ, ಅವರ ಮನೆಯಲ್ಲೇ ರೂಪುಗೊಂಡ 'ಸೇವಾಸದನ' ಪ್ರವೇಶಿಸಿದಾಗ, ಕೆಲವು ಅನಾಥಶಿಶುಗಳು, ಕೆಲವು ನಿರ್ಗತಿಕ ಮಹಿಳೆಯರು, ಮುಖ್ಯವಾಗಿ ತರುಣ ವಿಧವೆಯರು ಅಲ್ಲಿದ್ದರು. ಶಾಂತಾಬಾಯಿಗೆ ಮುಂದೆ ಓದಿಸಿ ಅನ್ನಕ್ಕೆ ದಾರಿ ಮಾಡಿಕೊಡಲೆಂದು ರಾಜೀವಿಬಾಯಿ ಯತ್ನಿಸಿದರು. ಆದರೆ ಈ ದಿಕ್ಕಿನಲ್ಲಿ ತನ್ನ ಪರಿಮಿತಿಗಳನ್ನು ಅರಿತ ಶಾಂತಾಬಾಯಿ, "ನಾನು ಎಂಥ ಕೆಲಸವನ್ನಾದರೂ ಮಾಡುತ್ತೇನೆ. ಶುಶ್ರೂಷೆಯ, ದಾಯಿಯ ಕೆಲಸವನ್ನಾದರೂ ಕೊಡಿಸಿ!" ಎಂದಾಗ

ಬೆಂಗಳೂರಿನಲ್ಲಿ ಆಗಷ್ಟೇ ಪ್ರಾರಂಭವಾದ 'ರೆಸ್ಕ್ಯೂಹೋಮ್' (ಅಬಲಾಶ್ರಮ)ದಲ್ಲಿ ಶುಶ್ರೂಷಕಿ (Midwife) ಎಂದು ನೇಮಿಸಲ್ಪಟ್ಟರು. ಆ ಕೆಲಸ ಈ ಕೆಲಸ ಎಂಬ ಭೇದ ಅಲ್ಲಿರಲಿಲ್ಲ. ನಾನಾವಿಧ ರೋಗಗಳಿಂದ ಬಳಲುತ್ತಿದ್ದ ರೋಗಿಗಳ ಚಿಕಿತ್ಸೆ, ವೇಶ್ಯಾವಾಟಿಕೆಗಳಿಂದ ರಕ್ಷಿಸಲ್ಪಟ್ಟ ಹುಡುಗಿಯರಿಗೆ 'ಡೂಶ್' ಕೊಡುವದು. ರಾತ್ರಿ-ಮಧ್ಯರಾತ್ರಿ ವಾಚ್‌ಮನ್‌ನೊಂದಿಗೆ 'ಬೀಟ್' ಡ್ಯೂಟಿ ಇವೆಲ್ಲ ಸೇರ್ಪಡೆಯಾಗಿದ್ದವು.

ಈ 'ಬೀಟ್' ಕೆಲಸ ಭಯಾನಕವಾಗಿತ್ತು. ಅಪ್ರಾಪ್ತವಯಸ್ಸಿನ ಹುಡುಗಿಯರನ್ನು ಹಾರಿಸಿಯೋ, ಪುಸಲಾಯಿಸಿಯೋ ತಂದು ವೇಶ್ಯಾವಾಟಿಕೆಗಳಿಗೆ ಪೂರೈಸುವ ತಂಡವಿತ್ತು. ಇಂಥ ಅಮಾಯಕರನ್ನು ಹೊಡೆದು-ಬಡಿದು ವೃತ್ತಿಗಿಳಿಸುವ 'ಮೇಡಂ'ಗಳನ್ನು ಪತ್ತೆ ಹಚ್ಚಿ ಆ ಎಳೆಯರನ್ನು ಅವರಿಂದ ಪಾರುಮಾಡಲು ಶಾಂತಾಬಾಯಿಯಂಥ ಸ್ವಯಂ ಸೇವಿಕೆಯರನ್ನು ನೇಮಿಸುತ್ತಿದ್ದರು. ೫೬ ವರ್ಷಗಳ ಹಿಂದೆ ಇಂಥ ಮಹಿಳಾ ಸೇವಿಕೆಯರು ವಿರಳವಾಗಿದ್ದರು. ಅವರಿಗೂ ಹೊಟ್ಟೆ ತುಂಬ ಊಟವಾಗಲಿ, ಸ್ವಾವಲಂಬಿಯಾಗಿ ಜೀವಿಸುವಷ್ಟು ಸಂಬಳವಾಗಲಿ ಸಿಗುತ್ತಿರಲಿಲ್ಲ. ಬಲಾತ್ಕಾರದ ವೇಶ್ಯಾವೃತ್ತಿಗಿಳಿದು ಅಪಾರ ಕಷ್ಟಗಳನ್ನು, ಆಘಾತಗಳನ್ನು ಅನುಭವಿಸಿದವರು ಇದ್ದಂತೆ, ಇವರೊಂದಿಗೆ ಬರಲು ಇಷ್ಟಪಡದವರೂ ಇದ್ದರು! ಅವರೆಲ್ಲರ ಆರೋಗ್ಯ ಹಾಗೂ ಶಿಕ್ಷಣಗಳಲ್ಲಿ ಸಹಾಯ ನೀಡುವದು, ಅವರು ಪುನಃ ಓಡಿ ಹೋಗದಂತೆ ಕಾವಲಿಡುವದು, ತಲೆಹಿಡುಕರಿಂದ ರಕ್ಷಿಸುವದು ಅಗ್ನಿಪರೀಕ್ಷೆಯೇ ಆಗಿತ್ತು!

ಆದರೆ ಈ ಕೆಲಸವೂ ಉಳಿಯಲಿಲ್ಲ. ರೆಸ್ಕ್ಯೂಹೋಂನ ಮೇಟ್ರನ್ ನಿರ್ದಯಿ, ಸ್ವಾರ್ಥಿ. ಆಶ್ರಯ ಹುಡುಕಿಕೊಂಡು ಬಂದ ಚಿಕ್ಕವಯಸ್ಸಿನ ಚೆಲುವೆಯಾದ ಹುಡುಗಿಯೊಬ್ಬಳು ಬಂದಿದ್ದಳು. ಅವಳನ್ನು ತಲೆಹಿಡುಕರಿಗೆ ಮಾರಿಬಿಟ್ಟಳು. ಇದನ್ನು ಸಹಿಸಲಾರದೇ ಶಾಂತಾಬಾಯಿ ಮೇಲಿನವರಿಗೆ ರಿಪೋರ್ಟಮಾಡಿದಾಗ, ಮೇಟ್ರನ್, ಆಡಳಿತ ಕಮಿಟಿಯ ಸದಸ್ಯರನ್ನೆಲ್ಲ ಭೇಟಿಮಾಡಿ ಸಂಚು ನಡೆಸಿ ತಾನು ಶಿಕ್ಷೆಯಿಂದ ಜಾರಿಕೊಂಡದ್ದಷ್ಟೇ ಅಲ್ಲ, ಶಿಸ್ತುಭಂಗ ಮತ್ತು ದುರ್ವರ್ತನೆಗಾಗಿ ಶಾಂತಾಬಾಯಿಯ ಮೇಲೆ ಅಪವಾದ ಬರುವಂತೆ ನೋಡಿಕೊಂಡಳು. ಆಗಿಂದಾಗ ಶಾಂತಾಬಾಯಿಯನ್ನು ಕೆಲಸದಿಂದ

ತೆಗೆದುಹಾಕಿದ್ದಲ್ಲದೇ ಕೂಡಲೇ 'ರೆಸ್ಕ್ಯೂಹೋಂ'ದಿಂದ ಹೊರಟು ಹೋಗುವಂತೆ ಆಜ್ಞೆ ಹೊರಡಿಸಲಾಯಿತು.

ತಿರುಗಿ ರಾಜೀವಿಬಾಯಿಯುವರೇ ಸಹಾಯಕ್ಕೆ ಬಂದರು. ಸೇವಾಸದನದಲ್ಲೇ ತಮಗೆ ಸಹಾಯಕಿಯಾಗಿರಲು ಹೇಳಿ, ಸಾಧ್ಯವಿದ್ದ ತರಬೇತಿ ಕೊಡಿಸಿ ಶಾಂತಾಬಾಯಿಯ ಭವಿಷ್ಯವನ್ನು ನಿಷ್ಕರ್ಷವಾಗಿ ರೂಪಿಸಿದರು. ಕೆಲವೇ ದಿನಗಳಲ್ಲಿ ಮೇಟ್ರನ್ ಆಗಿ ಕಾರ್ಯನಿರ್ವಹಿಸುವ ಆತ್ಮವಿಶ್ವಾಸವನ್ನು ಪಡೆದ ಶಾಂತಾಬಾಯಿ, ಅಂದಿನಿಂದ ಇಂದಿನವರೆಗೆ ಸದನದಲ್ಲಿ ಬೆಳೆದ ನೂರಾರು ಮಕ್ಕಳಿಗೆ ತಾಯಿಯಾಗಿದ್ದಾರೆ. ಅವರ ಭವಿಷ್ಯವನ್ನು ರೂಪಿಸುವ ರೂವಾರಿಯಾಗಿದ್ದಾರೆ.

ಸೇವಾಸದನ ರೂಪಗೊಂಡು ಬೆಳೆದ ಬಗ್ಗೆ ಶಾಂತಾಬಾಯಿಯುವರಿಗೆ ವಿವರಗಳನ್ನು ನೀಡಲು ವಿನಂತಿಸಿಕೊಂಡೆ.

"೧೯೩೬ ರಲ್ಲಿ ಸುಕರ್ಥಂದ ದಂಪತಿಗಳು ಬೆಂಗಳೂರಿಗೆ ಬಂದರಷ್ಟೇ? ಸರಕಾರಿ ಆಸ್ಪತ್ರೆಯಲ್ಲಿ ತಾಯಿ ಸತ್ತು ಬದುಕಿದ ಎರಡು ಅನಾಥ ಶಿಶುಗಳ ಪಾಲಕತ್ವದ ಹೊಣೆಪಡೆದು ಸೇವಾಸದನವನ್ನು ಪ್ರಾರಂಭಿಸಿದರು. ಆಗ ಬೆಂಗಳೂರಿನ ಕೆಲವು ನಾಗರಿಕರು ಅವರಿಗೆ ತುಂಬು ಮನಸ್ಸಿನ ಸಹಾಯ ನೀಡಿದರು. ಮುಖ್ಯವಾಗಿ ಸರ್ ಸಿ. ವಿ. ರಾಮನ್ ಅವರ ಪತ್ನಿ ಲೇಡಿ ಲೋಕಸುಂದರಿ ರಾಮನ್ ಕಾರ್ಪೊರೇಶನ್ ವತಿಯಿಂದ ಈಗಿರುವ ಸದನದ ಖಾಲಿಜಾಗ ತೆಗೆಸಿಕೊಟ್ಟರು. ಶ್ರೀಮತಿ ಎಚ್. ವಿ. ಸೀತಮ್ಮ (ದಿವಾನ್ ಶ್ರೀ ಎಚ್. ವಿ. ನಂಜುಂಡಯ್ಯನವರ ಪುತ್ರಿ, ಹಾಗೂ ಹೆಸರಾಂತ ಲೇಖಕಿ ಶ್ರೀಮತಿ ಎಚ್. ವಿ. ಸಾವಿತ್ರಮ್ಮನವರ ಅತ್ತೆ) ಶ್ರೀಮತಿ ದೇವರಾವ್ ಉಭಯಕರ್ ಮೊದಲಾದವರು ಸದನದ ಮೊದಲ ವರ್ಷಗಳ ಉತ್ಸಾಹಿ ಕಾರ್ಯಕರ್ತರಾಗಿದ್ದರು. ಆಗ ಸರಕಾರದಿಂದ ಏನೂ ಗ್ರ್ಯಾಂಟ್ ಅಥವಾ ಸಹಾಯಧನ ಬರುತ್ತಿರಲಿಲ್ಲ. ದಾನಿಗಳಿಂದಲೂ ಹೇಳಿಕೊಳ್ಳುವಷ್ಟು ಹಣ ಬರುತ್ತಿರಲಿಲ್ಲ. ಹೀಗಾಗಿ ಮಕ್ಕಳ ಊಟ-ಉಪಚಾರ, ಚಿಕಿತ್ಸೆ, ಸ್ಕೂಲು, ಓದುಗಳ ಖರ್ಚಿಗೆ ಬಹಳಷ್ಟು ಶ್ರಮಿಸಬೇಕಾಗುತ್ತಿತ್ತು. ಆ ದಿನಗಳಲ್ಲಿ ಅಹೋರಾತ್ರಿ ಕಷ್ಟಪಟ್ಟು ಸದನವನ್ನು ಕಾಪಾಡಿಕೊಂಡವರು ಸುಕರ್ಥಂದ ದಂಪತಿಗಳು.

ರಾಜೀವಿಬಾಯಿ ಇಡೀ ದಿನ ಹೊಲಿಗೆ ಮಾಡುತ್ತಿದ್ದರು. ಆಶ್ರಮ/ ಸದನವಾಸಿಗಳಿಗೆಲ್ಲ ಹೊಲಿಗೆ ಕಲಿಸುತ್ತಿದ್ದರು. ಹೊಲಿದು ತಯಾರಾದ

ಬಟ್ಟೆಗಳನ್ನು ಮಾರಾಟಮಾಡಿ ಹಣ ಹೊಂದಿಸುತ್ತಿದ್ದರು. ಮೈಸೂರಿನ ದಸರಾ ಪ್ರದರ್ಶನದಲ್ಲಿ ಸೇವಾಸದನದಲ್ಲಿ ತಯಾರಾದ ಹಲವು ಸಾಮಾನುಗಳು ಮಾರಲ್ಪಡುತ್ತಿದ್ದವು. ಒಂದು ಮಳಿಗೆ 'ಕರ್ಚೀಫ್ ಕಾರ್ನರ್' ಸೇವಾಸದನಕ್ಕೆ ಮೀಸಲಾಗಿತ್ತು. ಕಸೂತಿ ಕರವಸ್ತ್ರಗಳೊಂದಿಗೆ ಸ್ವೆಟರ್, ಟೋಪಿ, ಕೈಮಶೀನಿನಲ್ಲಿ ಹೊಲಿದ ಬಟ್ಟೆಗಳನ್ನು ಅಲ್ಲಿ ಮಾರುತ್ತಿದ್ದರು. ಮಾರಾಟದ ಹಣವೆಲ್ಲ ಮಕ್ಕಳಿಗೆ, ವಿಧವೆಯರಿಗೆ ಮೀಸಲಾಗಿತ್ತು.

"ದಿನೇ ದಿನೇ ಅನಾಥಮಕ್ಕಳ ಸಂಖ್ಯೆ ಹೆಚ್ಚಿತು. ಇಳಿವಯಸ್ಸಿನ ಗಂಡಹೆಂಡಿರ ಉತ್ಸಾಹ, ಕುಗ್ಗುತ್ತಿದ್ದ ದೇಹಬಲಗಳಿಂದಷ್ಟೇ ಸಂಸ್ಥೆ ನಡೆಯಲು ಸಾಧ್ಯವಿರಲಿಲ್ಲವಲ್ಲ! ಫಂಡ್ ಸಂಗ್ರಹಿಸುವದು ಅತ್ಯವಶ್ಯವಾಗಿತ್ತು. ಸದನದ ಕಾಯಂ ನಿವಾಸಿಯಾದ ಶಾಂತಾಬಾಯಿ ಹಣಸಂಗ್ರಹದ ಹೊಣೆಹೊತ್ತರು. ಬೆಂಗಳೂರನ್ನೆಲ್ಲ ಸುತ್ತುತ್ತಿದ್ದರು. ಬಳೇಪೇಟೆ-ಚಿಕ್ಕಪೇಟೆಗಳಲ್ಲಿ ಎಂಟು ಆಣೆಯಿಂದ ೧ ರೂಪಾಯಿ ಕೊಡುವವರೂ ಇದ್ದರು. "ನಾನು ಹೋಗಿ ಕೇಳಿದಾಗ ಯಾರೂ ಇಲ್ಲವೆಂದ ನೆನಪು ಇಲ್ಲ! ಗದರಿಸಿದ್ದಾಗಲಿ, ಬರಿಗೈಯಿಂದ ಹಿಂದಿರುಗಿದ್ದಾಗಲಿ ಇಲ್ಲ. ಒಬ್ಬ ಶೆಟ್ಟರು ಎಷ್ಟುಕೊಡಬೇಕೆಂದು ಕೇಳಿದರು. ಹುಡುಗಿಯೊಬ್ಬಳಿಗೆ ಊಟ, ವಿದ್ಯಾಭ್ಯಾಸದ ವೆಚ್ಚ ಭರಿಸುವಷ್ಟು ಕೊಡಿ ಎಂದಿದ್ದೆ. ಆಗ ಲೆಕ್ಕಮಾಡಿಕೊಡುತ್ತಿದ್ದ ಮಾಸಿಕ ೧೦/-ರೂ. ದಾನ ಇಂದಿಗೂ ಹಾಗೇ ಮುಂದುವರಿದಿದೆ. ಚಂದಾ ಎತ್ತುವ ಕೆಲಸ ೩ ದಶಕಗಳಿಗೂ ಮೀರಿ ಕೈಕೊಳ್ಳಬೇಕಾಯಿತು.

ಪ್ರತಿದಿನವೂ ನಾಳೆ ಹೇಗೆ ಕಳೆದೀತು? ಎಂದು ಯೋಚಿಸುವಂತೆ ಆಗುತ್ತಿತ್ತು. ಮಕ್ಕಳಿಗೆ ಹಲವಾರು ವರ್ಷ, ಗಂಜಿ ರಾಗಿಮುದ್ದೆಗಳ ಊಟ ಒದಗಿಸಲು ಸಾಕುಬೇಕಾಗುತ್ತಿತ್ತು. ರೇಶನ್ ದಿನಗಳಲ್ಲಿ ಅಂತೂ ಬಹಳ ಕಷ್ಟಪಟ್ಟೆವು. ಸಾಲದ್ದಕ್ಕೆ ಮಕ್ಕಳಿಗೆಲ್ಲ ಕಜ್ಜಿ ಕಾಣಿಸಿಕೊಂಡಿತು. ದಿನದಿನವೂ ಮಕ್ಕಳ ಕಜ್ಜಿಯನ್ನು ತೊಳೆದು ಔಷಧ ಹಾಕುವ ಜವಾಬ್ದಾರಿಯೂ ಇತ್ತು. ನಿರಾಶ್ರಿತರಾಗಿ ಬಂದಿದ್ದ ಕೆಲವು ಹೆಂಗಳೆಯರು ಸದನದ ನಿರ್ವಹಣೆಯಲ್ಲಿ ಸಹಾಯ ಮಾಡಿದರು.

"ಸದ್ಯಕ್ಕೆ ಸಂಸ್ಥೆಯ ಹಣಕಾಸಿನ ವ್ಯವಸ್ಥೆ ತೃಪ್ತಿಕರವಾಗಿದೆಯೇ?"

"ತಕ್ಕಮಟ್ಟಿಗೆ ಇದೆ. ಪ್ರತಿ ಮಗುವಿಗೆ ರೂ. ೫೦/- ತಿಂಗಳಿಗೆ. ೧೦ನೇ ಕ್ಲಾಸು ಓದುವವರೆಗೆ ಸರಕಾರದ BCM grant ಎಂದುಬರುತ್ತದೆ.

ಇದು ೬೮ ಮಕ್ಕಳಿಗೆ ಸಿಗುತ್ತದೆ. ಈಗಲೂ ಕಲೆಕ್ಶನ್ (ಚಂದಾ)ಗೆ ಹೋಗುವದು ತಪ್ಪಿಲ್ಲ! ನಮ್ಮಲ್ಲಿ Meal a day (ದಿನದೂಟ)ಯೋಜನೆಯಿದೆ. ಆ ಪ್ರಕಾರ ಒಪ್ಪೊತ್ತಿನ ಊಟ ನೀಡುವ ದಾನಿಗಳು ೧೬೩ ಇದ್ದಾರೆ. ಆ ಸಂಖ್ಯೆ ೩೬೫ಕ್ಕೆ ಏರಿಸಲು ಹೆಣಗುತ್ತಿದ್ದೇವೆ ಸದ್ಯಕ್ಕೆ ಪ್ರತಿ ಊಟದ ಖರ್ಚು ರೂ. ೩೫೦/- ತಿಂಗಳ ಖರ್ಚು ೩೦೦೦/- ಆಗುತ್ತದೆ. ಕೆಲವರು ಪರಿಚಿತರು ಆಗಾಗ ಸಿಹಿತಿಂಡಿಯನ್ನು ಮಕ್ಕಳಿಗೆ ಕೊಟ್ಟರೆ ಕೆಲವರು ಪುಸ್ತಕ, ಎಕ್ಸರಸಾಯಿಜ, ಪೆನ್ಸಿಲ್, ಬಟ್ಟೆ-ಬರೆಗಳನ್ನು ಕೊಡುತ್ತಾರೆ".

ಉಳಿದ ಆಡಳಿತದ ವ್ಯವಸ್ಥೆಯ ಬಗ್ಗೆ ವಿಚಾರಿಸಿದೆ. "೫೦೦ ರೂ. ಕೊಟ್ಟ ಆಜೀವ ಸದಸ್ಯರಿದ್ದಾರೆ, ಆಡಳಿತ ಸಮಿತಿಯಿದೆ. ಮೂರು ವರುಷಕ್ಕೊಮ್ಮೆ ಹೊಸಸದಸ್ಯರು ಆಯ್ಕೆಯಾಗುತ್ತಾರೆ. ಅವರು ಸೇವಾಸದನಕ್ಕೆ ಪ್ರವೇಶಬಯಸುವವರ ಅರ್ಜಿಗಳನ್ನು ಪರಿಶೀಲಿಸುತ್ತಾರೆ. ಬರುವ ಅರ್ಜಿಗಳಿಗೆ ಲೆಕ್ಕವಿಲ್ಲ! ತಂದೆ ತಾಯಿಗಳಿದ್ದ, ಸರಿಯಾದ ಪಾಲಕರಿದ್ದ ಮಕ್ಕಳಿಗೆ ಪ್ರವೇಶವಿಲ್ಲ. ಹೆಚ್ಚಾಗಿ ತಂದೆಯಿಲ್ಲದ ಅಥವಾ ತಾಯಿಯನ್ನು ಕಳೆದುಕೊಂಡ. ಪರಿತ್ಯಕ್ತಳ, ದಿನಗೂಲಿ. ಮನೆಗೆಲಸ ಮಾಡಿ ಬದುಕುವ ನಿರಾಧಾರಿಗಳ ಮಕ್ಕಳನ್ನೇ ಬರಮಾಡಿಕೊಳ್ಳುತ್ತೇವೆ. ಅಂಥ ಮಕ್ಕಳೇ ೮೫ ಇದ್ದಾರೆ. ಒಂದು ಕಾಲಕ್ಕೆ ೧೧೬ ರ ವರೆಗೆ ಇದ್ದರು. ೧೦ ನೇ ಕ್ಲಾಸಿನವರೆಗೆ ಮಾತ್ರ ಮಕ್ಕಳನ್ನು ಇಲ್ಲಿ ಇಡಲಿಕ್ಕೆ ಅವಕಾಶವಿದೆ. ಅವರಿಗೆಲ್ಲ ಸ್ವಾವಲಂಬಿಗಳಾಗಲು ಎಲ್ಲ ಬಗೆಯ ಶಿಕ್ಷಣಕೊಡಲಾಗುತ್ತಿದೆ' ಎಂದು ಹೊಲಿಗೆ, ಗೊಂಬೆ ಮಾಡುವ, ಹೆಣೆಯುವ ಕಸೂತಿಯ ವಿಭಾಗಗಳನ್ನು ಪರಿಚಯಿಸಿದರು.

ಮಾತನಾಡುತ್ತ ಸದನದ ಹಾಲಿನಲ್ಲಿ ಹಾಕಿದ ಸುರ್ಕುಂದ ಶಿವರಾವ್ ಮತ್ತು ರಾಜೀವಿಬಾಯಿ ಅವರ ಭಾವಚಿತ್ರಗಳನ್ನು ತೋರಿಸಿದರು. "ಇವರೇ ನನ್ನಂಥ ಹಲವಾರು ಜನರಿಗೆ ದಾರಿದೀಪವಾದವರು ನೈನಾ (ಶಿವರಾವ್) ಈ ಪ್ರಪಂಚದವರಲ್ಲ! ಅನಿಸುತ್ತಿತ್ತು. ಸರಕಾರಿ ಇಂಜಿನಿಯರ್ ಆಗಿದ್ದ ದಿನಗಳಲ್ಲೂ ಸಂಬಳವೆಷ್ಟು? ಉಳಿಸಬೇಕಾದದ್ದು ಎಷ್ಟು? ಖರ್ಚಿಗೆಷ್ಟು? ಎಂಬುದರ ಕಡೆಗೆ ಗಮನವಿರುತ್ತಿರಲಿಲ್ಲವೆಂದು ರಾಜೀವಕ್ಕ ಹೇಳುತ್ತಿದ್ದರು. ಎಲ್ಲೆಂದರಲ್ಲಿ ಹಣ, ಬೀಗದಕೈಗಳನ್ನು ಇಟ್ಟು ಮರೆತು ಬಿಡುವರು. ಆಳು ತಪ್ಪದೇ ತಂದು ಅವರ ಹತ್ತಿರ ಕೊಡುತ್ತಿದ್ದನಂತೆ. ಮಲ್ಲೇಶ್ವರಂದ ೧೮ ನೇ ಕ್ರಾಸ್‌ದಲ್ಲಿ ಆಗ ಇದ್ದ ಅವರ ಮನೆ 'ದಯಾನಿಧಿ' ಬಡಮಕ್ಕಳಿಗಾಗಿಯೇ

ರೂಪತಾಳಿದಂತಿತ್ತು. ಕಾಂಪೌಂಡ ತುಂಬ ಹಲಸಿನಮರ, ಮಾವಿನಮರ, ಚಿಕ್ಕು (ಸಪೋಟ), ನೆಲ್ಲಿ ಮರಗಳಿದ್ದವು. ಹಣ್ಣುಗಳನ್ನು ಹೊತ್ತು ಸೇವಾ ಸದಸನಕ್ಕೆ ತರುವರು. ಮಕ್ಕಳಿಗೆ ಹಂಚುವರು. ಆರ್ಥಿಕವಾಗಿ ಅಷ್ಟೊಂದು ಅನುಕೂಲವಿಲ್ಲದ ಅವರಿಗೆ ಆ ಹಣ್ಣುಗಳನ್ನು ಮಾರುವಂತೆ ಕೆಲವರು ಸೂಚನೆ ಕೊಟ್ಟರಾದರೂ ಅತ್ತ ಅವರ ಗಮನ ಹರಿಯಲಿಲ್ಲ.

ಬೆಳಿಗ್ಗೆ ಕಾಫಿ-ಬ್ರೆಡ್, ನಾಶ್ತಾ ಮುಗಿಸಿ ಸದನಕ್ಕೆ ಬಂದುಬಿಡುವರು. ಕಾಲಿಗೆ ಚಪ್ಪಲಿಯಿಲ್ಲ. ತಲೆಗೆ ಟೋಪಿಯಿಲ್ಲ. ಕೈಯಲ್ಲಿ ಛತ್ರಿಯಿಲ್ಲ. ಆದರೆ ಕೈಯಲ್ಲಿ ಮಕ್ಕಳಿಗೆಂದು ತರುತ್ತಿದ್ದ ತಿಂಡಿಯ ಚೀಲ ತಪ್ಪುತ್ತಿರಲಿಲ್ಲ! ರಸ್ತೆಯಲ್ಲಿ ಕಾಲಿಗೆ ಕಲ್ಲು ಹತ್ತಿದರೆ ಇತರರಿಗೆ ತಗಲೀತೆಂದು ಎತ್ತಿ ಇಡುವರು. ಸಿಪ್ಪೆಗಳು ಬಿದ್ದಿದ್ದರೆ, ಎತ್ತಿ ಅಚೆಗೆ ಎಸೆಯುವರು. ಎಷ್ಟೋ ವರ್ಷಗಳಿಂದ ಸದನಕ್ಕೆ ಬರುತ್ತಿದ್ದರೂ ಯಾರಿಗೂ ಒಂದು ಲೋಟ ನೀರು ತಂದುಕೊಡುವಂತೆ ಹೇಳಲಿಲ್ಲ. ತಾವೇ ಒಳಗೆ ಹೋಗಿ ನೀರು ಬಗ್ಗಿಸಿ ಕುಡಿಯುವರು. ಸದನದ ಪೂರ್ತಿ ಆಡಳಿತ, ಒಬ್ಬ ಕ್ಲರ್ಕ್ ಮಾಡುವ ಯಾವತ್ತೂ ಕೆಲಸಗಳನ್ನು ತಾವು ಮಾಡುತ್ತ ೭ ರಿಂದ ೧೧ ಗಂಟೆಯವರೆಗೆ ಇಲ್ಲಿರುತ್ತಿದ್ದರು. ಮನೆಗೆ ಹೋಗಿ ಸ್ನಾನ, ಊಟ, ಸ್ವಲ್ಪ ವಿಶ್ರಾಂತಿ ಮುಗಿಸಿ ಪುನಃ ೪ ಗಂಟೆಗೆ ಬರುವರು. ಸಂಜೆ ೭ ರ ತನಕ ಇಲ್ಲಿರುತ್ತಿದ್ದರು.

ಕೆಲವು ಬಾರಿ ಮನೆಯಲ್ಲಿ ತಿಂಡಿ ಮಾಡಿಸಿ ಮಕ್ಕಳಿಗಾಗಿ ತರುವರು. ಕೆಲವೇ ಹಣ್ಣುಗಳಿದ್ದರೆ ಜೇಬಿನಲ್ಲಿಟ್ಟು ಆಫೀಸ ಕೆಲಸದ ನಡುವೆ ಬಿಡುವು ಮಾಡಿಕೊಂಡು ಹಣ್ಣು ಹೆಚ್ಚಿ ಆಗ ಸದನದಲ್ಲಿದ್ದ ಬುದ್ಧಿಮಾಂದ್ಯ ಮಕ್ಕಳಿಗೆ ತಿನಿಸುತ್ತಿದ್ದರು. ಕೊನೆಯುಗಳಿಗೆಯವರೆಗೂ ಇತರರಿಗಾಗಿ ಬಾಳಿದರು. ಸಂತರೆಂಬ ಜನ ಹಿಂದೆ ಆಗಿಹೋದರು. "ನೈನಾ" ಯಾವವಿಧದಲ್ಲೂ ಸಂತರಿಗೆ ಕಡಿಮೆಯಿರಲಿಲ್ಲ" ಶಾಂತಾಬಾಯಿ ಸದನದ ಸ್ಥಾಪಕರನ್ನು ನೆನೆಸಿಕೊಂಡರು.

ಅಷ್ಟರಲ್ಲಿ ದುಂಡುಮುಖ, ಗೌರವರ್ಣದ, ಕಟೆದ ಹಾಗಿದ್ದ ಅಂಗಾಂಗದ ತರುಣಿಯೊಬ್ಬಳು ಬಂದು ಶಾಂತಾಬಾಯಿಗೆ ಕಾಲು ಮುಟ್ಟಿ ನಮಸ್ಕರಿಸಿದಳು. ಅವಳನ್ನು ಎಬ್ಬಿಸಿ ಮೈದಡವಿ, ಮಕ್ಕಳ ಬಗ್ಗೆ, ಮನೆಯಬಗ್ಗೆ ವಿಚಾರಿಸಿ ಕಳಿಸಿಕೊಟ್ಟರು, "ಈ ಹೆಣ್ಣುಮಗು, ಸದನಕ್ಕೆ ಬಂದಾಗ ೪ ವರ್ಷದಾಕೆ. ಗೂಂಡಾ ಜನ ಹಾರಿಸಿಕೊಂಡು ಬಂದು ತಮ್ಮಲ್ಲಿ

ಇಟ್ಟುಕೊಂಡಿದ್ದರು. ಎದುರು ಮನೆಯ ಸಿಂಧಿ ಗೃಹಸ್ಥನಿಗೆ ಮಗುವಿನ ಸುಳಿವು ಸಿಕ್ಕಿತು. ಪೊಲೀಸರಿಗೆ ತಿಳಿಸಿ, ಆ ಮಗುವನ್ನ ಬಿಡಿಸಿಕೊಂಡು ಬಂದೆವು. ಮಗುವಿಗೆ ತಂದೆಯಿರಲಿಲ್ಲ. ತಾಯಿ ದಿನಗೂಲಿಮಾಡುತ್ತಿದ್ದು, ಮಗುವನ್ನು ಸಾಕುವ ತ್ರಾಣವಿರಲಿಲ್ಲ. ಸಿಂಧಿಗೃಹಸ್ಥನಿಗೆ ನಾಲ್ಕುಗಂಡು ಮಕ್ಕಳಿದ್ದು ಹೆಣ್ಣುಮಗುವನ್ನು ತನ್ನ ಮನೆಯಲ್ಲಿ ಬೆಳೆಸುವ ಅನುಕೂಲವಿರಲಿಲ್ಲ. ಆದರೆ ನೋಡಿ! ಅವಳ ವಿದ್ಯಾಭ್ಯಾಸದ, ಬಟ್ಟೆ ಬರೆಯ ವ್ಯವಸ್ಥೆ ಮಾಡಿಕೊಟ್ಟರು. ಹೀಗೆ ಅನೇಕ ಸಂದರ್ಭಗಳಲ್ಲಿ ಸಾರ್ವಜನಿಕರು ಸಹಕರಿಸಿದ್ದಿದೆ."

ಶಾಂತಾಬಾಯಿಯವರ ಸದನದ ದೀರ್ಘವಾಸ್ತವ್ಯದ ಒಂದೆರಡು ನೆನಪು ಹೇಳುವಂತೆ ಕೇಳಿಕೊಂಡೆ.

"ಒಬ್ಬಾಕೆ ೧೨-೧೩ ವರ್ಷದ ಹುಡುಗಿ, ರೇಲ್ವೆ ಪ್ಲಾಟಫಾರ್ಮಿನ ಮೇಲೆ ಬಸವಳಿದು ಮಲಗಿದ್ದಳು. ಸುದ್ದಿ ರಾಜೀವಕ್ಕನಿಗೆ ತಲುಪಿದಾಗ ಕರೆತಂದು ಆಶ್ರಯವಿತ್ತರು. ಆದರೆ ಆಕೆ ಗರ್ಭವತಿಯಿದ್ದದ್ದು ತಿಳಿದಾಗ ನಿಯಮಾವಳಿಯ ಪ್ರಕಾರ ಸದನದಲ್ಲಿಡುವಂತಿರಲಿಲ್ಲ. ಹೆರಿಗೆಯ ತನಕ ತಾತ್ಪೂರ್ತಿಕವಾಗಿ ಬೇರೆಡೆ ಇಡಬೇಕಾಯಿತು. ಆದರೆ ಮಗು ಉಳಿಯಲಿಲ್ಲ. ನಂತರ ಅವಳನ್ನು ಕರೆತಂದು ಓದಿಸಿದರು. S. S. L. C. ಮಾಡಿಸಿದರು. ನಂತರ ಯೋಗ್ಯವರನನ್ನು ಹುಡುಕಿ ಮದುವೆ ಮಾಡಿಕೊಟ್ಟರು. ಆಕೆ ಸಾಂಸಾರಿಕ ಜೀವನವನ್ನು ನೆಮ್ಮದಿಯಿಂದ ನಡೆಸಿದರೂ. ಆಕೆಯ ಅನಾಥ ಹಿನ್ನೆಲೆ ಮತ್ತು ಅತ್ಯಾಚಾರದ ದುರ್ದೈವಿ ಘಟನೆಗಳಿಂದ ಆಕೆಯ ಜೀವನವೆಲ್ಲಿ ಮಣ್ಣುಗೂಡುತ್ತದೋ ಎಂಬ ಆತಂಕ ಶಿವರಾವ್ ದಂಪತಿಗಳಿಗೆ ಇದ್ದೇ ಇತ್ತು. ಪುಣ್ಯಕ್ಕೆ ಹಾಗಾಗಲಿಲ್ಲ.

"ಇನ್ನೊಬ್ಬ ಹುಡುಗಿಯ ನೆನಪು ಸ್ಫುಟವಾಗಿದೆ. ಸದನದ ಮೊದಲ ದಿನಗಳವು. ೧೦ ರ ಹುಡುಗಿ. ಒಳ್ಳೆಯ ಚಲುವೆಯಾಗಿದ್ದಳು. ತೀರ ಬಡಕುಟುಂಬಕ್ಕೆ ಸೇರಿದಾಕೆ. ಆಕೆಗೆ ಸ್ವಾವಲಂಬನ ಸಾಧ್ಯವಾಗಲೆಂದು ಬೇಕರಿ ಕೆಲಸ ಕಲಿಯಲು ಪರಿಚಿತರ ಹತ್ತಿರ ಇಟ್ಟೆವು. ಆದರೆ ಆಕೆಯ ಪ್ರಾಯಕ್ಕೆ ಮೀರಿ ಕೆಲಸ ಮಾಡಿಸಿ, ಸರಿಯಾಗಿ ಹೊಟ್ಟೆಗೂ ಹಾಕದೇ, ಸೊರಗಿದ ವಿಚಾರ ತಿಳಿದಾಗ ಗಾಬರಿಯಿಂದ ಸದನಕ್ಕೆ ಕರೆತಂದೆವು. ಸಣ್ಣಗೆ ಜ್ವರ ಹಲವಾರು ದಿನಗಳಿಂದ ಬರುತ್ತಿತ್ತಂತೆ. ಡಾಕ್ಟರರಿಂದ ವಿವರವಾಗಿ

ಪರೀಕ್ಷಿಸಿದಾಗ ಟಿ. ಬಿ. ಎಂದು ತಿಳಿಯಿತು. ಚಿಕಿತ್ಸೆ ಪ್ರಾರಂಭಿಸಿದರು. ನಾಟಲಿಲ್ಲ. ಮೈಸೂರಿನ ಸ್ಯಾನಿಟೋರಿಯಂಗೆ ಕಳಿಸಿಕೊಡಲಾಯಿತು. ಆದರೂ ಪ್ರಯೋಜನವಾಗದೇ ಕೆಲವು ತಿಂಗಳಲ್ಲೇ ಆಕೆ ಸತ್ತುಹೋದಳು. ಆಕೆಯನ್ನು ತುಂಬ ಪ್ರೀತಿಸುತ್ತಿದ್ದೆ. ಮೊದಲಿನಿಂದ ಕಷ್ಟ-ಕಾರ್ಪಣ್ಯ ನೋಡಿ ನೋಡಿ ಮನಸ್ಸು ಗಟ್ಟಿಯಾಗಿದ್ದರೂ ಈ ಎಳೆಯಳ ಸಾವು ತುಂಬ ಗಾಸಿಮಾಡಿಬಿಟ್ಟಿತು! ಆಕೆ ತೀರಿಕೊಂಡದ್ದು ನವರಾತ್ರಿಯ ಗೊಂಬೆ ಕೂಡಿಸುವ ದಿನದಂದು. ಆ ನೆನಪಿಗೆ ಗೊಂಬೆ ಕೂಡಿಸಲು ಪ್ರಾರಂಭಿಸಿದೆ. ಇಂದಿಗೂ ಅದು ನಡೆದುಬಂದಿದೆ".

ಓದಿದ, ಅಲ್ಲಿದ್ದು ಶಿಕ್ಷಕಿ, ಇಂಜಿನಿಯರ್ ಪದವಿ ಪಡೆದು ಕೆಲಸಕ್ಕಿದ್ದು ಗಳಿಸಿ, ಮದುವೆಯಾಗಿ ಹೋದ ಹಲವು ಹೆಣ್ಣುಮಕ್ಕಳ ವಿಚಾರ ತಿಳಿಸಿದರು. ಸದನದ ಬೇರೆ ಬೇರೆ ಭಾಗಗಳನ್ನು ತೋರಿಸಿಕೊಂಡು ಬರುವಂತೆ ಸಹಾಯಕಿಗೆ ಹೇಳಿದರು ಶಾಂತಾಬಾಯಿ.

ಸದನದ ಆವರಣವೆಲ್ಲ ಸ್ವಚ್ಛವಾಗಿ ನಳನಳಿಸುತ್ತಿತ್ತು. ಮಕ್ಕಳು ಸಾಮೂಹಿಕ ಪ್ರಾರ್ಥನೆ ಮುಗಿಸಿ ತಿಂಡಿತಿನ್ನಲು ಕುಳಿತಿದ್ದವು. ಕಡಲೆ ಉಸುಳಿ, ಬರ್ಫಿ, ಬಾಳೆಹಣ್ಣುಗಳಿದ್ದವು, ಅಂದಿನ ಸಿಹಿತಿಂಡಿ ದಾನಿಯೊಬ್ಬರು ಕೊಡಮಾಡಿದ್ದು. ಬೆಳಿಗ್ಗೆ ಮಕ್ಕಳಿಗೆ ಗಂಜಿ, ಹಾಲು ಕೊಡಲಾಗುತ್ತದೆ. ನಂತರ ಊಟ. ಅನ್ನಹುಳಿ, ಪಲ್ಯ, ಮಜ್ಜಿಗೆಗಳು ಇರುತ್ತವೆ. ಶಾಲೆಗೆ ಹೋಗಿಬಂದು ಸಾಯಂಕಾಲದ ತಿಂಡಿ ತಿನ್ನುತ್ತಾರೆ. ಚಿಕ್ಕವರಿಗೆ ಹಾಲುಕೊಡುತ್ತಾರೆ. ಸದನದಲ್ಲಿ ಕೊಟ್ಟಿಗೆ ಇದ್ದು ದಷ್ಟಪುಷ್ಟ ಹಸುಗಳು ಸಾಕಾಗುವಷ್ಟು ಹಾಲು ಹಿಂಡುತ್ತವೆ. ಕಡಿಮೆಬಿದ್ದುದನ್ನು ಕೊಳ್ಳುತ್ತಾರೆ. ಕೊಟ್ಟಿಗೆ ಕೆಲಸಕ್ಕೆ ಆಳು ಇಟ್ಟಿದ್ದಾರೆ.

ಒಂದೆಡೆ ದೊಡ್ಡ ಮಕ್ಕಳು ರವಿವಾರದ ಇಡ್ಲಿಯ ಉಪಹಾರಕ್ಕೆ ರವೆ ಬೀಸುತ್ತಿದ್ದರು. ತಿಂಡಿತಿಂದ ತಟ್ಟೆಯನ್ನು ಮಕ್ಕಳೇ ತೊಳೆದು ಇಡುತ್ತಿದ್ದವು. ಅವಕ್ಕಿಂತ ಚಿಕ್ಕವಯಸ್ಸಿನ ಮಕ್ಕಳು ಒಣಗಿದ ಬಟ್ಟೆಗಳನ್ನು ಮಡಚಿ ಇಡುತ್ತಿದ್ದರು. ಮಕ್ಕಳನ್ನು ೧೦ ಗುಂಪುಗಳಲ್ಲಿ ವಿಭಾಗಿಸಿದ್ದಾರೆ. ಸ್ವಲ್ಪ ಹಿರಿಯ ಹುಡುಗಿ ಅಕ್ಕನಾಗಿ ಚಿಕ್ಕವರನ್ನು ನಿಯಂತ್ರಿಸುತ್ತಾಳೆ. ತಲೆ ಬಾಚುವದು, ಮೀಯಿಸುವದು, ಓದು-ಬರೆಹದ ಮೇಲ್ವಿಚಾರಣೆ ಮಾಡುವದು. ಜ್ವರ-ಕೆಮ್ಮು ಕಾಣಿಸಿಕೊಂಡರೆ ಮೇಟ್ರನ್‌ಗೆ ತಿಳಿಸುವದು, ವೇಳೆ ವೇಳೆಗೆ

ಔಷಧ ಕೊಡಿಸುವದು, ಇವೆಲ್ಲ ಈ ಪುಟ್ಟ ಅಕ್ಕನ ಜವಾಬ್ದಾರಿಗಳೇ! ಹತ್ತಿರದ ಒಬ್ಬಿಬ್ಬರು ಡಾಕ್ಟರರು ಉಚಿತವಾಗಿಯೋ, ತೀರ ಕಡಿಮೆ ಫೀಗೋ ಚಿಕಿತ್ಸೆ ಒದಗಿಸುತ್ತಾರೆ.

ಪ್ರಾರ್ಥನಾ ಮಂದಿರ, ಊಟದ ಹಾಲು ಎಲ್ಲೆಲ್ಲೂ ಅಚ್ಚುಕಟ್ಟುತನಗಳು ಕಾಣುತ್ತಿದ್ದವು. ಹುಡುಗಿಯರು ಬೆಳೆದ ನಂತರ ಸದನದ ಹೊಣೆಯ ಬಗ್ಗೆ ಶಾಂತಾಬಾಯಿಯವರಿಗೆ ವಿಚಾರಿಸಿದೆ.

೧೦ ನೇ ಕ್ಲಾಸು ಪಾಸುಮಾಡಿದೊಡನೆ ಕರೆದುಕೊಂಡು ಹೋಗಲು ಏಕಪಾಲಕ (ತಂದೆ ಅಥವಾ ತಾಯಿ)ರಿಗೆ ಹೇಳುತ್ತೇವೆ. ಹೆಚ್ಚಿನವರು ಆ ಸಮಯದ ತನಕ ಏನಾದರೂ ವ್ಯವಸ್ಥೆ ಮಾಡಿಯೇ ಇರುತ್ತಾರೆ. ಏನೂ ಅನುಕೂಲವಿಲ್ಲದವರು ಇಲ್ಲಿಯೇ ಇದ್ದು ಓದು ಮುಂದುವರೆಸಿದ್ದೂ ಇದೆ. ಹಲವಾರು ಕುಶಲಕೈಗಾರಿಕೆಗಳಲ್ಲಿ ಹುಡುಗಿಯರನ್ನು ಇಲ್ಲಿ ತರಬೇತುಗೊಳಿಸುವದರಿಂದ. ನೌಕರಿಗೆ ಯತ್ನಿಸಿದಾಗ ಸಿಕ್ಕೇ ಸಿಗುತ್ತದೆ. ಮದುವೆಗೆ ಕನ್ಯೆಯನ್ನು ಹುಡುಕಿಕೊಂಡು ಎಷ್ಟೋ ಜನ ಬರುತ್ತಾರೆ. ಹುಡುಗನ ಮನೆತನ, ಆರ್ಥಿಕ ಪರಿಸ್ಥಿತಿ, ಹಿನ್ನೆಲೆಗಳನ್ನು ಪರಿಶೀಲಿಸಿಯೇ ಮದುವೆ ಮಾಡಿಕೊಡಲು ಸಮ್ಮತಿಸುತ್ತೇವೆ. ಸದನವೇ ಅನಾಥ ಹುಡುಗಿಯರಿಗೆ ಮದುವೆ ಮಾಡಿಕೊಟ್ಟ ಉದಾಹರಣೆಗಳು ಹೇರಳವಾಗಿವೆ. ಇಂಥವರಿಗಾಗಿ ವಿವಾಹದ ಫಂಡ್ ಇದ್ದೇ ಇದೆ. ಬಡ್ಡಿ ಕೂಡುತ್ತ ಹೋಗುತ್ತದೆ.

"ಮಕ್ಕಳೆಲ್ಲ ವಿವಿಧ ಜಾತಿ-ಜನಾಂಗಗಳಿಂದ ಬಂದರೂ ತೀರ ಚಿಕ್ಕಂದಿನಿಂದ ಒಟ್ಟಿಗೇ ಬೆಳೆದು ಜೊತೆಜೊತೆಗೇ ಪ್ರಾರ್ಥನೆ, ಓದು ಆಟ-ಪಾಟ-ಊಟಗಳನ್ನು ಮಾಡುತ್ತ ಯಾವ ಜಾತಿ ಭೇದವಿಲ್ಲದೇ ಬೆಳೆಯುತ್ತವೆ. ಆಡಳಿತವರ್ಗದ ಒಬ್ಬಿಬ್ಬರನ್ನು ಬಿಟ್ಟರೆ ಅನಾಥ ಮಕ್ಕಳ ಹಿನ್ನೆಲೆ ಯಾರಿಗೂ ಗೊತ್ತಿರುವದಿಲ್ಲ! ಇದೇನು ಕಡಿಮೆ ಸಾಧನೆಯಲ್ಲ ಅಲ್ಲವೇ?" ಶಾಂತಾಬಾಯಿ ಅಭಿಮಾನದಿಂದ ನುಡಿದರು.

ಮೈ ಕೈತುಂಬಿಕೊಂಡ ಮಕ್ಕಳು ಅಂಗಳದಲ್ಲಿ ಆಡುತ್ತಿದ್ದವು. ಕೆಲವು ಹುಡುಗಿಯರು ಹೂ ಗಿಡಗಳಿಗೆ ನೀರು • ಹನಿಸುತ್ತಿದ್ದರು. ಪುಟ್ಟ

ಉದ್ಯಾನದಲ್ಲಿ ಗುಲಾಬಿ, ಮಲ್ಲಿಗೆ, ನಂದಿಬಟ್ಟಲು, ಕರವೀರದ ಗಿಡಗಳು ಹೂ ತಳೆದು ನಿಂತಿದ್ದವು.

"ಒಮ್ಮೊಮ್ಮೆ ಅನಿಸುತ್ತದೆ. ಬಡವರಿಂದ ತುಂಬಿದ ನಮ್ಮ ದೇಶದಲ್ಲಿ, ಸಹಸ್ರಾರು-ಲಕ್ಷಾವಧಿ ಮಕ್ಕಳು, ತಂದೆ-ತಾಯಿಯಿದ್ದ ಇತರ ಎಷ್ಟೊ ಮಕ್ಕಳಿಗಿಂತ ನಮ್ಮವು ಹೆಚ್ಚಿನ ನೆಮ್ಮದಿಯಿಂದ ಇವೆ! ನಿಷ್ಕಾರಣವಾಗಿ ಅವರನ್ನು ದುಡಿಸುತ್ತಿಲ್ಲ. ಇತರರ ಸೇವೆಗೆ ಅವರನ್ನು ಬಳಸುತ್ತಿಲ್ಲ. ಸ್ವಾವಲಂಬನೆಗೆ ಅವರನ್ನು ಸಿದ್ಧಮಾಡುತ್ತಿದ್ದೇವೆ. ಈ ತುಟ್ಟಿಯ ದಿನಗಳಲ್ಲೂ ಅವರಿಗೆ ಹಾಲು-ಗಂಜಿ, ಎರಡು ಹೊತ್ತು ಊಟ, ಒಂದು ಹೊತ್ತು ತಿಂಡಿ. (ಉಪ್ಪಿಟ್ಟು, ಅವಲಕ್ಕಿ, ಇಡ್ಲಿ, ಪೂರಿ, ಭಾತುಗಳು) ಮೇಲಿಂದ ಮೇಲೆ ಸವಿಯೂಟ. ಸ್ಕೂಲಿಗೆ ಹೋಗಲು, ಬೇಕಷ್ಟು ಓದಲು ಅವಕಾಶ, ಸ್ಲೇಟು, ಪುಸ್ತಕ, ಪೆನ್‌ಗಳಿಗೆ ಕೊರತೆಯಿಲ್ಲ. ಕೊರತೆಯೆಂದರೆ ಒಂದೇ ! ಮಕ್ಕಳಿಗೆ ಬೇಕಾದ ತಾಯಿಯ ಮಮತೆ...."

ಆದರೆ ಅವರೇ ಈ ನೂರಾರು ಮಕ್ಕಳಿಗೆ ತಾಯಿಯಾಗಿ ಮುಂದುವರಿದಿದ್ದಾರಲ್ಲ! ಅದನ್ನವರು ಹೇಳಿಕೊಳ್ಳಲಿಲ್ಲ.

ಬೆಳಿಗ್ಗೆ ನಾಲ್ಕು ಗಂಟೆಗೇ ಎದ್ದು ಶಾಂತಾಬಾಯಿ ಸ್ನಾನ ಪೂಜೆಗಳನ್ನು ಮುಗಿಸುತ್ತಾರೆ. ಮಕ್ಕಳಿಗೆ ಬೆಳಗಿನ ತಿಂಡಿ ತಾವೇ ಹಂಚಿದ ಹೊರತು ಅವರಿಗೆ ಸಮಾಧಾನವಿಲ್ಲ. ತಾವೂ ಉಪಹಾರ ಮುಗಿಸಿ ಬೆಳಿಗ್ಗೆ ಮಧ್ಯಾಹ್ನ ಒಳಗಿನ ಹಜಾರದಲ್ಲಿ ಬೆತ್ತದ ಖುರ್ಚಿಯಲ್ಲಿ ಕುಳಿತು ಎಲ್ಲದರ ಮೇಲ್ವಿಚಾರಣೆ ಮಾಡುತ್ತಾರೆ. ಇತ್ತೀಚೆಗೆ ಕಣ್ಣು ಮಸುಕಾಗಿದೆ. ನೆರವು ಇಲ್ಲದೇ ಓಡಾಟ ಕಷ್ಟವಾಗಿದೆ. ಆದರೆ ಅವರ ನೆನಪಿನ ಶಕ್ತಿ ಅಗಾಧವಾದದ್ದು. ಸೇವಾಸದನದಲ್ಲಿ ಬೆಳೆದು ತಮ್ಮ ಬಾಳನ್ನು ರೂಪಿಸಿಕೊಂಡು ಹೊರಟುಹೋದ ನೂರಾರು ಜನರ ಹೆಸರು. ಹಿನ್ನೆಲೆಗಳ ನೆನಪು ಇಟ್ಟಿದ್ದಾರೆ. ಸಾಕಷ್ಟು ಜನ ಆಗಾಗ ಬಂದು, ಕಂಡು ಮಾತನಾಡಿಸಿ ನಮಸ್ಕರಿಸಿ ಹೋಗುತ್ತಾರೆ. ಅವರುಗಳು ಇವರ ಕೈಕಾಲು ತಬ್ಬಿ ಅಮ್ಮಾ! ಎಂದು ಅಕ್ಕರೆಯಿಂದ ಉದ್ಗರಿಸಿದಾಗ ಅಪರಿಚಿತರ ಕಣ್ಣೂ ಒದ್ದೆಯಾಗುತ್ತವೆ.

ಬಂದು ಹೋದವರೊಡನೆ, ಸದನದ ಆಡಳಿತ ವರ್ಗದವರೊಡನೆ ಮಾತು-ಕತೆ, ವಿಚಾರ ವಿಮರ್ಶೆಗಳಲ್ಲಿ ದಿನ ಕಳೆಯುತ್ತದೆ. ಸದನದ ಊಟ-ತಿಂಡಿಯಲ್ಲಿ ಪಾಲುಗೊಳ್ಳುತ್ತಾರೆ. ತಮ್ಮ ಹಲವಾರು ಅನುಭವಗಳನ್ನು


ನಿರ್ವಿಕಾರವಾಗಿ ನೆನಪಿಸಿಕೊಳ್ಳುತ್ತಾರೆ. ಆಶ್ರಮದಲ್ಲಿದ್ದು ಕಲಿತು ದೊಡ್ಡ ಹುದ್ದೆಗೇರಿದ ನಾಲ್ವರಿದ್ದಾರೆ. ಹಲವರು ನರ್ಸ್, ಶಿಕ್ಷಕಿ, ಕ್ಲಾರ್ಕ್ ಹುದ್ದೆಯಲ್ಲಿದ್ದಾರೆ. ಹೆಚ್ಚಿನವರು ಮದುವೆಯಾಗಿ ನೆಮ್ಮದಿಯ ಗೃಹಿಣಿಯರಾಗಿದ್ದಾರೆ.

ಸದನದ ಮುಖ್ಯಸ್ಥೆಗೆ ಅತ್ಯವಶ್ಯವಾದ ಗುಣ ಯಾವುದು? ಕೆದಕಿ ಕೇಳಿದೆ.

"ಅಪಾರ ಸಹನೆ, ಎಣೆಯಿಲ್ಲದ ಸಹನೆ! ನಾನು ಮಕ್ಕಳನ್ನು ಗದರಿಸಿದ್ದಾಗಲಿ, ಹೊಡೆದದ್ದಾಗಲಿ ಇಲ್ಲ. ನನಗಿಂತ ರಾಜೀವಕ್ಕನ ಸಹನೆ ಅಪಾರವಾಗಿತ್ತು. ಸಿಟ್ಟು-ಆಕ್ರೋಶ ಮಾಡುತ್ತಿದ್ದ ಮಕ್ಕಳನ್ನು ಅವರು ನಿಯಂತ್ರಿಸುವ ರೀತಿ ಕುತುಹಲಕಾರಿಯಾಗಿತ್ತು. ಕತೆ ಹೇಳುವದು, ಅವು ಮಾಡಬಹುದಾದಂಥ ಕೆಲಸ ಹೇಳುವದು, ಲಕ್ಷ ಬೇರೆಡೆ ಹೋದಾಗ ಮಕ್ಕಳು ಸಿಟ್ಟು ಮರೆಯುವದು ಸ್ವಾಭಾವಿಕವಲ್ಲವೇ....? ಬಹಳಷ್ಟು ವಿಚಾರಗಳಲ್ಲಿ ಅವರನ್ನೇ ಅನುಸರಿಸಿದ್ದೇನೆ!" ಗದ್ಗದಿತರಾಗಿ ಮಾತು ನಿಲ್ಲಿಸಿದರು.

ಶಾಂತಾಬಾಯಿ ಬದುಕಿನಿಂದ ಏನನ್ನೂ ನಿರೀಕ್ಷಿಸಿದವರಲ್ಲ. ಎಳೆತನದಲ್ಲೇ ಯಾವತ್ತೂ ಕಷ್ಟ ಕಾರ್ಪಣ್ಯಗಳನ್ನು ಎದುರಿಸಿದರು. ಗೃಹಿಣಿಯಾಗಿ, ತಾಯಿಯಾಗಿ ಬಾಳಲು ವಿಧಿ ಅವಕಾಶ ಕೊಡಲಿಲ್ಲ. ಆದರೆ ಸ್ವಪ್ರಯತ್ನದಿಂದ ಮುಂದೆ ಬಂದರು. ಸುಕರ್ಥಂಕರ ದಂಪತಿಗಳಿಂದ ಮಾರ್ಗದರ್ಶನ ಪಡೆದು, ಅವರ ಜಾಡಿನಲ್ಲೇ ಮುಂದುವರಿದರು. ದಿಕ್ಕಿಲ್ಲದೇ ಸದನಕ್ಕೆ ಆಶ್ರಯ ಹುಡುಕಿಕೊಂಡು ಬಂದವರು. ಅದರ ಮುಖ್ಯಸ್ಥೆ ಆದರು. ಯಾರ ವಶೀಲಿಯಿಂದ ಅಲ್ಲ, ಶಿಫಾರಸಿನಿಂದಲ್ಲ, ಶಿಕ್ಷಣದಿಂದಲೂ ಅಲ್ಲ. ಕಠಿಣಶ್ರಮದಿಂದ, ಅಸಾಮಾನ್ಯ ತಾಳ್ಮೆಯಿಂದ, ಮೇರೆಯರಿಯದ ಮಮತೆಯಿಂದ, ತ್ಯಾಗಬುದ್ಧಿಯಿಂದ ಅಸಂಖ್ಯರಿಗೆ ತಾಯಿಯಾದರು. ತಾವು ಕಹಿಯುಂಡರೂ ಇತರರ ಕಹಿಮರೆಸಲು ಹೆಣಗಿದರು. ಅಸಂಖ್ಯ ಅನಾಥರಿಗೆ ತಾಯಾದರು.

* ಸೇವಾಸದನಕ್ಕೆ ಕೊನೆಗೊಮ್ಮೆ ಪಕ್ಕಾ ಕಟ್ಟಡ ೧೯೬೮ ರ ಕೊನೆಯಲ್ಲಿ ಸಿದ್ಧವಾಗಿ ಕಾರ್ಯಕರ್ತರು, ಸಂಘಟಕರು, ನಿವಾಸಿಗಳು, ನೆಮ್ಮದಿಯಿಂದ ಉಸಿರಾಡುವಂತೆ ಆಗಿದೆ.



ಶಿಲ್ಪಿ-ಕಲಾವಿದೆ : ಸುಭಾಷಿಣಿ ದೇವಿ

(೧೯೨೦)

ನಂಜುಂಡೇಶ್ವರ ದೇವಾಲಯ, ರಸಬಾಳೆ ಹಣ್ಣುಗಳಂತೆ, ಕಲಾವಿದೆ ಸುಭಾಷಿಣಿ ದೇವಿ ತಮ್ಮ ಕರ್ಮಭೂಮಿಯಾದ ನಂಜನಗೂಡಿಗೆ (ಮೈಸೂರು ತಾಲೂಕು) ಹೆಚ್ಚಿನ ಶ್ರೇಯಸ್ಸು ತಂದುಕೊಟ್ಟಿದ್ದಾರೆ. ಊರಿನ ಮುಖ್ಯರಸ್ತೆಯ ಪಕ್ಕದಲ್ಲಿಯೇ ಸ್ಥಾಯಿಯಾಗಿ ನೆಲೆಸಿದ್ದರೂ ನೆರೆ-ಹೊರೆಯವರು ಅವರ ಇರುವಿನ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದ್ದರಿಂದ, ಅವರಿವರನ್ನು ವಿಚಾರಿಸಿದಾಗಲೇ ಅವರ ಕಲಾಶಾಲೆಯನ್ನು ಕಂಡುಹಿಡಿಯುವದು ಸಾಧ್ಯ. ಹೊರಅಂಗಳದಲ್ಲಿ ಶಿಲಾಫಲಕಗಳಲ್ಲಿ ಮೂಡಿ

ಬರುತ್ತಿರುವ ದೇವ-ದೇವತೆಗಳು ಅಲ್ಲಲ್ಲಿ ತಮ್ಮ ಸ್ಥಾನ ಭದ್ರಪಡಿಸಿಕೊಂಡಿದ್ದಾರೆ. ಹಿಂದಿನ ಕಾಲದ ಮನೆಯಾದರೂ ಚೊಕ್ಕಟವಾಗಿ, ಅಚ್ಚುಕಟ್ಟಾಗಿ ಇಟ್ಟ ರೀತಿಯಿಂದಲೇ ಇದೊಂದು ಕಲಾಮಂದಿರವೆಂದು ಅನಿಸದಿರದು. ತಮ್ಮ ಮನೆಗೆ ಯಾರೇ ಬಂದರೂ ಆದರದ ಸ್ವಾಗತ ಕೋರಿ, ಮನದಣಿ ಆದರೋಪಚಾರ ಒದಗಿಸುವ ಪರಿಪಾಠವನ್ನು ಆರೂವರೆ ದಶಕದ ಈ ಕಲಾವಿದೆ ಬೆಳೆಸಿಕೊಂಡು ಬಂದಿದ್ದಾರೆ.

ಮೈಸೂರಿನ 'ಜಗನ್ನಾಥ್ ಸ್ಟೋರ್ಸ್', ದೇಶವಿದೇಶಗಳ ಅಪರೂಪದ ಕಲಾವಸ್ತುಗಳನ್ನು ಮಾರುವ (ಕ್ಯೂರಿಯೋ ಶಾಪ್) ಅಂಗಡಿ ಮಾಲಕ ವೆಂಕಟೇಶಯ್ಯನವರು ಕಲೆ-ವಿಜ್ಞಾನಗಳಲ್ಲಿ ಸಮಾನ ಆಸಕ್ತಿಯಿದ್ದವರು. ವೈದ್ಯಕೀಯ ಅಭ್ಯಾಸಕ್ಕೆಂದು ಕಲಕತ್ತೆಗೆ ಹೋಗಿ. ಅರ್ಧಕ್ಕೆ ಕಲಿಯು ವಿಸ್ಮಯದಿಂದ ಆಕರ್ಷಿತರಾಗಿ, ಕೃತ್ರಿಮ ಮುತ್ತು ತಯಾರಿಸುವ ತರಬೇತಿಗೆಂದು ಜಪಾನಿಗೆ ಹೋಗಿ ಬಂದರು. ಸಾಕಷ್ಟು ಪ್ರೋತ್ಸಾಹವಿಲ್ಲದೆ ಈ ತರಬೇತಿಯ ಉಪಯೋಗವಾಗದೆ. ಕ್ಯೂರಿಯೋ ವ್ಯಾಪಾರದಲ್ಲಿ ತೊಡಗಿದರು. ಅವರ ಕಿರಿ ಮಗಳು ಸುಭಾಷಿಣಿ ಎಳೆಯ ವಯಸ್ಸಿನಲ್ಲೇ ಚಿತ್ರವಿಚಿತ್ರ ಚಿತ್ರಗಳನ್ನು ಬಿಡಿಸಿ ಬಣ್ಣ ತುಂಬುವದರಲ್ಲಿ ಆನಂದಿಸುತ್ತಿದ್ದಳು. ತಂದೆಯವರ ಜಗನ್ನಾಥ ಕಲಾಸಂಗ್ರಹಾಲಯದ ಚಮತ್ಕಾರಗಳ ಗೊಂಬೆಗಳನ್ನು ನೋಡಿ. ಈ ಪುಟಾಣಿ ಹುಡುಗಿ ಅವರ ಪ್ರತಿಕೃತಿಗಳನ್ನು ರಚಿಸಲಾರಂಭಿಸಿದಾಗ, ವೆಂಕಟೇಶಯ್ಯನವರಿಗೆ ಮೀರಿದ ಅಭಿಮಾನ. ಅಂತೆಯೇ ಮಗಳ ಕಲಾಭಿರುಚಿಗೆ ನೀರೆರೆದು ಎಲ್ಲ ಬಗೆಯಿಂದ ಪ್ರೋತ್ಸಾಹ ನೀಡಲಾರಂಭಿಸಿದರು. ಚಿತ್ರ ಶಿಲ್ಪಗಳ ನಿರ್ಮಿತಿಯಲ್ಲಿ ಮಿಗಿಲೆನಿಸಿಕೊಂಡ ಕಲಾತಪಸ್ವಿ ಕೆ. ವೆಂಕಟಪ್ಪನವರು, ವೆಂಕಟೇಶಯ್ಯನವರ ಆಪ್ತ ಸ್ನೇಹಿತರು. ಅಂತೆಯೇ ಪ್ರತಿ ಸಂಜೆ ಸ್ನೇಹಿತರ ಸ್ಟೋರ್ಸ್ ಸಂದರ್ಶಿಸಿ ವಿಚಾರ-ವಿಮರ್ಶೆ ನಡೆಸಿದಾಗಲೇ ಇಬ್ಬರಿಗೂ ನೆಮ್ಮದಿ. ತೀರ ಕಟ್ಟುನಿಟ್ಟಿನ ಜೀವನ ನಡೆಸುತ್ತಿದ್ದ ವೆಂಕಟಪ್ಪನವರು, ಯಾರನ್ನೂ ಹತ್ತಿರ ಸೇರಿಸುತ್ತಿರಲಿಲ್ಲ. ಆದರೆ ಎಳೆಯ ಸುಭಾಷಿಣಿಯ ಸುಪ್ತ ಕಲಾಚೇತನವನ್ನು ಗುರುತಿಸಿ. ಒಂದಿಷ್ಟೂ ಅನುಮಾನಿಸದೆ ಶಿಷ್ಯೆಯನ್ನಾಗಿ ಸ್ವೀಕರಿಸಲು ಒಪ್ಪಿದ್ದರು. ಆದರೆ ಕಾರಣಾಂತರಗಳಿಂದ ವೆಂಕಟಪ್ಪನವರು ಬೆಂಗಳೂರಿಗೆ ಹೋಗಿ ನೆಲೆಸಿದ್ದರಿಂದ ಕಿರಿಯ ಕಲಾವಿದೆಯ ತರಬೇತಿ ಅರ್ಧಕ್ಕೆ ನಿಂತಿತು.

ಒಲ್ಲದ ಬಂಗಾಲಿ ಶೈಲಿ

ವೆಂಕಟೇಶಯ್ಯನವರು ಮಗಳನ್ನು ಶಾಂತಿನಿಕೇತನಕ್ಕೆ ಕಳಿಸುವ ವಿಚಾರದಲ್ಲಿ ಸ್ನೇಹಿತರ ಅಭಿಪ್ರಾಯ ಕೋರಿದಾಗ, ಸ್ವತಃ ಬಂಗಾಲಿ ಶೈಲಿಯ ತರಬೇತಿ ಹೊಂದಿದ ವೆಂಕಟಪ್ಪನವರು ಆ ವಿಷಯದಲ್ಲಿ ಉತ್ಸಾಹ ತೋರಲಿಲ್ಲ. ಆದಾಗಲೇ ತಮ್ಮದೇ ನಿರ್ದಿಷ್ಟ ಶೈಲಿಯನ್ನವರು ರೂಪಿಸಿಕೊಂಡಿದ್ದರು. ಶಿಷ್ಯೆ ಅದೇ ಸಂಪ್ರದಾಯ ಮುಂದುವರಿಸಲೆಂದು ಅವರ ವಿಚಾರವಿತ್ತೋ ಏನೋ, ಎಂದೇ "ಬಂಗಾಲಿ ಶೈಲಿಯಿಂದ ಅವಳು ಪ್ರಭಾವ ಹೊಂದುವುದು ಬೇಡ. ಅಲ್ಲದೆ ಅವಳಲ್ಲಿಯ ಕಲಾಕಮಲ ಅರಳಿ ಹೂವಾಗುವಂಥ ಹಿತಕರ ವಾತಾವರಣ ಸದ್ಯಕ್ಕೆ ಅಲ್ಲಿ ಇಲ್ಲ." ಎಂದು ತಾವು ಅವನೀಂದ್ರನಾಥ ಟಾಗೋರರ ಹತ್ತಿರ ತರಬೇತಿ ಹೊಂದುತ್ತಿದ್ದ ದಿನಗಳನ್ನು ನೆನೆಸಿಕೊಂಡು ಹೇಳಿದರು. ವೆಂಕಟಪ್ಪನವರು ಬೆಂಗಳೂರಿಗೆ ನಿರ್ಗಮಿಸಿದ ನಂತರ ಅರಮನೆಯ ಕಲಾವಿದ ಮತ್ತು ಪ್ರಸಿದ್ಧ ಶಿಲ್ಪಿ ಸಿದ್ಧಲಿಂಗಸ್ವಾಮಿಗಳು ಸುಭಾಷಿಣಿಗೆ ತರಬೇತಿ ನೀಡಬೇಕಾಗಿ ಬಂದಿತು. ಅರಮನೆಯ ಚಿತ್ರಶಿಲ್ಪವೈಭವ ರೂಪಿಸುವದರಲ್ಲಿ ಸ್ವಾಮಿಗಳದು ಹಿರಿಯ ಪಾತ್ರವಿತ್ತು. ಅಂದಿನ ದಿನಗಳಲ್ಲಿ ಮಹಾರಾಜರ ಮನ್ನಣೆ ಪಡೆಯುವದು. ಕಲಾವಿದರ ಕನಸಾಗಿತ್ತು. ಮಹಾರಾಜರ ಮೆಚ್ಚಿಗೆ ಬೃಹತ್ ಸಾಧನೆ ಎನಿಸಿಕೊಳ್ಳುತ್ತಿತ್ತು. ರಾಜಾಶ್ರಯದಲ್ಲಿ ಕಲಾಸಿದ್ಧಿಗೆ ಹೆಚ್ಚಿನ ಪ್ರೋತ್ಸಾಹವೂ ಇತ್ತು. ಅಂತೆಯೇ ಕಿರಿಯ ವಯಸ್ಸಿನ ಸುಭಾಷಿಣಿಗೂ ತನ್ನ ಒಂದು ಒಳ್ಳೆಯ ಕೃತಿಯನ್ನು ಮಹಾರಾಜರಿಗೆ ಅರ್ಪಿಸಬೇಕೆಂದು ಚಪಲವುಂಟಾಯಿತು. ಒಡೆಯರ್ ವಂಶಜರ ಕುಲದೇವತೆಯಾದ ಚಾಮುಂಡೇಶ್ವರಿಯ ತೈಲಚಿತ್ರವೊಂದನ್ನು ಹೆಚ್ಚಿನ ಪರಿಶ್ರಮದಿಂದ ರಚಿಸಿದಳು. ಆದರೆ ಪ್ರಭುಗಳ ದರ್ಶನವೇ ಜಟಿಲಸಮಸ್ಯೆಯಾಗಿ ಪರಿಣಮಿಸಿತು.

"ಪೂರ್ವ" ವಯಸ್ಸಿನ ಸುಭಾಷಿಣಿದೇವಿ ಮಹಾರಾಜರನ್ನು ಕಾಣಲು, ದರಬಾರ ಭಕ್ಷಿಗಳು ಸುತರಾಂ ಒಪ್ಪಲಿಲ್ಲ. ಆದ್ದರಿಂದ ಗುರುಗಳ ಕೊಠಡಿಯ ಬಳಿಯೇ ಸಂದರ್ಶನಕ್ಕೆ ಏರ್ಪಾಡು ಮಾಡುವದೆಂದು ಗುರುಗಳಾದ ಸಿದ್ಧಲಿಂಗಸ್ವಾಮಿಯವರು ನಿರ್ಧರಿಸಿದರು. ಅರಮನೆಯಲ್ಲಿಯ ಸ್ವಾಮಿಗಳ ಕೊಠಡಿಗೆ ಮಹಾರಾಜರು ಕ್ಲಪ್ತಕಾಲದಲ್ಲಿ ಬರುವದು ರೂಢಿಯಾಗಿತ್ತು. ಇಂಥ ಒಂದು ಸಂದರ್ಭದಲ್ಲಿ ಕಾದು ನಿಂತಃ ದೊಡ್ಡ ಬೆಳ್ಳಿಯ

ತಟ್ಟೆಯಲ್ಲಿಟ್ಟ ಚಾಮುಂಡೇಶ್ವರಿಯ ತೈಲಚಿತ್ರಕ್ಕೆ 'ಖಾಸಾಹಾರ' ಹಾಕಿ ಅವರಿಗೆ ಸಮರ್ಪಣೆ ಮಾಡಿದಳು ಸುಭಾಷಿಣಿ. ಗುರುಚರಣಕ್ಕೆ ಮೊದಲು ಎರಗಿ ಅನಂತರ ಮಹಾರಾಜರ ಪಾದಕ್ಕೆ ನಮಿಸಲು ಮರೆಯಲಿಲ್ಲ. ಒಂದೆರಡು ನಿಮಿಷ ಕಾಲ ಚಿತ್ರವನ್ನೇ ದಿಟ್ಟಿಸಿ ನೋಡಿ ಮಹಾರಾಜರು ಮೆಚ್ಚಿಗೆಯಿಂದ ತಲೆದೂಗಿದರು. ತೈಲಚಿತ್ರ ಹೊತ್ತು ಪರಿವಾರದವರು ಮಹಾರಾಜರನ್ನು ಹಿಂಬಾಲಿಸಿದರು. ಮರುದಿನ ತಮ್ಮ ಹಸ್ತಾಕ್ಷರವುಳ್ಳ ಮೆಚ್ಚಿಗೆಯ ಪತ್ರ ಮತ್ತು ಇನ್ನೂರು ರೂಪಾಯಿಗಳ ಸಂಭಾವನೆಯನ್ನು ಮರೆಯದೇ ಮಹಾರಾಜರು ಕಳಿಸಿದರು, ಆ ವರ್ಷದ ದಸರಾ ಸಂದರ್ಭದ ಪುರಸ್ಕೃತ ಕಲಾವಿದರಲ್ಲಿ ಸುಭಾಷಿಣಿಯೂ ಸೇರಿಕೊಂಡಿದ್ದಳು.

ಶಿಲ್ಪಶಾಸ್ತ್ರದ ಒಲವು

ವೆಂಕಟಪ್ಪನವರಿಂದ ಬಂಗಾಲಿ ಮೂಲದ, ರೇಖಾ ಪ್ರಾಮುಖ್ಯದ ಚಿಕಣಿ ಚಿತ್ರರಚನೆ ತನ್ನದಾಗಿ ಮಾಡಿಕೊಂಡಂತೆ, ಸಿದ್ಧಲಿಂಗಸ್ವಾಮಿಗಳಿಂದ ನಾಡಶೈಲಿಯ ಬೃಹದಾಕಾರದ ಘನಾಕೃತಿಗಳಿಗೆ ಚಿತ್ತಾಕರ್ಷಕ ವರ್ಣ ವೈಖರಿಗಳ ಅಲಂಕಾರ ನೀಡುವದನ್ನು ಸುಭಾಷಿಣಿ ಕರಗತ ಮಾಡಿಕೊಂಡಳು. ವರ್ಣಪ್ರಪಂಚದ ವಿಸ್ಮಯಗಳನ್ನು ಅರಿತು. ಸ್ಪಂದಿಸಿ, ಅಷ್ಟಕ್ಕೇ ತೃಪ್ತಿ ಹೊಂದದೆ, ಕಠಿಣವಾದರೂ ಶಾಶ್ವತರೂಪ ತಾಳುವ ಶಿಲ್ಪಕಲೆಯನ್ನು ರೂಢಿಸಿಕೊಳ್ಳಲು ಹವಣಿಸಿದಳು. ತನ್ನ ಮನದ ಹಂಬಲವನ್ನು ಗುರುಗಳಲ್ಲಿ ತೋಡಿಕೊಂಡಾಗ, ಕೋಮಲ ಕೈಗಳಿಗೆ ಕಲ್ಲು ಕಟೆಯುವ ಕಠಿಣ ಕೆಲಸ ಸಲ್ಲದೆಂದು ಗುರುಗಳು ಒಪ್ಪಲಿಲ್ಲ. ಆದರೆ ಹಠಬಿಡದ ಸುಭಾಷಿಣಿ, ಕಟೆಯುವ ಕೆಲಸ ನೋಡಿ ನೋಡಿಯೇ ರೂಢಿಸಿಕೊಳ್ಳಲಾರಂಭಿಸಿದಳು. ಈ ಹೆಣ್ಣು ತನ್ನ ಗಂಡೆದೆಯ ಛಲದ ಆಳ ಪರೀಕ್ಷಿಸಲು ಕೊನೆಗೆ ಗುರುವನ್ನು ಅಂಗಲಾಚಿ ಕೇಳಿಕೊಂಡಳು. ನಿರ್ವಾಹವಿಲ್ಲದೆ ಶಿಲ್ಪಕಲೆಯನ್ನು ಕಲಿಸಲು ಸ್ವಾಮಿಗಳು ಒಪ್ಪಿಕೊಂಡರು. ಸುಮುಹೂರ್ತದಲ್ಲಿ ಗಣೇಶನಿಗೆ ಪೂಜೆ ಸಲ್ಲಿಸಿ ಅವನದೇ ವಿಗ್ರಹ ಕಟೆಯಲಾರಂಭಿಸಿದಳು. ಹೊಯ್ಸಳ ಶೈಲಿಯಲ್ಲಿ ಅಲಂಕೃತವಾಗಿ, ಸೂಕ್ಷ್ಮ ಸಂವೇದನೆ ಮಂದಸ್ಮಿತ ಹೊಂದಿದ ಗಣಪನ ವಿಗ್ರಹ ನೋಡಿದಾಗ ಗುರುಗಳು ತಮ್ಮ ಕಣ್ಣುಗಳನ್ನೇ ನಂಬದೆ ಹೋದರು. ಆ ವರ್ಷದ ದಸರಾ ಪ್ರದರ್ಶನದಲ್ಲಿ ಆ ಗಣಪ ಪ್ರಥಮ ಬಹುಮಾನ

ಗಿಟ್ಟಿಸಿಕೊಂಡ! ತಾನು ಅತಿಯಾಗಿ ಪ್ರೀತಿಸಿದ ಆ ವಿಗ್ರಹವನ್ನು ಮುಂದೊಮ್ಮೆ ಸುಭಾಷಿಣಿ ಗುರುದಕ್ಷಿಣೆಯ ರೂಪದಲ್ಲಿ ಅರ್ಪಿಸಿಬಿಟ್ಟಳು.

ತಂದೆ-ತಾಯಿಯ ಜೊತೆಯಲ್ಲಿ ಸುಭಾಷಿಣಿ ಭಾರತದಾದ್ಯಂತ ಪ್ರವಾಸ ಮಾಡಿದಳು. ಬೇರೆ ಬೇರೆ ಪ್ರದೇಶದ ಶಿಲ್ಪಶ್ರೀಯ ಸಾವಿರ ರೂಪಗಳನ್ನು ಕಂಡು ಆನಂದಿಸಿದಳು. ಕಲಕತ್ತೆಯ ಪ್ರವಾಸದ ಒಂದು ಅನುಭವ ಹೇಳುವಾಗ ಅವರ ಕಣ್ಣು ಮಿನುಗುತ್ತವೆ. ಸ್ವತಃ ಕಲಾವಿದರಾಗಿದ್ದ ವೃದ್ಧ ಶ್ರೀಶಚಂದ್ರ ಚಟರ್ಜಿ ಎನ್ನುವವರ ಆಕಸ್ಮಿಕ ಪರಿಚಯ ಕಲಕತ್ತೆಯ ಮ್ಯೂಜಿಯಂನಲ್ಲಿ ಆಯಿತು. ತಂದೆ-ತಾಯಿಗಳ ಜೊತೆಗಿದ್ದ ಎಳೆಯಳನ್ನು ನೋಡಿ, "ಈಕೆ ಕಲಾವಿದೆಯಲ್ಲವೇ?" ಎಂದು ಕೇಳಿದಾಗ ಅವರಿಗೆಲ್ಲ ಆಶ್ಚರ್ಯ. ಶ್ರೀಶಚಂದ್ರರು ವೆಂಕಟಪ್ಪನವರನ್ನು ಚೆನ್ನಾಗಿ ಬಲ್ಲವರಾಗಿದ್ದರು. ಅಲ್ಲದೆ ದಿಲ್ಲಿಯ ಬಿರ್ಲಾ ಮಂದಿರಕ್ಕೆ ಹಲವಾರು ಕಲಾಕೃತಿಗಳನ್ನು ನಿರ್ಮಿಸಿದ್ದರು. ಲಂಡನ್ನಿನಲ್ಲೊಂದು ಬಿರ್ಲಾ ಮಂದಿರ ನಿರ್ಮಿಸುವ ಯೋಜನೆಯಲ್ಲಿ ವೆಂಕಟಪ್ಪನವರೊಂದಿಗೆ ಶ್ರೀಶಚಂದರಿಗೂ ಆಹ್ವಾನವಿತ್ತು. ಆದರೆ ಮುಂದೆ ದ್ವಿತೀಯ ಜಾಗತಿಕ ಯುದ್ಧ ಪ್ರಾರಂಭವಾಗಿ ಆ ಯೋಜನೆ ಕುಸಿದು ಬಿತ್ತು.

ದತ್ತು ಕೇಳಿದ ಶಿಲ್ಪಿ

ವಿಧುರರಾಗಿದ್ದ, ಮಕ್ಕಳಿಲ್ಲದ ಶ್ರೀಶಚಂದ್ರರು ಸುಭಾಷಿಣಿಯನ್ನು ಮೀರಿದ ಮಮತೆಯಿಂದ ಕಂಡರು. ತನಗೆ ಆಕೆಯನ್ನು ದತ್ತು ಕೊಡುವಂತೆ ವೆಂಕಟೇಶಯ್ಯ ದಂಪತಿಗಳನ್ನು ಕೇಳಿಕೊಂಡರು. ಅವರಾಗ ತಮ್ಮ ಕಲಾಪ್ರದರ್ಶನಕ್ಕೆ ಅಮೇರಿಕೆಗೆ ಹೊರಟಿದ್ದರು. ಸುಭಾಷಿಣಿಯನ್ನೂ ಕರೆದೊಯ್ದು ಅವಳ ಕಲಾಕೃತಿಗಳ ಪ್ರದರ್ಶನವನ್ನೂ ಏರ್ಪಡಿಸುವುದಾಗಿ ಹೇಳಿದರು. ಯುರೋಪಿನ ಕಲಾಶಾಲೆಗಳಿಗೆಲ್ಲ ಕರೆದೊಯ್ಯುವುದಾಗಿ ಆಶ್ವಾಸನೆ ನೀಡಿದರು. ಆದರೆ ಇವಾವುದಕ್ಕೂ ಮಾರು ಹೋಗದ ಸುಭಾಷಿಣಿ ಪಾಲಕರೊಂದಿಗೆ ಮೈಸೂರಿಗೆ ಹಿಂದಿರುಗಿದಳು. ಒಮ್ಮೆ ಸೋಮನಾಥಪುರಕ್ಕೆ ಹೋಗಿದ್ದಾಗ ಅಲ್ಲಿಗೆ ಬಂದಿದ್ದ ಆಸ್ಟ್ರೇಲಿಯನ್ ಕಲಾವಿದರೂ ಈಕೆಯ ಮುಖ ನೋಡಿದಾಕ್ಷಣ "ಈಕೆ ಕಲಾವಿದೆಯಷ್ಟೇ ಅಲ್ಲ ಮೂರು ನಾಲ್ಕು ಮಾಧ್ಯಮಗಳನ್ನು ರೂಢಿಸಿಕೊಳ್ಳಬಲ್ಲಾಕೆ" ಎಂದಿದ್ದರು. ಆ ಹಿರಿಯರ ಆಶೀರ್ವಾದದಿಂದಲೇ ನಂತರ ಚಿತ್ರಕಲೆ, ಶಿಲ್ಪಕಲೆ, ಪ್ಲಾಸ್ಟರ್ ಆಫ್

ಪ್ಯಾರಿಸ್‌ಗಳಲ್ಲಿ ಕಲಾಕೃತಿಗಳು ಸಾಧ್ಯವಾದವೆಂದು ತರುಣಿ ಸುಭಾಷಿಣಿ ಭಾವಿಸಿದಳು.

ಗುರುಹಿರಿಯರ ಆಶೀರ್ವಾದಗಳ ವಿಷಯದಲ್ಲಿ ತಾನು ಅದೃಷ್ಟವಂತೆಯೆಂದು ಸುಭಾಷಿಣಿದೇವಿ ಉದ್ಗರಿಸುತ್ತಾರೆ. ಗವಿಮಠದ ಗೌರಿಶಂಕರಸ್ವಾಮಿಗಳು ತನ್ನನ್ನು ಹರಸಿದ್ದಾರೆ ಎನ್ನುತ್ತಾರೆ. ಚಿಕ್ಕ ಮಹಾದೇವಿಯ ತೈಲಚಿತ್ರವನ್ನು ಅವರಿಗೆ ಅರ್ಪಿಸಲು ಹೋದಾಗ ಸ್ವಾಮಿಗಳಿಗೆ ಹತ್ತು ಹಲವಾರು ಹಣ್ಣುಗಳನ್ನು ಆಕೆ ಒಯ್ದಿದ್ದರು. ಅದು ಮಾವಿನ ಹಣ್ಣಿನ ಕಾಲವಾಗಿರಲಿಲ್ಲ. ಹೀಗಾಗಿ ಇಡೀ ಪೇಟೆ ಸುತ್ತಿ ಆರು ರೂಪಾಯಿ ಕೊಟ್ಟು ಒಂದು ಮಾವಿನ ಹಣ್ಣನ್ನು ತಂದು ಸುಂದರವಾಗಿ ಜೋಡಿಸಿದ ತಟ್ಟೆಯನ್ನು ಸ್ವಾಮಿಗಳಿಗೆ ಅರ್ಪಿಸಿದರು. ಸ್ವಾಮಿಗಳು ಮಾವಿನ ಹಣ್ಣನ್ನು ಸೋಜಿಗದಿಂದ ನೋಡಿ ಅದನ್ನೆತ್ತಿ ಆಶೀರ್ವಾದರೂಪದಲ್ಲಿ ಸುಭಾಷಿಣಿಗಿತ್ತರು. ಆಕೆ ಅದನ್ನು ತಂದು ಗುರುಗಳಿಗೆ ಕೊಟ್ಟರಂತೆ. ಗುರುಗಳು ಮಹಾರಾಜರಿಗೆ ಅರ್ಪಿಸಿದರಂತೆ. ಪುಣ್ಯಕ್ಕೆ ಅರಮನೆಯಿಂದ ತಿರುಗಿ ಅದು ಸುಭಾಷಿಣಿಯವರ ಬಳಿ ಬರಲಿಲ್ಲ! ಇನ್ನೊಮ್ಮೆ ಯುವರಾಣಿಯವರು ಅರಮನೆಗೆ ಬರಮಾಡಿಕೊಂಡು ಕೇಸರಿಹಾಲು, ಸುತ್ತು ವೀಳ್ಯಗಳಿಂದ ಸತ್ಕರಿಸಿ ಒಂದು ಚಿಕಣಿ ತೈಲಚಿತ್ರ ರಚನೆಗೆ ಪ್ರೋತ್ಸಾಹಿಸಿದರಂತೆ, ಚಿಕ್ಕವಯಸ್ಸಿನಲ್ಲಿ ಸ್ವಾಮಿಗಳು, ಕಲಾಪ್ರಪೂರ್ಣರು ಮಹಾರಾಜರು, ಮಹಾರಾಣಿಯವರೆಲ್ಲರಿಂದ ತಲೆದೂಗಿಸಿಕೊಂಡವರು, ಇಂದು ಇಳಿವಯಸ್ಸಿನಲ್ಲಿ ಕೇಳುವವರೇ ಇಲ್ಲದೆ ಒಂಟಿ ಜೀವನ ನಡೆಸುವ ಪ್ರಸಂಗ ಬಂದಿದೆ.

ಶಿಲ್ಪಕಲೆಯೇ ಸಂಸಾರ !

ಸ್ವತಃ ಧನಿಕರಾದ ತಂದೆ, ಯಾವುದಕ್ಕೂ ಕೊರತೆ ಬಾರದಂತೆ ತಮ್ಮಿಬ್ಬರು ಹೆಣ್ಣುಮಕ್ಕಳನ್ನು ಬೆಳೆಸಿದರು. ಮೈಸೂರು-ನಂಜನಗೂಡುಗಳಲ್ಲಿ ಆಸ್ತಿ ಹೊಂದಿದ್ದರು. ಹಿರಿಯ ಮಗಳ ಮದುವೆ ಮಾಡಿದರು. ಕಿರಿಯ ಸುಭಾಷಿಣಿ ಕಲೆಯನ್ನೇ ವರಿಸಿದ್ದಳು. ತನ್ನ ಕಲೆಗೆ ಬಾಧಕವಾಗುವ ಯಾವ ಸಾಂಸಾರಿಕ ಹೊಣೆಗಳೂ ಆಕೆಗೆ ಬೇಕಿರಲಿಲ್ಲ. ಹೀಗಾಗಿ ತಂದೆಯವರು ನಿರ್ವಾಹವಿಲ್ಲದೆ ಮದುವೆಯ ಯತ್ನವನ್ನು ಕೈಬಿಡಬೇಕಾಯಿತು. ಆದರೆ ತಂದೆ-ತಾಯಿಗಳು ಅಗಲಿದ ನಂತರ ಜಗತ್ತಿನ ಕ್ರೂರವ್ಯಾಪಾರಗಳನ್ನು

ಒಂದೊಂದಾಗಿ ಸುಭಾಷಿಣಿಯವರು ಎದುರಿಸಬೇಕಾಯಿತು. ಮಹಾರಾಜರು ನಿಗದಿಪಡಿಸಿದ ವರ್ಷಾಶನ ಇವರ ಕೈಗೆ ಹತ್ತಲೇ ಇಲ್ಲ! ಗುರುಗಳಿಗೆ ಒಪ್ಪಿಸಿದ ಹಲವಾರು ಕಲಾಕೃತಿಗಳು ಹೇಳಹೆಸರಿಲ್ಲದೆ ಯಾರ್ಯಾರಿಂದಲೋ ಮಾರಾಟವಾಗಿ ಹೋದವು. ಕಲಾವಿದರಿಗೆ ಸ್ವಾಭಾವಿಕವಾದ ವ್ಯವಹಾರ ಕುಶಲತೆಯ ಅಭಾವದಿಂದ, ಒಂದೊಂದೇ ಆಸ್ತಿ ಕರಗಲಾರಂಭಿಸಿತು. ವಸ್ತು-ಒಡವೆಗಳೂ ಕಣ್ಮರೆಯಾದವು. ಹಿಂದೆ ಹಲವು ಸಂದರ್ಭಗಳಲ್ಲಿ ನೆರವು ಪಡೆದವರೂ ಮೋಸ ಮಾಡಲಾರಂಭಿಸಿದರು. ೧೯೭೫-೭೬ ರ ಅಂತಾರಾಷ್ಟ್ರೀಯ ಮಹಿಳಾವರ್ಷದ ಕಲಾಪ್ರದರ್ಶನ ಪ್ರಶಸ್ತಿ ಪಡೆಯಲು ದಿಲ್ಲಿಗೆ ಹೋದಾಗ ಪ್ರಧಾನಮಂತ್ರಿ ಇಂದಿರಾಗಾಂಧಿಯವರ ಜೊತೆಗಿನ ಛಾಯಾಚಿತ್ರವು ಆಕರ್ಷಕವಾಗಿದೆ. ಅವರ ಯಾವ ಉತ್ತಮ ಕೃತಿಯೂ ಇಂದು ಅವರ ಬಳಿ ಇಲ್ಲ.


ಸುಭಾಷಿಣಿದೇವಿ ಯಾವುದೇ ಒಂದು ಶೈಲಿಗೆ ಮಾರು ಹೋಗದೆ, ಕೃತಿಯ ಸಂದರ್ಭ, ಭಾವ, ಸಮಂಜಸತೆಯನ್ನು ಮನಗಂಡು ಅನುಗುಣವಾದ ಶೈಲಿಯನ್ನು ಬಳಸಿಕೊಂಡಿದ್ದಾರೆ. ಬೆಣ್ಣೆ ಕೃಷ್ಣನನ್ನು ಚಿತ್ರಿಸುವಾಗ ಮೈಸೂರಿನ ಶೈಲಿಯ ಜೆಸ್ಸೋ ಮಾದರಿಯನ್ನೂ ಸ್ವೀಕರಿಸಿದ್ದಾರೆ. ಗಜಾಸುರ ಮರ್ದಿನಿಯನ್ನು ಮೂಡಿಸುವಾಗ ಹೊಯ್ಸಳ ಶೈಲಿಯನ್ನು, ಪೇಪರಮೆಶಿಯಲ್ಲಿ ಮಹಿಷಾಸುರ ಮರ್ದಿನಿಯನ್ನು ರೂಪಿಸುವಾಗ ಬಂಗಾಲಿ ಕಲಾ ಸಂಪ್ರದಾಯವನ್ನು ಅಳವಡಿಸಿಕೊಂಡಿದ್ದಾರೆ. ಸರಸ್ವತಿಯ ಜಲವರ್ಣ ಚಿತ್ರದ ಮೇಲೆ ರವಿವರ್ಮನ ಛಾಯೆ ಇದೆಯೇ ಎಂದು ಅನಿಸದಿರದು. ನೃತ್ಯಶಿವನ ಚಿತ್ರ ಕಂಡಾಗ ಲೇಪಾಕ್ಷಿ ಭಿತ್ತಿಚಿತ್ರಗಳು ಕಣ್ಣೆದುರಿಗೆ ನುಸುಳುತ್ತವೆ. ಕೈಲಾಸಪರ್ವತದಲ್ಲಿ ಶಿವನ ತಪಸ್ಸಿನ ಚಿತ್ರ ಹಲವು ಶೈಲಿಗಳ ಸಂಗಮವೆನಿಸದೇ ಇರದು.

ಕಲೆಗಾಗಿಯೇ ಜೀವನವನ್ನು ಮುಡುಪಾಗಿಟ್ಟ ಸುಭಾಷಿಣಿದೇವಿಗೆ ಸರಕಾರ ದೊಡ್ಡ ಮನಸ್ಸು ಮಾಡಿ ಎರಡು ನೂರು ರೂಪಾಯಿಗಳ ಮಾಸಾಶನ ಕೊಡುತ್ತಿದೆಯಂತೆ. ಅವರ ಆರ್ಥಿಕ ಸ್ಥಿತಿ ತಕ್ಕಮಟ್ಟಿಗಾದರೂ ಇದ್ದರೆ ಇದನ್ನೂ ಅವರು ಸ್ವೀಕರಿಸುತ್ತಿರಲಿಲ್ಲ. ವಂಚನೆ, ಮೋಸ, ಲಂಚ, ಮಾಮೂಲು, ಅಧಿಕಾರ, ವರ್ಚಸ್ಸುಗಳ ವಿಕೃತ ರೂಪಗಳನ್ನೆಲ್ಲ ಕಂಡು

ಸುಭಾಷಿಣಿದೇವಿ ತುಂಬ ನೊಂದಿದ್ದಾರೆ. ಕರ್ನಾಟಕದ ಏಕಮಾತ್ರ ಮಹಿಳಾ ಶಿಲ್ಪಿಯಾದ ಈ ಕಲಾವಿದೆಯನ್ನು ಕೊನೆಗೊಮ್ಮೆ ಗುರುತಿಸಿ ಈ ವರ್ಷದ ರಾಜ್ಯ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ಕೊಡಮಾಡಿರುವದು, ಅವರನ್ನು ಹತ್ತಿರದಿಂದ ಅರಿತ ಕೆಲವರಿಗಾದರೂ ನೆಮ್ಮದಿಯ ವಿಚಾರವಾಗಿದೆ.

ವಿ.ಸೂ. : ೧೯೯೯ ನೆ ವರ್ಷದ ಕೊನೆಯಲ್ಲಿ ಶ್ರೀಮತಿ ಸುಭಾಷಿಣಿದೇವಿ ಎಮ್. ಟಿ. ವಿ. ಆಚಾರ್ಯ ಗೌರವ ಪ್ರಶಸ್ತಿ (೧ ಲಕ್ಷ ರೂಪಾಯಿಗಳು ಹಾಗೂ ಫಲಕ) ಯಿಂದ ಸನ್ಮಾನಿಸಲ್ಪಟ್ಟರು.

◈ ◈ ◈



'ಸುಮಂಗಲಿ'ಯ ಸುಶೀಲಮ್ಮ

(೧೯೪೦)

ಗಾಂಧಿ ಜಯಂತಿ ಸಂದರ್ಭದಲ್ಲಿ ಗಾಂಧಿ ಶಾಂತಿಪ್ರತಿಷ್ಠಾನದವರು 'ಗಾಂಧೀಜಿಯವರ ದೃಷ್ಟಿಯಲ್ಲಿ ಮಹಿಳೆ' ಎಂಬ ವಿಷಯ ಕುರಿತು ಮಾತನಾಡಲು ಕೇಳಿಕೊಂಡಿದ್ದರು. ಭಾಷಣ ಬಿಗಿಯುವದು ಇಷ್ಟವಿಲ್ಲದಿದ್ದರೂ ಕಾರ್ಯಕ್ರಮ. ಸುಮಂಗಲಿ ಸೇವಾಶ್ರಮದಲ್ಲಿ ಇಟ್ಟುಕೊಂಡದ್ದರಿಂದ ಕೂಡಲೇ ಒಪ್ಪಿಕೊಂಡೆ. ನಿರ್ಗತಿಕ ಮಹಿಳೆಯರಿಗೆ ನೆಲೆಯೊಂದನ್ನು ಕಲ್ಪಿಸಿಕೊಡಲು ಈ ಸಂಸ್ಥೆ ಪರಿಶ್ರಮಿಸುತ್ತಿದೆಯೆಂದು

ಗೊತ್ತಿದ್ದರಿಂದ ಸಮೀಪದಿಂದ ಅಲ್ಲಿಯ ಕಾರ್ಯಕ್ರಮಗಳನ್ನು ಕಂಡು ಅರಿಯುವ ಉತ್ಸುಕತೆ ಇದ್ದೇ ಇತ್ತು.

ಬೆಂಗಳೂರು-ಬಳ್ಳಾರಿ ಹೆದ್ದಾರಿಯಲ್ಲಿ. ಹೆಬ್ಬಾಳ ಬಳಿ. ಬಲಕ್ಕೆ 'ಸುಮಂಗಲಿ-ಸೇವಾಶ್ರಮಕ್ಕೆ' ಎಂದು ನಿರ್ದೇಶಿಸುವ ಬೋರ್ಡು ಇದೆ. ಅಲ್ಲಿಂದ ಚೋಳನಾಯಕನ ಹಳ್ಳಿಯಲ್ಲಿ ಇರುವ ಈ ಆಶ್ರಮಕ್ಕೆ ಹೋಗುವ ಮುಕ್ಕಾಲು ಕಿಲೋಮೀಟರ ರಸ್ತೆ. ಭಯಾನಕವಾಗಿದೆ! ಕಲ್ಲು-ಚಪ್ಪಡಿ ಚೂಪಾಗಿ ಎದ್ದು ನಿಂತರೆ, ಅಟೋದ ಗಾಲಿಗಳೇ ಸಿಕ್ಕಿಹಾಕಿಕೊಳ್ಳುವ ತಗ್ಗುಗಳು ಬಂಪರ್ ನಾಚಿಸುವ ದಿನ್ನೆಗಳಿವೆ. ನಡುರಸ್ತೆಯಲ್ಲಿ ಹೊಟ್ಟೆ. ಬೆನ್ನು. ಮೈಗಳೆಲ್ಲ ಕಲಕಿಹೋಗುತ್ತವೆ. ಅಟೋ ಡ್ರಾಯವರನು ಹಿಡಿಶಾಪ ಹಾಕುತ್ತಿದ್ದಾಗ. ಬಾಯಿ ನನಗರಿಯದೇ ಅಯ್ಯಯ್ಯಪ್ಪ! ಅಬಬಾ! ಬಾಪರೇ! ಎಂದು ಧ್ವನಿ ಗೂಡಿಸುತ್ತಿತ್ತು. ಸ್ಪಾಂಡಿಲೈಟಿಸ್ ತೊಂದರೆಯಿರುವವರು. ಗರ್ಭಿಣಿಯರು ತಪ್ಪಿಕೂಡ ಈ ಕಡೆ ಹಾಯದಿದ್ದರೆ ಕ್ಷೇಮ! ಅಂದುಕೊಳ್ಳುತ್ತಿದ್ದಂತೆ ತುಂಬ ಕಷ್ಟದಿಂದಲೇ ಅಟೋದವನು ರಸ್ತೆ ಪಾರುಮಾಡಿ ಆಶ್ರಮದ ಬಾಗಿಲಲ್ಲಿ ನಿಲ್ಲಿಸಿದ. ಬಂಡೆಗಲ್ಲುಗಳ ನಡುವೆ ಹೋಗುವ ಈ ದಾರಿ. 'ಸುಮಂಗಲಿ'ಯ ಸ್ಥಾಪಕಿ ಬಿ. ಎಸ್. ಸುಶೀಲಮ್ಮನವರು ತುಳಿದು ಬಂದ ಕಷ್ಟಪರಂಪರೆಗಳ. ಅಡ್ಡಿ-ಆತಂಕಗಳ ದಾರಿಯ ಸಂಕೇತವಾಗಿರಬಹುದೇ? ಎಂದು ಬೆರಗುಪಡುತ್ತ ಸಾಬೀತಾಗಿ. ಮೂಳೆ ಮುರಿಯದೇ ಒಳಗೆ ಹೋಗುವಂತಾಗಿ ಉಸಿರುಗರೆಯುವಂತಾಯಿತು!

ಆಸ್ಬೆಸ್ಟಾಸ್ ಸೂರಿನ ಸಭಾಭವನ ಗಿಜಿಗುಡುತ್ತಿತ್ತು. ಅದು ಶಾಲೆ: ಆಪ್ತಾಲೋಚನೆಯ ಮಂದಿರ. ವ್ಯಾಪಾರದ ಕೊಡುಕೊಳಿಯ ಸ್ಥಳ ಎಲ್ಲವೂ ಆಗಿದ್ದು ಆಶ್ರಮವಾಸಿಗಳ ಬಹುಮುಖಿ ಜೀವನದ ಪರಿಚಯ ನೀಡುವಂತಿತ್ತು. ಬಿಳಿಬಟ್ಟೆ ಧರಿಸಿದ. ನಿರಾಭರಣೆ. ಕುಳ್ಳಗಿನ ಆದರೆ ಸದೃಢ ಶರೀರದ ಮಧ್ಯವಯಸ್ಸಿನ ಮಹಿಳೆಯೊಬ್ಬರು. ಇತರರೊಂದಿಗೆ ಸೇರಿ ದೊಡ್ಡಗುಡಾರ ಹಾಸಿ. ಕುರ್ಚಿ-ಮೇಜು ಹೊಂದಿಸುವದರಲ್ಲಿದ್ದರು. ಅವರೇ ಸುಶೀಲಮ್ಮ ಎಂದು ಗಾಂಧಿ ಪ್ರತಿಷ್ಠಾನದ ಜಯಲಕ್ಷ್ಮಿ ಅವರು ಪರಿಚಯಿಸಿದರು. ಸುಶೀಲಮ್ಮ ಆದರದಿಂದ ಬರಮಾಡಿಕೊಂಡು ಕುಳ್ಳಿರಿಸಿದರು. ಟೇಬಲ್ ಹಾಸು. ಕುಡಿಯುವ ನೀರು. ಮೈಕ್ ಎಲ್ಲವನ್ನು ಸ್ವತಃ ತಂದು ಅಣಿಗೊಳಿಸಿದರು. ನಡುನಡುವೆ ಬರುತ್ತಿದ್ದ ಫೋನುಕರೆಗಳತ್ತ

ಗಮನಕೊಡುತ್ತ. ಅತಿಥಿಗಳ. ಅಧ್ಯಕ್ಷರ. ಸಂದರ್ಶಕರ ಉಪಚಾರ-ಸತ್ಕಾರಗಳತ್ತ ಗಮನಕೊಟ್ಟರು. ನಂತರ ಸಂಸ್ಥೆಯ ಸಂಚಾಲಕಿಯಾಗಿದ್ದರಿಂದ ವೇದಿಕೆಗೂ ಬಂದುಕುಳಿತು. ಕಾರ್ಯಕ್ರಮದಲ್ಲಿ ಪಾಲ್ಗೊಂಡರು !

ಕಾರ್ಯಕ್ರಮವೇನೊ ಅನೌಪಚಾರಿಕವಾಗಿ ಆತ್ಮೀಯವಾಗಿ ನಡೆಯಿತು. ನನಗೆ ಸುಶೀಲಮ್ಮನವರೊಡನೆ ಕೆಲಸಮಯವನ್ನು ಕಳೆದು. ಅವರ ಬಹುಮುಖ ಚಟುವಟಿಕೆಗಳನ್ನು ಅವರ ಬಾಯಿಂದಲೇ ಕೇಳುವ ಆತುರ. ಆದರೆ ಅವರೋ! ಬಂದವರಿಗೆಲ್ಲ ಅಚ್ಚುಕಟ್ಟಾದ ಮಧ್ಯಾಹ್ನದೂಟದ ವ್ಯವಸ್ಥೆ ಮಾಡಿ. ಆಕಾಶವಾಣಿಯ ಚರ್ಚೆಯೊಂದರಲ್ಲಿ ಭಾಗವಹಿಸಬೇಕಾಗಿದ್ದರಿಂದ ಕ್ಷಮಿಸಲು ಕೇಳಿಕೊಂಡು. ಗಡಿಬಿಡಿಯಿಂದ ಹೊರಟೇಬಿಟ್ಟರು.

ಅವರು ಊಟಮಾಡಲಿಲ್ಲವಲ್ಲ? ಸುಮ್ಮನಿರಲಾರದೇ ಕೇಳಿದೆ. "ಅವರದು ಸ್ವಯಂಪಾಕ. ಹೊರಗಿನದನ್ನು ಏನನ್ನೂ ಸೇವಿಸುವದಿಲ್ಲ. ಎರಡೂಟ. ಅದೂ ಆಗೀಗ ತಪ್ಪಿಹೋಗುವದುಂಟು!" ಅವರ ಇನ್ನೊಂದು ಮುಖದ ಪರಿಚಯವಾಯ್ತು.

ಉತ್ತರ ಭಾರತದ. ಗುಜರಾಥದ ಮೂರು ವಾರಗಳ ಪ್ರವಾಸಕ್ಕೆ ಹೋಗಿದ್ದ ಸುಶೀಲಮ್ಮ ಹಿಂದಿರುಗಿ ಬಂದ ಬಳಿಕ ಮತ್ತೆ ಅವರನ್ನು ಹುಡುಕಿಕೊಂಡು ಹೋದೆ. ಅದೇ ವಿವಿಧೋದ್ದೇಶ ಹಾಲಿನಲ್ಲಿ ಸುಶೀಲಮ್ಮ ಹೊಲಿದು ತಯಾರಾಗಿದ್ದ ಕ್ವಿಲ್ಟ (ಕೌದಿ)ಗಳನ್ನು ಸ್ಟಾಕ್‌ಗೆ ತೆಗೆದುಕೊಳ್ಳುವವರ ಜೊತೆ ಪರಿಶೀಲನೆ ನಡೆಸಿದ್ದರು. ಮಲ್ಲೇಶ್ವರಂ. ಯಶವಂತಪುರಗಳ ಓಣಿಗಳಲ್ಲಿ ಮನೆಯಲ್ಲಿದ್ದುಕೊಂಡೇ ಹೊಲಿಗೆ ಮಾಡಿಕೊಡುವ ಮಹಿಳೆಯರಿದ್ದಾರೆ. 'ಸುಮಂಗಲಿ'. ಅವರಿಗೆಲ್ಲ ಹೊಲಿಗೆಯ ಕಚ್ಚಾಸಾಮಗ್ರಿ ಪೂರೈಸಿ ಯುನಿಫಾರ್ಮ್. ಕೈಚೀಲ. ರಜಾಯಿಗಳನ್ನು ಹೊಲಿಸಿ. ತಯಾರಾದವನ್ನು ಪಡೆದು ಕೂಲಿ ಕೊಡುತ್ತದೆ. ತಿಂಗಳಿಗೆ ಎಂಟುನೂರರಿಂದ ಎರಡುಸಾವಿರ ರೂಪಾಯಿ ಗಳಿಸುವವರಿದ್ದಾರೆ. ಸುಶೀಲಮ್ಮ ಯೋಜಿಸಿಕೊಂಡ ಹಲವಾರು ಸ್ವ-ಉದ್ಯೋಗ ಪ್ರಕಾರಗಳಲ್ಲಿ ಇದೂ ಒಂದು. ರಜಾಯಿಗಳೆಲ್ಲ ಸುಂದರ ಡಿಸೈನ್ ಹೊಂದಿ ಕಣ್ಣಿಗೆ ಹಬ್ಬವುಂಟುಮಾಡುತ್ತಿದ್ದವು. 'ಕೆಲವೊಂದರ ಬೆಲೆ ೧೫೦೦/- ರೂ. ಗಳವರೆಗೂ ಇದೆ. ಇತ್ತೀಚೆಗೆ ಇವಕ್ಕೆ ಬೇಡಿಕೆ ಹೆಚ್ಚುತ್ತಿದೆ. ಸರಿಯಾದ

ಸಮಯಕ್ಕೆ ಅವನ್ನು ಸಿದ್ಧಪಡಿಸಿ ಪೂರೈಸುವದೇ ಕಷ್ಟಸಾಧ್ಯವಾಗಿದೆ ಎಂದರು ಸುಶೀಲಮ್ಮ. ಸ್ಟಾಕ್ ತೆಗೆದುಕೊಂಡು, ಅವನ್ನೆಲ್ಲ ಜೋಡಿಸಿಡಲು, ಕಳಿಸಿಕೊಡಲು ನಿರ್ದೇಶನವಿತ್ತರು.

ಅಷ್ಟರಲ್ಲಿ ನಾಲ್ಕಾರು ಹಳ್ಳಿಗರು ಬಂದು ನಮಸ್ಕರಿಸಿ ಕುಳಿತರು.

'ಏನು ನಿರ್ಧಾರ ಕೈಕೊಂಡಿರಿ?' ಸುಶೀಲಮ್ಮ ಕೇಳಿದರು.

'ನೀವು ಹೇಳಿದಂತೆ ಮಾಡುತ್ತೇವೆ.' ಕಿರಿಯನೊರ್ವ ಹೇಳಿದ.

"ಈಗಂತೂ ಹೊಸ ಪೂಜಾರಿಯನ್ನು ಗೊತ್ತುಮಾಡಿದ್ದೇವೆ. ನೀವು ಒಪ್ಪಿಕೊಂಡರೆ ಸ್ಥಳವನ್ನು ಶುದ್ಧೀಕರಿಸಿ, ಮೊದಲಿನಂತೆ ಪೂಜೆ-ಪುನಸ್ಕಾರ ನಡೆಸುತ್ತೇವೆ." ಇನ್ನೊರ್ವ ಮಧ್ಯವಯಸ್ಕ ಹೇಳಿದ.

"ನೀವೇನು ಹೇಳುತ್ತೀರಿ?" ಇನ್ನೊಬ್ಬ ನಡುವಯಸ್ಸಿನವನನ್ನು ಸುಶೀಲಮ್ಮ ವಿಚಾರಿಸಿದರು.

"ಹೆಂಡತಿಯನ್ನು ಕಳೆದುಕೊಂಡ ದುಃಖದವನು... ನಾನೇನು ಹೇಳಲಿ?" ಆತನೆಂದ.

ನಿಮ್ಮ ದುಃಖದಲ್ಲಿ ನಾವೆಲ್ಲ ಭಾಗಿಯಾಗಿದ್ದೇವೆ..... ನಿಮಗೆ ಸಹಾಯವನ್ನೂ ಮಾಡಿದ್ದೇವೆ.... ಆದರೆ ನೀವು ದೇವರನ್ನೆ ಮರೆತುಬಿಟ್ಟಿರಲ್ಲ! ನಿಮ್ಮ ಕರ್ತವ್ಯ ನಿರ್ವಹಿಸಲಾಗದಿದ್ದರೆ, ಇನ್ನೊಬ್ಬರಿಗೆ ವಹಿಸಬಹುದಿತ್ತಲ್ಲ!" ಸ್ಪಷ್ಟವಾಗಿ ನುಡಿದರು ಸುಶೀಲಮ್ಮ. ಸ್ವಲ್ಪ ತಡೆದು, "ದೇವಾಲಯದ ಪರಿಸರ ಶುದ್ಧವಾಗಲಿ. ಮಕ್ಕಳಿಂದ, ಇತರರಿಂದ ಭಜನೆ ಪ್ರಾರಂಭವಾಗಲಿ. ಈಶ್ವರನಿಗೆ ಎಂದಿನಂತೆ ಕಾರ್ತಿಕಪೂಜೆಯು ಏರ್ಪಾಡಾಗಲಿ!" ಎಂದು ನಿರ್ದೇಶನವಿತ್ತು ಮರುದಿನ ಬಂದು ದೇವಾಲಯದ ಬೀಗದಕೈ ಒಯ್ಯುವಂತೆ ಹೇಳಿದರು. ಗುಂಪು ಚದರಿತು.

ನಡೆದದ್ದು ಇಷ್ಟು. ಜೋಳನಾಯಕನಹಳ್ಳಿಯ ಬೆಟ್ಟದ ತುದಿಯಲ್ಲಿ ಹಳೆಯ ಈಶ್ವರ ದೇವಸ್ಥಾನ ಒಂದಿದೆ. ಸಾಧುವೊಬ್ಬ ಅನೇಕ ವರ್ಷಕಾಲ ಅಲ್ಲಿ ಪೂಜೆಮಾಡಿಕೊಂಡಿದ್ದು ಒಂದು ದಿನ ಕಣ್ಣುಮುಚ್ಚಿದ. ಸುತ್ತಲ ನಾಲ್ಕಾರು ಹಳ್ಳಿಗಳಿಂದ ಜನ ಪ್ರತಿ ಸೋಮವಾರವೂ ಬೆಟ್ಟಕ್ಕೆ ಬಂದು ಪೂಜೆಮಾಡಿ ಹೋಗುವದು ವಾಡಿಕೆ. ಸಾಧು ಗತಿಸಿದ ಬಳಿಕ ಪೂಜಾರಿಯೊಬ್ಬ ದೇವಾಲಯದ ನಿರ್ವಹಣೆ ಮಾಡುತ್ತಿದ್ದ. ಕೆಲದಿನಗಳ

ಹಿಂದೆ ಪೂಜಾರಿಯ ಪತ್ನಿ ದೇವಾಲಯದ ಆವರಣದೊಳಗೇ ಸ್ಟೋವ್ ಸಿಡಿದು ದುರ್ಮರಣಕ್ಕೆ ಒಳಗಾದಳು. ಆಕೆಯ ಭೂತ ಅಲ್ಲಿ ಕಾಡುತ್ತದೆ! ಎಂದು ಅಂಜಿದ ಪೂಜಾರಿ ಗುಡಿಯಬಾಗಿಲನ್ನೆ ಮುಚ್ಚಿಸಿಬಿಟ್ಟ! ಧನುರ್ಮಾಸದ ವಿಶೇಷ ಪೂಜೆ ನಿಂತುಬಿಟ್ಟಿತು. ಜನ ಕೆರಳಿದರು. ಸುಶೀಲಮ್ಮನಿಗೆ ದೂರು ತಲುಪಿತು. ಮುಂದಿನ ಅನಾಹುತ ತಪ್ಪಿಸಲು ಸುಶೀಲಮ್ಮ ಗುಡಿಯ ಬೀಗದಕೈ ಪಡೆದು. ನಂದಾದೀಪ ಉರಿಯುವ ವ್ಯವಸ್ಥೆ ನೋಡಿಕೊಂಡರು. ಆದರೆ ಮೊದಲಿನಂತೆ ಪೂಜೆ ನಡೆಯುವ ವ್ಯವಸ್ಥೆಯ ಉಸ್ತುವಾರಿಯನ್ನು ಸ್ಥಳಿಯರಿಗೇ ಒಪ್ಪಿಸಿದರು. ಈಗ ಹೊಸ ಪೂಜಾರಿ (ನಂಬಿಕೆ ಕಳೆದುಕೊಂಡ) ಹಳೇ ಪೂಜಾರಿ. ಗುಡಿಯ ಆಡಳಿತವರ್ಗದವರೆಲ್ಲ ಸೇರಿ ಇತ್ಯರ್ಥ ಮಾಡಿಕೊಂಡು. ದೇವರ ಸೇವೆ ಮೊದಲಿನಂತೆಯೇ ನಡೆಯುವದೆಂದು ಆಶ್ವಾಸನೆ ಕೊಡಲು ಗುಂಪಾಗಿ ಬಂದಿದ್ದರು.

ತಂತಮ್ಮ ಸಮಸ್ಯೆಗಳಿಗೆ ತಾವೇ ಪರಿಹಾರ ಕೈಕೊಳ್ಳುವಂತೆ, ಸೌಮ್ಯವಾಗಿಯೇ ನಿರ್ದೇಶನ ನೀಡುವ ಸುಶೀಲಮ್ಮನ ಮುಖಂಡತ್ವದ ಇನ್ನೊಂದು ಆಯಾಮ ಗೋಚರಿಸಿತು.

ಅಷ್ಟರಲ್ಲಿ ಚಾಮರಾಜನಗರದಿಂದ ಹದಿಹರೆಯದ ನಾಲ್ವರು ಹುಡುಗಿಯರು ಬಂದರು. ಅವರಲ್ಲಿ ಒಬ್ಬಾಕೆಗೆ ಅಂಗವಿಕಲತೆಯಿತ್ತು. ಅವರಿಗೆಲ್ಲ ಫಿನಾಯಿಲ್, ಸೋಪು, ಮೋಂಬತ್ತಿ ತಯಾರಿಕೆಯ ತರಬೇತಿ. ಸುಮಂಗಲಿ ಸೇವಾಶ್ರಮದಲ್ಲಿ ದೊರೆಯುತ್ತಿತ್ತು. ಆಯಾಘಟಕಗಳಲ್ಲಿ ತರಬೇತಿಯ ಬಳಿಕ ಕೆಲಸ ಮುಂದುವರೆಸಿದವರಿಗೆ ೨೫೦೦/- ರೂ. ಪ್ರತಿ ಅಭ್ಯರ್ಥಿಗೆ ದೊರೆಯುತ್ತದೆ. ಇದರಲ್ಲಿ ಐವತ್ತು ರೂಪಾಯಿ ಕಚ್ಚಾ ಸಾಮಗ್ರಿಗೆ ಹೋಗಿಯೂ ಮಿಕ್ಕಿದ ಹಣವನ್ನು ಘಟಕಗಳ ಅಭಿವೃದ್ಧಿಗೆ ಉಪಯೋಗಿಸಲಾಗುತ್ತದೆ. ಇಂಥ ೧೩೦ ಕೇಂದ್ರಗಳು ರಾಜ್ಯದುದ್ದಕ್ಕೂ ಇವೆಯೆಂದು ತಿಳಿಯಿತು. ಗ್ರಾಮೀಣ ಪ್ರದೇಶದ ನಿರುದ್ಯೋಗಿ, ಅದರಲ್ಲೂ ಅಂಗವಿಕಲ ಮಹಿಳೆಯರಿಗೆ ಸ್ವ-ಉದ್ಯೋಗ ಮಾಡಿಕೊಂಡಿರಲು ದೊರಕಿದ ಅವಕಾಶದಿಂದಾಗಿ ನೆಮ್ಮದಿಯ ಉಸಿರು ಬಿಡುವಂತಾಗಿದೆಯಾದ್ದರಿಂದ ಯಾವ ಯಾವ ತರಬೇತಿ ಅವರಲ್ಲಿ ಲಭ್ಯವಿದೆಯೆಂದು ತಿಳಿದುಕೊಂಡೆ.

ಈವರೆಗೆ ಎರಡುಸಾವಿರ ಸ್ತ್ರೀಯರು ಬಟ್ಟೆಗಳನ್ನು ಹೊಲೆಯುವದು, ಹೈನುಗಾರಿಕೆ, ನೇಯ್ಗೆ, ಮಸಾಲೆ, ಉಪ್ಪಿನಕಾಯಿ, ಶಿಶುಆಹಾರ

ತಯಾರಿಕೆಗಳಲ್ಲಿ ತರಬೇತಿ ಪಡೆದು, ತಂತಮ್ಮ ಗ್ರಾಮಗಳಿಗೆ ಮರಳಿ ಉದ್ಯೋಗರತರಾಗಿದ್ದಾರೆ. ಅವರಿಗೆಲ್ಲ "ಸ್ವಂತ ಗೃಹ ಕೈಗಾರಿಕೆ ಪ್ರಾರಂಭಿಸಲು ಸಹಾಯಧನ ಸಿಗುತ್ತದೆಯೇ?" ಎಂದು ವಿಚಾರಿಸಿದೆ.

"ಚಿಕ್ಕಉದ್ದಿಮೆ ಖಾತೆಯಿಂದ, ಬ್ಯಾಂಕ್ ಆಫ್ ಇಂಡಿಯದಂತಹ ಬ್ಯಾಂಕ್‌ಗಳಿಂದ ಅವರಿಗೆ ಚಿಕ್ಕದೊಡ್ಡಸಾಲಗಳು ದೊರೆಯುತ್ತವೆ. ಬೋಂಡಾ ತಯಾರಿಸಿ ಮಾರುವವರಿಗೆ ಐದುಸಾವಿರ, ಹೊಲಿಗೆ ಮಶೀನುಕೊಳ್ಳಲು, ಹೈನುಗಾರಿಕೆ ಕೈಕೊಳ್ಳಲು, ಹಸು ಕೊಳ್ಳಲು, ತಕರಾರು ಇಲ್ಲದೇ ಇಪ್ಪತ್ತು ಸಾವಿರದ ತನಕವೂ ಬ್ಯಾಂಕುಗಳು ಸಾಲ ಕೊಡುತ್ತವೆ. ತಿಂಗಳ ಕಂತುಗಳಲ್ಲಿ ಸಾಲ ಹಿಂದಿರುಗಿಸುವ ಅವಕಾಶ ಇದೆ. ನಮ್ಮಲ್ಲಿ ತರಬೇತಿ ಹೊಂದಿದವರಿಗೆ ಸಾಲ ಸಿಗುವದು ತುಂಬ ಸುಲಭ!" ತುಂಬಿದ ಅಭಿಮಾನದಿಂದ ಸುಶೀಲಮ್ಮ ಹೇಳಿದರು. ಯಾವ ಆರ್ಥಿಕ ಬೆಂಬಲವೂ ಇಲ್ಲದೇ, ದೃಢನಿಶ್ಚಯವೊಂದನ್ನೆ ಹೊಂದಿ ಕೇವಲ ೨೦ ವರ್ಷಗಳಲ್ಲಿ ಅಸಂಖ್ಯ ನಿರ್ಗತಿಕರಿಗೆ, ಅಸಹಾಯಕರಿಗೆ ನೆಲೆಯೊಂದನ್ನು ಕಲ್ಪಿಸಿಕೊಡುವ ಮಾತೃಸಂಸ್ಥೆಯನ್ನು ಕಟ್ಟಿದ ಸುಶೀಲಮ್ಮನಲ್ಲಿ ಅಭಿಮಾನಕ್ಕೆ, ಆಶಾವಾದಕ್ಕೆ ತೊರತೆಯಿಲ್ಲ. ಸಬಲೆಯಾಗ ಹೊರಟ ದೃಢಚಿತ್ತದಾಕೆಗೆ ಸಾಂಸಾರಿಕ, ಲೌಕಿಕ, ಸಂಘಟನಾತ್ಮಕ ತೊಂದರೆಗಳು ಬಾಧಿಸಲಾರವು ಎಂಬುದನ್ನು ಸುಶೀಲಮ್ಮ ತೋರಿಸಿಕೊಟ್ಟಿದ್ದಾರೆ. ತನ್ನ ಕಷ್ಟನಿಷ್ಠುರ ಜೀವನದಿಂದ, ಮೀರಿದ ಪರಿಶ್ರಮದಿಂದ.

****

ನೇಕಾರಕುಲದ ಉಳ್ಳವರ ಮನೆತನದಲ್ಲಿಯೇ ೧೯೪೦ ರಲ್ಲಿ ಜನ್ಮವೆತ್ತಿದ ಸುಶೀಲಮ್ಮ, ತೀರ ಚಿಕ್ಕಂದಿನಲ್ಲಿ ಆಕಸ್ಮಿಕವಾಗಿ ತಂದೆಯನ್ನು ಕಳೆದುಕೊಂಡು ಬಡತನದ ಬವಣೆಯನ್ನು ಅನುಭವಿಸಬೇಕಾಯಿತು. ಹಾಗೂ ಹೀಗೂ ಪ್ರೌಢಶಾಲಾ ಶಿಕ್ಷಣ ಮುಗಿಸಿದಾಗ ಸ್ವಾವಲಂಬಿಯಾಗಲು ಘೋರ ಪ್ರಯತ್ನ ನಡೆಸಿದರು. ಈಗಿನ ಬಿ. ಎಚ್. ಇ. ಎಲ್. ಸಂಸ್ಥೆಯ ಉದ್ಯೋಗಸ್ಥ ಮಹಿಳೆಯರ ಮಕ್ಕಳಿಗಾಗಿ ಕ್ರೀಶೆಯನ್ನು ನಡೆಸುವದರೊಂದಿಗೆ ಈ ಯತ್ನದಲ್ಲಿ ಯಶಸ್ವಿಯಾದರು. ಹುಟ್ಟಾ ಸೇವಾಮನೋಭಾವದವರಾಗಿದ್ದ ಸುಶೀಲಮ್ಮನಿಗೆ ದೇವರು, ಧರ್ಮ, ಪೂಜೆಗಳಿಗಿಂತ ಸೇವೆ, ಪರಹಿತ, ಸಂಘಟನೆಗಳಲ್ಲಿ ಒಲವು ಹೆಚ್ಚಾಗಿದ್ದಿತು. ಗಾಂಧೀಜಿಯ ವಿಧಾಯಕ ಕಾರ್ಯಕ್ರಮಗಳ ಕಲ್ಪನೆ ಅವರ ಮೇಲೆ ದಟ್ಟ ಪ್ರಭಾವ ಬೀರಿತ್ತು.

ಕ್ರೀಶೆಯ ಕೆಲಸದೊಂದಿಗೆ, ಅಸಹಾಯಕರ, ನೊಂದವರ ಸಹಾಯಕ್ಕೆ ಅವರ ಮನಸ್ಸು ಸದಾ ಎಳಸುತ್ತಿತ್ತು. ಈ ಹಂತದಲ್ಲಿ ಮದುವೆಯೂ ನೆರವೇರಿ ಸುಶೀಲಮ್ಮ ಮೂರು ಮಕ್ಕಳ ತಾಯಾದರು. ಸಾಂಸಾರಿಕ ಜೀವನದಲ್ಲಿ ಮುಳುಗಿದ್ದರೂ, ಆಂತರಿಕ ಧ್ವನಿಯೊಂದು "ನಿನ್ನ ಸ್ಥಳ ಇಲ್ಲಿಲ್ಲ! ನಾಲ್ಕು ಗೋಡೆಯಾಚೆ ಇದೆ! ಆರ್ತರು ಶೋಷಿತರು, ದುರ್ಬಲರು ಕರೆಯುತ್ತಿದ್ದಾರೆ!" ಎಂದು ಚೀರಿ ಚೀರಿ ನುಡಿದಂತೆ ಕೇಳಿಸುತ್ತಿತ್ತು. ಕೊನೆಗೊಮ್ಮೆ ಗಟ್ಟಿಮನಸ್ಸುಮಾಡಿ, ಪರಸ್ಪರ ಸದಿಚ್ಛೆಯಿಂದಲೇ ೧೯೭೩ ರಲ್ಲಿ ಪತಿಯಿಂದ ಬೇರ್ಪಟ್ಟರು. ಆದರೆ ಮಕ್ಕಳ ಶಿಕ್ಷಣದ, ಅವರನ್ನು ನೆಲೆಗೊಳಿಸುವ ಹೊಣೆಯನ್ನು ಸ್ವತಃ ಹೊತ್ತರು.

ಮೊದಲಲ್ಲಿ ಕೇವಲ ೧೫ ರೂಪಾಯಿಗಳೊಂದಿಗೆ ಮನೆಯಿಂದ ಹೊರಬಿದ್ದ ಸುಶೀಲಮ್ಮನಿಗೆ ಜೊತೆಕೊಟ್ಟದ್ದು ಬಲವಾದ ಆತ್ಮವಿಶ್ವಾಸ ಒಂದೇ! ಸಹೃದಯಿ ಸ್ನೇಹಿತೆಯ ಮನೆಯ ಕಿರುಕೋಣೆ ಇವರ ತಂಗುದಾಣವಾಯಿತು. ಉಪವಾಸ-ವನವಾಸ ಸಹಿಸುತ್ತ, ತಾನು ಕೈಕೊಳ್ಳಲಿರುವ ಸಾಮಾಜಿಕ ಕಾರ್ಯಕ್ರಮಗಳಿಗೆ ರೂಪ-ರೇಷೆ ಹಾಕಲಾರಂಭಿಸಿದರು. ಕಲ್ಪನೆಯ ಪ್ರಣಾಲಿಗೆ ಮಾರ್ಗದರ್ಶನ ನೀಡುವವರಾಗಲಿ, ನೈತಿಕ, ಆರ್ಥಿಕ ಬೆಂಬಲಗಳಾಗಲಿ ಕೂಡಲೇ ದೊರೆಯಲಿಲ್ಲ. ಮೊದಲಿಗೆ ಕೊಳೆಗೇರಿ ಮಕ್ಕಳಿಗೆ ಷೆಡ್ ಒಂದರಲ್ಲಿ ನರ್ಸರಿ ಶಾಲೆ ಪ್ರಾರಂಭಿಸಿದರು. ಬಲುಬೇಗ ಅದು ಬೆಳೆಯಿತು. ಕ್ರೀಶೆಯೂ ಜೊತೆಗೆ ಸೇರಿಕೊಂಡಿತು. ಮಕ್ಕಳಿಗೆ ಕಾಗದದ ಹೂ, ಪರಿ ಪರಿ ಅಲಂಕಾರ ಇತರ ಅಲಂಕಾರ, ತೋರಣಾದಿಗಳನ್ನು ಮಾಡಲು ಕಲಿಸಿದರು. ಅವುಗಳ ಮಾರಾಟದ ವ್ಯವಸ್ಥೆ ಮಾಡಿದರು. ಕೋಳಿಗಳನ್ನು ಸಾಕುವ ಪಂಜರಶಾಲೆಗಳನ್ನು ಮಾಡುವ ಹುಕ್‌ಗಳನ್ನು ತಯಾರಿಸುವ (ಬೆರಳುಗಳ ಚರ್ಮ ಕಿತ್ತು ಬರುವ ಅಪಾಯದ) ಕೆಲಸವನ್ನು ಸಾಮೂಹಿಕವಾಗಿ ಕೈಕೊಂಡರು. ಶ್ರಮದಾನವನ್ನು ಎಲ್ಲರಿಗೂ ರೂಢಿಸಿದರು.

ದಾನಿಯೊಬ್ಬರು ಕಲ್ಲುಬಂಡೆಯಿಂದ ಕೂಡಿದ ಭೂಮಿಯನ್ನು ಕಾಣಿಕೆಯಾಗಿ ಕೊಟ್ಟರು. ಆದರೆ ದುಡ್ಡೆಲ್ಲಿಂದ ಬರಬೇಕು. ಸುಶೀಲಮ್ಮನವರ ಕನಸಿನ ಅನಾಥಾಶ್ರಮಕ್ಕೆ? ಎದೆಗೆಡದೇ ಅನಾಥ ಮಕ್ಕಳೊಂದಿಗೆ ಜೋಳಿಗೆ ಹಿಡಿದು ಹೊರಟರು. ಹಣ, ಮಣ್ಣು, ಮರಳು, ಮರ, ಇಟ್ಟಿಂಗಿ, ಗ್ರಾನೈಟ್‌ದ

ತುಂಡುಗಳು, ಏನನ್ನು ನೀಡಿದರೂ ಕೃತಜ್ಞತೆಯಿಂದ ಸ್ವೀಕರಿಸಿದರು. ಸ್ವತಃ ನಿಂತು ಕೈಯಾರೆ ನೀರುಹನಿಸುತ್ತ ಕಟ್ಟಡ ಮೇಲೇರುತ್ತಿದುದನ್ನು ಕಂಡು ಸಂಭ್ರಮಪಟ್ಟರು. ೧೯೭೫ ರಲ್ಲಿ ಅನಾಥಾಶ್ರಮ ರೂಪ ಪಡೆಯಿತು. ಹಣ ಲಭ್ಯವಾದಂತೆ ಕೊಠಡಿಗಳು ಸೇರ್ಪಡೆಯಾಗುತ್ತ ಹೋದವು. ಇಂದು ಅಲ್ಲಿ ನಾಲ್ಕು ಮೇಟ್ರನ್‌ಗಳ ಮೇಲ್ವಿಚಾರಣೆಯಲ್ಲಿ ನೂರಕ್ಕೂ ಮಿಕ್ಕಿ ಅನಾಥ ಮಕ್ಕಳು ಬೆಳೆಯುತ್ತಿದ್ದಾರೆ.

ಮಕ್ಕಳಕಲ್ಯಾಣದ ಜೊತೆಗೇ ಮಹಿಳೆಯರ ಉನ್ನತಿಯ ವಿಚಾರವನ್ನು ಹೊಂದಿದ್ದರಿಂದ ಕಡಿಮೆ ಆದಾಯದ ದಿನಗೂಲಿಯ ಹೆಂಗಸರ ಮಕ್ಕಳಿಗೆ ಶಿಶುಕೇಂದ್ರವನ್ನು ತೆರೆದರು. ಸ್ವಾವಲಂಬಿಯಾಗಲು ಹವಣಿಸುವ ಹೆಣ್ಣುಮಕ್ಕಳಿಗೆ ನೇಯ್ಗೆ, ಹೊಲಿಗೆ, ಹೆಣಿಕೆಯ ಕೇಂದ್ರಗಳೂ ಬಂದವು.

ಹೈನುಗಾರಿಕೆಯಲ್ಲಿ ತರಬೇತಿಯನ್ನು ನೀಡಲು ಡೈರಿ ಕಾಣಿಸಿಕೊಂಡಿತು. ಮಸಾಲೆ, ಉಪ್ಪಿನಕಾಯಿ, ಹಪ್ಪಳ, ಸಂಡಿಗೆ ಇತರ ಗೃಹೋಪಯೋಗಿ ಸಾಮಗ್ರಿಗಳನ್ನು ತಯಾರಿಸುವ ಘಟಕ ಪ್ರಾರಂಭವಾಯಿತು.

ಶಿಶುಆಹಾರ ತಯಾರಿಕೆಯ ಘಟಕವನ್ನು ಪ್ರಾರಂಭಿಸಲು ಮಾಡಿದ ಯತ್ನ ಒಳ್ಳೇ ಫಲಕೊಟ್ಟಿದೆ. ಅಕ್ಕಿ, ಗೋದಿ, ರಾಗಿ, ಹಾಲಿನಪುಡಿ ಹಾಗೂ ಜೀವನಸತ್ವಗಳ ಸಮ್ಮಿಶ್ರ ಮಾಲ್ಟ್‌ಪುಡಿಯನ್ನು ಇಲ್ಲಿ ಸಿದ್ಧಪಡಿಸಲಾಗುತ್ತಿದೆ. ರಾಜ್ಯದ ನೂರಾರು ಪ್ರಾಥಮಿಕ ಆರೋಗ್ಯಕೇಂದ್ರಗಳಿಗೆ ಪೂರೈಕೆ ಮಾಡುವಷ್ಟು ಬೆಳೆದು ನಿಂತಿದೆ.

ಮೋಂಬತ್ತಿ, ಫಿನಾಯಿಲ್, ಸೋಪು, ಆಟಿಗೆ, ಗುಲ್ಕಂದ್ ತಯಾರಿಕೆ ಕಲಿಸುವ ಸಿಬ್ಬಂದಿ ಕಾಣಿಸಿಕೊಂಡಿತು. ಇವನ್ನು ಸ್ವತಃ ತಯಾರಿಸಿ ಮಾರಾಟಮಾಡಿ ಸ್ವಾವಲಂಬನೆ ಹೊಂದುವ ತಂಡಗಳೇ ಹೊರಬಿದ್ದವು. ಅನಾಥರ, ತೀರಕಡಿಮೆ ಆದಾಯದವರ ಮಕ್ಕಳ ಶಿಕ್ಷಣದ ವ್ಯವಸ್ಥೆ ಸುಶೀಲಮ್ಮನವರನ್ನು ಕಾಡಿತು. ಪ್ರಾಥಮಿಕಶಾಲೆ ಹುಟ್ಟಿಕೊಂಡಿತು. ಅದಕ್ಕೆ ಪ್ರೌಢಶಾಲೆಯೂ ಜೊತೆಗೂಟ್ಟಿತು. ಈಗ ಚೋಳನಾಯಕನಹಳ್ಳಿಗೆ ಹೊಂದಿದ್ದ ಗ್ರಾಮಗಳಿಂದ ಮಕ್ಕಳೆಲ್ಲ ಕಲಿಯಲು ಇಲ್ಲಿಗೇ ಬರುತ್ತಿದ್ದಾರೆ.

'ಸುಮಂಗಲಿ'ಯ ಆವರಣದಲ್ಲಿ ಓಡಾಡಿ ಅಲ್ಲಿಯ ಚಟುವಟಿಕೆಗಳನ್ನು ನೋಡುವದೇ ವಿಶಿಷ್ಟ ಅನುಭವ! ಎಲ್ಲೆಲ್ಲೂ ಸ್ವಚ್ಛತೆ, ಅಚ್ಚುಕಟ್ಟುತನಗಳಿವೆ.

ಬಡತನದ ಹಿನ್ನೆಲೆಯಿಂದ ಬಂದರೂ ಮಕ್ಕಳು ಆರೋಗ್ಯವಂತರಾಗಿ ಕಂಡರು. ಎಡಬಿಡದೇ ಓಡಾಡುತ್ತ ಮೇಲ್ವಿಚಾರಣೆ ಮಾಡುತ್ತ ಸಾಗುವ ಸುಶೀಲಮ್ಮನವರೊಂದಿಗೆ ನೂಲುವ, ನೇಯುವ, ಹೊಲಿಯುವ, ಕಲಿಸುವ, ಗಿರಣಿ (ಶಿಶು ಆಹಾರದ್ದು)ಯಲ್ಲಿ ಕೆಲಸಮಾಡುತ್ತ ಮೈಮರೆತ ವಿವಿಧ ವಯಸ್ಸಿನ ದೊಡ್ಡ ಪ್ರಮೀಳಾ ವರ್ಗವನ್ನು ಕಂಡೆ. ಮಹಿಳೆಯ ಕ್ರಿಯಾತ್ಮಕ ಜಗತ್ತಿನ ಹತ್ತು ಹಲವಾರು ಮುಖಗಳನ್ನು ಒಂದೆ ತಾಣದಲ್ಲಿ ನೋಡುವ ವಿಸ್ಮಯಕಾರಿ ನೋಟ ಅದಾಗಿತ್ತು. ನಾಡು ಕಟ್ಟುವ ಕೆಲಸದಲ್ಲಿ ಸದ್ದಿಲ್ಲದೇ ತೊಡಗಿದ ಮಹಿಳೆಯೋರ್ವಳ ಮುಂಚೂಣಿಯಲ್ಲಿ, ಪುಟ್ಟ ಮಹಿಳಾ ಸೈನ್ಯವೇ ಜೊತೆ ನೀಡಿತ್ತು. ಇಲ್ಲಿ ವಾಚಮನ್, ಡ್ರಾಯವರ್ ಇಬ್ಬರನ್ನು ಬಿಟ್ಟರೆ ಪೂರ್ತಿ ಮಹಿಳಾಶಕ್ತಿಯೇ 'ಸುಮಂಗಲಿ'ಯ ನಿರ್ವಹಣೆ ಮಾಡುತ್ತಿದ್ದುದು ಕಣ್ಣಿಗೆ ಬಿತ್ತು!

'ಸುಮಂಗಲಿ' ಎಂದು ಸೇವಾಶ್ರಮಕ್ಕೆ, ತನ್ನ ಕನಸಿನ ತಾಣಕ್ಕೆ ನಾಮಕರಣ ಮಾಡಿದ್ದು, ಮೇಲ್ನೋಟಕ್ಕೆ ಸೋಜಿಗವುಂಟುಮಾಡುತ್ತದೆ. ಸಂಸ್ಥಾಪಕಿ ಸುಶೀಲಮ್ಮ ಗೃಹಿಣಿಯಾಗಿ ಬಾಳಿಯೂ, ಮಾಂಗಲ್ಯದ ಮಾನಾಪಮಾನಗಳ ಹಂತಗಳನ್ನೆಲ್ಲ ದಾಟಿಬಂದವರು. ಆದರೆ ಅವರನ್ನು ನಿಕಟವಾಗಿ ಬಲ್ಲವರಿಗೆ ಇದು ವಿಶೇಷವೆನಿಸದು! ಏಕೆಂದರೆ ಭಾರತೀಯ ಕುಟುಂಬ ವ್ಯವಸ್ಥೆಯಲ್ಲಿ ಅವರದು ಅಪಾರ ನಂಬಿಕೆ. ಕುಟುಂಬಜೀವನದ ಸಂರಕ್ಷಣೆಯಲ್ಲಿ, ಪಾವಿತ್ರ್ಯದಲ್ಲಿ ಹೆಚ್ಚಿನ ವಿಶ್ವಾಸವಿಟ್ಟ ಅವರು ಕೊಳಗೇರಿಯ ನಿವಾಸಿಗಳಿಗೆಂದೇ ಕುಟುಂಬ ಸಲಹಾ ನ್ಯಾಯಾಲಯವೊಂದನ್ನು ಪ್ರಾರಂಭಿಸಿದರು. ನಾನಾಬಗೆಯ ಹಿಂಸೆ-ಹೊಡೆತ-ತುಳಿತಗಳಿಗೆ ಒಳಗಾಗಿ ಆಶ್ರಯಕ್ಕಾಗಿ ಸುಮಂಗಲಿಗೆ ಓಡಿ ಬಂದ ಮಹಿಳೆಯರಿಗೆ ಲೆಕ್ಕವಿಲ್ಲ. ಅಂಥವರಿಗೆ ತಾತ್ಪೂರ್ತಿಕ ನೆಲೆ ಒದಗಿಸಿದರು. ಕುಡುಕತನವೇ ಹೆಚ್ಚಿನ ಮಹಿಳೆ-ಮಕ್ಕಳ ಶೋಷಣೆಗೆ ಕಾರಣವಾಗಿದೆಯೆಂಬುದು ಈ ಅಮ್ಮನ ಅನುಭವ. (ಸುಶೀಲಮ್ಮನವರನ್ನು ಎಲ್ಲರೂ ಅಮ್ಮನೆಂದೇ ಕರೆಯುತ್ತಾರೆ.) ಕುಡಿತದ ಅಮಲು ಇಳಿದ ಬಳಿಕ ಹೆಂಡತಿಯನ್ನು ಹುಡುಕಿಕೊಂಡು ಬಂದವರಿದ್ದಾರೆ. ಪಶ್ಚಾತ್ತಾಪ ಪಟ್ಟು ಸುಧಾರಿಸಿಕೊಳ್ಳಲು ಯತ್ನಿಸಿದ ಗಂಡಸರಿದ್ದಂತೆ, ಹಿಂಸೆಯನ್ನು ಮುಂದುವರಿಸಿದವರೂ ಇದ್ದಾರೆ. ಸಾಧ್ಯವಿದ್ದಷ್ಟು ಸಮಜಾಯಿಶಿಯನ್ನು ಇಂಥವರಿಗೆ ನೀಡಿ, ಹಿರಿಯರಿಂದ,

ಪೊಲೀಸರಿಂದ ಹಿತವಚನ, ಬೆದರಿಕೆ ಕೊಡಿಸಿ, ಒಡೆಯಬಹುದಾದ ಕುಟುಂಬಗಳಲ್ಲಿ ಹೊಂದಾಣಿಕೆ ತರಲು ಸಾಧ್ಯವಿದ್ದಷ್ಟೂ ಸುಶೀಲಮ್ಮ ಯತ್ನಿಸುತ್ತಾರೆ. ಹೆಂಗಸರ ಕ್ಷುದ್ರತನವೂ ಗೃಹಶಾಂತಿ ಕೆಡಿಸಲು ಕಾರಣವಾದದ್ದನ್ನು ಕಂಡಿದ್ದಾರೆ. ಎಷ್ಟೋಬಾರಿ ಗಂಡಿನ ಕುಟುಂಬವಿಡೀ ಹೆಣ್ಣನ್ನು ಹಿಂಸಿಸಿ, ಮುಗಿಸಿಬಿಡಲು ಯತ್ನಿಸಿದಾಗ, ವಿಚ್ಛೇದನೆಯೊಂದೇ ಮಾರ್ಗವೆಂದು ಮನದಟ್ಟಾದಾಗ, ಅದನ್ನು ಕೊಡಿಸಲೂ ನೆರವಾಗಿದ್ದಾರೆ. ಇತ್ತೀಚೆಗೆ ಪುನರ್ವಸತಿ ಕಲ್ಪಿಸಿದ ತರುಣಿಯೋರ್ವಳ ಕಥೆ ನೆನಪಾಗುತ್ತದೆ. ವಿಧರ್ಮಿ ತರುಣಿಯೋರ್ವಳು. ಶ್ರೀಮಂತ ಹಿಂದೂ ಬಣಜಿಗ ಕುಟುಂಬದ ತರುಣನೋರ್ವ. ಎರಡೂ ಕುಟುಂಬಗಳ ತೀವ್ರವಿರೋಧವನ್ನು ಲೆಕ್ಕಿಸದೇ ಮದುವೆಯಾದರು. ಒಂದು ಮಗುವೂ ಹುಟ್ಟಿತು. ಕಿರುಕುಳ, ಬೈಗಳು, ವರದಕ್ಷಿಣೆಗಾಗಿ ಪೀಡನೆ, ತರುಣಿಗೆ ಪ್ರತಿದಿನದ ಮಾತಾಗಿದ್ದವು. ಎರಡನೇ ಬಾರಿ ಗರ್ಭಿಣಿಯಾದಾಗ, ಆಸ್ತಿಯ ವಿಭಜನೆಯ ವಿಚಾರ-ಸಿದ್ಧತೆಗಳು ನಡೆದವು. ಹಿರಿಯರ ಇಚ್ಛೆಗೆ ವಿರುದ್ಧವಾಗಿ ಮದುವೆಯಾದಾತನಿಗೆ ಆಸ್ತಿಯಿಂದ ವಂಚಿತಗೊಳಿಸುವ ಬೆದರಿಕೆ ಬಲವಾಯಿತು. ಪುಕ್ಕಲು ತರುಣ, ಹಿರಿಯರೊಂದಿಗೆ ಸೇರಿ ಪತ್ನಿಗೆ ಕಿರುಕುಳ ಕೊಡಲಾರಂಭಿಸಿದ. ಬಸಿರಿ, ಒದೆತವನ್ನು ತಾಳದೇ ಆತ್ಮಹತ್ಯೆಗೆ ಎಳಸಿದಳು. ಇದನ್ನು ಅರಿತ ನೆರೆಮನೆಯವರ ಸಲಹೆಯಂತೆ 'ಸುಮಂಗಲಿ'ಗೆ ಓಡಿಬಂದಳು. ಅವಳ ಯಾವತ್ತೂ ಮಾನಸಿಕ-ದೈಹಿಕಯಾತನೆಗಳನ್ನು ಅರಿತ ಸುಶೀಲಮ್ಮ ಅವಳ ಊಟೋಪಚಾರದ, ವಾಸ್ತವ್ಯದ ವ್ಯವಸ್ಥೆ ಆ ಕೂಡಲೇ ಮಾಡಿದರು. ಹೊಂದಾಣಿಕೆಗೆ ಶಕ್ತಿಮೀರಿ ಯತ್ನಿಸಿದರು. ಆದರೆ ಹೊಣೆಗೇಡಿಯಾದ ಹಿರಿಯರ ವಿರುದ್ಧಹೋಗದ ತರುಣನೊಂದಿಗೆ ಸ್ವತಂತ್ರ ವೈವಾಹಿಕ ಜೀವನ ಸಾಧ್ಯವೇ ಇಲ್ಲವೆಂದು ಮನಗಂಡು ಬೇರ್ಪಡುವದೊಂದೇ ಉಪಾಯವೆಂದು ತರುಣಿಗೆ ತಿಳಿಯಪಡಿಸಿದರು. ಅವಳ ಹೆರಿಗೆ, ಚಿಕ್ಕಮಗುವಿನ ಆರೋಗ್ಯ, ಸ್ವತಃ ಆಕೆ ಆರ್ಥಿಕವಾಗಿ ಸ್ವಾವಲಂಬಿಯಾಗಲು ಬೇಕಾದ ವ್ಯವಸ್ಥೆ ಮಾಡಲು ಮುಂದಾದರು.

ಅಮ್ಮನ 'ಕುಟುಂಬ ಸಲಹಾ ನ್ಯಾಯಾಲಯ' ಬಡವರಿಗಷ್ಟೆ ಅಲ್ಲದೇ, ಮಧ್ಯಮವರ್ಗದ ನೊಂದಪರಿವಾರಗಳಿಗೂ ಸಹಾಯ ನೀಡುತ್ತಿರುವದನ್ನು ಕಂಡೆ. ಸುಶಿಕ್ಷಿತರು, ಪ್ರತಿಷ್ಠಿತರು ಕೂಡ ಸಲಹೆಗಾಗಿ

ಸೇವಾಶ್ರಮಕ್ಕೆ ಬಂದಿದ್ದು ಅಚ್ಚರಿಯ ಮಾತಾಗಿತ್ತು. ನೊಂದವರಿಗೊಂದು ನೆಲೆ. ದಿಕ್ಕೆಟ್ಟವರಿಗೆ ಧೈರ್ಯ, ಸೋತು ಹಣ್ಣಾದವರಿಗೆ ಸಾಂತ್ವನ. "ಸುಮಂಗಲಿ"ಯಲ್ಲಿ ಸಿಕ್ಕೇ ಸಿಗುತ್ತದೆ.

ಯಾರಿಗೂ ಬೇಡವಾಗಿ ಮನೆಯಿಂದ ಹೊರಹಾಕಲ್ಪಟ್ಟವರಿಗೆ, ಹಣ್ಣುಜೀವಗಳಿಗೆ ಆಸರೆಯೂ ಇಲ್ಲಿದೆ. ಒಂದು ವೃದ್ಧಾಶ್ರಮವೂ ಇದೆ. ನಿರ್ಗತಿಕರಾಗಿ, ಹತಾಶರಾಗಿ ಬಂದವರು ಅದೆಷ್ಟೋಜನ ಆಶ್ರಯ ಪಡೆದು ಪರಿಸ್ಥಿತಿ ಸುಧಾರಿಸಿದ ಬಳಿಕ ಮರಳಿ ಹೋದವರೇ ಹೆಚ್ಚು.

ವರ್ಷಗಳು ಕಳೆದಂತೆ "ಸುಮಂಗಲಿ"ಯ ಚಟುವಟಿಕೆಗಳು ಹಲವು ಮುಖಗಳಲ್ಲಿ ಬೆಳೆದುಬರುತ್ತಿವೆ. ನೂರಾರು ಮಹಿಳಾಮಂಡಳಿಗಳು ಹಳ್ಳಿ ಹಳ್ಳಿಗಳಲ್ಲಿ ಒಡಮೂಡಿವೆ. ಹದಿನೈದು ಹಳ್ಳಿಗಳಲ್ಲಿ ಶಿಶುಕೇಂದ್ರಗಳು ಕಾಣಿಸಿಕೊಂಡಿವೆ. ದಿನಗೂಲಿಗೆ ಹೋಗುವ ಹೆಂಗಳೆಯರಿಗೆ, ಅವರ ಎಳೆಮಕ್ಕಳಿಗೆ, ಇವುಗಳಿಂದ ಆಗುತ್ತಿರುವ ಸಹಾಯ ಅಷ್ಟಿಷ್ಟಲ್ಲ!

ಹೇಸರುಘಟ್ಟ, ಚೌಗಲೇಟ, ಬಾಗಲೂರುಗಳಲ್ಲಿ ಪ್ರೌಢಶಿಕ್ಷಣ ಕೇಂದ್ರಗಳನ್ನು ತೆಗೆದಿದ್ದಾರೆ. ಹಳ್ಳಿಯವರೇ ಅದನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಸಾಧ್ಯವಿದ್ದಲ್ಲೆಲ್ಲ ಮಹಿಳಾ ಸಹಕಾರಿಸಂಘಗಳನ್ನು ಸ್ಥಾಪಿಸಿದ್ದಾರೆ. ಸ್ಥಳೀಯ ಹೆಂಗಸರೇ ಕೈಗಾರಿಕೆಗಳ ನಿರ್ಮಾಣ, ಮಾರಾಟ, ಆಡಳಿತಗಳಲ್ಲಿ ಪಾಲ್ಗೊಂಡು ಸ್ವಉದ್ಯೋಗ, ಸ್ವಾವಲಂಬನಗಳಲ್ಲಿ ಮುಂದಾಗಬೇಕೆಂದು ಅಮ್ಮನ ಕನಸು.

ಕೆಲ ವರ್ಷಗಳ ಹಿಂದೆ 'ಕಾವೇರಿ ಮಹಿಳಾ ಒಕ್ಕೂಟ'ವನ್ನು ಹುಟ್ಟುಹಾಕಿದರು. ಗ್ರಾಮೀಣ ಮಹಿಳೆಯರಲ್ಲಿ ಮಾನವ ಮೂಲಭೂತ ಹಕ್ಕುಗಳ ಕುರಿತಾದ ಜಾಗೃತಿಯನ್ನು ಮೂಡಿಸುವದು ಇದರ ಉದ್ದೇಶ. ತಾಲೂಕ ಮಟ್ಟದಲ್ಲಿ ಫೆಡರೇಶನ್ ತರಹ ಕಾರ್ಯನಿರ್ವಹಿಸುತ್ತಿದ್ದು, ಸುಮಾರು ನೂರು ಮಹಿಳಾಮಂಡಳಗಳು ಈ ಒಕ್ಕೂಟದ ನೇರ ಸಂಪರ್ಕಹೊಂದಿವೆ. ಸ್ವಾವಲಂಬನ, ಆತ್ಮವಿಶ್ವಾಸಗಳನ್ನು ಬೆಳೆಸುವದರೊಂದಿಗೆ ಅರ್ಹರಿದ್ದ ಮಹಿಳೆಯರಿಗೆ ಸಾಲಕೊಡಿಸುವ ಪ್ರಯತ್ನವನ್ನೂ ಒಕ್ಕೂಟವು ಜಾರಿ ಇಟ್ಟಿದೆ.

ಹುಬ್ಬಳ್ಳಿ, ರಾಯಚೂರುಗಳಲ್ಲಿ ಒಕ್ಕೂಟದ ಶಾಖೆಗಳು ಇದ್ದು ಮಹಿಳೆಯರು ಸ್ವ-ಉದ್ಯೋಗಗಳನ್ನು ಕೈಕೊಳ್ಳುವಂತೆ ಮಾಡುವದರಲ್ಲಿ ಸಫಲವಾಗಿವೆ.

'ಇವಕ್ಕೆಲ್ಲ ಹಣವನ್ನು ಹೇಗೆ ಹೊಂದಿಸುತ್ತೀರಿ?' ಆಶ್ರಮದ ವಿವಿಧ ಘಟಕಗಳನ್ನು ನೋಡುತ್ತಿದ್ದಂತೆ ಕೊರೆಯುತ್ತಿದ್ದ ಪ್ರಶ್ನೆ ಕೇಳಿದೆ.

"ಅದೇ ದೊಡ್ಡ ಸಮಸ್ಯೆಯಾಗಿದೆ! ಅನಾಥ ಮಕ್ಕಳಿಗೆ ಆಹಾರದ ವೆಚ್ಚ ಪ್ರಾರಂಭದಲ್ಲಿ ದೊರೆಯುತ್ತಿತ್ತು. ೧೯೮೮ ರಿಂದ ಅದು ನಿಂತೇಹೋಗಿದೆ! ಅನಾಥಾಶ್ರಮ ಹಾಗೂ ಹೊಂದಿರುವ ಘಟಕಗಳ ನಿವಾಸಿಗಳ ಆಹಾರದ ಖರ್ಚೇ ವಾರ್ಷಿಕ ೧ ಲಕ್ಷ ರೂ. ಇದೆ. ಸರಕಾರದ ಸಹಾಯಧನ, ಸಮಾಜಕಲ್ಯಾಣ ಖಾತೆಯ ನೆರವು ಇವೆ. ಆದರೆ ಸಾಲುತ್ತಿಲ್ಲ. ಅಲ್ಲದೇ ವರ್ಷದ ಕೊನೆಯಲ್ಲಿ ಲಭ್ಯ. 'ಸ್ಕಿಪ್' ಸ್ವಿರ್ಝರ್ಲ್ಯಾಂಡಿನ ಸಂಸ್ಥೆ ಕೊಂಚ ನೆರವು ನೀಡಿತು. ಹಾಲಂಡಿನಿಂದ ಎಳೆಯಮಕ್ಕಳ ಶಿಕ್ಷಣಕ್ಕೆ ಸಹಾಯಧನ ಒದಗಿತು. ರೋಟರಿ, ಲಾಯನ್, ಜಿಂದಾಲ್ ಸಂಸ್ಥೆಗಳು, ಕೆಲವು ದಾನಿಗಳು ಕಾಲಕಾಲಕ್ಕೆ ನೆರವು ನೀಡಿವೆ..... ಉಳಿದದ್ದು ಸುಶೀಲಮ್ಮ ಮಾತು ನಿಲ್ಲಿಸಿದರು.

ಉಳಿದ ಕೊರತೆಯನ್ನು ಸುಶೀಲಮ್ಮ ಜೋಳಿಗೆ ಹಿಡಿದು ಊರೂರು, ರಾಜ್ಯಗಳಲ್ಲಿ ತಿರುಗಾಡಿ ಸಂಗ್ರಹಿಸುತ್ತಾರೆ ಎಂದರ್ಥ!

ಸುಶೀಲಮ್ಮನವರಿಗೆ ಕೇಂದ್ರ ಸಮಾಜಕಲ್ಯಾಣಖಾತೆಯ ಶಿಶುಕಲ್ಯಾಣ ಪ್ರಶಸ್ತಿ ಹಾಗೂ ರಾಜ್ಯ ಸರಕಾರದ ಪ್ರಶಸ್ತಿಗಳು ಸಂದಿವೆ. ಜಾನಕಿದೇವಿ ಬಜಾಜ್ ಪ್ರಶಸ್ತಿಯೂ ಬಂದಿದೆ. ಆದರೆ ಇವಾವವೂ ದೊಡ್ಡ ಮೊತ್ತದ ಅಥವಾ ಸಹಾಯಧನದವಲ್ಲ. ತಾನು ಯೋಜಿಸಿದಂತೆ ರೂಪಗೊಳ್ಳಲು ಸುಮಂಗಲಿಗೆ ಹೆಚ್ಚಿನ ಆರ್ಥಿಕ ನೆರವು ಬೇಕಾಗಿದೆ ಎಂಬುದರಲ್ಲಿ ಸಂದೇಹವೇ ಇಲ್ಲ. ನಿರಂತರ ಆಶಾವಾದಿಯಾಗಿರುವ ಅಮ್ಮ "ಇದಕ್ಕೆ ಕಾಲಾವಕಾಶವಿದೆ" ಎನ್ನುತ್ತಾರೆ.

ಸದಾ ಹಸನ್ಮುಖಿಯಾಗಿರುವ ಸುಶೀಲಮ್ಮನ ಮುಖ, ಕೈ ಮೈಗಳು ವರ್ಷಗಳ ಕಠಿಣಶ್ರಮದ ಕುರುಹನ್ನು ಹೊತ್ತಿವೆ. ದಿನದಿನವೂ ಎರಡುನೂರು ಜನರ ಊಟ-ಉಪಚಾರದ ವ್ಯವಸ್ಥೆ, ಹಣಕಾಸಿನ ಮೇಲ್ವಿಚಾರಣೆ, ಹತ್ತಾರು

ಸಂಸ್ಥೆಗಳ ನೇರಕಾರ್ಯಭಾರ ಹಾಗೂ ನೂರಾರು ಘಟಕಗಳ ಪರೋಕ್ಷ ಪರಿಶೀಲನ ಸುಶೀಲಮ್ಮನವರಿಗೆ ಸೇರಿದ್ದು. ಉತ್ಸಾಹಿ ಕಾರ್ಯಕರ್ತರು ಸದಾ ತಮ್ಮೊಂದಿಗೆ ಇದ್ದಾರೆ. ಎಂದು ಹೆಮ್ಮೆಯಿಂದ ಹೇಳಿಕೊಂಡರೂ. ತಮ್ಮೆಲ್ಲ ಕನಸುಗಳನ್ನು ಸಾಕಾರಗೊಳಿಸುವ ಪೂರ್ಣ ಹೊಣೆಹೊತ್ತಿರುವದರಿಂದ ಮತ್ತು ಅವು ಬೆಳೆಯುತ್ತಲೇ ಇರುವುದರಿಂದ ಅವರ ಕೆಲಸಗಳ ಭಾರವನ್ನು ಊಹೆಗೇ ಬಿಡಬೇಕಾಗಿದೆ! ದಿನದ ಇಪ್ಪತ್ತುನಾಲ್ಕು ಗಂಟೆಗಳೂ ಸಾಲವು! ಇತ್ತೀಚೆಗೆ ಸ್ವಸ್ಥ ಮಹಿಳಾ (well-woman) ಚಿಕಿತ್ಸಾ ಕೇಂದ್ರವನ್ನು. ಕುಡುಕರಿಗಾಗಿ ಜಾಗೃತಿ ಕೇಂದ್ರವನ್ನು ಪ್ರಾರಂಭಿಸಿದ್ದಾರೆ. ಎಲಡಿಕೆ-ತಂಬಾಕುವಿನ ಸೇವನೆಯಿಂದ ಉಂಟಾಗುವ ಎದೆ. ಗರ್ಭಕೋಶಗಳ ಕ್ಯಾನ್ಸರ್. ಏಡ್ಸ ಮುಂತಾದವುಗಳ ಕುರಿತಾಗಿ ಗ್ರಾಮೀಣರಲ್ಲಿ ಅರಿವು ಮೂಡಿಸುವದು ಇವರ ಉದ್ದೇಶ. ಚೋಳನಾಯಕನಹಳ್ಳಿಯಲ್ಲಿ ಹೊಸದಾಗಿ ಪ್ರಾರಂಭವಾಗಲಿದ್ದ ಸೆರೆಯಂಗಡಿಯನ್ನು ತೆರೆಯಗೊಡದಂತೆ ಮಾಡುವಲ್ಲಿ ಸ್ಥಳೀಯ ಹೆಂಗಸರು. ಕೆಲವು ಗಂಡಸರನ್ನೂ ಸಂಘಟಿಸಿ ಚಳುವಳಿ ಪ್ರಾರಂಭಿಸಿದರು. ಅದರಲ್ಲಿ ಯಶಸ್ವಿಯೂ ಆದರು. ಆದರೆ ಸರಕಾರವೇ ಪರೋಕ್ಷವಾಗಿ ಪ್ರೋತ್ಸಾಹಿಸಿದ ಮದ್ಯದ ಉದ್ದಿಮೆದಾರರು ಹಾಗೂ ಕಂತ್ರಾಟುದಾರರ ಪ್ರಬಲ ಒಕ್ಕೂಟವೇ ಈ ದೊಡ್ಡ ಸಾಮಾಜಿಕ ಪಿಡುಗಿನ ಹಿಂದೆ ಇದ್ದಾಗ. ಸುಶೀಲಮ್ಮನವರ ಚಿಕ್ಕ ಸಂಘಟನೆಗಳ ಯಶಸ್ಸು ಸಹ ಇತರರ ಗಮನಕ್ಕೆ ಬರುವದಿಲ್ಲ. ಹಳ್ಳಿ ಹಳ್ಳಿಗಳಲ್ಲಿ ಕುಡಿತದ ದುಷ್ಪರಿಣಾಮದ ಆಕ್ರಂದನ. ಮಹಾನಗರದ ಸೌಧವಾಸಿಗಳಿಗೆ ಕೇಳಬರುವದಿಲ್ಲ.

ಸ್ವತಃ ಸನ್ಯಾಸಿನಿಯಂತೆ ಬದುಕುತ್ತಿರುವ ಸುಶೀಲಮ್ಮ ಗಾಂಧೀಜಿ ಸೂಚಿಸಿದ ಗ್ರಾಮೀಣ ಸುಧಾರಣೆಗಳಿಗೆ. ಬೇರೆ ಬೇರೆ ರೂಪಕೊಟ್ಟು ಆಚರಣೆಯಲ್ಲಿ ತಂದು. ಸ್ವಂತಿಕೆಯನ್ನು ಮೆರೆದಿದ್ದಾರೆ. ಸುಮಂಗಲಿಯಲ್ಲಿ ತರಬೇತಿ ಪಡೆದು ತಂತಮ್ಮ ಹಳ್ಳಿಗಳಿಗೆ ಹಿಂದಿರುಗಿ ಹೈನುಗಾರಿಕೆ. ಟೇಲರಿಂಗ್ ಇತ್ಯಾದಿ ಕೈಕೊಂಡವರಿದ್ದಾರೆ. ಇಂಥವರಿಂದ ಪ್ರೋತ್ಸಾಹ ಪಡೆದು ಆಶ್ರಮಕ್ಕೆ ಕಲಿಯಲು ಬಂದವರು ಅದೆಷ್ಟೋಜನ. ಕೆಲವರು ಸ್ವಪ್ರೇರಣೆಯಿಂದ ಆಶ್ರಮದಲ್ಲಿದ್ದು. ಇತರರಿಗೆ ತರಬೇತಿ ನೀಡಿದವರಿದ್ದಾರೆ. "ಸುಮಂಗಲಿ" ಮುಖಾಂತರ ಸಾಲ ಪಡೆದು ತೀರಿಸಿ, ನಂತರವೂ ಬಂದು ಕೃತಜ್ಞತಾಪೂರ್ವಕ

ಉಚಿತ ಸೇವೆ ಸಲ್ಲಿಸಿದ ಸೋದರಿಯರಿದ್ದಾರೆ. ಇತರರ ನೋವು-ನಲಿವುಗಳಿಗೆ ಮಿಡಿಯುವ ದೊಡ್ಡ ಕುಟುಂಬವೇ ಆಶ್ರಮದ ರೂಪದಲ್ಲಿ ಮುಂದರಿಯುತ್ತಿರುವಂತೆ ಕಂಡಿತು.

"ನಿಜಕ್ಕೂ ಸೇವಾರತಿ ಎಂಬುದನ್ನು ಬೆಳೆಸಿಕೊಳ್ಳದಿದ್ದರೆ ಸಮಾಜಸೇವೆ ಕೈಕೊಳ್ಳುವವರಿಗೆ. ಪ್ರತಿಯೊಂದು ಘಟನೆಯೂ ಕಂಗೆಡಿಸುತ್ತದೆ. ಹೊಸ ಹೊಸ ಆತಂಕಗಳು ಹುಟ್ಟಿಕೊಳ್ಳುತ್ತವೆ. ಜನರ ಟೀಕೆ ಟಿಪ್ಪಣಿಗಳು ಗಾಸಿಮಾಡಿಬಿಡುತ್ತವೆ. ಇದಕ್ಕೆಲ್ಲ ಮಾನಸಿಕ ಸಿದ್ಧತೆ ಬೇಕು..... ಅದರಂತೆ ಸಣ್ಣಪುಟ್ಟಯಶಸ್ಸು ತಲೆಯನ್ನು ಹೊಕ್ಕುಬಿಟ್ಟರೆ. ಕಾರ್ಯಸಾಧನೆ ದೂರವಾಗುತ್ತ ಹೋಗುತ್ತದೆ!" ಸುಶೀಲಮ್ಮ ಉದ್ಗರಿಸುತ್ತಾರೆ.

ಯಶಸ್ಸಿನ ಭ್ರಮೆಯ ಕಲ್ಪನೆಯಿಂದ ಸುಶೀಲಮ್ಮ ಹರದಾರಿ ದೂರವಿದ್ದಾರೆ. ಸೋಲರಿಯದ ಈ ಶ್ರಮಶೀಲೆಯ ಎರಡು ದಶಕಗಳ ಸಾಧನೆಯ ಪ್ರಮಾಣ ನೋಡಿದರೆ ಮ್ಯಾಗ್ಸೇಸೇ ಅಥವಾ ರೈಟ್ ಲೈವ್‌ಲಿಹುಡ್ ದಂತಹ (ನೊಬೆಲ್ ಪರ್ಯಾಯ ಪ್ರಶಸ್ತಿಯಂತಹ) ದೊಡ್ಡ ಪ್ರಶಸ್ತಿಗೆ ಅವರು ಅರ್ಹರಾಗಿದ್ದಾರೆ. ಆದರೆ ಆ ಕುರಿತಾಗಿ ಅವರು ಹಂಬಲಿಸಿದವರಲ್ಲ. ಯೋಚಿಸಿದವರೂ ಅಲ್ಲ. ಸಮಾಜಸೇವೆ ಎಂಬುದು ಪ್ರತಿಷ್ಠಿತ ಮನೆತನದ ಕೆಲವರಿಗೆ ಬಿಡುವಿನ ವೇಳೆಯ ಹವ್ಯಾಸವಾಗಿಯೋ ಪ್ರಸಿದ್ಧಿ-ಪ್ರಚಾರಗಳಿಗೆ ಏಣಿಯಾಗಿಯೋ ಪರಿಣಮಿಸಿದ ದಿನಗಳಲ್ಲಿ, ಸುಶೀಲಮ್ಮ ಕಾಯಾ ವಾಚಾ ಮನಸಾ ಗ್ರಾಮೀಣ ಮಹಿಳೆಯರ ಉನ್ನತಿಗಾಗಿ ಪರಿಶ್ರಮಿಸುತ್ತಿದ್ದಾರೆ. ಅವರ ಸ್ತ್ರೀವಾದಿ ಹೋರಾಟ ವಿಶಿಷ್ಟ ಬಗೆಯದು. ನಿರ್ಗತಿಕ. ನಿರಕ್ಷರಿ. ಅಸಹಾಯಕ. ಮುಗ್ಧ ಮಹಿಳೆಯರಿಗೆ ಮೀಸಲಾದದ್ದು. ಗ್ರಾಮೀಣ ಸ್ತ್ರೀಯರಲ್ಲಿ ಆತ್ಮವಿಶ್ವಾಸ ತುಂಬಿ. ಮನೋಬಲ ಬೆಳೆಸಿ, ಸ್ವಾವಲಂಬನೆಯನ್ನು ಮನಗಾಣಿಸುವತ್ತ ಅವರ ಶಕ್ತಿ-ಸಂಘಟನೆಗಳು ವಿಶಿಷ್ಟವಾಗಿ ಹರಿದಿವೆ. ಇದನ್ನು ನಾಡಿನವರು ಗುರುತಿಸುವಂತೆ ಆದರೆ!

ಜ್ಯೋತ್ಸ್ನಾ ಕಾಮತರ ಪುಸ್ತಕಗಳು

* Social Life in Medieval Karnataka (Ph.D)1980
* ಸಂಸಾರದಲ್ಲಿ ಸ್ವಾರಸ್ಯ (ಹಾಸ್ಯ ಪ್ರಬಂಧಗಳು) ೧೯೮೭
* ಕರ್ನಾಟಕದಲ್ಲಿ ಶಿಕ್ಷಣ ಪರಂಪರೆ, ೧೯೮೮
  (ಕ.ಸ. ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಕೃತಿ)
* ಹೀಗಿದ್ದೇವೆ ನಾವು (ಹಾಸ್ಯ ಪ್ರಬಂಧಗಳು) ೧೯೯೩
* ಮಹಿಳೆ ಒಂದು ಅಧ್ಯಯನ, ೧೯೯೯
* ನಗೆ ಕೇದಿಗೆ (ಹಾಸ್ಯ ಪ್ರಬಂಧಗಳು) ೧೯೯೯

'ಮಹಿಳಾ ಸಾಹಿತ್ಯಿಕಾ' ಪ್ರಕಟಣೆಗಳು

೧ ಧುಮ್ಮುಸು (ಕಾದಂಬರಿ) ಗೀತಾ ನಾಗಭೂಷಣ, ೧೯೯೪
ರಾಯಚೂರಿನ ಚುಕ್ಕಿಪ್ರತಿಷ್ಠಾನ ಪ್ರಶಸ್ತಿ ವಿಜೇತ ಕೃತಿ ಮತ್ತು ೧೯೯೬-೯೮ ನೆಯ ಸಾಲಿಗೆ ಕರ್ನಾಟಕ ವಿಶ್ವವಿದ್ಯಾಲಯದ ಬಿ.ಕಾಂ. ಪ್ರಥಮ ತರಗತಿಗೆ ಪಠ್ಯಪುಸ್ತಕವಾಗಿದೆ.

೨. ದಾಹತೀರ (ಕವನ ಸಂಕಲನ) ಮಾಲತಿ ಪಟ್ಟಣಶೆಟ್ಟಿ, ೧೯೯೪
ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ರತ್ನಮ್ಮ ಹೆಗ್ಗಡೆ ಬಹುಮಾನ ವಿಜೇತ ಕೃತಿ.

೩. ನನ್ನಂಥವರು (ಕವನ ಸಂಕಲನ) ಶೈಲಜಾ ಉಡಚಣ, ೧೯೯೫

೪. ಪ್ರವಾಹ (ಕಥಾ ಸಂಕಲನ) ಭಾಗೀರಥಿ ಹೆಗಡೆ, ೧೯೯೫
ಬೆಂಗಳೂರಿನ ಅಖಿಲ ಕರ್ನಾಟಕ ಲೇಖಕಿಯರ ಸಂಘದ ಬಹುಮಾನ ಪಡೆದ ಕೃತಿ.

೫. ನನ್ನೊಳಗಿನ ಕವಿತೆ (ಕವನ ಸಂಕಲನ) ವಿದ್ಯಾ ಕುಂದರಗಿ, ೧೯೯೫

೬. ಸುರಪುರ ತಾಲೂಕಿನ ಶಾಸನಗಳು(ಸಂಶೋಧನೆ) ಹನುಮಾಕ್ಷಿಗೋಗಿ, ೧೯೯೫

೭. ವಾಸ್ತವ (ಕಥಾ ಸಂಕಲನ) ಗಂಗಾ ಪಾದೇಕಲ್, ೧೯೯೬

೮. ಸಾರಸರಸ್ವತಿ (ವಿಮರ್ಶೆ) ವಿಜಯಾ ದಬ್ಬೆ, ೧೯೯೬

೯. ಬಿಡುಗಡೆಯ ಸಡಗರ (ಹಾಸ್ಯ ಸಂಕಲನ) ಗುರುದೇವಿ ಹುಲೆಪ್ಪನವರಮಠ, ೧೯೯೬

೧೦. ಥೇರೀ ಗಾಥಾ (ಅನುವಾದ) ಮಧು ವೆಂಕಾರೆಡ್ಡಿ, ೧೯೯೬
ಬೆಂಗಳೂರಿನ ಆರ್ಯಭಟ ಪ್ರಶಸ್ತಿ ಮತ್ತು ಕರ್ನಾಟಕ ಲೇಖಕಿಯರ ಪರಿಷತ್ ಬಹುಮಾನ ವಿಜೇತ ಕೃತಿ.

೧೧. ಮಕ್ಕಳ ಶಿಕ್ಷಣ : ಚಿಂತನೆಗಳು (ಪ್ರಬಂಧ) ಲಲಿತಾಂಬಾ ವೃಷಭೇಂದ್ರಪ್ಪ, ೧೯೯೭

೧೨. ದಿಗಂತದಾಚೆ (ಅನುವಾದ) ಸರಸ್ವತಿ ರಿಸಬೂಡ, ೧೯೯೭

೧೩. ಗಾಂಧೀಮಗಳು (ಕಥೆ) ಶಾಂತಾದೇವಿ ಕಣವಿ, ೧೯೯೭

೧೪. ಕರಗದೀ ಕಾರಿರುಳು (ಕವನ) ಕುಸುಮ ಕರಾಳೆ, ೧೯೯೭

೧೫. ಪ್ರಲೋಭನೆ (ವಿಮರ್ಶೆ) ವಿ.ಕೆ. ಮಣಿಮಾಲಿನಿ, ೧೯೯೭

೧೬. ಪಾಂಚಾಲಿ ಮತ್ತು ಇತರ ಕಥೆಗಳು(ನಾಟಕ) ವಿಜಯಾ ಸುಬ್ಬುರಾಜ್ ೧೯೯೮

೧೭. ಶೈಲಜಾ ಸಮಗ್ರ ಕಾವ್ಯ (ಕವನ) ಶೈಲಜಾ ಉಡಚಣ, ೧೯೯೮

೧೮. ಒಂದು ಕನಸಿನ ಪಯಣ(ಪ್ರವಾಸ) ನೇಮಿಚಂದ್ರ ೧೯೯೯

೧೯. ಲಕ್ಕುಂಡಿಯ ಶಾಸನಗಳು (ಸಂಶೋಧನೆ) ಹನುಮಾಕ್ಷಿಗೋಗಿ, ೧೯೯೯

೨೦. ಅವಳ ಸೂರ್ಯ (ಅನುವಾದ) ಉಮಾ ರಾವ್, ೨೦೦೦

೨೧. ನೆನಪಿನಲ್ಲಿ ನಿಂತವರು (ವ್ಯಕ್ತಿ ಚಿತ್ರ) ಜ್ಯೋತ್ಸ್ನಾ ಕಾಮತ, ೨೦೦೦

ಕನ್ನಡ ಮಹಿಳಾಸಾಹಿತ್ಯ ಎರಡು ಸವಾಲುಗಳನ್ನು ಎದುರಿಸುತ್ತಲಿದೆ : ಪುರುಷರಷ್ಟು ಮುಕ್ತ ಗಂಭೀರವಾಗಿ ಬರೆಯದಿರುವುದು, ಪುರುಷರಂತೆ ಧಾವಿಸಿ ಪ್ರಕಾಶನ ಅವಕಾಶಗಳನ್ನು ದೊರಕಿಸಿಕೊಳ್ಳದಿರುವುದು. ಈ ಎರಡೂ ನೆಲೆಗಳಲ್ಲಿ ಮಹಿಳೆಗೆ 'ಸಾಹಿತ್ಯಿಕ ನ್ಯಾಯ' ಒದಗಿಸಿ ಕೊಡುವುದಕ್ಕಾಗಿ ಅಸ್ತಿತ್ವಕ್ಕೆ ಬಂದಿದೆ, 'ಮಹಿಳಾಸಾಹಿತ್ಯಿಕಾ'. ಮಹಿಳಾ ಸಾಹಿತ್ಯವನ್ನು ಕುರಿತು ಅಧ್ಯಯನ ನಡೆಸುವುದು, ಪ್ರಕಟಿಸುವುದು ಮಾತ್ರ ಈ ಸಂಸ್ಥೆಯ ಗುರಿಯಾಗಿದೆ. ಇದು ಆರಂಭದ ದಿನಗಳಲ್ಲಿ ಸೃಜನ-ವಿಮರ್ಶನ-ಸಂಶೋಧನ-ಅನುವಾದ ಸೇರಿ ವರ್ಷಕ್ಕೆ ಒಂದು ಸಾವಿರ ಪುಟಗಳಷ್ಟು ಸಾಹಿತ್ಯವನ್ನು ಪ್ರಕಟಿಸುತ್ತದೆ.

ಮಹಿಳೆಯ ಸಾಹಿತ್ಯಿಕ ಸಮಸ್ಯೆಗಳೂ ಅನೇಕ, ಸಾಮಾಜಿಕ ಸಮಸ್ಯೆಗಳೂ ಅನೇಕ. ಇವರು ಆಗಾಗ ಸೇರಿ ನಡೆಸುವ 'ಚಿಂತನಗೋಷ್ಠಿ'ಗಳಿಂದ ಕಳೆದುಕೊಂಡ ಹಳೆಯ ದಾರಿಗಳನ್ನು ಹುಡುಕಬಹುದು. ಹೊಸ ದಾರಿಗಳನ್ನು ಹುಟ್ಟಿಸಬಹುದು. ಈ ದೃಷ್ಟಿಯಿಂದಲೂ ಬರಹಗಾರ್ತಿಯರನ್ನು ಸಂಘಟಿಸಿ, ಸಮಾಲೋಚನೆ ಕಮ್ಮಟಗಳನ್ನು ನಡೆಸಿ ಫಲಿತಗಳನ್ನು ಪ್ರಕಟಿಸುವುದು, ಈ ಸಂಸ್ಥೆಯ ಇನ್ನೊಂದು ಉದ್ದೇಶವಾಗಿದೆ.

ಆರ್ಥಿಕವಾಗಿ'ಲಾಭವಿಲ್ಲ-ನಷ್ಟವಿಲ್ಲ'' ಈತತ್ವದ ನೆಲೆಗಟ್ಟಿನಮೇಲೆ ಅಸ್ತಿತ್ವಕ್ಕೆ ಬಂದ, ಮಹಿಳಾ ಸಾಹಿತ್ಯದ ಅಧ್ಯಯನ-ಪ್ರಕಾಶನಗಳ ಬಗೆಗೆ ಕ್ರಿಯಾತ್ಮಕವಾಗಿ ದುಡಿಯಲಿರುವ ಈ ಸಂಸ್ಥೆಗೆ ಎಲ್ಲ ಲೇಖಕಿಯರ ಸಹಾಯ ಸಹಕಾರಗಳನ್ನು ಅಪೇಕ್ಷಿಸುತ್ತೇವೆ.

ಹನುಮಾಕ್ಷಿ ಗೋಗಿ
ಸಾಹಿತ್ಯಿಕ ನಿರ್ದೇಶಕಿ